ಪ್ರಮಾಣ ಪತ್ರ

'ಬಳ್ಳಾರಿ ಜಿಲ್ಲೆ ಬೇಡ ಸಮುದಾಯದ ಕ್ರೀಡೆಗಳು' ಎಂಬ ಶೀರ್ಷಿಕೆಯ ನಿಬಂಧವನ್ನು ಡಾ. ಚಲುವರಾಜು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಹಂಪಿ ಕನ್ನಡ ವಿಶ್ವವಿದ್ಯಾಲಯ, ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಾದರಪಡಿಸುತ್ತಿರುವ ಪ್ರಸ್ತುತ ನಿಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

T. Gangadhara

(ಟಿ.ಗಂಗಾಧರ)
ಸಂಶೋಧಕರು

ದಿನಾಂಕ : ೩೦.೦೭.೨೦೦೪
ಸ್ಥಳ : ವಿದ್ಯಾರಣ್ಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಡಾ. ಚಲುವರಾಜು
ಹಿರಿಯಶ್ರೇಣಿ ಅಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ

ದೃಢೀಕರಣ ಪತ್ರ

ಶ್ರೀ ಟಿ. ಗಂಗಾಧರ ಇವರು 'ಬಳ್ಳಾರಿ ಜಿಲ್ಲೆ ಬೇಡ ಸಮುದಾಯದ ಕ್ರೀಡೆಗಳು' ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯ, ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಾದರಪಡಿಸುತ್ತಿರುವ ಪ್ರಸ್ತುತ ನಿಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೩೦.೦೭.೨೦೦೪
ಸ್ಥಳ : ವಿದ್ಯಾರಣ್ಯ

(ಡಾ. ಚಲುವರಾಜು)
ಮಾರ್ಗದರ್ಶಕರು

ಪರಿವಿಡಿ

೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪಾಶ್ಚಿಮಾತ್ಯ ದೇಶಗಳಲ್ಲಿ ಬುಡಕಟ್ಟು ಆಟಗಳ ಅಧ್ಯಯನ ಗಂಭೀರವಾಗಿ ಮತ್ತು ತುಂಬಾ ವ್ಯವಸ್ಥಿತವಾಗಿ ನಡೆಯುತ್ತಾ ಬಂದಿದೆ. ಬುಡಕಟ್ಟು ಆಟಗಳ ಮಾಹಿತಿ ಸಂಗ್ರಹ ಮತ್ತು ಸರಳವಾಗಿ ವ್ಯಾಖ್ಯಾನಿಸುವ ಪ್ರಯತ್ನಗಳ ಹಂತವನ್ನು ಮೀರಿ ಈ ಬಗೆಯ ಅಧ್ಯಯನಗಳು ಕೆಲವೇ ನಡೆದಿವೆ. ವೈಜ್ಞಾನಿಕ ಕ್ಷೇತ್ರಕಾರ್ಯಗಳ ಮೂಲಕ ಅವುಗಳ ಮಾಹಿತಿಗಳನ್ನು ಸಂಗ್ರಹಿಸಿ ಮಾನವಶಾಸ್ತ್ರ, ಮನ:ಶಾಸ್ತ್ರ, ಸಮಾಜಶಾಸ್ತ್ರ, ರಾಜಕೀಯಶಾಸ್ತ್ರ, ಗಣಿತಶಾಸ್ತ್ರ, ಅರ್ಥಶಾಸ್ತ್ರಗಳ ತಿಳುವಳಿಕೆಯನ್ನು ಬಳಸಿಕೊಂಡು ಆಟಗಳ ಅಧ್ಯಯನವನ್ನು ವಿದೇಶಿ ವಿದ್ವಾಂಸರು ಮಾಡಿದ್ದಾರೆ. ಬುಡಕಟ್ಟು ಕ್ರೀಡೆಗಳು ಬುಡಕಟ್ಟುಗಳ ಅಧ್ಯಯನದಲ್ಲೂ ವೈಜ್ಞಾನಿಕ ಕ್ಷೇತ್ರ ಕಾರ್ಯದ ಮೂಲಕ ಆಟಗಳ ಮಾಹಿತಿಗಳನ್ನು ಸಂಗ್ರಹಿಸಿ ವಿವಿಧ ಸಿದ್ಧಾಂತಗಳ ಮೂಲಕ ವಿಶ್ಲೇಷಣೆ ನಡೆಸಿದ್ದಾರೆ. ಕರ್ನಾಟಕ ಬುಡಕಟ್ಟುಗಳ ಅಧ್ಯಯನದಲ್ಲಿ ಕ್ರೀಡೆಗಳ ಅಧ್ಯಯನದ ಪ್ರಯತ್ನಗಳು ಹೆಚ್ಚಾಗಿ ನಡೆದಿಲ್ಲ. ಬೇಡ ಬುಡಕಟ್ಟಿನ ಕ್ರೀಡೆಗಳು ಪ್ರದರ್ಶನಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸುವ ಕೆಲಸ ವಿರಳವಾಗಿ ನಡೆದಿವೆ. ಈ ಪ್ರಯತ್ನಗಳು ನಡೆದಿದ್ದರೂ, ವೈಜ್ಞಾನಿಕ ಕ್ಷೇತ್ರಕಾರ್ಯ ಮತ್ತು ಸೈದ್ಧಾಂತಿಕತೆಯ ಕೊರತೆಯನ್ನು ಈ ಬರವಣಿಗೆಗಳಲ್ಲಿ ಗುರುತಿಸಬಹುದು. ಆದರೆ ಇತ್ತೀಚೆಗೆ ಕರ್ನಾಟಕ ಬುಡಕಟ್ಟುಗಳ ಅಧ್ಯಯನವು ವೈಜ್ಞಾನಿಕ ಮತ್ತು ಅಂತರ್‌ಶಿಸ್ತಿನ ಆಯಾಮವನ್ನು ಪಡೆಯುತ್ತಿರುವುದರಿಂದ ಗಂಭೀರ ಸೈದ್ಧಾಂತಿಕ ಅಧ್ಯಯನವನ್ನು ನಿರೀಕ್ಷಿಸಬಹುದಾಗಿದೆ. ಬೇಡ ಬುಡಕಟ್ಟು ಸಮುದಾಯ ಕ್ರೀಡೆಗಳ ಕುರಿತಾಗಿ ಗಂಭೀರವಾದ ಸೈದ್ಧಾಂತಿಕ ಅಧ್ಯಯನ ಈಗ ಆರಂಭವಾಗಿದೆ. ಬೇಡ ಬುಡಕಟ್ಟು ಕ್ರೀಡೆಗಳ ಪ್ರದರ್ಶನ ವಿವರಗಳನ್ನು ಒಳಗೊಂಡ ಕೆಲವು ಲೇಖನಗಳು ಪ್ರಕಟವಾಗಿವೆ. ಆದರೆ ಲೇಖಕರು ಹಾಗೂ ವಿದ್ವಾಂಸರು ಕ್ರೀಡೆಗಳ ಬಗ್ಗೆ ಕೇವಲ ಬೇಡ ಸಮುದಾಯದ ಮೂಲ ಪ್ರಾರಂಭಕ್ಕೆ ಬೇಟೆಯ ಕ್ರೀಡೆ, ಮೊಡಿಯಾಟ, ಕುಸ್ತಿ, ಭಾರ ಎತ್ತುವುದು, ಬಂಡಿ ಸ್ಪರ್ಧೆ, ಗುಂಡು ಎಸೆತ ಹೀಗೆ ಹಲವಾರು ಆಟಗಳು ಬೇಡ ಸಮುದಾಯದಲ್ಲಿ ಅನೇಕ ಕ್ರೀಡೆಗಳು ತಮ್ಮ ದಿನನಿತ್ಯದ ಆರ್ಥಿಕ ಚಟುವಟಿಕೆಗಳ ಮೇಲೆ ಪ್ರಭಾವ ಬೀರುವಂತಹ ಅವುಗಳಿಗೆ ಅಳವಡಿಸಿಕೊಂಡಿರುವಂತಹ ಈ ಸಮುದಾಯದ ಕ್ರೀಡೆಗಳು ಇನ್ನೂ ಸಾಕಷ್ಟು ಕ್ರೀಡೆಗಳು ಮಹಿಳೆಯರು ಆಡುವ

ಕ್ರೀಡೆಗಳು ಮಕ್ಕಳು ಆಡುವಂತಹ ಕ್ರೀಡೆಗಳು ಹೊರಾಂಗಣ ಮತ್ತು ಒಳಾಂಗಣ ಆಟಗಳು ಯಾವುದೇ ಖರ್ಚಿಲ್ಲದೆ ಸಾಮೂಹಿಕವಾಗಿ ಜನಸಾಮಾನ್ಯರು ಮತ್ತು ಈ ಸಮುದಾಯವು ಈ ಕ್ರೀಡೆಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿರುವುದನ್ನು ಕಾಣುತ್ತೇವೆ. ಜೊತೆಗೆ ಅನೇಕ ಸಮುದಾಯಗಳಿಗೆ ಈ ಕ್ರೀಡೆಗಳು ಮಾದರಿಯಾಗಿವೆ. ಅನೇಕ ಸಮುದಾಯಗಳು ಈ ಕ್ರೀಡೆಗಳಲ್ಲಿ ಭಾಗವಹಿಸುವಾಗ ಭೇದಭಾವವಿಲ್ಲದೇ, ತಾರತಮ್ಯವಿಲ್ಲದೇ ಸಾಮೂಹಿಕವಾಗಿ ತಮ್ಮನ್ನು ತಾವು ಈ ಕ್ರೀಡೆಗಳಲ್ಲಿ ತೊಡಗಿಸಿಕೊಂಡು ಮನೋಲ್ಲಾಸ ಪಡೆಯುವುದರೊಂದಿಗೆ ತಮ್ಮ ಶರೀರದ ಚಲನಾತ್ಮಕ ಸಾಮರ್ಥ್ಯಗಳಾದ ವೇಗ, ಕಷ್ಟಸಹಿಷ್ಣುತೆ, ಚಪಲತೆ, ಮೈಮಣಿತ, ಶಕ್ತಿ, ಬಲ ಇವುಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದರ ಜೊತೆಗೆ ಪ್ರತಿಯೊಬ್ಬ ವ್ಯಕ್ತಿ ಸದೃಢನಾಗುವುದರೊಂದಿಗೆ ಆರೋಗ್ಯವನ್ನು ಕಾಪಾಡಿಕೊಂಡಿರುವುದನ್ನು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಈ ಬೇಡ ಸಮುದಾಯದ ಕ್ರೀಡೆಗಳು ಮಾದರಿಯಾಗಿ ಎಲ್ಲರ ಐಕ್ಯತೆ ಮನೋಲ್ಲಾಸ ಶರೀರದ ಆರೋಗ್ಯ ಹಣದ ವೆಚ್ಚವಿಲ್ಲದೆ ಎಲ್ಲರೂ ಸಾಮೂಹಿಕವಾಗಿ ಭಾಗವಹಿಸುವಂತಹ ಬೇಡ ಸಮುದಾಯದ ಕ್ರೀಡೆಗಳು ಇತರ ಸಮುದಾಯಗಳಿಗೆ ಮಾದರಿಯಾಗಿರುವ ಕ್ರೀಡೆಗಳು ಇಂದು ಸಮಾಜದಲ್ಲಿ ನಾಶವಾಗುತ್ತಿವೆ. ಜೊತೆಗೆ ಮುಗ್ಧ ಜನರನ್ನು ವಿದೇಶಿ ಕ್ರೀಡೆಗಳು ಗಮನ ಸೆಳೆಯುವುದರ ಮೂಲಕ ಈ ಕ್ರೀಡೆಗಳ ಜನರನ್ನು ಜೂಜಾಟಕ್ಕೆ ನಾಂದಿ ಮಾಡಿದೆ ಇದರಿಂದ ಜನಸಾಮಾನ್ಯರು ಈ ದುಬಾರಿ ಕ್ರೀಡೆಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ.

ಬೇಡ ಬುಡಕಟ್ಟು ಕ್ರೀಡೆಗಳಿಗೆ ಅವುಗಳದೇಯಾದ ಪ್ರಾದೇಶಿಕ ವೈಶಿಷ್ಟ್ಯಗಳಿವೆ. ಇಲ್ಲಿನ ಸಾಮಾಜಿಕ ರಚನೆ ನಂಬಿಕೆ ಮತ್ತು ಆಚಾರ್ಯಗಳೊಂದಿಗೆ ಈ ಆಟಗಳು ಅನ್ಯೋನ್ಯ ಸಂಬಂಧಗಳು ಹೊಂದಿವೆ. ಈ ಕ್ರೀಡೆಗಳು ಹೊಂದಿರುವ ಭಾವನಾತ್ಮಕ ಪರಿಣಾಮಗಳನ್ನು ಅಧ್ಯಯನ ಮಾಡಲಾಗುವುದು. ಒಟ್ಟಿನಲ್ಲಿ ಬೇಡಬುಡಕಟ್ಟು ಕ್ರೀಡೆಗಳ ಮೂಲಕ ಬೇಡ ಸಮುದಾಯದ ಸಂಸ್ಕೃತಿಯ ಅರ್ಥಮಾಡಿಕೊಳ್ಳುವ ವ್ಯಾಖ್ಯಾನಿಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ. ಬೇಡ ಬುಡಕಟ್ಟಿನ ಕ್ರೀಡೆಗಳ ಸ್ವರೂಪವನ್ನು ನಿರ್ಧರಿಸುವ ಅವುಗಳಿಗೆ ವ್ಯಾಖ್ಯಾನ ಕೊಡುವ ಅಧ್ಯಯನಗಳು ನಡೆದಿವೆ. ಒಂದು ನಿರ್ದಿಷ್ಟ ಆಟಗಳನ್ನು ವಿವರವಾಗಿ ಗಮನಿಸಿ ವಿಶ್ಲೇಷಿಸಿದ ವಿವರಗಳು ಎಲ್ಲೂ ಕಂಡುಬರುವುದಿಲ್ಲ. ಆದರೆ ಒಂದು ಸಂಸ್ಕೃತಿಯಲ್ಲಿ ಕ್ರಿಯಾಶೀಲವಾಗಿರುವ ಸಂಸ್ಕೃತಿ ನಿಷ್ಠ ಕ್ರೀಡೆಗಳನ್ನು ಆ ಸಂಸ್ಕೃತಿಗೆ ಸೇರಿದ ಜನರು ಹೇಗೆ ಗ್ರಹಿಸಿಕೊಂಡಿದ್ದಾರೆ ಎಂಬುವುದನ್ನು ಶೋಧಿಸುವ ಕೆಲಸ ತುಂಬ ಕುತೂಹಲಕಾರಿಯಾಗಿದೆ. ಬೇಡ ಸಮುದಾಯದ ಕ್ರೀಡೆಗಳು ಶೋಧಿಸಿ, ವಿಶ್ಲೇಷಿಸುವ ಮಹತ್ವದ ಕೆಲಸ ಪ್ರಸ್ತುತ ಅಧ್ಯಯನದ ಬಹುಮುಖ್ಯವಾದ ಉದ್ದೇಶವಾಗಿದೆ.

ಕಳೆದ ಒಂದೆರಡು ದಶಕಗಳಿಂದೀಚೆಗೆ ಬುಡಕಟ್ಟು ಜಾನಪದ ಒಂದು ಶಾಸ್ತ್ರೀಯ ಅಧ್ಯಯನದ ವಿಷಯವಾಗಿ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಾ ಒಂದು ಸ್ವತಂತ್ರ ವಿಜ್ಞಾನವಾಗಿ ಬೆಳೆಯುತ್ತಿದೆ.

ಬುಡಕಟ್ಟು ಸಮುದಾಯಗಳ ಬಗೆಗಿನ ನಮ್ಮ ದೃಷ್ಠಿ

ಬುಡಕಟ್ಟು ಅಧ್ಯಾಯನಕಾರರು (ವಿದ್ವಾಂಸರು) ಬುಡಕಟ್ಟು ಸಮುದಾಯಗಳ ಶಾಖೆಗಳಾದ ಕೃಷಿವಿಜ್ಞಾನ, ವೈದ್ಯವಿಜ್ಞಾನ, ಖಗೋಳವಿಜ್ಞಾನ, ಮಾನವಶಾಸ್ತ್ರ, ಇತಿಹಾಸ ಮೊದಲಾದ ಕ್ಷೇತ್ರಗಳ ಕಡೆಗೆ ಕಣ್ಣು ಅರಳಿಸಿ ನೋಡತೊಡಗಿದ್ದಾರೆ. ಈ ಕ್ಷೇತ್ರಗಳಂತೆ ಬುಡಕಟ್ಟುಗಳು ತೀರ ಹತ್ತಿರವಾದ ಮತ್ತು ಬುಡಕಟ್ಟುಗಳ ಆರೋಗ್ಯಕರ ಬದುಕಿಗೆ ಕಾರಣವಾಗಿರುವ ಕ್ಷೇತ್ರ ದೈಹಿಕವಿಜ್ಞಾನವೆಂಬುದು. ಬುಡಕಟ್ಟು ಮತ್ತು ಬೇಡ ಸಮುದಾಯ ಇತರ ಬುಡಕಟ್ಟುಗಳಿಗೆ ಈ ರೀತಿ ಮಾದರಿಯಾಗಿರುವ ಬೇಡಸಮುದಾಯದ ಕ್ರೀಡೆಗಳು ಸಮಾಜದಲ್ಲಿ ನಾಶದ ಅಂಚಿಕೆ ತಲುಪುತ್ತಿವೆ. ಈ ಕ್ರೀಡೆಗಳಿರುವ ಜನಸಮುದಾಯ ಜನಸಾಮಾನ್ಯ ಸಮಾಜಕ್ಕೆ ಲಾಭಕರವಾದ ಈ ಕ್ರೀಡೆಗಳು ನಾಶವಾಗುತ್ತಿವೆ. ಜನರ ಆರೋಗ್ಯ, ಶಿಕ್ಷಣಗಳಿಗೆ ಮನೋರಂಜನೆ ಯಾವ ರೀತಿಯಾಗಿ ಪ್ರಭಾವ ಬೀರಿದೆ ಎಂಬುದನ್ನು ಮುಖ್ಯವಾಗಿ ಗಮನದಲ್ಲಿರಿಸಿ ಅಧ್ಯಯನ ಮಾಡಲಾಗಿದೆ. ವಿದೇಶಿ ಕ್ರೀಡೆಗಳು ಇದಕ್ಕೆ ಪ್ರಭಾವ ಬೀರಿವೆ ಎನ್ನಲಾಗಿದೆ. ಇದು ಪ್ರಾರಂಭದ ಉದ್ದೇಶವಾಗಿದೆ.

ಮೊದಲಿಗೆ ಒಂದು ಉದ್ದೇಶವನ್ನು ಸ್ಪಷ್ಟಪಡಿಸಿ, ವಿಷಯದ ವಿವೇಚನೆಗೆ ತೊಡಗುವುದು ಸೂಕ್ತವೆಂದು ಭಾವಿಸುತ್ತೇನೆ.

ನನ್ನ ಪ್ರಾರಂಭದ ವಿಷಯ 'ಬೇಡ ಬುಡಕಟ್ಟಿನ ಕ್ರೀಡೆಗಳು' ಸಮಾಜಕ್ಕೆ ಮಹತ್ವದ ಕೊಡುಗೆಯಾಗಿರುವಂತಹವು. ಈ ಕ್ರೀಡೆಗಳು ಮುಖ್ಯವಾಗಿ ದೈಹಿಕವಿಜ್ಞಾನದ ದೈಹಿಕ ಶಿಕ್ಷಣವಾಗಿದೆ. ಇದು ದೈಹಿಕ ಶಿಕ್ಷಣವನ್ನು ಶಾರೀರಿಕ ಶಿಕ್ಷಣ ಎಂದು ಕರೆಯುತ್ತೇವೆ. ದೈಹಿಕ ಶಿಕ್ಷಣವೆಂದರೆ ಪ್ರಧಾನವಾಗಿ ದೈಹಿಕ ಚಟುವಟಿಕೆಗಳನ್ನೊಳಗೊಂಡದ್ದು. ದೈಹಿಕ ಚಟುವಟಿಕೆಗಳೆಂದರೆ ಆಟ, ಜೂಟ್, ನೆಗೆತ, ಎಸೆತ, ಭಾರಎತ್ತುವುದು, ವ್ಯಾಯಾಮ, ಕಸರತ್ತು, ಯೋಗಾಸನ, ಕುಸ್ತಿ ಇತ್ಯಾದಿ. ಬೇಡ ಸಮುದಾಯದ ಕ್ರೀಡೆಗಳಾದ ಬಂಡೆ ಎತ್ತುವುದು, ಗುಂಡು ಉರುಳಿಸುವುದು, ಚಿನ್ನಿದಾಂಡು, ಲಗೋರಿ, ಬೇಟೆ, ಮೊದಲಾದ ಅಂಗಸಾಧನೆ ಕ್ರೀಡೆಗಳಿಂದ ಆರೋಗ್ಯಕರ ಸದೃಢವಾದ ಮಾಂಸಖಂಡಗಳು, ಕಷ್ಟಸಂಹಿಷ್ಣುತೆ, ದೀರ್ಘಕಾಲ ಕೆಲಸ ಮಾಡುವುದು, ಶಿಸ್ತು, ರೋಗನಿರೋಧಕ ಶಕ್ತಿ ಮುಂತಾದ ಲಕ್ಷಣಗಳುಳ್ಳ ದೇಹದ ಬೆಳವಣಿಗೆ ಚಲನಾಕೌಶಲ್ಯ ಮತ್ತು ಸದಾಭ್ಯಾಸಾದಿಗಳನ್ನು ವ್ಯಕ್ತಿಯಲ್ಲಿ ರೂಢಿಸಲು ನೆರವಾಗುವಂತಹ ವೈಶಿಷ್ಟತೆಗಳನ್ನು ಇಲ್ಲಿ ಕಾಣಬಹುದು. ಆದ್ದರಿಂದ ಇದನ್ನು ದೈಹಿಕ ಶಿಕ್ಷಣವೆಂದು ಕರೆಯಬಹುದು.

ದೈಹಿಕ ಶಿಕ್ಷಣವೆಂಬುದು ಇಂಗ್ಲೀಷಿನ Physical Education ಎಂಬುದರ ಸಮಾನಾರ್ಥಪದ. ಒಂದೆ ಸಾಮಾನ್ಯ ಶಿಕ್ಷಣದ ಅಂಗವಾಗಿ ದೈಹಿಕ ಶಿಕ್ಷಣವನ್ನು ವಿದ್ಯಾಭ್ಯಾಸ ಕ್ರಮದಲ್ಲಿ ಅಳವಡಿಸಿದಾಗ ಈ ಪದ ಬಳಕೆಗೆ ಬಂದಿದೆ.

ದೈಹಿಕ ಶಿಕ್ಷಣವೆಂಬ ಪದ ಶಾಲಾ ಕಾಲೇಜುಗಳ Extra curricular activity ಎಂಬ ಸಮಾನಾರ್ಥದಿಂದ ಕೂಡಿದೆ. ಇಂದಿನ ದೈಹಿಕ ಶಿಕ್ಷಣ ಕೇವಲ Drill ತರಗತಿಗಳಿಗಷ್ಟೇ ಸೀಮಿತವಾಗಿಲ್ಲ. ಅದೊಂದು ಸ್ವತಂತ್ರ ವಿಜ್ಞಾನವಾಗಿ ರೂಪುಗೊಂಡಿದೆ. ದೈಹಿಕ ವಿಜ್ಞಾನ ಎಂಬ ಪದ ಇಂಗ್ಲೀಷಿನ Physical Education ಎಂಬ ಪದಕ್ಕಿಂತ ವ್ಯಾಪಕವಾದ ಅರ್ಥ ಪಡೆದಿದೆ ಎಂದು ಭಾವಿಸುತ್ತೇನೆ.

ಬೇಡ ಸಮುದಾಯದ ಕ್ರೀಡೆಗಳು ಪರಂಪರಾಗತವಾಗಿ ಬೆಳೆದು ಬಂದಿರುವಂತವು. ಇವು ಕೇವಲ ಕ್ರೀಡೆಯೋ, ವಿನೋದವೂ ಆಗಿರದೆ, ಗಂಭೀರ ಉದ್ದೇಶವೊಂದನ್ನು ಧರಿಸಿರುತ್ತದೆ. ಒಟ್ಟಿನಲ್ಲಿ ಕ್ರೀಡೆಗಳು ಸಾಮಾಜಿಕ ಚಟುವಟಿಕೆಯೂ ಹೌದು.

ಮೃಗೀಯವಸ್ಥೆಯಿಂದ ವಿಕಾಸಗೊಂಡ ಮಾನವ ಸಮುದಾಯ ಈ ಆಟಗಳನ್ನು ಬದುಕಿನ ಮೂಲಶಿಕ್ಷಣವಾಗಿ ವೃದ್ಧಿಸಿಕೊಂಡು ಬಂದಿದೆ. ಆದಕಾರಣ ಬೇಡ ಬುಡಕಟ್ಟು ಕ್ರೀಡೆಗಳ ಮೂಲ ಉದ್ದೇಶ ಜೊತೆಗೆ ಬದುಕಿನ ಮೂಲ ಶೈಕ್ಷಣಿಕ ಮನೋವೃತ್ತಿ ಹಾಗೂ ಶಾರೀರಕವಾಗಿ ಸದೃಢತೆಯ ಜೊತೆಗೆ ಮನೋರಂಜನೆಯನ್ನೂ ಒಳಗೊಂಡಿರುತ್ತವೆ. ಆತ್ಮರಕ್ಷಣೇಯ ಸೈನಿಕ ತರಬೇತಿಯ ಮೂಲ ಉದ್ದೇಶ ಕೂಡ ಬೇಡ ಸಮುದಾಯದ್ದು.

ಈ ತಂತ್ರ ಪ್ರತಿತಂತ್ರಗಳನ್ನು ಪ್ರಾಣಿ, ಪಕ್ಷಿ, ಕೀಟಗಳ ಸಾಂದರ್ಭೀಕ ಬದುಕಿನ ಪ್ರೇರಣೆಯಿಂದ ಕಲಿತಿರಬೇಕು. ಪ್ರತಿ ಸಮುದಾಯವು ಸ್ವತಂತ್ರ ಅಸ್ತಿತ್ವ, ರಾಜಕೀಯ, ಆರ್ಥಿಕ ವ್ಯವಸ್ಥೆಯ ಮೇಲೆ ಆಧಾರಿತವಾಗಿದ್ದಾಗಿನ ಪರಿಸ್ಥಿತಿ ಇದು. .

ಹುಟ್ಟಿದ ಪ್ರತಿಯೊಂದು ಮಗುವಿಗೂ ತನ್ನ ಸಮುದಾಯದ ರಕ್ಷಣೆಯ ಜವಬ್ದಾರಿ ಇರುತ್ತಿದ್ದ ಕಾರಣ ಅವರ ಕ್ರೀಡೆಗಳಲ್ಲಿ ಯುದ್ಧ ತಂತ್ರಗಳನ್ನು ಅಳವಡಿಸಲಾಗುತ್ತಿತ್ತು. ಆದ್ದರಿಂದ ದೊಡ್ಡವರಿಗೆ ಬಿಲ್ಲುವಿದ್ಯೆ, ಚಿಕ್ಕವರಿಗೆ ಬಿಲ್ಲು ಬಾಣದ ಆಟ, ಹಿರಿಯರಿಗೆ ದೊಣ್ಣೆವರಸೆಯಾದರೆ, ಮಕ್ಕಳಿಗೆ ಕೋಲಾಟವಾಗಿತ್ತು. ಇತ್ಯಾದಿಯಾಗಿ ಪರಿಗಣಿಸಲ್ಪಡುತ್ತಿದ್ದವು.

ಈ ಹಿನ್ನಲೆಯಲ್ಲಿ ಬೇಡಸಮುದಾಯಗಳ ಕ್ರೀಡೆಗಳನ್ನು ಗಮನಿಸಿದಾಗ ಮೂಲ ಶಿಕ್ಷಣ ಮತ್ತು ಅದರ ಒಂದು ಮಾದರಿಯಾಗಿ ಜೊತೆಗೆ ಸಮಾಜಕ್ಕೆ ಉಪಯೋಗವಾಗಿದೆ.

ಬೇಡ ಸಮುದಾಯದ ಕ್ರೀಡೆಗಳು

ಇದನ್ನು ದೈಹಿಕ ಶಿಕ್ಷಣಕ್ಕೆ ಹೋಲಿಸಲಾಗುವುದು. ಇಂದಿನ ದೈಹಿಕ ಶಿಕ್ಷಣದ ವಿದ್ಯಾರ್ಥಿಗಳ ಮುಂದೆ ಬೇಡ ಸಮುದಾಯದ ಕ್ರೀಡೆಗಳು ರಕ್ಷಣೇಯ ಹೋರಾಟಗಳಾಗಿವೆ. ಅದೊಂದು ಬಗೆಯ ವಿಶೇಷ ತಂತ್ರಜ್ಞಾನ ಮನೋರಂಜನೆ, ಆರೋಗ್ಯವರ್ಧನೆ ಹಾಗೂ ಆಕರ್ಷಣೀಯ ಉದ್ದೇಶಗಳು ಅದರಲ್ಲಿ ಇರುವುದು ಕಂಡುಬರುವುದು.

ಬೇಡ ಸಮುದಾಯದ ಆಟಗಳ ಉದ್ದೇಶ ನೇರವಾಗಿ ಮತ್ತು ಸ್ಪಷ್ಟವಾಗಿ ಸಾಮಾಜಿಕ ಮತ್ತು ವ್ಯಕ್ತಿಪ್ರತಿಭೆ, ಶಕ್ತಿ ಮತ್ತು ಜಾಣ್ಮೆಗಳನ್ನು ಪ್ರದರ್ಶಿಸುವುದಾಗಿದೆ. ಆದಕಾರಣ ಬೇಡಸಮುದಾಯ ಕ್ರೀಡೆಗಳು ಸಮಾಜದ ಇತರ ಸಮುದಾಯಗಳ ಮೇಲೆ ಪ್ರಭಾವ ಬೀರುವುದಾಗಿದೆ. ಮತ್ತು ಈ ಕ್ರೀಡೆಗಳ ಮೂಲಕ ಜನಸಾಮಾನ್ಯರನ್ನು ಶೈಕ್ಷಣಿಕವಾಗಿ, ಆರ್ಥಿಕವಾಗಿ ಸಾಮಾಜಿಕ ಅಭಿವೃದ್ಧಿಗೆ ರೂಪರೇಷೆಯಾಗಿದ್ದು ಕಂಡುಬರುತ್ತದೆ.

ಬೇಡ ಸಮುದಾಯ ಕ್ರೀಡೆಗಳ ಮೂಲಕ ವ್ಯಾಪಕವಾಗಿ ಬೆಳೆದುಬಂದಂತಿರುವ ದೈಹಿಕ ಶಿಕ್ಷಣ ಮತ್ತು ವಿಜ್ಞಾನ

ಹೊಸ ಹೊಸ ಕ್ರೀಡೆಗಳನ್ನು ಗುರುತಿಸಬಹುದಾಗಿದೆ. ಮತ್ತು ಈ ಸಮುದಾಯದ ಕ್ರೀಡೆಗಳ ಮೂಲಕ ಹೊಸ ಹೊಸ ಆಧುನಿಕ ಕ್ರೀಡೆಗಳು ರೂಪುರೇಷೆಯಾಗಿ ಬಂಡವಾಳಶಾಹಿ ವರ್ಗ ಕ್ರೀಡೆಗಳಾಗಿರುವುದನ್ನೂ ಗುರುತಿಸಬಹುದಾಗಿದೆ.

ಮಾನವ ಸಾಂಸ್ಕೃತಿಕ ಇತಿಹಾಸವನ್ನು ಗುರುತಿಸುವಾಗ ಬೇಡ ಸಮುದಾಯದ ಸಂಸ್ಕೃತಿಯು ಶ್ರೇಷ್ಠ ಸಂಸ್ಕೃತಿಗೆ ತಾಯಿಬೇರಾಗಿ ಜನಸಾಮಾನ್ಯರ ಬದುಕಿನೊಡನೆ ಬೇರ್ಪಡಿಸಲಾಗದ ಸಂಬಂಧವನ್ನಿಟ್ಟುಕೊಂಡು ಬೆಳೆದು ಬಂದಿರುವುದು ಗೋಚರಿಸುವುದು. ಬುಡಕಟ್ಟುಗಳಲ್ಲಿ ಬೇಡ ಸಮುದಾಯದ ಸಂಸ್ಕೃತಿಯು ಪ್ರೌಢವೆನಿಸಿಕೊಂಡು ಬೆಳೆದುದು ಎಂಬ ಮಾತುಗಳ ಹಿನ್ನೆಲೆಯಲ್ಲಿ ಬೇಡ ಸಮುದಾಯದ ಕ್ರೀಡೆಗಳ ಅವಿರ್ಭವಕ್ಕೆ ಹೀಗೆ ಪೋಷಕ ಸತ್ವ ಒದಗಿಸಿವೆ ಎಂಬುದನ್ನು ಪರಿಶೀಲಿಸಬಹುದು.

ಆಟಗಳು ಪ್ರಾಣಿಗಳ ಹಾಗೂ ಮಾನವನ ಬದುಕಿನ ವರ್ತನೆಗಳ ನೇರ ಅನುಕರಣೆಯಿಂದ ಮೂಡಿಬಂದವು. ಏಕೆಂದರೆ ಮಾನವರಲ್ಲಿ ಅದರಲ್ಲೂ ಮಕ್ಕಳಲ್ಲಿ ಅನುಕರಣಾ ಬುದ್ಧಿ ವಿಶೇಷವಾಗಿ ಕಂಡುಬರುವುದು. ಗೊಂಬೆಯಾಟ, ಬೇಟೆಯಾಡುವುದು, ಮನೆಗಳಾಟ ಮೊದಲಾದ ಆಟಗಳು ಹಿರಿಯ ಬದುಕಿನ ನೇರ ಅನುಕರಣೆಯಿಂದ ತಾಳಿದಂತವುಗಳಾಗಿವೆ. ಹಾಗೆಯೇ ಆದಿಮಾನವ ಮೊಲ, ಜಿಂಕೆ ಬೇಟೆಯಾಡುವ ಸಲುವಾಗಿ ಬೆನ್ನಟ್ಟಿದಾಗ ಓಡುವುದನ್ನು, ಕೋತಿಯೊಂದು ಕೊಂಬೆಯಿಂದ ಕೊಂಬೆಗೆ ಜಿಗಿದಾಗ ಜಿಗಿಯುವುದನ್ನು, ಹಕ್ಕಿಯನ್ನು ಕಂಡು ಹಾರುವುದನ್ನು ಕಲಿತಿರಬೇಕು.

ಈ ಆಟೋಟಗಳ ಜೊತೆಗೆ ಹಿರಿಯರು ಮಕ್ಕಳ ಮಾನಸಿಕ, ದೈಹಿಕ, ಶಾರೀರಿಕ ಬೆಳವಣಿಗೆ ಹಾಗೂ ಮನೋರಂಜನೆಯ ಸಲುವಾಗಿ ಕೆಲವು ಆಟಗಳನ್ನು ರೂಪಿಸಿರುವ ಸಾಧ್ಯತೆಯೂ ಇಲ್ಲದಿಲ್ಲ. ಹೀಗೆ ಬೇಡ ಸಮುದಾಯದ ಕ್ರೀಡೆಗಳನ್ನು ಊಹಿಸಬಹುದಾದರೂ ಇದು ಮಿಥ್ಯಾಂ ಎಂದು ಹೇಳಲಾಗುವುದಿಲ್ಲ. ಅಂತೆಯೇ ಆಟಗಳ ಪ್ರಾಚೀನತೆಯ ಬಗ್ಗೆಯೂ ಖಚಿತವಾಗಿ ಏನನ್ನೂ ಹೇಳಲಾಗುವುದಿಲ್ಲ.

108

ದೈಹಿಕ ಶಿಕ್ಷಣ ಇತಿಹಾಸ

ಈ ದೈಹಿಕ ಶಿಕ್ಷಣವು ಹಲವು ಶತಮಾನಗಳ ಹಿಂದಿನಿಂದಲೇ ಶಿಕ್ಷಣದ ಅಂಗವಾಗಿ ಬೆಳೆದು ಬಂದಿರುವುದನ್ನು ಗುರುತಿಸಬಹುದು. ಪ್ರಾಚೀನ ಕಾಲದ ಈಜಿಪ್ಶಿಯನ್ನರೂ, ಬ್ಯಾಬಿಲೋನಿಯರೂ, ಹೀಬ್ರೂಗಳು ದೈಹಿಕ ಶಿಕ್ಷಣದ ಪ್ರಾಮುಖ್ಯತೆಯನ್ನರಿತು ವಿವಿಧ ರೀತಿಯ ಕಾರ್ಯಕ್ರಮಗಳನ್ನು ರೂಢಿಸಿಕೊಂಡಿದ್ದರು. ಕ್ರಿ.ಶ. ೬ನೆಯ ಶತಮಾನದಲ್ಲಿ ಪಾರಸಿಕರಲ್ಲಿ ಓಡುವುದು, ನೆಗೆಯುವುದು, ಗುಡ್ಡಹತ್ತುವುದು, ಕುದುರೆಸವಾರಿ, ಭರ್ಜಿಯೆಸೆತ, ಮುಂತಾದ ಸೈನಿಕ ಕಾರ್ಯಚರಣೆಗೆ ನೆರವಾಗತಕ್ಕ ಚಟುವಟಿಕೆಗಳ ತರಬೇತಿಯನ್ನು ಸೈರಸ್ ಎನ್ನುವವನು ನೀಡುತ್ತಿದ್ದ. ಈ ತರಬೇತಿಯಲ್ಲಿ ನೈತಿಕ ಮತ್ತು ದೈಹಿಕ ಶಿಕ್ಷಣ ಪ್ರಧಾನ ಅಂಶವೆನಿಸಿದ್ದವು. ಪಾರಸಿಕರಂತೆ ಸ್ಪಾರ್ಟನ್ನರು, ಅಥೇನಿಯನ್ನರು, ಗ್ರೀಕರು, ರೋಮನ್ನರು ದೃಢಕಾಯರಾದ ಸೈನಿಕರ ಅಗತ್ಯದಿಂದಾಗಿ ದೈಹಿಕ ಶಿಕ್ಷಣಕ್ಕೆ ಗಮನವಿರುಸುತ್ತಿದ್ದರು. ೧೫ನೇ ಶತಮಾನದ ಪೂರ್ವಾರ್ಧದಲ್ಲಿ Viltorion a Felture ಎಂಬ ಇಟಲಿಯ ಶಾಲಾ ಮಾಸ್ತರನೊಬ್ಬನು ಮೊದಲಿಗೆ ದೈಹಿಕ ಶಿಕ್ಷಣವನ್ನು

ಸಾಮಾನ್ಯ ಶಿಕ್ಷಣ (Generaal Education) ದೊಡನೆ ಅಳವಡಿಸಿದ. ಜರ್ಮನಿಯ Martin Luther ಎನ್ನುವವನು ೧೬ನೆಯ ಶತಮಾನದಲ್ಲಿ ದೈಹಿಕ ಶಿಕ್ಷಣಕ್ಕೆ ಒತ್ತುಕೊಟ್ಟರೆ, ಜೆಕೋಸ್ಲೋವಾಕಿಯಾದ Johann Amar ಎನ್ನುವವನು ಒಂದು ಗಂಟೆಯ ಶಿಕ್ಷಣಕ್ಕೆ ಅರ್ಧಗಂಟೆಯ Recreation ಅಗತ್ಯವೆನ್ನುತ್ತಾರೆ. ಆಧುನಿಕ ದೈಹಿಕ ಶಿಕ್ಷಣದ ಪಿತಾಮಹರೆನಿಸಿರುವ Johann Bornhand ಎನ್ನುವವನು ೫ ಗಂಟೆಗಳ ಶಿಕ್ಷಣಕ್ಕೆ ೩ ಗಂಟೆಗಳ Recreation ಅಗತ್ಯವೆನ್ನುತ್ತಾನೆ. ಹೀಗೆ ಪಾಶ್ಚಾತ್ಯರು ಹಿಂದಿನಿಂದಲೂ ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿರುವುದನ್ನು ಗಮನಿಸಬಹುದು. ಅಲ್ಲದೆ ಬಹಳ ಹಿಂದಿನಿಂದಲೂ ಶಿಕ್ಷಣದ ಅಂಗವಾಗಿ ಬೆಳೆದು ಬಹು ಹಿಂದಿನಿಂದಲೂ ಶಿಕ್ಷಣದ ಅಂಗವಾಗಿ ಬೆಳೆದು ಬಂದಿರುವುದನ್ನು ಐತಿಹಾಸಿಕವಾಗಿ ಗುರುತಿಸಬಹುದು.

ವೇದ ಕಾಲದಿಂದಲೂ ಆಟಗಳು ಇದ್ದವೆಂಬುದಕ್ಕೆ ಋಗ್ವೇದದಲ್ಲಿ ಬರುವ ಅಕ್ಷವೆಂಬ ಪಗಡೆಯಾಟವೇ ಸಾಕ್ಷಿ. ೬೪ ವಿದ್ಯೆಗಳಲ್ಲಿ ಕ್ರೀಡೆಯೂ ಒಂದೆಂದೂ ಹೆಸರಿಸಲ್ಪಟ್ಟಿದೆ. ರಾಮಾಯಣ, ಮಹಾಭಾರತ ಮೊದಲಾದ ಕಾವ್ಯಗಳಲ್ಲಿ ಜಲಕ್ರೀಡೆ, ವನಕ್ರೀಡೆ, ವೈಯಾಳಿ, ಮಲ್ಲಯುದ್ಧ, ಮುಷ್ಠಿಯುದ್ಧ, ಧರ್ನುವಿದ್ಯೆ, ಬೇಟೆ, ಪಗಡೆ ಇತ್ಯಾದಿ ಬಗೆಗಿನ ಅನೇಕ ಉಲ್ಲೇಖಗಳು ದೊರೆಯುತ್ತವೆ. ಪ್ರಾಚೀನ ಗದ್ಯ ಗ್ರಂಥವಾದ ವಡ್ಡಾರಾಧನೆಯ ಭದ್ರಬಾಹುಭಟ್ಟಾರರ ಕಥೆಯಲ್ಲಿ ''ಕೂಸಿಂಗೆ ಭದ್ರಬಾಹುವೆಂಬ ಪೆಸರನೆಲ್ಲರುಂ ನೆರೆದಿಟ್ಟೊಡೆ ಆತನುಂ..... ತನ್ನೋರಗೆಗಳಪ್ಪೆ ಪಲಂಬರ್ ಮಾಣಿಗಳ್ವೆರಸು ಪೊರೆವೊವಿಲೊಳ್ ಬಟ್ಟಾಡುತ್ತಿರೆ, ಭದ್ರಬಾಹುವೆಂಬ ಮಾಣಿಯೊಂದು ಬಟ್ಟಿನ ಮೇಗೆ ಪದಿನಾಲ್ಕು ಬಟ್ಟಿನೊಂದೊಂದರಿ ಮೇಗೋಳಿಯಿಟ್ಟಾಡುತ್ತಿರ್ಪನ್ನೆಗಂ'' (ವಡ್ಡಾರಾಧನೆ ೬೨) ಎಂಬುದಾಗಿ ಬಟ್ಟಿನಾಟಿನ ವರ್ಣನೆ ಕಂಡುಬರುತ್ತದೆ.

ಪಂಪಭಾರತದಲ್ಲಿ

ಒಡನಾಡಿಯುಯೊಡನೋದಿಯು
ಮಾಡವಳೆದುಂ ಗುಳ್ಳೆಗೊಟ್ಟೆ ಬಟ್ಟುಳ್ಳಿ ಸೆಂಡುಂ
ಪೊಡೆ ಸೆಂಡೆಂಬಿವನಾಡು
ತ್ತೆಡವಳೆದರ್ ತಮ್ಮೊಳೆಸೆ ತಂತಂ ಗಡೆಗಳ್.

ಅಂತಾ ಕೂಸುಗಳ್ ಕೊಸಾಟವಾಡುತ್ತಿರ್ದೊದು ದಿವಸಂ ಮರಗರಸಿಯಾಡಲೆಂದು ಎಂಬುದಾಗಿ ಗುಳ್ಳೆಗೊಟ್ಟಿ ಬಟ್ಟಿನಾಟ ಉಳಿಸೆಂಡು ಮತ್ತು ಪೊಡೆಸೆಂಡು ನೆತ್ತದ ಮರಗೆರಸಿ (ಮರಕೋತಿಯ)ಯ, ಆಟದ ವರ್ಣನೆಗಳು ಕಂಡುಬರುತ್ತವೆ. ಆದಿಪುರಾಣದ ಭರತ, ಬಾಹುಬಲಿ ವ್ಯಾಯೋಗ ಸಂದರ್ಭದಲ್ಲಿ ದೃಷ್ಟಿಯುದ್ಧ, ಮುಷ್ಠಿಯುದ್ಧ, ಮಲ್ಲಯುದ್ಧ, ಜಲಯುದ್ಧಗಳ ವರ್ಣನೆಗಳಿವೆ. ಪಂಪಭಾರತ ಹಾಗೂ ಹರಿಶ್ಚಂದ್ರ ಕಾವ್ಯಗಳಲ್ಲಿ ಬೇಟೆಯ ವಿವರವಾದ ವರ್ಣನೆಗಳು ಬರುತ್ತವೆ. ನಂಜುಂಡ ಕವಿಯ ಕುಮಾರರಾಮ ಸಾಂಗತ್ಯದಲ್ಲಿ ಮುತ್ತಿನ ಚೆಂಡಾಟದ ರೋಚಕ ವರ್ಣನೆಯನ್ನು ಕಾಣಬಹುದು. ಪಾಶ್ಚಾತ್ಯ ಮಹಾಕಾವ್ಯಗಳಾದ ಈಲಿಯಡ್ ಒಡೆಸ್ಸಿಗಳಲ್ಲಿ ಮುಷ್ಠಿಕಾಳಗ, ಜಟ್ಟಿಕಾಳಗ, ಭಾರ ಎತ್ತುವಿಕೆ, ಓಟದ ಮತ್ತು ರಥದ ಪಂದ್ಯಗಳ ವರ್ಣನೆಗಳು ಬರುತ್ತವೆ. ಭೀಮ-ಜರಾಸಂಧ,

ವಾಲಿ-ಸುಗ್ರೀವ, ಕೃಷ್ಣ-ಬಾಣೂರಗರ ಮಲ್ಲಯುದ್ಧದ ವರ್ಣನೆಗಳು ಸೊಹ್ರಾಬ್ -ರುಸ್ತುಮರ ಹೋರಾಟ ಚಿತ್ರಣ ಮೊದಲಾದ ಕಡೆಗಳಲ್ಲಿ ಇಂದಿಗೂ ಜನಪ್ರಿಯವಾಗಿ ಉಳಿದಿರುವ ಕುಸ್ತಿಕಲೆಯ ವರ್ಣನೆಗಳು ಬರುತ್ತವೆ. ಇವುಗಳಲ್ಲದೇ ಜನಪದರಲ್ಲಿ ಹಾಸುಹೊಕ್ಕಾಗಿರುವ, ವೈವಿಧ್ಯಮಯವಾದ, ಸರಳ ಸುಂದರವಾದ ಹಲವಾರು ಬಗೆಯ ಆಟಗಳು ಇಂದಿಗೂ ಉಳಿದುಬಂದಿದೆ. ಈ ಜನಪದ ಆಟಗಳು ಅತ್ಯಂತ ಕಡಿಮೆ ಖರ್ಚಿನ, ಅಧಿಕ ಸಂತೋಷವನ್ನು ನೀಡುವ ಆಟಗಳು. ಕೆಲವು ಆಟಗಳಾದರೋ ಆಡುವ ಆಟಗಾರರಿದ್ದರೆ ಸಾಕು, ಮತ್ತೆ ಕೆಲವು ಆಟಗಳಿಗೆ ಕ್ರಿಕೆಟ್, ಟೆನ್ನಿಸ್ ಮೊದಲಾದ ಶ್ರೀಮಂತ ಆಟಗಳಂತೆ ನಿರ್ವಹಣೆ ವೆಚ್ಚವಾಗಲೀ, ಮರುಕಳಿಸುವ ಖರ್ಚಾಗಲಿ ಇರುವುದಿಲ್ಲ. ಒಂದೆರಡು ಹುಣಸೆಯ ಬಿತ್ತಗಳಿಂದ, ಮಡಕೆಯ ಚೂರಿನಿಂದ ಮಾಳದುದ್ದದ ಕೋಲಿನ ಚಿಣ್ಣಿದಾಂಡುಗಳಿಂದ ಎಂತಹ ಮನೋರಂಜನೆ ಪಡೆಯುತ್ತಿದ್ದರು. ನಮ್ಮ ಬೇಡ ಸಮುದಾಯದ ಜನರು (ಈ ಬಗೆಯ ಸರಳತೆ ಹಾಗೂ ಅಗ್ಗದ ಆಟಗಳೆಂದೇ ಇಂದು ಅವು ಆಧುನಿಕ ಆವಜ್ಞೆಗೆ, ಉಪೇಕ್ಷೆಗೆ ಪಕ್ಕಾಗಿವೆಯೋ ಏನೋ).

ಕರ್ನಾಟಕದ ಉದ್ದಗಲಕ್ಕೆ ಈ ಬಗೆಯ ನೂರಾರು ಆಟಗಳನ್ನು ಇಂದಿಗೂ ಗುರುತಿಸಬಹುದು. ಈ ಬೇಡಸಮುದಾಯದ ಆಟಗಳ ಬಗ್ಗೆ ನಮ್ಮಲ್ಲಿ ವ್ಯಾಪಕವಾದ ಹಾಗೂ ವೈಜ್ಞಾನಿಕವಾದ ಅಧ್ಯಯನ ನಡೆದಿಲ್ಲವೆಂದೇ ಹೇಳಬೇಕು. ಆಟಗಳ ವರ್ಣಾನಾತ್ಮಕ ಅಧ್ಯಯನದ ಒಂದೆರಡು ಪುಸ್ತಕಗಳು, ಸ್ಥಳೀಯ ಆಟಗಳ ರಮ್ಯ ವಿವರಣೆಗಳನ್ನೊಳಗೊಂಡ ಕೆಲವರ ಬಿಡಿ ಲೇಖನಗಳಿಂದಲೇ ನಮ್ಮ ಬುಡಕಟ್ಟು ವಿದ್ವಾಂಸರು ತೃಪ್ತಿಪಟ್ಟು ಕೊಂಡಂತಿದೆ. ನಾವು ಎಳೆಯರಿದ್ದಾಗ ಆಡುತ್ತಿದ್ದ ಎಷ್ಟೋ ಆಟಗಳು ಇಂದು ಕಣ್ಮರೆಯಾಗಿವೆ; ಆಗುತ್ತಿವೆ. ಕಾಲಚಕ್ರ ಉರುಳಿದಂತೆ ಅಳಿದುಳಿದ ಕೆಲವು ಆಟಗಳೂ ಮರೆಯಾಗಿ ಹೋಗುವ ಸಾಧ್ಯತೆಯೇ ಹೆಚ್ಚಾಗಿದೆ. ಆಧುನಿಕ ದೈಹಿಕ ವಿಜ್ಞಾನದ ಆವಿರ್ಭವಕ್ಕೆ ಕಾರಣವಾದ ಪರಂಪರಾನುಗತಿಕವಾಗಿ ಬೆಳೆದುಬಂದ ಬೇಡಬುಡಕಟ್ಟು ಆಟಪಾಟಗಳನ್ನು ಅಧ್ಯಯನ ಮಾಡಬೇಕು. ಸಹಸ್ರಾರು ವರ್ಷಗಳಿಂದ ಬೇಡರು ಆಡುತ್ತಿದ್ದ ಆಟಗಳ, ಕುಣಿತಗಳ ವೈಜ್ಞಾನಿಕ ಅಧ್ಯಯನ ವಿಶ್ಲೇಷಣೆ ಇಂದು ಅಗತ್ಯವಾಗಿದೆ. ಕೈಗಾರೀಕರಣ ಹಾಗೂ ನಾಗರೀಕರಣಗಳ ಪರಿಣಾಮವಾಗಿ ಇಂದು ಎಷ್ಟೋ ಆಟಗಳು ಮೂಲೆಗುಂಪಾಗಿವೆ. ಆಧುನಿಕ ಆಟಗಳ Fashion ಗೆ ಮರುಳಾದ ನಾವು ಈ ಸಮುದಾಯ ಆಟಗಳನ್ನು ತಿರಸ್ಕಾರ ಹಾಗೂ ಉಪೇಕ್ಷಾಭಾವನೆಯಿಂದ ಕಾಣುತ್ತಿದ್ದೇವೆ. ಇವುಗಳನ್ನು ಆಡುವುದು ಅವಮಾನವೆಂದೋ, ಅನಾಗರೀಕವೆಂದೋ, ಭಾವಿಸುವಂಥ ಪರಿಸರದಲ್ಲಿ ಸೃಷ್ಟಿಯಾಗಿದೆ.

ಬೇಡಸಮುದಾಯದ ಆಟಗಳ ಸಂಕೀರ್ಣ ಸ್ವರೂಪ ಹಾಗೂ ಸಂಖ್ಯಾ ಬಾಹುಳ್ಯದ ಕಾರಣ ಅವುಗಳ ವರ್ಗೀಕರಣ ಸಮಸ್ಯೆಯಾಗಿ ಪರಿಣಮಿಸಿದೆ. ಕೆಲವರು ಆಟವಾಡುವ ಸ್ಥಳವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೊರಾಂಗಣ ಆಟಗಳು ಮತ್ತು ಒಳಾಂಗಣ ಆಟಗಳು ಎಂದು ವಿಭಾಗಿಸಿದರೆ ಮತ್ತೆ ಕೆಲವರು ಆಟಗಾರರ ವಯಸ್ಸು, ಲಿಂಗವನ್ನು ಧರಿಸಿ ಮಕ್ಕಳ ಆಟಗಳು, ದೊಡ್ಡವರ ಆಟಗಳು, ಹುಡುಗಿಯರ ಹಾಗೂ ಹುಡುಗರ ಆಟಗಳೆಂದು ವರ್ಗೀಕರಿಸುತ್ತಾರೆ. Robert George ಎನ್ನುವವನು ಆಟಗಳ ವರ್ತನೆಯನ್ನು ನಡವಳಿಕೆಯನ್ನು ಗಮನದಲ್ಲಿಟ್ಟುಕೊಂಡು ೪ ಗುಂಪುಗಳಾಗಿ ವರ್ಗೀಕರಣ ಮಾಡಬಹುದೆಂದರೆ Tewart culen ಎನ್ನುವವನು ಕೌಶಲ್ಯದ ಆಟಗಳು ಮತ್ತು ಅದೃಷ್ಟದ ಆಟಗಳೆಂದು ಎರಡು ಗುಂಪಾಗಿ ವಿಂಗಡಿಸುತ್ತಾನೆ. ಇಷ್ಟಾದರೂ ಯಾವ ವರ್ಗೀಕರಣವೂ ಸಮರ್ಪಕವೂ, ಸರ್ವಸಮ್ಮತವೂ ಆಗಿಲ್ಲ.

ಅಭ್ಯಾಸದ ದೃಷ್ಟಿಯಿಂದ ನಾವು

೧. ಮನರಂಜಕ ಆಟಗಳು
೨. ಬೌದ್ಧಿಕ ಆಟಗಳು
೩. ದೈಹಿಕ ಜಾಣ್ಮೆಯ ಆಟಗಳು
೪. ಸ್ಪರ್ಧಾತ್ಮಕ ಆಟಗಳು
೫. ಊಹಾತ್ಮಕ ಆಟಗಳು

ಎಂದು ಐದು ಬಗೆಯಾಗಿ ವರ್ಗೀಕರಿಸಿಕೊಂಡಿದ್ದೇವೆ.

೧. ಮನರಂಜಕ ಆಟಗಳು

ಮನರಂಜನೆಯೇ ಈ ಆಟಗಳ ಮುಖ್ಯ ಗುರಿಯಾಗಿದ್ದು ಪ್ರಧಾನವಾಗಿ ಚಿಕ್ಕಮಕ್ಕಳು ಆಡುವ ಆಟಗಳು ಈ ವರ್ಗದಲ್ಲಿ ಬರುತ್ತವೆ. ೫-೬ ವಯಸ್ಸಿನ ಮಕ್ಕಳಲ್ಲಿ ವಿಶೇಷವಾಗಿ ಈ ಆಟಗಳು ಕಂಡುಬರುತ್ತವೆ. ಈ ಆಟಗಳ ಮುಖ್ಯ ಗುರಿ ಮನರಂಜನೆಯಾದರೂ ಬೆಳೆಯುವ ಎಳೆಯ ಚೇತನಗಳ ಮಾನಸಿಕ ಹಾಗೂ ಬೌದ್ಧಿಕ ಆಸಕ್ತಿಯನ್ನು ಉದ್ದೀಪಿಸುವ, ಭವಿಷ್ಯ ಜೀವನದ ಘಟನಾವಳಿಗಳು ಅಡಗಿರುವುದನ್ನು ಗುರುತಿಸಬಹುದು. ಈ ಬಗೆಯ ಆಟಗಳಿಂದ ಮಕ್ಕಳಲ್ಲಿ ಸೌಹಾರ್ದ ಬಾಳುವೆಗೆ ಬೇಕಾದ ಸಹಕಾರ ಮನೋಭಾವ, ಸಹನಶೀಲತೆ ಮೊದಲಾದ ಗುಣಗಳನ್ನು ಮಕ್ಕಳು ಅಪ್ರಯತ್ನಪೂರ್ವಕವಾಗಿ ರೂಢಿಸಿಕೊಳ್ಳುತ್ತೇವೆ.

೨. ಬೌದ್ಧಿಕ ಆಟಗಳು

ದೈಹಿಕ ಚಟುವಟಿಕೆಗಳಿಗಿಂತ ಬೌದ್ಧಿಕ ಚಿಂತನೆಗೆ ಹೆಚ್ಚು ಒತ್ತುಕೊಡುವ ಆಟಗಳನ್ನು ಬೌದ್ಧಿಕ ಆಟಗಳೆಂದು ಕರೆಯಬಹುದು. ಇವು ಬಹುಮಟ್ಟಿಗೆ ತಂತ್ರಪ್ರಧಾನವಾದ ಆಟಗಳು. ಚದುರಂಗ, ಹುಲಿಕಲ್ಲಿನ ಆಟ, ಚಕ್ಕೀ ಆಟ, ಗೊಟುಗುಣಿಯಾಟ ಮೊದಲಾದವು ಈ ವರ್ಗದಲ್ಲಿ ಬರುತ್ತವೆ. ಆಟದಲ್ಲಿ ಗೆಲುವು ಸಾಧಿಸಲು ಆಟಗಾರರು ತಂತ್ರ - ಪ್ರತಿತಂತ್ರಗಳನ್ನು ಹೂಡುತ್ತಾರೆ. ಈ ಬಗೆಯ ಆಟಗಳು ಆಟಗಾರರಲ್ಲಿ ಸ್ಮರಣಶಕ್ತಿ, ಕಲ್ಪನಾಶಕ್ತಿ, ಕೌಶಲ್ಯ ಹಾಗೂ ಆತ್ಮವಿಶ್ವಾಸ ಮೂಡಿಸುತ್ತವೆ. ಇಂತಹ ಆಟಗಳಿಂದ ಮಕ್ಕಳು ಭಾವಿಜೀವನದ ಅಗತ್ಯಗಳಾದ ಚತುರತೆ, ಚಾಣಾಕ್ಷತನಗಳನ್ನು ರೂಢಿಸಿಕೊಳ್ಳಲು ಸಾಧ್ಯವಾಗುತ್ತದೆ.

೩. ದೈಹಿಕ ಜಾಣ್ಮೆಯ ಆಟಗಳು

ದೈಹಿಕ ಚಟುವಟಿಕೆ, ಶಕ್ತಿಸಾಮರ್ಥ್ಯಗಳ ಪ್ರದರ್ಶನಕ್ಕೆ ಈ ಬಗೆಯ ಆಟಗಳಲ್ಲಿ ಪ್ರಾಧಾನ್ಯತೆಯಿರುವುದು ಕಂಡುಬರುತ್ತದೆ. ಈ ರೀತಿಯ ಆಟಗಳಿಂದ ನಿಯತವಾದ ಅಂಗಸಾಧನೆಯಷ್ಟು ಕ್ರಮಬದ್ಧವಲ್ಲದಿದ್ದರೂ ದೇಹದ ಕೆಲವು ಅಂಗಾಂಗಗಳಿಗೆ ವ್ಯಾಯಾಮ ದೊರೆತರೆ, ಶಕ್ತಿವರ್ಧನೆಗೆ ಆರೋಗ್ಯ ವೃದ್ಧಿಸುತ್ತದೆ. ಮನಸ್ಸಿಗೆ ಹರ್ಷ ಉಲ್ಲಾಸ

ದೊರಕುತ್ತವೆ. ಲಗ್ಗೆಚೆಂಡು, ಚಿಣ್ಣಿದಾಂಡು, ಚೆಂಡಾಟಗಳು, ಬಚ್ಚದ ಆಟಗಳು ಒಂದು ಬಗೆಯಾದರೆ, ಓಟಗಳು, ನೆಗೆತಗಳು, ಎಸೆತಗಳು, ಹಾರುವಿಕೆ, ಭಾರ ಎತ್ತುವಿಕೆ, ಕತ್ತಿವರಸೆ, ದೊಣ್ಣೆವರಸೆ, ಕುಸ್ತಿ ಕೋಲಾಟ ಮತ್ತು ಕುಣಿತಗಳು ಈ ವರ್ಗದಲ್ಲಿ ಬರುತ್ತವೆ.

೪. ಸ್ಪರ್ಧಾತ್ಮಕ ಆಟಗಳು

ಕನಿಷ್ಟಪಕ್ಷ ಇಬ್ಬರು ಆಟಗಾರರು ಅಥವಾ ಎರಡು ತಂಡಗಳು ಈ ಆಟಗಳಲ್ಲಿ ಪಾಲ್ಗೊಳ್ಳುತ್ತಾರೆ. ಸೋಲು ಗೆಲುವುಗಳೇ ಈ ಆಟದ ನಿರ್ಣಾಯಕ ಅಂಗಗಳಾಗಿರುತ್ತವೆ. ಕೆಲವು ಆಟಗಳಲ್ಲಿ ದೈಹಿಕಶಕ್ತಿ ಪ್ರದರ್ಶನಕ್ಕೆ ಪ್ರಾಧಾನ್ಯತೆಯಿದ್ದರೆ ಮತ್ತೆ ಕೆಲವು ಆಟಗಳಲ್ಲಿ ಬೌದ್ಧಿಕ ಜಾಣ್ಮೆಯ ಪ್ರದರ್ಶನಕ್ಕೆ ಪ್ರಾಧಾನ್ಯತೆ ಇರುತ್ತದೆ. ಕಬ್ಬಡಿ, ಖೊ, ಖೋ, ಮರಕೋತಿ, ಹಗ್ಗ ಜಗ್ಗುವುದು, ಭಾರ ಎತ್ತುವುದು, ಬಂಡೆಗಳ ಸ್ಪರ್ಧೆ ಮೊದಲಾದ ಆಟಗಳನ್ನು ಗುರುತಿಸಬಹುದು.

೫. ಊಹಾತ್ಮಕ ಆಟಗಳು

ಮಕ್ಕಳಲ್ಲಿ ಸ್ಮರಣಶಕ್ತಿ, ಊಹಾತ್ಮಕಶಕ್ತಿ ಹಾಗೂ ಬೌದ್ಧಿಕಶಕ್ತಿ ಬೆಳವಣಿಗೆಗೆ ಈ ಆಟಗಳು ಕಾರಣವಾಗುತ್ತವೆ. ಕಣ್ಣುಮುಚ್ಚಾಲೆಯಾಟ, ಮೂಗು ಚುಚ್ಚುವುದು, ಕಳ್ಳಪೋಲಿಸ್ ಆಟ, ಸಿಳ್ಳಾಟ ಮೊದಲಾದವು ಈ ವರ್ಗದಲ್ಲಿ ಸೇರುತ್ತವೆ.

ಹೀಗೆ ಕರ್ನಾಟಕದಲ್ಲಿ ಕಂಡುಬರುವ ಆಟಗಳನ್ನು ವರ್ಗೀಕರಿಸಿ ಅಭ್ಯಸಿಸಬಹುದೆಂದು ತೋರುತ್ತದೆ.

ಬೇಡ ಸಮುದಾಯದ ಮಾದರಿಯಾಗಿ ಇಂದು ವ್ಯಾಪಾಕವಾಗಿ ಬೆಳೆಯುತ್ತಿರುವ ಒಂದು ಕ್ಷೇತ್ರವಾಗಿದೆ. ಸಾಮಾನ್ಯ ಶಿಕ್ಷಣದ ಅಂಗವಾಗಿದ್ದು ಇಂದು ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಂಡು ಪ್ರತ್ಯೇಕ ಶಾಖೆಯಾಗಿ ಬೆಳೆದುನಿಂತಿದೆ. ಮತ್ತು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ತರಗತಿಗಳ ಅಭ್ಯಾಸದ ವಿಷಯವಾಗಿ ಗೌರವ ಪಡೆದಿದೆ. ಈ ಬೇಡ ಸಮುದಾಯದ ಕ್ರೀಡೆಗಳ ಮಾದರಿಯಲ್ಲಿ ಆಟಗಳು ದೈಹಿಕ ಚಟುವಟಿಕೆಗಳು ಮತ್ತು ಅಂಗಸಾಧನೆಯ ವ್ಯಾಯಾಮ ಎಂದು ಮೂರು ಮುಖ್ಯ ವಿಭಾಗಗಳಿವೆ. ಆಟಗಳಲ್ಲಿ ಪ್ರಧಾನ ಆಟಗಳು, ಗೌಣ ಆಟಗಳು ಮತ್ತು ಮಿಶ್ರ ಆಟಗಳು ಎಂದು ಮೂರು ಬಗೆಗಳಿವೆ. ಪ್ರಧಾನ ಆಟಗಳಲ್ಲಿ ಕ್ರಿಕೆಟ್, ಹಾಕಿ, ಫುಟ್ ಬಾಲ್, ಸಾಫ್ಟ್ ಬಾಲ್ ಮೊದಲಾದವು ಎಂದರೆ, ಗೌಣ ಆಟಗಳಲ್ಲಿ ವಾಲಿಬಾಲ್, ಬ್ಯಾಸ್ಕೆಟ್ ಬಾಲ್, ಬಾಲ್ ಬ್ಯಾಡ್ ಮಿಂಟನ್ , ಥ್ರೋಬಾಲ್ , ಷಟ್ಲಕಾಕ್ ಮೊದಲಾದವು ಮತ್ತು ಮಿಶ್ರ ಆಟಗಳಲ್ಲಿ ಕಬ್ಬಡಿ, ಖೊ, ಖೋ, ಮೊದಲಾದ ಆಟಗಳು ಬರುತ್ತವೆ.

(ನೋಡಿ : ತುಳುನಾಡಿನ ಜನಪದ ಆಟಗಳು, ೨೦೦೦, ಡಾ. ಗಣನಾಥ್ ಎಕ್ಕರು, ಪು. ೫೪-೫೫)

ದೈಹಿಕ ಚಟುವಟಿಕೆಗಳಲ್ಲಿ ಮೈದಾನದ ಆಟಗಳು ಮತ್ತು ಚಾಡಿನ ಆಟಗಳು ಎಂದು ಎರಡು ಬಗೆ. ಮೈದಾನದ

ಆಟಗಳಲ್ಲಿ ನೆಗೆತಗಳು, ಎಸೆತಗಳು ಮೊದಲಾದವು ಬಂದರೆ ಜಾಡಿನ ಆಟಗಳಲ್ಲಿ ಓಟಗಳು, ರಿಲೇಓಟ, ಹರ್ಡಲ್ ಮ್ಯಾರಥನ್ ಓಟ, ದೂರ ಪ್ರದೇಶದ ಓಟ ಮೊದಲಾದವು ಬರುತ್ತವೆ. ಅಂಗಸಾಧನೆ, ಯೋಗಾಸನ, ಕುಸ್ತಿ, ಭಾರ ಎತ್ತುವಿಕೆ (Weight Lifty) (Body Build), ಕುಸ್ತಿ ಮೊದಲಾದವು ಬರುತ್ತವೆ. ಇತ್ತೀಚಿನ ದಿನಗಳಲ್ಲಿ ಕರಾಟೆಯೂ ಈ ವರ್ಗಕ್ಕೆ ಸೇರಿದೆ.

ಬೇಡ ಸಮುದಾಯ ಆಟದ ಮೂಲ ದೈಹಿಕ ಶಿಕ್ಷಣ ಮತ್ತು ಅದರ ಉಪಯೋಗವೇ ಆಗಿರುತ್ತಿತ್ತು ಎಂಬ ಅಂಶವನ್ನು ಈಗಾಗಲೇ ನೋಡಿದ್ದೇವೆ. ಇದೀಗ ದೈಹಿಕ ವಿಜ್ಞಾನ ಶಾಖೆಯು ಪಠ್ಯಕ್ರಮದಲ್ಲಿ ಸಮುದಾಯದ ಆಟಗಳನ್ನು ಅಳವಡಿಸಿ ಅವುಗಳನ್ನು ಪುನರುಜ್ಜೀವನಗೊಳಿಸುವ ಪ್ರಯತ್ನದ ಕಡೆ ನಾವು ಗಮನ ಹರಿಸಬೇಕಿದೆ. ಅದಕ್ಕೂ ಮೊದಲು ಅಳಿದುಹೋಗುತ್ತಿರುವ ಬೇಡ ಸಮುದಾಯ ಆಟಗಳನ್ನು ಉಳಿಸಿಕೊಳ್ಳುವ ಕಡೆಗೆ ನಾವಿಂದು ಆದ್ಯ ಗಮನ ಕೊಡಬೇಕು. ರಾಜ್ಯ ಸರ್ಕಾರದಲ್ಲಿ ಯುವಜನ ಸೇವಾ ಇಲಾಖೆ ಪ್ರತ್ಯೇಕವಾಗಿಯೇ ಇದೆ. ನಾಡಹಬ್ಬದ ಸಂದರ್ಭದಲ್ಲಿ ದಸರಾ ಕ್ರೀಡಾ ಸ್ಪರ್ಧೆಗಳನ್ನು ಪ್ರತಿ ವರ್ಷವೂ ಏರ್ಪಡಿಸುತ್ತಾರೆ. ಬ್ಲಾಕ್ ಮಟ್ಟದಿಂದ ಹಿಡಿದು ರಾಜ್ಯ ಮಟ್ಟದವರೆಗೆ ಸ್ಪರ್ಧೆಗಳನ್ನು ಏರ್ಪಡಿಸಿ ವಿವಿಧ ಕ್ರೀಡೆಗಳಿಗೆ ಪ್ರೋತ್ಸಾಹ ನೀಡುತ್ತಾರೆ. ಇದೇ ಸಂದರ್ಭದಲ್ಲಿ ಅಥವಾ ರಾಜೋತ್ಸವದ ಸಂದರ್ಭದಲ್ಲಿಯಾಗಲೀ ಪ್ರತಿವರ್ಷವೂ ಬುಡಕಟ್ಟು ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಿದಲ್ಲಿ ಅಳಿದು ಹೋಗುತ್ತಿರುವ ಹಲವಾರು ಅತ್ಯುತ್ತಮ ಆಟಗಳನ್ನು ಉಳಿಸಿ ಪುನರುಜ್ಜೀವನಗೊಳಿಸಬಹುದು. ಇಂದು ಆಧುನಿಕ ದೈಹಿಕ ವಿಜ್ಞಾನದ ಅಂಗಗಳಾದ ಎಲ್ಲ ಬಗೆಯ ಕ್ರೀಡೆಗಳಿಗೂ ಒಂದಲ್ಲ ಒಂದು ರೀತಿಯಲ್ಲಿ ಬೇಡ ಸಮುದಾಯದ ಆಟಗಳೇ ಮೂಲವೆಂಬ ಅಂಶದಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವೇ ಇಲ್ಲ. ಆದರೆ ಈ ಆಟಗಳು ಇಂದು ಅವುಗಳ ಮೂಲವನ್ನು ಗುರುತಿಸಲಾಗದಷ್ಟು ಮಾರ್ಪಾಟು ಹೊಂದಿವೆ. ಆದರೆ ಕೆಲವು ಆಟಗಳನ್ನು ಸಮಕಾಲೀನ ಸಂದರ್ಭಕ್ಕೆ ತಕ್ಕಂತೆ ಅಳವಡಿಸಿ ರೂಪಿಸಿಕೊಳ್ಳಬೇಕೆಂಬ ಅಂಶವನ್ನು ಈ ಸಂದರ್ಭದಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕು. ಈ ದಿಶೆಯಲ್ಲಿ ಯುವಜನ ಸೇವಾ ಇಲಾಖೆಯ ಮುಖ್ಯಸ್ಥರು, ವಿಶ್ವವಿದ್ಯಾನಿಲಯಗಳ ದೈಹಿಕ ವಿಜ್ಞಾನ ವಿಭಾಗದ ನಿರ್ದೇಶಕರುಗಳು, ಬುಡಕಟ್ಟು, ಸಮುದಾಯದ ವಿದ್ವಾಂಸರೊಡನೆ ಸಮಾಲೋಚಿಸಿ ಆದಷ್ಟು ಬೇಗ ಕಾರ್ಯ ಪ್ರವೃತ್ತರಾಗಬೇಕಿದೆ. ಅಲ್ಲದೆ ದೈಹಿಕ ವಿಜ್ಞಾನದ ವಿಭಾಗದ ಮುಖ್ಯಸ್ಥರು ತೆರೆದ ಮನಸ್ಸಿನಿಂದ ಈ ಬುಡಕಟ್ಟು ಸಮುದಾಯದ ಆಟಗಳನ್ನು ಅಭ್ಯಸಿಸಿ ಬುಡಕಟ್ಟು ಸಮುದಾಯದ ವಿದ್ವಾಂಸರೊಡನೆ ಚರ್ಚಿಸಿ ಸುವ್ಯಸ್ಥಿತ ಕ್ರೀಡೆಗಳನ್ನು ದೈಹಿಕ ವಿಜ್ಞಾನ ಶಿಕ್ಷಣದ ಪಠ್ಯಕ್ರಮದಲ್ಲಿ ಅಳವಡಿಸಿ ಮಾನ್ಯತೆ ಕೊಡಬೇಕು. ಏಕೆಂದರೆ ಪಾಠ ಪ್ರವಚನಗಳಿಂದ ಬುದ್ಧಿ ಮತ್ತು ಹೃದಯಗಳು ವಿಕಾಸವಾಗುವಂತೆ ಕ್ರೀಡೆಗಳಿಂದ ದೇಹಶಕ್ತಿ, ಕೈ ಚಳಕ, ಧೈರ್ಯ, ಸಾಹಸ ಮೊದಲಾದ ಗುಣಗಳು ಬೆಳೆಯುವುದಲ್ಲದೆ ಆತ್ಮವಿಶ್ವಾಸ ಮೂಡಿ ವ್ಯಕ್ತಿತ್ವದ ಪೂರ್ಣ ಬೆಳವಣಿಗೆಗೆ ಪೂರಕವಾಗುವ ಬುಡಕಟ್ಟು ಸಮುದಾಯದ ಆಟಗಳಲ್ಲಿ ಅತ್ಯುತ್ತಮವಾದುದನ್ನು ಆಯ್ಕೆಮಾಡಿಕೊಂಡು ಪರಿಷ್ಕರಿಸಿ ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳಲು ಸಾಧ್ಯ ಎಂಬ ವಿಚಾರವನ್ನು ಮುಕ್ತ ಮನಸ್ಸಿನಿಂದ ವಿಚಾರಮಾಡಿ ತಕ್ಷಣ ಕಾರ್ಯ ಪ್ರವೃತ್ತರಾಗಬೇಕು.

ಬೇಡ ಸಮುದಾಯದ ಆಟಗಳಲ್ಲಿ ಪರಿಷ್ಕರಿಸಿ ದೈಹಿಕ ವಿಜ್ಞಾನ ವಲಯದಲ್ಲಿ ಅವುಗಳನ್ನು ಅಳವಡಿಸಿಕೊಳ್ಳುವ ಸಾಧ್ಯತೆಯ ಬಗೆಗೆ ಯೋಚಿಸಿಸೋಣ.

ಲಗ್ಗೆ ಚೆಂಡು ಬೇಡ ಸಮುದಾಯದ ಆಟಗಳಲ್ಲಿ ಗಂಡುಮಕ್ಕಳು ಆಡುವ ಆಟ. ಈ ಆಟಕ್ಕೆ ವಿಶಾಲವಾದ ಮೈದಾನವಿರಬೇಕು. ಆಟಗಾರರು ತಮ್ಮಲ್ಲೇ ಎರಡು ಗುಂಪುಗಳನ್ನು ಮಾಡಿಕೊಳ್ಳುತ್ತಾರೆ. ಮೊದಲು ಆಟ ಆಡುವ ಗುಂಪು ಯಾವುದೆಂದು ನಿರ್ಧರಿಸಲು Toss ಯಾರು ಗೆಲ್ಲುತ್ತಾರೋ ಆ ಗುಂಪಿನವರು ಎಸೆದಾರ (Bowlers)ರೂ ಸೋತವರು ಕಾಯಲು (F ield) ನಿಲ್ಲುತ್ತಾರೆ. ಬಳಿಕ ಸ್ವಲ್ಪ ಉದ್ದನೆಯ ಚೌಕಾಕಾರದ ಕಲ್ಲನ್ನೋ ಹಲಗೆಯನ್ನೋ (Wicket) ಮಣ್ಣಿನಗುಪ್ಪೆಯ ಮೇಲೆ ನಿಲ್ಲಿಸುತ್ತಾರೆ. ಕಾಯುವ ಸರದಿಯವರು (F ieldry) ಲಗ್ಗೆಯ ಎಡಬಲದಲ್ಲಿ ಆಯಾಕಟ್ಟಿನ ಸ್ಥಳಗಳಲ್ಲಿ ನಿಲ್ಲುತ್ತಾರೆ. ಎಸೆಗಾರ (Bowler) ರ ಗುಂಪಿನವರು ಒಬ್ಬೊಬ್ಬರಾಗಿ ಗೊತ್ತಾದ ಅಂತರದಿಂದ ಲಗ್ಗೆಗೆ ಗುರಿಯಿಟ್ಟು ಹೊಡೆಯುತ್ತಾರೆ. ಹೀಗೆ ಎಸೆಗಾರ ಮೂರು ಬಾರಿ ಚೆಂಡೆಸೆಯುವ ಅವಕಾಶವಿರುತ್ತದೆ. ಲಗ್ಗೆಗೆ ಎಸೆದ ಚೆಂಡು ಲಗ್ಗೆಗೆ ತಗುಲಿ ಪುಟನೆಗೆದರೆ ಅದನ್ನು ಕಾಯುವವರ ಗುಂಪಿನವರಲ್ಲಿ ಯಾರಾದರೂ ಹಿಡಿದರೆ ಎಸೆಗಾರರು ಆಟದಲ್ಲಿ ಸೋತಂತೆ ತೀರ್ಮಾನ. ಇದೀಗ ಕಾಯುತ್ತಿದ್ದವರು ಎಸೆಗಾರರಾಗುತ್ತಾರೆ. ಈ ಆಟದ ವಿವರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಈಗಿನ ಕ್ರಿಕೆಟಿನ ಆಟದ ವಿಧಾನ ಹಾಗೂ ಸ್ವರೂಪವನ್ನು ಬಹುವಾಗಿ ಹೋಲುವಂತೆ ತೋರುತ್ತದೆ. ಇದೇ ಆಟವನ್ನು ಮೂಲ ಆಟದ ರೂಪರೇಷೆಗಳಿಗೆ ಭಂಗವಾಗದಂತೆ ಪರಿಷ್ಕರಿಸಿ ಕ್ರಿಕೆಟ್ ಆಟದ ಕೆಲವು ನಿಯಮಗಳನ್ನು, ನಿಬಂಧನೆಗಳನ್ನು ಅಳವಡಿಸಿ ದೈಹಿಕ ವಿಜ್ಞಾನದ ಪಠ್ಯಕ್ರಮದಲ್ಲಿ ಅಳವಡಿಸುವ ಸಾಧ್ಯತೆಯನ್ನು ಕುರಿತು ಯೋಚಿಸಬೇಕು. ಲಗ್ಗೆ ಚೆಂಡಿನಲ್ಲಿ ಕ್ರಿಕೆಟ್ ನಲ್ಲಿ ಕಂಡುಬರುವ Aiming, Catching, Filding ಮೊದಲಾದ ಲಕ್ಷಣಗಳನ್ನು ಕಾಣುತ್ತೇವೆ. ಕ್ರಿಕೆಟ್ ಆಟದಂತೆ ಓಟಕ್ಕೂ ಅವಕಾಶವಿದೆ. ಕ್ರಿಕೆಟ್ ಆಟಗಾರನಿಗೆ ಆಟದಲ್ಲಿ ದೊರಕುವಷ್ಟು ವ್ಯಾಯಾಮ ಈ ಆಟದಲ್ಲೂ ದೊರಕುತ್ತದೆ. ಭಾರತದಂಥ ಬಡರಾಷ್ಟ್ರಗಳಿಗೆ ಅದರಲ್ಲೂ ಗ್ರಾಮೀಣ ಪ್ರದೇಶದ ಶಾಲಾ-ಕಾಲೇಜುಗಳಲ್ಲಿ ಕ್ರಿಕೆಟ್, ಹಾಕಿ, ಟೆನ್ನಿಸ್ ಮೊದಲಾದ ದುಬಾರಿ ಆಟಗಳನ್ನು ಆಡಲು ಸಾಧ್ಯವಾಗುವುದಿಲ್ಲ. ಅದೂ ಅಲ್ಲದೆ ಕ್ರಿಕೆಟ್ ಮೊದಲಾದ ಆಟಗಳು ನಮ್ಮ ದೇಶದ ಹವಾಮಾನ, ಆರ್ಥಿಕ ಸ್ಥಿತಿಗತಿಗಳಿಗೆ ಹೊಂದಿಕೊಳ್ಳುವಂಥ ಆಟಗಳಲ್ಲ. ಇದು ಇಂಗ್ಲೆಂಡ್ ಮೊದಲಾದ ಶೀತವಲಯಗಳ ದೇಶಗಳವರು ರೂಪಿಸಿಕೊಂಡ ಆಟ. ನಮ್ಮಂಥ ಉಷ್ಣವಲಯದ ದೇಶಗಳಿಗೆ, ಬಡರಾಷ್ಟ್ರಗಳಾದ ಭಾರತದಂಥ ದೇಶಗಳಿಗೆ ೩ ಹಾಗೂ ೫ ದಿನಗಳು ಆಡುವ ಇಂಥ ಆಟಗಳ ಅವಶ್ಯಕತೆ ಎಷ್ಟರಮಟ್ಟಿಗೆ ಉಚಿತ ಮತ್ತು ಸಮಂಜಸ ಎಂಬುದನ್ನು ಕ್ರೀಡಾ ತಜ್ಞರು ಅವಲೋಕಿಸಬೇಕು. ಇದು ಎಷ್ಟಾದರೂ ನಗರದ ಆಟವಾದೀತೇ ಹೊರತು ಗ್ರಾಮೀಣ ಪ್ರದೇಶಗಳಲ್ಲಿ ರೂಢಿಸಲು ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಾಗುವುದಿಲ್ಲ. ಸಾವಿರಾರು ಜನಗಳ ಶಕ್ತಿ (Manual Labour) ಯನ್ನು ಅಮೂಲ್ಯವಾದ ವೇಳೆಯನ್ನೂ ವ್ಯರ್ಥಗೊಳಿಸಿ ರಾಷ್ಟ್ರದ ಉತ್ಪಾದನೆಗೆ (National Production) ಗೆ ಪೂರಕವಾಗುವಂಥ ದುಬಾರಿ ಆಟಗಳ ಬದಲಿಗೆ ಇದರಷ್ಟೇ ವ್ಯಾಯಾಮ ಹಾಗೂ ಖುಷಿಕೊಡುವ ಲಗ್ಗೆ, ಲಗೋರಿಯಂಥ ಬೇಡಸಮುದಾಯದ ಆಟಗಳನ್ನು ಪರಿಷ್ಕರಿಸಿ ಕ್ರಿಕೆಟ್ ಆಟದ ಬದಲಿಗೆ ರೂಢಿಗೆ ತರಬಹುದು. ಈ ಬಗ್ಗೆ ಕ್ರೀಡಾತಜ್ಞರು ಆಲೋಚಿಸಬೇಕು. ಇದರಂತೆಯೇ ಚಿಣ್ಣಿದಾಂಡು ಆಟವನ್ನು ಪರಿಷ್ಕರಿಸಿ ಅಳವಡಿಸಿಕೊಳ್ಳಬಹುದು.

(ನೋಡಿ : ತುಳುನಾಡಿನ ಜನಪದ ಆಟಗಳು, ಸಂಪುಟ ೧, ೨೦೦೦, ಪು. ೫೪-೫೫)

ಮತ್ತೊಂದು ಬೇಡ ಸಮುದಾಯದ ಆಟ ಹಳೀರ್ ಗುಡುಗುಡು ಅಥವಾ ಉತ್ತುತ್ತು ಇಂದಿನ ಕಬ್ಬಡ್ಡಿ ಆಟಕ್ಕೆ ಸಮಾನವಾದುದು ಎಂಬುದರಲ್ಲಿ ಸಂಶಯವಿಲ್ಲ. ಅದನ್ನು ಪರಿಷ್ಕರಿಸಿ ಬಳಕೆಗೆ ತರಬಹುದು. ಪಲ್ಲಿಆಟ (ಪಲ್ಲಿಗೇಮ್) ಇಂದಿನ ಖೋಖೋ ಆಟಕ್ಕೆ ಮೂಲವಾದುದು. ಈ ಬೇಡ ಸಮುದಾಯದ ಆಟದಲ್ಲಿ ಓಡುವ ಗುಂಪಿನ ೯ ಜನರೂ ಒಮ್ಮೆಲೆ ಆಟದ ಕಣಕ್ಕಿಳಿದರೆ, ಖೊಖೋದಲ್ಲಿ ಒಮ್ಮೆಗೆ ೩ ಆಟಗಾರರು ಮಾತ್ರ ಕಣಕ್ಕಿಳಿಯುತ್ತಾರೆ. ಈ ಮೂವರು ಹಿಡಿಯಲ್ಪಟ್ಟ ಅನಂತರ ಮತ್ತೆ ೩ ಆಟಗಾರರು ಬರುತ್ತಾರೆ. ಆಟದಲ್ಲಿ ಕಾಲದ ಮಿತಿ (Time limit) ಪ್ರಥಮಾರ್ಧ (F irst half) ಮತ್ತು ದ್ವಿತೀಯಾರ್ಧದ ಆಟಗಳು ಮತ್ತು ಅದರಲ್ಲಿ ಯಾವ ಗುಂಪಿಗೆ ಹೆಚ್ಚು ಅಂಕಗಳು ಬರುತ್ತವೋ ಅವರು ಗೆದ್ದಂತೆ ತೀರ್ಮಾನಿಸುತ್ತಾರೆ. ಖೊ-ಖೋ ಕಣದ ಅಳತೆ, ಅಡ್ಡಗೆರೆಗಳು, ತಿರುವನ್ನು ಪಡೆಯುವ ಮೊದಲು, ಆಟಗಾರನ ಚಲನವಲನಗಳು ಗೆರೆಯ ನಡುವೆಯೇ ಸೀಮಿತಗೊಂಡಿರಬೇಕೆಂಬ ನಿಯಮಗಳನ್ನು ಪಲ್ಲಿ ಆಟಕ್ಕೆ ಅಳವಡಿಸಿ ಖೊ-ಖೋ ಆಟದಂತೆ ಗ್ರಾಮೀಣ ಪ್ರದೇಶಗಳಲ್ಲಿ ಜನಪ್ರಿಯಗೊಳಿಸಬಹುದು. ಪ್ರಾಚೀನ ಮರಕೋತಿ ಆಟದಲ್ಲಿ Roman Rings ನಲ್ಲಿ ಬರುವ Jumping, Climbing, Hanging, Bar Excercise ಮೊದಲಾದ ಎಲ್ಲ ಲಕ್ಷಣಗಳನ್ನು ಕಾಣಬಹುದು. ಇದನ್ನು Gymnastics ವಿಭಾಗದಲ್ಲಿ ಅಳವಡಿಸಬಹುದು. ಇವುಗಳಂತೆಯೇ ಹೆಣ್ಣುಮಕ್ಕಳ ಆಟಗಳಾದ ಕುಂಟಲಪಿ, ಕಣ್ಣುಮುಚ್ಚಾಲೆ ಮೊದಲಾದವನ್ನು ಇಂದಿನ Hel-Help ಮತ್ತು Time Genus ಮುಂತಾದ ಆಟಗಳ ರೂಪದಲ್ಲಿ ಪರಿಷ್ಕರಿಸಿ ರೂಢಿಯಲ್ಲಿ ತರಬಹುದು.

ತಿಳ್ಳಿಕೋಲ್ (ಖೊಖೊ ಆಟ, ಕಲ್ಲುಕುಟಿ ಆಟ) ಆಟ ಗ್ರಾಮೀಣಪ್ರದೇಸದಲ್ಲಿ ಒಂದು ಕಾಲದಲ್ಲಿ ತುಂಬಾ ಜನಪ್ರಿಯ ಆಟವಾಗಿತ್ತು. ಓಟ, ಕೈಚಳಕ, ಗುರಿ ಸಾಧನೆಗೆ ಬೇಕಾಗುವ ಅತ್ಯುತ್ತಮ ಆಟ, ಹಾಕಿ Stick ನಲ್ಲಿ ಚೆಂಡನ್ನು ತೆಗೆದುಕೊಂಡು ಹೋಗುವಂತೆ, ಕೋಲನ್ನು ಹಿಡಿಯುವವನಿಗೆ ಸಿಕ್ಕದಂತೆ ತಳ್ಳಿಕೊಂಡು ಹೋಗುವುದು. ಇದನ್ನು ಕೂಡ ನಿಯಮ ನಿಬಂಧನೆಗಳನ್ನು ರೂಪಿಸಿ ಪರಿಷ್ಕರಿಸಿ ಶಾಲಾ-ಕಾಲೇಜುಗಳಲ್ಲಿ ಬಳಕೆಗೆ ತರಬಹುದು.

ಕುಸ್ತಿ ಕಲೆಯ ಭಾರತದ ರಾಷ್ಟ್ರೀಯ ಕ್ರೀಡೆಯಾಗಿತ್ತು. ಅದನ್ನು ರಾಜಕ್ರೀಡೆ ಎಂದು ಕರೆಯಲಾಗುತ್ತಿತ್ತು. ಮಹಾಭಾರತ ಮೊದಲಾದ ಕಾವ್ಯಗಳಲ್ಲಿ ಕುಸ್ತಿಯ ಬಗೆಗೆ ಉಲ್ಲೇಖಗಳು ದೊರೆಯುತ್ತವೆ. ಬಾಹುಯುದ್ಧ, ಮಲ್ಲಯುದ್ಧ, ಮುಷ್ಠಿಯುದ್ಧ ಮೊದಲಾದ ಹೆಸರುಗಳನ್ನು ಕಾಣುತ್ತೇವೆ. ವಾಲಿಸುಗ್ರೀವರ ಕಾಳಗ, ಕೃಷ್ಣಚಾಣರ ಯುದ್ಧ, ಕಿರಾತಾರ್ಜುನೀಯದಲ್ಲಿ ಬರುವ ಅರ್ಜುನ ಹಾಗೂ ಈಶ್ವರರ ಹೋರಾಟ, ಭೀಮ ಜರಾಸಂಧರ ಹೋರಾಟಗಳು ಕುಸ್ತಿಕಕಲೆ ತುಂಬಾ ಪ್ರಾಚೀನವೆಂಬುದಕ್ಕೆ ಸಾಕ್ಷಿಯಾಗಿವೆ.

ವಿಜಯನಗರದ ಮಲ್ಲಸರ್ಜನ ಕುಸ್ತಿ, ಶಿವಾಜಿಯ ಅಫಜಲಕಾನನ ಮೇಲೆ ಲುರಾನ್ ಪಟ್ಟು ಪ್ರಯೋಗಿಸಿ ಅವನನ್ನು ಸೋಲಿಸಿದ್ದು ಮೈಸೂರಿನ ಅರಸರಾದ ಬೋಳ ಚಾಮರಾಜ ಒಡೆಯರ್ , ತಿರುಚನಾಪಳ್ಳಿಯ ಜಟ್ಟಿಯ ಸವಾಲನ್ನು ಎದುರಿಸಿ ಗೆದ್ದ ರಣಧೀರ ಕಂಠೀರವ ನರಸರಾಯನ ಕುಸ್ತಿ ಮೊದಲಾದ ಐತಿಹಾಸಿಕ ಘಟನೆಗಳನ್ನು ನಾವು ಗುರುತಿಸಬಹುದು.

ಕುಸ್ತಿ ಹಿಂದೆ ಭಾರತದ ರಾಷ್ಟ್ರೀಯ ಕ್ರೀಡೆಯಾಗಿತ್ತು ಎಂದು ಹೇಳುತ್ತಾರೆ. ಇಂದು ಕುಸ್ತಿಯಲ್ಲಿ ಭಾರತೀಯ

ಮಾದರಿ, ಫ್ರೀ ಸ್ಟೈಲ್ ಮಾದರಿ, ಗ್ರಿಕೋ ರೋಮನ್ ಮಾದರಿ ಎಂಬ ಮೂರು ಬಗೆಗಳು ಪ್ರಚಲಿತವಿರುವುದನ್ನು ಕಾಣುತ್ತೇವೆ. ನಮ್ಮಲ್ಲಿ ಕುಸ್ತಿಯ ಒಂದು ಸ್ವತಂತ್ರ ಪದ್ಧತಿಯೇ ಬೆಳೆದುಬಂದಿದೆ. ಪ್ರಾಚೀನಕಾಲದಿಂದಲೂ ರಾಜಮಹಾರಾಜರುಗಳು ಒಡ್ಡೋಲಗದಿಂದ ಹಿಡಿದು ಹಬ್ಬ ಹರಿದಿನ ಜಾತ್ರೆ, ಸಂತೆಗಳಲ್ಲೂ ಕುಸ್ತಿಯ ಪಂದ್ಯಗಳು ನಡೆಯುತ್ತಿದ್ದವು. ಕುಸ್ತಿ ತುಂಬಾ ಜನಪ್ರಿಯವಾಗಿದ್ದು ಬುಡಕಟ್ಟು ಸಮುದಾಯದ ಕ್ರೀಡೆ, ಕುಸ್ತಿಯಕಲೆ ಮತ್ತು ಅಂಗಸಾಧನೆ ಮಾಡುವ ಮನೆಯನ್ನೆಲ್ಲ ಗರಡಿಮನೆಯೆಂದು ಕರೆಯುತ್ತಾರೆ. ಭಾರತದ ಉದ್ದಗಲಕ್ಕೂ ನಮ್ಮ ಸಮಾಜದಲ್ಲಿ ದೇವಸ್ಥಾನಕ್ಕಿರುವ ಸ್ಥಾನಮಾನಗಳು ಗರಡಿಮನೆಗೆ ಸಲ್ಲುತ್ತವೆ. ಒಂದು ಕಾಲದಲ್ಲಿ ಬೇಡ ಸಮುದಾಯ ರಾಜ್ಯವನ್ನು ರಕ್ಷಿಸುವ ಸೈನಿಕಪಡೆಯ ತರಬೇತಿಯ ತಾಣವಾಗಿತ್ತು ಈ ಗರಡಿಮನೆ. ದೇವಸ್ಥಾನವನ್ನು ಪ್ರವೇಶಿಸುವಾಗ ಹೇಗೆ ಭಕ್ತಿ-ಗೌರವಗಳಿಂದ ಹೋಗುತ್ತೇವೆಯೋ ಹಾಗೆ ಗರಡಿಮನೆಗೆ ಹೋಗುತ್ತಾರೆ. ಒಳಗೆ ಹೋಗುವಾಗ ಪಾದರಕ್ಷೆ ಬಿಟ್ಟು ಕೈ-ಕಾಲು ತೊಳೆದುಕೊಂಡು ಹೋಗಬೇಕೆಂಬ ನಿಯಮವಿದೆ.

ಗರಡಿ ಶಾಲೆಯ ಒಂದು ಭಾಗದಲ್ಲಿ ಉದ್ದ ೨೦ ಅಡಿ, ಅಗಲ ೨೦ ಅಡಿ ನೆಲವನ್ನು ಆಳಕ್ಕೆ ಅಗೆದು, ಆ ಭಾಗಕ್ಕೆ ವಿಧಿಯುಕ್ತವಾಗಿ ತಂದ ಶೋಧಿಸಿದ ಕೆಮ್ಮಣ್ಣನ್ನು ಹಾಕುತ್ತಾರೆ. ಇದನ್ನು ಮಟ್ಟಿ ಎನ್ನುತ್ತಾರೆ. ಮಟ್ಟಿಯ ಅಧಿದೇವತೆಯನ್ನು ಅಂಬಾಮೌಲಿ ತಾಯಿ ಎಂದೂ ಕರೆಯುತ್ತಾರೆ. ಪ್ರತಿಯೊಂದು ಗರಡಿಮನೆಯನ್ನು ಪ್ರವೇಶಿಸುತ್ತಿದ್ದ ಹಾಗೆ ಕುಸ್ತಿಯ ಅಧಿದೇವತೆಯೆಂದು ಭಾವಿಸಿದ ವೀರ ಆಂಜನೇಯನ ಚಿತ್ರಪಟ ಕಣ್ಣಿಗೆ ಬೀಳುತ್ತದೆ. ಪಕ್ಕದಲ್ಲಿಯೇ ವಸ್ತಾದ್ ಯಜಮಾನ್ ಮತ್ತು ಖಲೀಫರು ಕುಳಿತುಕೊಳ್ಳುವ ಪೀಠಗಳಿವೆ. ಗರಡಿಮನೆಯೊಳಗೆ ಫೈಲ್ವಾನರು ಬಂದಕೂಡಲೆ ಆಂಜನೇಯನಿಗೆ ನಮಸ್ಕರಿಸಿ ತದನಂತರ ವಸ್ತಾದ, ಯಜಮಾನ್ ಹಾಗೂ ಖಲೀಫರಿಗೆ ವಂದಿಸಿ, ಅನಂತರ ಮಟ್ಟಿಗೆ ನಮಸ್ಕರಿಸಿ ತಮ್ಮ ಲಡಾಯಿ ಆರಂಭಿಸುತ್ತಾರೆ. ಸೂತಕ ಮತ್ತು ಮೈಲಿಗೆಯಲ್ಲಿರುವವರು ಗರಡಿಯೊಳಗೆ ಪ್ರವೇಶಿಸುವಂತಿಲ್ಲ. ಮಟ್ಟಿ ಮುಟ್ಟುವಂತಿಲ್ಲ. ಇಂದಿಗೂ ಪೈಲ್ವಾನರುಗಳು ಗರಡಿಯ ಕಟ್ಟು ಕಟ್ಟಳೆಗಳನ್ನು ಭಯಭಕ್ತಿಯಿಂದ ಆಚರಿಸುತ್ತಾರೆ. ಕುಸ್ತಿ ನಮ್ಮಲ್ಲಿ ಪರಂಪರಾನುಗತಿಕವಾಗಿ ಬೆಳೆದುಕೊಂಡು ಬಂದ ಕಲೆ. ಭಾರತದ ಕುಸ್ತಿ ಕಲೆಯ ಭವ್ಯವಾದ ಇತಿಹಾಸವಿದೆ. ವಿಶ್ವಮಾನ್ಯತೆ ಪಡೆದು ಭಾರತದ ಕೀರ್ತಿ ಪ್ರತಿಷ್ಠೆಗಳನ್ನು ಮೆರೆಸಿದ ಗಮನಾಥ ಪ್ರಸಿದ್ಧ ಕುಸ್ತಿ ಪಟುಗಳು ನಮ್ಮಲ್ಲಿ ಆಗಿಹೋಗಿದ್ದಾರೆ. ನಮ್ಮ ದೇಶದಲ್ಲಿ ಹಿಂದಿನಿಂದಲೂ ರಾಜಮಹಾರಾಜರುಗಳು ಈ ಕಲೆಗೆ ಪ್ರೋತ್ಸಾಹ ಕೊಟ್ಟು ಇದನ್ನು ಬೆಳೆಸಿ-ಉಳಿಸಿಕೊಂಡು ಬಂದಿದ್ದಾರೆ. ಇದು ಜನಪ್ರಿಯ ಹಾಗೂ ಮನರಂಜಕ ಕ್ರೀಡೆಯಾಗಿರುವಂತೆ ದೇಹಶಕ್ತಿ, ಆರೋಗ್ಯ, ಉಲ್ಲಾಸ ಹಾಗೂ ಆತ್ಮವಿಶ್ವಾಸವನ್ನು ಮೂಡಿಸಿ ಪ್ರಾಚೀನಕಾಲದಲ್ಲಿ ವ್ಯಕ್ತಿಯಲ್ಲಿ ಸ್ವಾಭಿಮಾನ, ಧೈರ್ಯ, ದೇಶಭಕ್ತಿಗಳು ಬೆಳೆಸಲು ಪೂರಕವಾಗಿರುವ ಕಲೆಯಾಗಿತ್ತು. ಕುಸ್ತಿಯ ಕ್ರೀಡೆಯಲ್ಲಿ ಮೊದಲಿನಂತೆ ಒರಟುತನ, ಶಕ್ತಿ ಪ್ರದರ್ಶನ, ಸೇಡಿನ ಮನೋಭಾವಕ್ಕೆ ಇಂದು ಮಾನ್ಯತೆ ಇಲ್ಲ. ಇತ್ತೀಚಿಗೆ ಅದೊಂದು ಚಮತ್ಕಾರದ ಶಕ್ತಿ ಪ್ರಯುಕ್ತಿಗಳ ಪ್ರದರ್ಶನದ ಆಟವಾಗಿ ಕುಸ್ತಿಯಪಟು ಜಾಣ್ಮೆ, ಸಮಯೋಚಿತ ಪ್ರಜ್ಞೆಯನ್ನು ಪ್ರದರ್ಶಿಸಿ ಮೇಲ್ಮೆಯನ್ನು ಸಾಧಿಸುವ ಕಲೆಯಾಗಿ ಪರಿಣಮಿಸಿದೆ. ಹಿಂದೆ ಕುಸ್ತಿಯಲ್ಲಿ ಶಕ್ತಿ ಪ್ರದರ್ಶನಕ್ಕೆ ಪ್ರಾಧಾನ್ಯತೆಯಿದ್ದ ಭೀಮಸೇನ ಚುರುಕು ಕೌಶಲ್ಯ ಪ್ರಧಾನವಾದ ಹನುಮಂತ ಪಟುಗಳೇ ಪ್ರಧಾನವಾದ ಜಾಂಬವತಿ ಮತ್ತು ಸೇಡಿನ ಮನೋಭಾವಕ್ಕೆ ಪ್ರಧಾನವಿದ್ದು ಎದುರಾಗಳಿಗೆ ನೋವು

ಹಿಂಸೆಯನ್ನುಂಟುಮಾಡಿ ಚಿತ್ ಮಾಡುವ ಜೂಸಂದಿ ಎಂಬ ನಾಲ್ಕು ಬಗೆಯ ಕುಸ್ತಿಗಳು ರೂಢಿಯಲ್ಲಿದ್ದವು. ಒಂದೊಂದರಲ್ಲಿ ಅನೇಕ ಪಟುಗಳನ್ನು ಬಳಸುತ್ತಿದ್ದರು. ಭೀಮಬಂಧ, ಸುಗ್ರೀವಬಂಧ, ಕೂರ್ಮಬಂಧ, ಗಂಭೀರವೇದಿ, ಊರ್ಧ್ವಚಕ್ರ, ಬಾಹುಬಂಧ, ಅಜಗರಬಂಧ, ನಾಗಬಂಧ, ಮತ್ಸ್ಯಬಂಧ, ಕಳಾವರ್ ಜಂಗ್ , ಲುರಾನ್ ಮೊದಲಾಗಿ ಅರವತ್ತಕ್ಕೂ ಮಿಕ್ಕು ಪಟ್ಟು ಪ್ರತಿಪಟ್ಟುಗಳಿವೆ.

ಕರ್ನಾಟಕ ಮತ್ತು ಪಂಜಾಬ್ ಭಾರತದಲ್ಲಿ ಕುಸ್ತಿ ಕಲೆಗೆ ಹೆಸರಾದ ಪ್ರಾಂತ್ಯಗಳಾಗಿದ್ದವು. ಗಂಡುಕಲೆಯಾದ ಈ ಕುಸ್ತಿ ರಾಜಾಶ್ರಯದಲ್ಲಿ ಬೆಳೆದುಬಂದಿತು. ರಾಜರ ಆಸ್ಥಾನದಲ್ಲಿ ಕವಿಗಳಿಗೆ, ವಿದ್ವಾಂಸರಿಗೆ ಸಲ್ಲುತ್ತಿದ್ದ ಗೌರವ ಮರ್ಯಾದೆಗಳನ್ನು ಪೈಲ್ವಾನರುಗಳಿಗೆ ಸಲ್ಲಿಸುತ್ತಿದ್ದ ಕಾಲವೂ ಇತ್ತು. ಉತ್ತಮ ಕುಸ್ತಿಯ ಪಟುಗಳನ್ನು ಬೆಳೆಸುವುದು, ತಮ್ಮಲ್ಲಿ ಅಂತಹವರನ್ನು ಹೊಂದಿರುವುದೂ ತಮ್ಮ ರಾಜ್ಯದ ಪ್ರತಿಷ್ಠೆಯ ಗೌರವದ ಪ್ರಶ್ನೆ ಎಂಬುದಾಗಿ ರಾಜಮಹಾರಾಜರುಗಳು ಭಾವಿಸುತ್ತಿದ್ದರು. ಕುಸ್ತಿಯ ಪಟುಗಳು ಕೂಡ ತಮ್ಮ ರಾಜ್ಯದ ಪ್ರತಿಷ್ಠೆಯನ್ನು ಕಾಪಾಡುವಲ್ಲಿ ತಮ್ಮ ಪ್ರಾಣವನ್ನು ಲೆಕ್ಕಿಸದೇ ಹೋರಾಡಿದ ನಿದರ್ಶನಗಳಿವೆ. ನಾಡಿಗಾಗಿ ಗ್ರಾಮಕ್ಕಾಗಿ ಹಾಗೂ ಹೆಣ್ಣಿನ ಮಾನ ರಕ್ಷಣೆಗಾಗಿ ಮತ್ತು ಅನ್ಯಾಯದ ವಿರುದ್ಧ ಹೋರಾಡಿ ಪ್ರಾಣತೆತ್ತ ಎಷ್ಟೋ ವೀರರನ್ನು ಕುರಿತ ವೀರಗಲ್ಲುಗಳನ್ನು ಇಂದೂ ಕಾಣಬಹುದಾಗಿದೆ. ಗಾಮಾ, ದಾರಸಿಂಗ್ ಮೊದಲಾದ ಪೈಲ್ವಾನರುಗಳು ವಿಶ್ವದಲ್ಲಿ ಭಾರತದ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿದರು. ಕರ್ನಾಟಕದಲ್ಲೂ ಪೈಲ್ವಾನ್ ಪಾಪಯ್ಯ, ಕೊಪ್ಪಲಿನ ದೊಡ್ಡಬಸವಯ್ಯ ದೊಡ್ಡ ತಿಮ್ಮಯ್ಯ, ಚಿಕ್ಕ ಬಸವಯ್ಯ, ಚಿತ್ರದುರ್ಗದ ನಂಜಪ್ಪ, ರಾಣೆಬೆನ್ನೂರಿನ ನಂಜಪ್ಪ ಮೊದಲಾದ ಪ್ರಸಿದ್ಧ ಪೈಲ್ವಾನರುಗಳನ್ನು ಭಾರತದ ಮಟ್ಟದಲ್ಲಿ ಕರ್ನಾಟಕದ ಪ್ರತಿಷ್ಠೆ ಗೌರವವನ್ನು ಎತ್ತಿಹಿಡಿದರು.

ಇತ್ತೀಚಿಗೆ ಈ ಕಲೆ ಅವನತಿಯ ಹಾದಿಯನ್ನು ಹಿಡಿದಿದೆ. ದೈಹಿಕ ಶಿಕ್ಷಣದ ಪವಿತ್ರ ದೇಗುಲಗಳಂತಿದ್ದ ಗರಡಿಮನೆಗಳು ಇಂದು ಸೋಮಾರಿಕಟ್ಟೆಗಳಾಗಿ ಪರಿಣಮಿಸಿವೆ. ನಾಡಿನ ರಕ್ಷಣೆ ಹೊಣೆಗಾರಿಕೆ ನಮ್ಮ ಕರ್ತವ್ಯವೆಂದು ಭಾವಿಸಿದ್ದ ಕುಸ್ತಿಯ ಪಟುಗಳನ್ನು ಕೇಳುವರು ದಿಕ್ಕಿಲ್ಲದೇ ಬೀದಿಪಾಲಾಗಿ ರಾಜಕೀಯ ಕ್ಷುದ್ರಶಕ್ತಿಗಳ ಕೈಗೊಂಬೆಯಾಗಿ ಗೂಂಡಾ ಶಕ್ತಿಗಳಾಗಿ ಪರಿಣಮಿಸಿದ್ದಾರೆ. ಸ್ವಾತಂತ್ರ್ಯ ನಂತರ ಈ ಕಲೆಗೆ ಮೊದಲಿನ ಗೌರವ ಹಾಗೂ ಉತ್ತೇಜನಗಳು ದೊರೆಯುತ್ತಿಲ್ಲ. ರಾಷ್ಟ್ರೀಯ ಕ್ರೀಡೆಯಾದ ಕುಸ್ತಿಕಲೆಯನ್ನು ಒಲೆಂಪಿಕ್ ಸ್ಪರ್ಧೆಗಳ ನಿಯಮಾವಳಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಭಾರತೀಯ ಮಾದರಿಯನ್ನು ಪರಿಷ್ಕರಿಸಿ ರೂಢಿಗೆ ತಂದಲ್ಲಿ ವಿಶ್ವ ಕುಸ್ತಿ ಭೂಪಟದಲ್ಲಿ ಭಾರತ ತನ್ನ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿಯುವುದರಲ್ಲಿ ಸಂಶಯವಿಲ್ಲ. ರಾಜಾಶ್ರಯ ತಪ್ಪಿ ದಿಕ್ಕುಗಾಣದೇ ತತ್ತರಿಸಿ ಹೋಗಿರುವ ಈ ಕಲೆಯ ಪುನರುಜ್ಜೀವನಕ್ಕೆ ಮೈಸೂರು ನಗರದಲ್ಲಿ ಜಿಲ್ಲಾ ಗರಡಿ ಸಂಘ ಸ್ಥಾಪಿಸಿಕೊಂಡು ಗರಡಿ ಕಲೆಯ ಉಳಿವಿಗಾಗಿ ಶ್ರೀ ಎ.ಶಿವನಂಜಪ್ಪನವರು ಬಹುವಾಗಿ ಶ್ರಮಿಸುತ್ತಿದ್ದಾರೆ. ಸರ್ಕಾರದವರು ಇಂತಹ ಹಿರಿಯ ಕುಸ್ತಿಪಟುಗಳ, ಗರಡಿ ಯಜಮಾನರುಗಳ ವಸ್ತಾದ್ ಗಳ ಸಲಹೆ ಸೂಚನೆಗಳನ್ನು ಪಡೆದು ನಶಿಸಿ ಹೋಗುತ್ತಿರುವ ಪ್ರಾಚೀನಕಲೆಯಾದ ಕುಸ್ತಿಕಲೆ ಬೆಳೆದು ಪ್ರವರ್ಧಮಾನಕ್ಕೆ ಬರುವ ಹಾದಿಯಲ್ಲಿ ಭದ್ರವಾದ ಬುನಾದಿ ಹಾಕಬೇಕಾಗಿದೆ.

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಯೋಗಾಸನ, ಸೂರ್ಯ ನಮಸ್ಕಾರ ಮೊದಲಾದ ವ್ಯಾಯಾಮ ಪದ್ಧತಿ ರೂಢಿಯಲ್ಲಿದೆ. ಯೋಗಾಸನಗಳು ದೀರ್ಘ ಯಶಕ್ಕೆ ಸಾಧನಗಳು. ಸೂರ್ಯ ನಮಸ್ಕಾರ, ದ್ರಾವಿಡರ ಕಾಲದಿಂದಲೂ ರೂಢಿಯಲ್ಲಿತ್ತೆಂದು ತಿಳಿದುಬರುತ್ತದೆ. ನಮ್ಮಲ್ಲಿ ಯೋಗಿಗಳ, ಋಷಿಗಳ ವ್ಯಾಯಾಮ ಆರೋಗ್ಯಕರ ಬದುಕಿಗೆ ಅವಶ್ಯವೆಂದು ಭಾವಿಸಿದರು. ಧರ್ಮ ಜ್ಞಾನ ಸಂಪಾದನೆಯ ಮೂಲಕ ಮೋಕ್ಷ ಸಾಧನೆ ಅವರ ಜೀವಿತೋದ್ದೇಶವಾಗಿತ್ತು. ಮನಸ್ಸು ಇವುಗಳಿಗೆ ಪ್ರೇರಕ ಶಕ್ತಿ. ಮನಸ್ಸನ್ನು ಹತೋಟಿಯಲ್ಲಿಡಲು ಯಮನಿಯಮಗಳ ಕಟ್ಟುನಿಟ್ಟಿನ ಸಾಧನೆ ಮಾಡುತ್ತಿದ್ದರು. ತಿಂದ ಆಹಾರ ಸಂಪೂರ್ಣ ಜೀರ್ಣವಾಗಿ ರಕ್ತಗತವಾಗುವುದಕ್ಕೆ ಜಲ-ಮಲಾದಿಗಳು ಕ್ರಮದಂತೆ ನಡೆಯುವುದಕ್ಕೆ ಎಷ್ಟು ಮಾತ್ರ ಅಗತ್ಯವೋ ಅಷ್ಟಕ್ಕೆ ಅವರು ಸಿದ್ಧತೆ ಮಾಡಿಕೊಂಡರು ಅವುಗಳೇ ಯೋಗಾಸನ, ಸೂರ್ಯ ನಮಸ್ಕಾರಗಳು.

ವ್ಯಾಯಾಮದಿಂದ ಆರೋಗ್ಯ ಸಾಧನೆಯಾಗುತ್ತದೆ. ಆರೋಗ್ಯ ಸಾಧನೆಯಿಂದ ಆಯಸ್ಸು ವೃದ್ಧಿಯಾಗುತ್ತದೆ. ಇದು ಯೋಗಿಗಳ ವಿಚಾರವೂ ಹೌದು. ಪಾಶ್ಚಾತ್ಯ ಆಂಗ್ಲ ಸಾಧಕರ ಗುರಿಯೂ ಹೌದು. ಇತ್ತೀಚಿನ ದಿನಗಳಲ್ಲಿ ಯೋಗಾಸನಗಳು ಪಾಶ್ಚಾತ್ಯರ ಗಮನವನ್ನು ವಿಶೇಷವಾಗಿ ಸೆಳೆದಿವೆ. ಭಾರತದಲ್ಲೂ ಆರೋಗ್ಯಾಭಿವರ್ಧನೆಯ ದೃಷ್ಟಿಯಿಂದ ಯೋಗಾಸನಗಳಿಗೆ ಪ್ರಾಶಸ್ತ್ಯ ದೊರಕಿದೆ.

ಬೇಡ ಸಮುದಾಯದ ಆಟಗಳಲ್ಲಿ ದೈಹಿಕ ಶಕ್ತಿಯ ಬೆಳವಣಿಗೆಗೆ ಪೂರಕವಾದ ಲಗ್ಗೆ ಚೆಂಡು, ಉತ್ತುತ್ತು, ಮರಕೋತಿಯಾಟ, ಚೆಂಡಾಟ, ಉಪ್ಪುತರವ ಆಟ ಮೊದಲಾದವುಗಳು. ಕುಸ್ತಿ ಯೋಗಾಸನಗಳು ಆಧುನಿಕ ದೈಹಿಕ ವಿಜ್ಞಾನದ ಅವಿರ್ಭವಕ್ಕೆ ನೆರವಾಗಿದ್ದರೂ ಟೆನ್ನಿಸ್ , ಕ್ರಿಕೆಟ್ , ಹಾಕಿ, ಫುಟ್ ಬಾಲ್ ಮೊದಲಾದ ಆಧುನಿಕ ಆಟಗಳ F ashion ಗೆ ಮರುಳಾಗಿ ಕಡಿಮೆ ಖರ್ಚಿನ ಶಕ್ತಿವರ್ಧನೆಗೆ ಆರೋಗ್ಯವೃದ್ಧಿಗೆ ಕಾರಣವಾದ ಈ ಬೇಡ ಸಮುದಾಯದ ಆಟಗಳನ್ನು ಕಡೆಗಣಿಸಿದ್ದೇವೆ. ನಗರೀಕರಣ ಕೈಗಾರೀಕರಣ ಪ್ರಭಾವದಿಂದ ಪಾಶ್ಚಾತ್ಯ ಸಂಸ್ಕೃತಿಗೆ ನಮ್ಮ ಮೈ ಮನಗಳನ್ನು ಮಾರಿದ್ದೇವೆ. ಸ್ಥಳೀಯ ಜನ್ಯ, ಸ್ವದೇಶಿಕಲೆ ಆಟಗಳು ವಸ್ತುಗಳ ಬಗ್ಗೆ ಕೀಳು ಎನ್ನುವ ಮನೋಭಾವ ಬೆಳೆಸಿಕೊಂಡಿದ್ದೇವೆ. ಈ ಬಗೆಯ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಆಹಾರ ಪದ್ಧತಿ, ಉಡುಗೆ-ತೊಡುಗೆಗಳು ವೈದ್ಯಪದ್ಧತಿ ಮೊದಲಾದ ಜೀವನದ ಎಲ್ಲ ಕ್ಷೇತ್ರಗಳ ಮೇಲೂ ಆಗಿರುವುದನ್ನು ಕಾಣುತ್ತೇವೆ. ಈ ಬಗೆಯ ಪ್ರಭಾವದಿಂದ ಬಿಡುಗಡೆ ಹೊಂದಿ ನಮ್ಮ ತನವನ್ನು ಸ್ವಂತಿಕೆಯನ್ನು ಉಳಿಸಿ ಬೆಳೆಸಿಕೊಳ್ಳುವ ದಿಸೆಯಲ್ಲಿ ನಾವಿಂದು ದಿಟ್ಟ ಹೆಜ್ಜೆಯನ್ನಿಡಬೇಕಾಗಿದೆ. ಆ ಮಾರ್ಗದಲ್ಲಿ ಮುನ್ನಡೆಯಲು ನಾವಿಂದು ಪ್ರತಿಜ್ಞಾಬದ್ಧರಾಗೋಣ.

ಬೇಡ ಸಮುದಾಯದವು ತನ್ನ ಮೂಲ ಜೀವನ ವೃತ್ತಿಗೆ ಆಧಾರವಾಗಿಯೂ ಮತ್ತು ಅವರು ವೃತ್ತಿಯಿಂದ ಬೇಸತ್ತಾಗ ತಮ್ಮ ಬಿಡುವಿನ ಸಂದರ್ಭದಲ್ಲಿ ತಮ್ಮದೇ ಆದ ಕೆಲವು ಮುಖ್ಯ ಕ್ರೀಡೆಗಳಲ್ಲಿ ತೊಡಗಿರುವುದನ್ನು ಕಾಣುತ್ತೇವೆ. ಅವುಗಳಲ್ಲಿ ಮುಖ್ಯವಾಗಿ ಕುಸ್ತಿಯಾಡುವುದು, ಗರಡಿಮನೆಯ ಮಣ್ಣು ಹಸನು ಮಾಡುವುದು, ಗರಡಿ ಮನೆಯ ಉಪಕರಣಗಳನ್ನು ಬಳಸಿ ವ್ಯಾಯಾಮ ಮಾಡುವುದು ಮತ್ತು ಗರಡಿಯ ಸ್ನೇಹಿತರೊಂದಿಗೆ ಕುಸ್ತಿ ಅಭ್ಯಾಸ ಮಾಡುವುದು, ಆಧುನಿಕ ವ್ಯಾಯಾಮ ಶಾಲೆಗಳಲ್ಲಿ ಉಪಕರಣಗಳ ಮೂಲಕ ವ್ಯಾಯಾಮ ಮಾಡುವುದು ಜೊತೆಗೆ

ವಿಶೇಷ ಹಬ್ಬ-ಹರಿದಿನಗಳ ಸಂದರ್ಭದಲ್ಲಿ ಭಾರವಾದ ಗುಂಡು ಎತ್ತುವುದು, ಬಂಡಿಗಾಲಿಯನ್ನು ಒಬ್ಬರೇ ಬಿಚಿ ಮತ್ತೆ ಯಾರ ಸಹಾಯವೂ ಇಲ್ಲದೆ ಜೋಡಿಸುವುದು, ಬಂಡಿ ಗಾಲಿಯನ್ನು ಎತ್ತುವುದು, ಬಂಡಿಯನ್ನು ಎಳೆಯುವುದು, ಗುಂಡನ್ನು ರಸ್ತೆಗಳಲ್ಲಿ ಎಸೆಯುವುದು ಮತ್ತು ನಿಂಬೆಹಣ್ಣು ಉರಿಳಿಸುವುದು, ರಾತ್ರಿ ಕೋಲಾಟವನ್ನು ತಂಡವಾಗಿ ಪದಗಳನ್ನು ಹಾಡುವುದರ ಮೂಲಕ ಕೋಲಾಟವಾಡುವುದು, ಕಬ್ಬಡಿ, ಖೋ ಖೋ, ಚಿನ್ನಿಕೋಲು, ಲಗೋರಿ, ಕೋಲು ಎಸೆದು ಕಲ್ಲಿನಮೇಲೆ ಇಡುವುದು ಮತ್ತು ಸ್ತ್ರೀಯರು ಚವಾ, ಗೊಟ್ಟಕುಣ್ಣೆ, ಕವಡೆ, ಅಣ್ಣಿಕಲು ಮತ್ತು ವಯಸ್ಸಿನ ಯಜಮಾನರು ಹಾವಿನಪಟ್ಟ, ಕೋಳಿಗಳ ಜೂಜು, ಅಕ್ಕಿಮೂಟೆಯನ್ನು ಎತ್ತುವುದು ಹೀಗೆ ಅನೇಕ ರೀತಿಯಾದ ತಮ್ಮಗೆ ಇಚ್ಛೆಯಾದ ಕ್ರೀಡೆಗಳನ್ನು ಹಾಗೂ ಹೊಸ ಹೊಸ ಕ್ರೀಡೆಗಳನ್ನು ಹಾಡಲು ಅದಕ್ಕೆ ನಿಯಮಗಳನ್ನು ತಾವಾಗಿಯೇ ರಚನೆ ಮಾಡಿಕೊಂಡು ಸಾಮೂಹಿಕವಾಗಿ ಪ್ರಚಲಿತಗೊಳಿಸುವಂತ ಕ್ರೀಡೆಗಳನ್ನು ಇಂದಿಗೂ ಬೇಡ ಸಮುದಾಯಗಳಲ್ಲಿ ಕಾಣುತ್ತೇವೆ. ಸಂಪೂರ್ಣ ಬೇಡ ಸಮುದಾಯದ ಕ್ರೀಡೆಗಳನ್ನು ಪ್ರಬಂಧದ ಕ್ರೀಡೆಗಳ ವರ್ಗೀಕರಣದಲ್ಲಿ ಕ್ರೀಡೆಗಳ ಸಂಪೂರ್ಣ ಚಿತ್ರಣವನ್ನು ಪ್ರತಿಯೊಂದು ಕ್ರೀಡೆಗಳ ಆಟದ ವಿವರಣೆಯನ್ನು ಕೊಡಲಾಗಿದೆ. ಈ ಕ್ರೀಡೆಗಳ ವರ್ಗೀಕರಣದಲ್ಲಿ ಬಳ್ಳಾರಿ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲಿ ಕೆಲವು ಒಂದೇ ತೆರನಾದ ಕ್ರೀಡೆಗಳು ಕಂಡುಬಂದರೆ ಇನ್ನೂ ಕೆಲವು ಕಡೆಗೆ ಹೊಸ ಹೊಸ ಕ್ರೀಡೆಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲಿ ಬೇರೆ ಬೇರೆ ಕ್ರೀಡೆಗಳನ್ನು ಕಾಣುತ್ತೇವೆ.

ಬೇಡ ಸಮುದಾಯದ ಕ್ರೀಡೆಗಳು ಮುಖ್ಯವಾಗಿ ಅವರ ವೃತ್ತಿಗೆ ಹಾಗೂ ಕೃಷಿ ಚಟುವಟಿಕೆಗೆ ಮುಖ್ಯ ವೃತ್ತಿಯಾಗಿರುವುದರಿಂದ ಈ ಕೃಷಿ ಚಟುವಟಿಕೆಗಳಿಗೆ ಮುಖ್ಯವಾಗಿ ಹೆಚ್ಚು ವ್ಯಕ್ತಿಯ ಸಾಮರ್ಥ್ಯದ ಆಧಾರವಾಗಿ ತನ್ನ ಒಂದು ವ್ಯವಸಾಯದ ಸಾಮರ್ಥ್ಯವು ಇರುವುದರಿಂದ ತಾವು ತೊಡಗುವ ಚಟುವಟಿಕೆಯು ಹೆಚ್ಚು ಶಕ್ತಿ ಮತ್ತು ಶ್ರಮ ವ್ಯಯಮಾಡಿದಾಗ ಮಾತ್ರ ಒಳ್ಳೆಯ ಬೆಳೆಯನ್ನು ಬೆಳೆಯಲು ಸಾಧ್ಯವಾಗುವುದು. ಈ ಹಿನ್ನೆಲೆಯಲ್ಲಿ ಮತ್ತು ಯಾವುದೇ ರೀತಿಯ ಶ್ರಮದ ಕೆಲಸದಲ್ಲಿ ಯಾರ ಸಹಾಯ ಪಡೆಯದೇ ಮತ್ತು ನಿರೀಕ್ಷಿಸದೆ ವ್ಯಕ್ತಿಯು ಸದೃಢನಾಗಿ ತನ್ನ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಮುಖ್ಯವಾಗಿ ವ್ಯಕ್ತಿಯು ಶಾರೀರಿಕವಾಗಿ ಆರೋಗ್ಯವಾಗಿ ಇರಲು ಈ ಸಮುದಾಯದ ಹಿರಿಯರು ಇಷ್ಟಪಡುತ್ತಾರೆ. ಮತ್ತು ಜೊತೆಗೆ ಹಿರಿಯರು ಈ ಒಂದು ಮುಖ್ಯ ಚಟುವಟಿಕೆ ಹಿನ್ನೆಲೆಯಲ್ಲಿ ಮುಖ್ಯವಾಗಿ ಹಿರಿಯರು ತಮ್ಮ ಮೂಲ ಸಾಂಪ್ರಾದಾಯಿಕವಾಗಿ ಬೇಡ ಸಮುದಾಯದವು ತಮ್ಮ ಹಿರಿಯರ ಕಾಲದಿಂದ ಮಕ್ಕಳು ಪ್ರತಿಯೊಬ್ಬರು ಚೆನ್ನಾಗಿ ಆಹಾರವನ್ನು ತಿನ್ನವುದು, ಒಳ್ಳೆಯ ಹಣ್ಣು ಮತ್ತು ಪೌಷ್ಠಿಕ ಆಹಾರವಾದ ಗೋದಿ, ದ್ರಾಕ್ಷಿ, ಗೋಡಂಬಿ, ಬಾಳೇಹಣ್ಣು ಹೀಗೆ ಬೇರೆ ಬೇರೆ ವಿವಿಧ ರೀತಿಯ ಆಹಾರಗಳನ್ನು ತಿನ್ನುತ್ತಾರೆ. ರಾಗಿ, ಜೋಳ ಈ ಆಹಾರವನ್ನು ಮಕ್ಕಳಿಗೆ ತಿನ್ನಿಸುವರು. ಬೇಡ ಸಮುದಾಯದವರು ಶಾರೀರಕವಾಗಿ ಯಾರಿಗೂ ಬಾಗದೇ ಇರಲು ಇಚ್ಛಿಸುವುದರಿಂದ ಮುಖ್ಯವಾಗಿ ಗರಡಿಮನೆಗಳಲ್ಲಿ ಕುಸ್ತಿಯ ಅಭ್ಯಾಸ ಮಾಡುತ್ತಾರೆ. ಈ ಕುಸ್ತಿ ಅಭ್ಯಾಸ ಕೇವಲ ಒಂದೇ ಕಾರಣವಲ್ಲ ಇದು ಒಂದು ತಮ್ಮ ಶಾರೀರವಾಗಿ ಸದೃಢನಾಗಲು ಮತ್ತು ಕುಸ್ತಿಯನ್ನು ಸ್ಪರ್ಧೆಯಲ್ಲಿ ಕುಸ್ತಿ ಒಗೆಯಲು ಒಂದು ರೀತಿ ತಯಾರಾದರೆ, ಇನ್ನೊಂದು ತಮ್ಮ ಮೂಲ ವೃತ್ತಿಯನ್ನು ಶ್ರಮದಾಯಕವಾಗಿ ಒಳ್ಳೆಯ ಬೆಳೆಯನ್ನು ಪಡೆಯಲು ಮುಖ್ಯವಾಗಿ ಕುಸ್ತಿ ಅಭ್ಯಾಸ ಮಾಡುವುದು

ವ್ಯಾಯಾಮಶಾಲೆಗಳಲ್ಲಿ ಕೆಲಸ ಮಾಡುವುದು ಮತ್ತು ಮನೋಲ್ಲಾಸಕ್ಕಾಗಿ ಅನೇಕ ಇತರ ಕ್ರೀಡೆಗಳನ್ನು ಆಡುವುದು ಮತ್ತು ಸಂಘಟಿಸುವ ಬೇಡ ಸಮುದಾಯವನ್ನು ನಾವು ಕಾಣುತ್ತೇವೆ.

ಬೇಡ ಸಮುದಾಯ ಕ್ರೀಡೆಗಳು ಇತರ ಆಧುನಿಕ ಕ್ರೀಡೆಗಳಿಗೆ ಮಾದರಿಯಾಗಿರುವುದು ಕಾಣುತ್ತೇವೆ. ಈ ಕ್ರೀಡೆಗಳು ಹೆಚ್ಚಾಗಿ ಶ್ರೀಮಂತರು ಮಾತ್ರ ಕ್ರೀಡಾ ಉಪಕರನಗಳನ್ನು ಖರೀದಿಸಿ ಮತ್ತು ಹಣ ಖರ್ಚು ಮಾಡುವವರ ಮೂಲಕ ಆಟವನ್ನು ಆಡುವುದು ಕ್ರೀಡೆಗಳನ್ನು ಸಂಘಟಿಸುವುದು ಕಾಣುತ್ತೇವೆ. ಆದರೆ ಆಧುನಿಕ ಕ್ರೀಡೆಗಳು ಬೇಡ ಸಮುದಾಯದ ಪ್ರಾಚೀನ ಕ್ರೀಡೆಗಳನ್ನು ಆಧಾರವಾಗಿ ನಿಯಮ, ಕ್ರೀಡಾಧಿಕತ್ವ, ನಿರ್ದಿಷ್ಟ ಪಡೆಸಿದ ಸ್ಥಳ, ಆಟ ಆಡುವ, ಆಟವಾಡುವವರ ಸಂಖ್ಯೆ, ಸಮಯ ನಿರ್ವಹಿಸಲು ಅಧಿಕಾರಿಗಳು ಹೀಗೆ ಹೊಸ ಹೊಸ ರೀತಿಯ ಬದಲಾವಣೆ ಮಾಡಿ ಅವುಗಳ ಪ್ರಭಾವವನ್ನು ಬಡರಾಷ್ಟ್ರಗಳಲ್ಲಿ ಹಿಂದೂಳಿದ ಸಮುದಾಯಗಳ ಮೇಲೆ ಪ್ರಭಾವ ಬೀರಿದ್ದು, ಅವುಗಳನ್ನು ನೋಡಲು ಮಾತ್ರ ಸಾಧ್ಯವಾಗುವ ರೀತಿ ಇರುವುದನ್ನು ನಾವು ಕಾಣುತ್ತೇವೆ.

ಕ್ರೀಡೆಗಳು ಆಧುನೀಕರಣ ಮುಖ್ಯವಾಗಿ ರಾಷ್ಟ್ರದಲ್ಲಿ ಕ್ರೀಡೆಗಳು ಪ್ರಥಮವಾಗಿ ಸಂಘಟಿಸಿ ಪ್ರಪಂಚಕ್ಕೆ ಒಂದು ಕ್ರೀಡೆಯ ನಡೆಸಿಕೊಂಡು ಹೋಗುವುದು ಕಾಣುತ್ತೇವೆ. ಈ ಕ್ರೀಡೆಗಳು ಸಂಘಟಿಸುವುದಕ್ಕೆ ಮತ್ತು ಕ್ರೀಡೆಗಳ ಮಹತ್ವ ಕಾಪಾಡಲು ಅಂತರಾಷ್ಟ್ರಮಟ್ಟದ ಪೇಡರೇಶನ್ ಗಳನ್ನು ಮಾಡಿ ಕ್ರೀಡಾ ತಜ್ಞರು ಕ್ರೀಡೆಗಳ ನಿಯಮಗಳು ಮತ್ತು ಬದಲಾವಣೆಗೆ ಕ್ರೀಡಾಕೂಟ ಸಂಘಟಿಸಿ ಹಾಗೇ ಇವುಗಳ ಅಭಿವೃದ್ಧಿ ಪಡಿಸುವುದು ಮತ್ತು ಯಶಸ್ವಿಗೊಳಿಸುವುದು ಈ ನಿಟ್ಟಿನಲ್ಲಿ ಅಂತರಾಷ್ಟ್ರಮಟ್ಟದಲ್ಲಿ ಯಾವುದೇ ಶ್ರೀಮಂತ ಬಂಡವಾಳಶಾಹಿ ಆಧುನಿಕ ಕ್ರೀಡೆಗಳು ಕಾಣುತ್ತೇವೆ.

ಬೇಡ ಸಮುದಾಯದ ಕ್ರೀಡೆಗಳು ತನ್ನದೇಯಾದ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವುದು ಕಾಣುತ್ತೇವೆ. ಬೇಡ ಸಮುದಾಯ ಮುಖ್ಯವಾಗಿ ಬೇಟೆ ಎನ್ನುವುದು ಒಂದು ವಂಶಪರಂಪರೆ. ಇವರು ಯುಗಾದಿ ಹಬ್ಬದಲ್ಲಿ ಮುಖ್ಯವಾಗಿ ಬೇಡ ಸಮುದಾಯದ ಜನರು ಒಂದುಗೂಡಿ ಗುಂಪಾಗಿ ಬೇಟೆಯನ್ನು ಆಡುತ್ತಾರೆ. ಈ ಬೇಟೆಯು ಯುಗಾದಿ ಸಂದರ್ಭದಲ್ಲಿ ಆಡುವುದು ಸಂಪ್ರದಾಯವಾಗಿದೆ ಮತ್ತು ಒಂದು ಮುಖ್ಯ ಸಂಸ್ಕೃತಿಯಾಗಿದೆ. ಈ ಬೇಟೆಯನ್ನು ತಂದ ಪ್ರಾಣಿಯ ಕಳಸಬೇಳಾಗಿ ಅವರಿಗೆ ಎಲ್ಲರಿಗೂ ಬಿಡಿಸುತ್ತಾರೆ. ಮತ್ತು ಬೇಟೆಯಾಡಲು ಬೇಡರ ಮನೆಯ ಆಯುಧಗಳಾದ ನಾಡಬಂದೂಕು, ಕತ್ತಿ, ಕೈಗೊಡಲಿ, ಭರ್ಜಿ, ಈಟಿ, ನಾರಸ, ಇರುತ್ತವೆ ಮತ್ತು ಇತರೆ ಅಮವಾಸ್ಯೆ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಕೂಡ್ಲಿಗಿ, ಸಂಡೂರು, ಬಳ್ಳಾರಿ, ಹಡಗಲಿ, ಹಗರಿಬೊಮ್ಮನಹಳ್ಳಿ, ಕುರುಗೋಡು ಇತ್ಯಾದಿ ತಾಲೂಕುಗಳಲ್ಲಿ ಬೇಟೆಯಾಡುವುದನ್ನು ಕಾಣುತ್ತೇವೆ.

ನಾಗರಪಂಚಮಿ, ದಸರಾ ಹಬ್ಬದಲ್ಲಿ ಬೇಡ ಸಮುದಾಯದ ಜನರು ರಸ್ತೆಯ ಉದ್ದಕ್ಕೂ ಗುಂಡನ್ನು ಉರುಳಿಸುವುದು, ನಿಂಬೇಹಣ್ಣು ಉರುಳಿಸುವುದು ಕಾಣುತ್ತೇವೆ. ಸ್ತ್ರೀಯರು ಜೋಕಲಿಯಾಟವನ್ನು ಊರಿನ ಹೊರಗಡೆ ಮರಕ್ಕೆ ಜೋಕಾಲಿಕಟ್ಟಿ ಆಡುವುದನ್ನು ಕಾಣುತ್ತೇವೆ. ಮತ್ತು ನಾಗೇನಹಳ್ಳಿಯಲ್ಲಿ ಗುಂಡು ಎತ್ತುವ ಸ್ಪರ್ಧೆ ಮತ್ತು ಬಂಡಿಗಾಲಿ ಎತ್ತುವ ಸ್ಪರ್ಧೆ ನಡೆಯುತ್ತದೆ. ಬಂಡಿ ಎಳೆಯುವ ಸ್ಪರ್ಧೆಯನ್ನು ದಸರಾ ಹಬ್ಬದಲ್ಲಿ ಕಾಣುತ್ತೇವೆ. ವಿಶೇಷ ಸಾಂಸ್ಕೃತಿಕ ಎಂದರೇ ಬಸ್ಸಿ ಮುಡಿಯುವುದು ಎಂದು ಸುಮಾರು ೧೨, ೧೪ ಕಿಲೋಮೀಟರ್ ಪಲ್ಲಕ್ಕಿಯನ್ನು

ಹೊತ್ತುಕೊಂಡು ಓಡುವುದು ಕಾಣುತ್ತೇವೆ. ಇದು ಆಧುನಿಕ ಕ್ರೀಡೆಯ 'ಮರದಾನ' ಸ್ಪರ್ಧೆ ಎಂದು ಹೇಳಬಹುದಾಗಿದೆ. ಬೇಡ ಸಮುದಾಯದ ಕುಸ್ತಿ ಸ್ಪರ್ಧೆಯನ್ನು ಸಂಘಟಿಸುವುದನ್ನು ಹೆಚ್ಚಾಗಿ ಕಾಣುತ್ತೇವೆ. ಕುಸ್ತಿ ನಿರ್ಣಾಯಕರು ಬಳ್ಳಾರಿ ಜಿಲ್ಲೆಯ ಹಡಗಲಿಯಲ್ಲಿ ಬಹಳ ಪ್ರಚಲಿತದಲ್ಲಿ ಇರುವುದನ್ನು ನಾವು ಸ್ಮರಿಸಬಹುದಾಗಿದೆ. ಕುಸ್ತಿ ಸ್ಪರ್ಧೆಯು ಮತ್ತು ಕ್ರೀಡಾಪಟುಗಳ ಸಂಖ್ಯೆ ಹೆಚ್ಚಾಗಿ ಹಗರಿಬೊಮ್ಮನಹಳ್ಳಿ ಕಾಣುತ್ತೇವೆ.

ಬೇಡ ಸಮುದಾಯ ಆರ್ಥಿಕವಾಗಿ ಹಿಂದುಳಿದವರು. ಕ್ರೀಡೆ ಕ್ಷೇತ್ರದಲ್ಲಿ ಮಾತ್ರ ಹಿಂದುಳಿದಿಲ್ಲ ಮತ್ತು ಅವರ ಮೂಲ ಆಚರಣೆಗಳಲ್ಲಿ ಯಾವುದೇ ರೀತಿ ಸ್ಥಗಿತವಾಗಿಲ್ಲ. ಮತ್ತು ಬೇಡ ಸಮುದಾಯದ ಜನರು ಮುಖ್ಯವಾಗಿ ಅವರು ಆರ್ಥಿಕ ಜೀವನಕ್ಕೆ ನಾಂದಿಯಾಗಿ ಇರುವದು ಮುಖ್ಯವಾಗಿ ಕೃಷಿ ಚಟುವಟಿಕೆ ಈ ಕೃಷಿ ಚಟುವಟಿಕೆ ಭೂಮಿಯನ್ನು ಅಸನ ಮಾಡಿ ನೇಗಿಲು, ಎತ್ತು, ಬಂಡಿಯೊಂದಿಗೆ ಶ್ರಮ ತೊಡಗಿಸಿ ಭೂಮಿಯಲ್ಲಿ ಕಷ್ಟಪಟ್ಟು ದುಡಿದು ಜೀವನ ಮಾಡುವ ಈ ಸಮುದಾಯವು ತನ್ನ ಒಂದು ಆರ್ಥಿಕ ಬದುಕಿಗಾಗಿ ತಮ್ಮನ್ನು ತಾವು ಶಾರೀರಕವಾಗಿ ಸದೃಢ ಮತ್ತು ಆರೋಗ್ಯವಾಗಿ ಇರಲು ಮುಖ್ಯವಾಗಿ ತಾನು ತನ್ನ ಶರೀರವನ್ನು ಗರಡಿಮನೆಯಲ್ಲಿ, ವ್ಯಾಯಾಮ ಶಾಲೆಗಳಲ್ಲಿ ಶ್ರಮಿಸುತ್ತಾರೆ. ಜೊತೆಗೆ ಮನೋಲ್ಲಾಸಕ್ಕಾಗಿ ಕೆಲವು ಕ್ರೀಡೆಗಳಲ್ಲಿ ಭಾಗವಹಿಸುವುದು ಕಾಣುತ್ತೇವೆ. ಮುಖ್ಯವಾಗಿ ಈ ಗರಡಿಯ ಅಭ್ಯಾಸದಿಂದ ಕುಸ್ತಿ ಒಗೆಯಲು ಸಂಘಟಿಸಿದ ಪ್ರದೇಶಕ್ಕೆ ಹೋಗಿ ತಮ್ಮ ಬಲವನ್ನು ಪ್ರದರ್ಶಿಸುವುದು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಹಿರಿಯರು ತಮ್ಮ ಮಕ್ಕಳು ಯಾರ ಸಹಾಯವಿಲ್ಲದೆ ಕೃಷಿ ಚಟುವಟಿಕೆ ಸಾಗಿಸಲು ಇತರರನ್ನು ಸಹಾಯ ಬೇಡದೆ ತಾವು ನಿರ್ವಹಿಸುವ ಸಾಮರ್ಥ್ಯ ಮತ್ತು ಗರಡಿ ಕುಸ್ತಿಯ ಅಭ್ಯಾಸದಿಂದ ಸಂಘಟಿಸಿದ ಕುಸ್ತಿಯಲ್ಲಿ ಭಾಗವಹಿಸಿ ವಿಜಯವಾದಲ್ಲಿ ಹೆಮ್ಮೆಯ ಘನತೆಯ ಗೌರ ಪ್ರತಿಷ್ಠೆತೆಗಾಗಿ ತಮ್ಮ ಮಕ್ಕಳನ್ನು ಸುಖವಾಗಿ ಬೆಳೆಸಲು ಇಚ್ಛೆ ಪಡುತ್ತಾರೆ. ಬೇಡ ಸಮುದಾಯವು ವಿಶೇಷವಾಗಿ ಒಂದು ಸಮುದಾಯ ಒಗ್ಗಟ್ಟನ್ನು ನಾವು ಕಾಣುತ್ತೇವೆ. ಇದರಲ್ಲಿ ಮುಖ್ಯವಾಗಿ ಕುಸ್ತಿ ಸಂಘಟಿಸಿದ ಸಂದರ್ಭದಲ್ಲಿ ಮುಖ್ಯವಾಗಿ ಕುಸ್ತಿ ಎದುರಾಳಿಯು ಒಂದೇ ಕೇರಿಯವರು ಇದ್ದಾಗ ಮಾತ್ರ ಅವರನ್ನು ಆಡಿಸದಿರುವುದು ವಿಶೇಷತೆ. ಆದರೆ ಬೇರೆ ಊರಿನವರ ಮೇಲೆ ಕುಸ್ತಿ ಆಡಿಸುತ್ತಾರೆ. ಇದರಿಂದ ಅವರ ಊರಿನವರಲ್ಲಿ ಒಗ್ಗಟ್ಟು ಮತ್ತು ಸ್ನೇಹ ಸೌಹಾರ್ದತೆಯನ್ನು ಕಾಣುತ್ತೇವೆ. ಈ ಸಮುದಾಯದಲ್ಲಿ ಕ್ರೀಡೆಗಳ ಮೂಲಕ ಯುವಕರು ಆರೋಗ್ಯಕರವಾಗಿ ಇರುವುದಲ್ಲದೇ ಹಿರಿಯರು ಸಹ ಶಕ್ತಿ ಸಾಮರ್ಥ್ಯದಿಂದ ಅಂದರೆ ಚಲನಾತ್ಮಕ ಸಾಮರ್ಥ್ಯವನ್ನು ಉಳಿಸಿಕೊಂಡು ಬಂದಿರುವುದನ್ನು ಇಂದಿಗೂ ಕಾಣುತ್ತೇವೆ.

ಈ ಕ್ರೀಡೆಗಳ ಮೂಲಕ ಮಕ್ಕಳ ಅಂಕಿ ಸಂಖ್ಯೆಗಳ ಅರ್ಥ, ಆಟದ ಏಕಾಗ್ರತೆ, ಮಾನಸಿಕವಾದ ಸದೃಢತೆ ಮತ್ತು ಇದೊಂದು ಶೈಕ್ಷಣಿಕ ಕ್ರಮವಾಗಿ ಈ ಸಮುದಾಯದಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತದೆ.

೨

ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ, ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಹಿನ್ನೆಲೆ ಹಾಗೂ ಭೌಗೋಳಿಕ ಸ್ಥಿತಿಗತಿಗಳು ಬೇಡ ಬುಡಕಟ್ಟಿನ ಹಿನ್ನೆಲೆ ಹಾಗೂ ಬಳ್ಳಾರಿ ಜಿಲ್ಲೆಯ ಬೇಡ ಬುಡಕಟ್ಟು

೨

ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ, ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಹಿನ್ನೆಲೆ ಹಾಗೂ ಭೌಗೋಳಿಕ ಸ್ಥಿತಿಗತಿಗಳು ಬೇಡ ಬುಡಕಟ್ಟಿನ ಹಿನ್ನೆಲೆ ಹಾಗೂ ಬಳ್ಳಾರಿ ಜಿಲ್ಲೆಯ ಬೇಡ ಬುಡಕಟ್ಟು

ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ, ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಹಿನ್ನೆಲೆ

ಬಳ್ಳಾರಿ ಜಿಲ್ಲೆಯೂ ಕರ್ನಾಟಕದ ಗುಲ್ಬರ್ಗಾ ವಿಭಾಗದ ಕೊನೆಯ ಭಾಗದಲ್ಲಿದ್ದು, ಕರ್ನಾಟಕದಲ್ಲಿ ಮಾತ್ರವಲ್ಲದೆ ಅಂತರಾಷ್ಟ್ರ ಮಟ್ಟದವರೆಗೆ ತನ್ನದೇ ಆದ ಸಾಂಸ್ಕೃತಿಕ, ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಅಂಶಗಳಿಂದ ತನ್ನದೇ ಆದ ಮಹತ್ವ ಪಡೆದಿದೆ. ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು ೭ ತಾಲೂಕುಗಳಿವೆ. ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು ಆಡಳಿತಾತ್ಮಕವಾಗಿ ೮ ತಾಲೂಕುಗಳಿರುವುದು ಕಂಡುಬರುತ್ತದೆ. ಅವುಗಳೆಂದರೆ ೧. ಬಳ್ಳಾರಿ ೨. ಕುರುಗೋಡು ೩. ಸಿರುಗುಪ್ಪ ೪. ಹೊಸಪೇಟೆ ೫. ಸಂಡೂರು ೬. ಕೂಡ್ಲಿಗಿ ೭. ಹಗರಿಬೊಮ್ಮನಹಳ್ಳಿ ೮. ಹೂವಿನಹಡಗಲಿ. ಬಳ್ಳಾರಿ ಜಿಲ್ಲೆಯನ್ನು ಸಾಂಸ್ಕೃತಿಕವಾಗಿ ಗಮನಿಸಿದಾಗ ಪ್ರಾಚೀನದಿಂದಲೂ ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಅರಸ ಮನೆತನಗಳು ಆಳ್ವಿಕೆ ನಡೆಸಿರುವುದು ನಂತರ ಪಾಳೆಗಾರಿಕೆ ಪದ್ಧತಿ ನಂತರ ಬ್ರಿಟೀಷರ ಆಡಳಿತ ಮಾದರಿಯ ಸರ್ಕಾರದ ಆಡಳಿತ ಹೀಗೆ ಆಡಳಿತಾತ್ಮಕ ಹಂತ ಹಂತವಾಗಿ ಬದಲಾವಣೆಯಾಗಿರುವುದನ್ನು ಕಾಣಬಹುದು. ರಾಜಮನೆತನಗಳಲ್ಲಿ ಶಾತವಾಹನರು, ಮೌರ್ಯ ಸಾಮ್ರಾಜ್ಯ ಪತನವಾದ ನಂತರ ಎರಡು ಸಾಮ್ರಾಜ್ಯಗಳು ಭಾರತದಲ್ಲಿ ಪ್ರಮುಖವಾಗಿ ಕಾಣಿಸಿದವು. ಚೇಡಿಸ್ ಮತ್ತು ಶಾತವಾಹನರು. ಶಾತವಾಹನರು ಕ್ರಿ.ಪೂ. ೨೨೦೦ ರಿಂದ ಸು.ಕ್ರಿ.ಶ. ೨೦೩೦ ರವರೆಗೆ ಅಂದರೆ ಸುಮಾರು ೪೫೦ ವರ್ಷಗಳ ದೀರ್ಘಕಾಲ ರಾಜ್ಯವಾಳಿದರು. ಮ್ಯಾಕ್ ಡೋಸಿ ಮತ್ತು ಹಿರೇಹಡಗಲಿ ತಾಮ್ರ ಶಾಸನಗಳಿಂದ ಗೊತ್ತಾಗುತ್ತದೆ. ಭಾರತದ ಕಾವ್ಯಗಳಲ್ಲಿ ಅನೇಕ ಸಂದರ್ಭಗಳಲ್ಲಿ ಶಾತವಾಹನರ ಶಾಖೆಗಳು ಕರ್ನಾಟಕ ಪ್ರದೇಶವನ್ನು ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ. ರಾಜಶೇಖರನ ಮೀಮಾಂಸದಲ್ಲಿ ವಾತ್ಸಾಯನನ ಕಾಮಸೂತ್ರದಲ್ಲಿ ಪ್ರಾಕೃತ್ಯ ಗಥಸಪ್ತಸತಿಯಲ್ಲಿ ``ಹಲ`` ಕುತೂಹಲದ ರಾಜರೆಂದು ತಿಳಿಸಿದೆ. ಪುರಾಣದಲ್ಲಿ ಗೌತಮಿಪುತ್ರ

ಶಾತಕರಣಿ ಕುಂತಲ ಪ್ರದೇಶವನ್ನು ಆಳಿದ್ದು ಗೊತ್ತಾಗುವುದು ಕೊನೆಯ ಶಾತವಾಹನ ಅರಸರ ಆಳ್ವಿಕೆಯು ಬಳ್ಳಾರಿ ಜಿಲ್ಲೆಯ ಕುಲುಮಯಿ ಶಾಸನದಿಂದ ಗೊತ್ತಾಗುವುದು. ಶಾತವಾಹನರ ರಾಜ್ಯ ವಿಭಾಗಿಸಿ ಉತ್ತರದಲ್ಲಿ ಅಪಿರಸ ದಕ್ಷಿಣದಲ್ಲಿ ಚುತುಸು ಆಂಧ್ರದಲ್ಲಿ ಇಕ್ಷ್ವಾ ಕುಸುಗಳು ಎಂಬುವ ಶಾಖೆಗಳು ಉಂಟಾದವು. ನಂತರ ಬಳ್ಳಾರಿ ಜಿಲ್ಲೆಯಲ್ಲಿ ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬರು, ಗಂಗರು, ಕಲ್ಯಾಣಿ ಚಾಲುಕ್ಯರು, ಪಾಂಡ್ಯರು, ಕಲಚೂರಿಗಳು. ಮಧ್ಯಕಾಲದಲ್ಲಿ ಹೊಯ್ಸಳರು ಮತ್ತು ಸೇವಣರು ಕಪಿಲ ರಾಜ್ಯದ ನೊಳಂಬ ಪಲ್ಲವರು ಮತ್ತು ವಿಜಯನಗರ ಸಾಮ್ರಾಜ್ಯದ ಧೀಮಂತ ಅರಸರಗಳು ಬಳ್ಳಾರಿ ಜಿಲ್ಲೆಯಲ್ಲಿ ಸಾಮ್ರಾಜ್ಯವನ್ನು ಕಟ್ಟುವುದರ ಮೂಲಕ ಇಡೀ ರಾಷ್ಟ್ರಕ್ಕೆ ಮಾದರಿಯಾದ ಆಳ್ವಿಕೆಯನ್ನು ಆಗಿರುವುದು. ಇವರ ಒಂದು ಆಳ್ವಿಕೆಯ ಪ್ರಭಾವವು ಇತರ ರಾಜಮನೆತನಗಳಿಗೆ ಮಾದರಿಯಾಗಿರುವುದು ಕಂಡುಬರುವುದುದು. ರಾಜಮನೆತನದ ಆಳ್ವಿಕೆಯ ನಂತರ ಪಾಳೆಗಾರಿಕೆ ಬಳ್ಳಾರಿ ಜಿಲ್ಲೆಯಲ್ಲಿ ತಲೆ ಎತ್ತಿತ್ತು. ವಿಜಯನಗರ ಸಾಮ್ರಾಜ್ಯ ಹಾಳಾದ ಮೇಲೆ ವಿಜಯನಗರ ಸೈನ್ಯದಲ್ಲಿ ಅಧಿಕಾರಿಯಾಗಿದ್ದವನೇ ಬಳ್ಳಾರಿ ಕೋಟೆಯ ಪ್ರಥಮ ಪಾಳೆಯಗಾರ ನಾಯಕನಾದವನು. ಅವನ ಪೂರ್ಣ ಹೆಸರು ಬಾಲದ ಹನುಮಪ್ಪನಾಯಕನೆಂದು. ಅವನು ಕುರುಬ ಕುಲಕ್ಕೆ ಸೇರಿದವನು. ಬಳ್ಳಾರಿ, ಕುರುಗೋಡು, ತೆಕ್ಕಲಕೋಟೆಗಳನ್ನು ಆಳಿದರು. ೩೦೦ ಹೊನ್ನುಗಳನ್ನು ಬಿಜಾಪುರದ ಆದಿಲ್ ಶಾಹನಿಗೆ ಪ್ರತಿವರ್ಷ ಕೊಟ್ಟು ಅವನಿಂದ ಮಿಲಿಟರಿ ನೆರವನ್ನು ಪಡೆದನು. ಹೀಗೆ ಇವರಿಬ್ಬರ ನಡುವೆ ಭಿನ್ನಾಭಿಪ್ರಾಯ ಉಂಟಾಗಿ ಕೋಟೆಯನ್ನು ಬಿಟ್ಟುಬಂದು ಬಂಕಾಪೂರ ಕೋಟೆಯನ್ನು ಆಳಲು ಪ್ರಾರಂಭಿಸಿದನು. ನಂತರ ಅನೇಕ ನಾಯಕರು ಆಳಿದರು. ವಿಧವೆಯ ರಾಣಿಯೂ ಸಹ ಆಳಿದಳು. ಹತ್ತು ವರ್ಷಗಳ ನಂತರ ಈ ಕೋಟೆ ಔರಂಗಜೇಬನ ಆಳ್ವಿಕೆಗೆ ಒಳಗಾಯಿತು. ಇದಕ್ಕಿಂತ ಹಿಂದೆ ಶಿವಾಜಿಯೂ ಆಳ್ವಿಕೆ ಮಾಡಿದ್ದನು. ಪುನ: ಬಳ್ಳಾರಿ ಕೋಟೆಪ್ರದೇಶ ಪಾಳೆಗಾರರಾದ ದೇವಪ್ಪನಾಯಕ ಚಿಕ್ಕನಾಯಕ ಸಾಹೇಬರ ಆಳ್ವಿಕೆಗೆ ಒಳಗಾಯಿತು. ಹೀಗೆ ಅನೇಕ ನಾಯಕರುಗಳು ಈ ಕೋಟೆ ಆಳ್ವಿಕೆ ಮಾಡಿದರು. ನಂತರ ಈ ಕೋಟೆಯು ಹೈದರನ ವಶವಾದ ಮೇಲೆ ಅಭಿವೃದ್ಧಿಯಾಯಿತು. ಹರಪನಹಳ್ಳಿಯ ಪಾಳೆಯಗಾರರು ಗುಡೆಕೋಟೆ ಪಾಳೆಯಗಾರರು ಇದು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿದೆ. ಈ ರಾಜ್ಯ ೧೯ನೇ ಶತಮಾನದಲ್ಲಿ ಸ್ಥಾಪನೆಯಾಯಿತು. ಈ ಅರಸರು ಬೇಡ ಕುಲಕ್ಕೆ ಸೇರಿದವರು, ಗುಡೆಕಟ್ಟೆಯ ನಾಯಕ ಪುತ್ರಿ ಬಂಗಾರವ್ವ ನಾಗತಿ ಎಂಬುವಳನ್ನು ಚಿತ್ರದುರ್ಗದ ಬರ್ಮಾಪ್ಪ ನಾಯಕನಿಗೆ ಕೊಟ್ಟು ವಿವಾಹ ನೇರವೇರಿಸಿದರು. ಗುಡೆಕೋಟೆಯು ಹೈದರಾಲಿಯ ದಾಳಿಯಿಂದ ನಾಶವಾಯಿತು.

ಜರಿಮಲೆ ಕೂಡ್ಲಿಗಿ ತಾಲೂಕಿನಲ್ಲದೇ ಇದನ್ನು ಪೆನ್ನಪ್ಪನೆಂಬುವವನು ವಿಜಯನಗರದ ಅಚ್ಯುತರಾಯನ ತನ್ನಲ್ಲಿ ನಿಷ್ಠೆಯಿಂದ ಕೆಲಸ ಮಾಡಿದ್ದಕ್ಕಾಗಿ ಬಹುಮಾನವಾಗಿ ಕೊಟ್ಟಿದ್ದನು. ಇದು ಕಾಲಕ್ರಮೇಣ ಟಿಪ್ಪುವಿನ ಒತ್ತಡದಿಂದ ಅವನಿಂದ ತಪ್ಪಿಸಿಕೊಂಡು ಸುರಾಪೂರಕ್ಕೆ ಹೋದನು. ಟಿಪ್ಪುವಿನ ಸಂಗಡ ಕ್ರಮೇಣ ಒಪ್ಪಂದವಾಗಿ ನಾಯಕನನ್ನು ಅರಸೊತ್ತಿಗೆಯಿಂದ ಹೊರಹಾಕಲಾಯಿತು. ಈ ರಾಜ್ಯವು ಬ್ರಿಟೀಷರ ವಶವಾಯಿತು.

ಸಂಡೂರಿನಲ್ಲಿ ಪಾಳೆಯಗಾರರು, ಘೋರ್ಪಡೆಗಳು, ಮರಾಠರು ಆಳಿದರು. ಈ ಸಂದರ್ಭದಲ್ಲಿ ಬ್ರಿಟೀಷರ ಆಳ್ವಿಕೆ ಈಸ್ಟ್ ಇಂಡಿಯಾ ಕಂಪನಿಯನ್ನು ಆಡಳಿತ ಒಳಗೊಂಡಿತು. ಕ್ರಿ.ಶ. ೧೮೫೮ರಲ್ಲಿ ಮುಂಡರಗಿ ಭೀಮರಾವ್ ಹರಪನಹಳ್ಳಿ ನಾಡಗೌಡರು ಬಳ್ಳಾರಿ ತಹಶೀಲ್ದಾರನಾಗಿ ಕೆಲಸ ಮಾಡುತ್ತಿದ್ದನು. ಅವನನ್ನು ಬ್ರಿಟೀಷ್ ಸರ್ಕಾರವು ಕೆಲಸದಿಂದ ತೆಗೆದುಹಾಕಿ ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಮಾಡಿ ೧೫೦ ದೇಶಪ್ರೇಮಿಗಳನ್ನು ಒಂದೂಗೂಡಿಸಿ ಕ್ರಮೇಣವಾಗಿ ಬಾಲಗಂಗಾಧರ ತಿಲಕ್ ಇವರು ಬಳ್ಳಾರಿಗೆ ಆಗಮಿಸಿ (ಕ್ರಿ.ಶ. ೧೯೦೫ರಲ್ಲಿ), ನಂತರ ಮಹಾತ್ಮಾ ಗಾಂಧೀಜಿಯವರು ಕ್ರಿ.ಶ. ೧೯೩೧ರಲ್ಲಿ ಬಳ್ಳಾರಿಗೆ ಆಗಮಿಸಿ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದರು. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯೂ ಆಳ್ವಿಕೆ ಒಳಗೊಂಡಿತ್ತು. ಬಳ್ಳಾರಿ ಜಿಲ್ಲೆಯಲ್ಲಿ ವಿವಿಧ ಬುಡಕಟ್ಟು ಜನಾಂಗಗಳು ತಮ್ಮದೇಯಾದ ಬದುಕಿಗಾಗಿ ಶ್ರಮಿಸುತ್ತಾ ಆ ಬುಡಕಟ್ಟುಗಳಲ್ಲಿ ಬೇಡ ಸಮುದಾಯವು ಒಂದು. ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕವಾಗಿ ಕಲೆಗೆ ಪ್ರಸಿದ್ಧವಾಗಿರುವುದು. ಅನೇಕ ಹಳ್ಳಿಗಳಿಂದ ಕೂಡಿದ ಬಳ್ಳಾರಿ ಜಿಲ್ಲೆಯಲ್ಲಿ ಬಯಲು ನಾಟಕಗಳು, ಡೊಳ್ಳು ಕುಣಿತ, ವೀರಗಾಸೆ, ಭಜನಾ ಗೀತೆಗಳು, ಶೋಭಾನ ಪದಗಳು, ಜೋಕುಮಾರನ ಪದಗಳು, ಗೌರಿಹುಣ್ಣಿಮೆ, ಕೋಲಾಟ ಈ ಎಲ್ಲ ಕಲೆಗಳು ಪ್ರಸಿದ್ಧತೆ ಪಡೆದಿವೆ. ಹಳ್ಳಿಗಳಲ್ಲಿ ಸಾಂಸ್ಕೃತಿಕ ಬೆಳವಣಿಗೆಗಾಗಿ ಜನರು ಶ್ರಮಿಸುತ್ತಿರುವುದು ಮತ್ತು ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಮತ್ತು ಬಳ್ಳಾರಿ ಜಿಲ್ಲೆಯ ಕಲೆಗೆ ಪ್ರಸಿದ್ಧತೆ ಪಡೆದಿದ್ದು, ಅದು ಇತರರಿಗೆ ಮಾದರಿಯಾಗಿದೆ.

ಬಳ್ಳಾರಿ ಜಿಲ್ಲೆಯ ಸಾಮಾಜಿಕ ಪರಿಸ್ಥಿತಿಯೂ ಬಳ್ಳಾರಿ ೮ ತಾಲೂಕುಗಳಿದ್ದು, ಅವುಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ - ಜನಸಂಖ್ಯೆ ಹೊಂದಿದ್ದು, - ಹಳ್ಳಿಗಳಿದ್ದು, - ಬುಡಕಟ್ಟು ಜನಾಂಗವು ವಾಸವಾಗಿವೆ. ಬಳ್ಳಾರಿ ತಾಲೂಕಿನಲ್ಲಿ ಹೆಚ್ಚಾಗಿ ಕೂಲಿ ಮಾಡುವಂತಹ ಕೃಷಿಕರಾಗಿದ್ದು, ಕಾರ್ಮಿಕರಾಗಿದ್ದು, ರೈತರಾಗಿದ್ದು, ಮಾಲಿಕರಾಗಿಯೂ, ಬಂಡವಾಳಶಾಹಿಗಳು ಒಳಗೊಂಡಿರುವ ಹಿನ್ನೆಲೆಯಲ್ಲಿ ಜನಜೀವನ ರಾಜಕೀಯವಾಗಿಯೂ ರಚನಾತ್ಮಕವಾಗಿದ್ದು ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ನಗರದ ಕೊಳಚೆ ಪ್ರದೇಶಗಳಲ್ಲಿ ಬುಡಕಟ್ಟು ಸಮುದಾಯಗಳು ವಾಸವಾಗಿದ್ದು, ಅವರು ತಮ್ಮ ದಿನನಿತ್ಯ ಜೀವನಕ್ಕಾಗಿ ಕೂಲಿ ಮಾಡುವುದು, ಚಿತ್ರಮಂದಿರದಲ್ಲಿ ಕೆಲಸ ಮಾಡುವುದು, ಬಸ್ ನಿಲ್ದಾಣದಲ್ಲಿ ಕೆಲಸ ಮಾಡುವುದು, ಸಣ್ಣಪುಟ್ಟ ವ್ಯಾಪಾರ ಮಾಡುವುದು, ಭಿಕ್ಷೆ ಬೇಡುವುದು, ಬಂಡವಾಳಶಾಹಿಗಳ ಹತ್ತಿರ ಜೀತವಾಗಿ ದುಡಿಯುವುದು, ಕಾರ್ಖಾನೆಗಳಲ್ಲಿ ಕೂಲಿಗಾಗಿ ಶ್ರಮಿಸುವುದು ಹೀಗೆ ಬಳ್ಳಾರಿ ತಾಲೂಕಿನ ಬುಡಕಟ್ಟಿನ ಜನಾಂಗವು ಸಾಮಾಜಿಕವಾಗಿ ತಮ್ಮ ಆರ್ಥಿಕ ಮಟ್ಟವನ್ನು ತೂಗಿಸಿಕೊಂಡು ಹೋಗುವ ಚಿತ್ರಣವನ್ನು ಕಾಣಬಹುದಾಗಿದೆ. ಕುರುಗೋಡು ತಾಲೂಕಿನಲ್ಲಿ - ಜನಸಂಖ್ಯೆ ಒಳಗೊಂಡಿದೆ. - ಬುಡಕಟ್ಟುಗಳು ಹೊಂದಿದ್ದು, ಇಲ್ಲಿನ ಸಾಮಾಜಿಕ ಪರಿಸ್ಥಿತಿಯೂ ರಾಜಕೀಯ ಒತ್ತಡಗಳ ಆಧಾರದ ಮೇಲೆ ತಮ್ಮ ಆರ್ಥಿಕ ಜೀವನವನ್ನು ಸಾಗಿಸುತ್ತಿರುವುದು ಇಂದಿಗೂ ಕಂಡುಬರುತ್ತದೆ. ಇಲ್ಲಿ ಹೆಚ್ಚು ವ್ಯವಸಾಯ ಪ್ರದೇಶ ಕೃಷಿಗೆ ತೊಡಗಿಸಿಕೊಂಡ ಪ್ರದೇಶವಾಗಿದ್ದು ಈ ಪ್ರದೇಶದಲ್ಲಿ ಹೆಚ್ಚಾಗಿ ಭೂಮಾಲೀಕರು ಹೆಚ್ಚಿನ ಭೂಮಿಯನ್ನು ತಮ್ಮ ವಶದಲ್ಲಿ ಇಟ್ಟುಕೊಂಡಿದ್ದಾರೆ. ಅಲ್ಲಿನ ಬುಡಕಟ್ಟು ಜನಾಂಗವು ಅಲ್ಲಿನ ಕೂಲಿ ಕೆಲಸ ಮಾಡಿ ಜೀವನ ಮಾಡುವಂತಹ ಪರಿಸ್ಥಿತಿ ಇಂದಿಗೂ ತಪ್ಪಿಲ್ಲ. ಅನೇಕ ಭೂಮಾಲೀಕರ ಹತ್ತಿರ ಜೀತದಾಳಾಗಿ ಇಂದಿಗೂ ಕೆಲಸ ಮಾಡುತ್ತಿರುವುದು ಕಾಣಬಹುದು.

ಸಿರುಗುಪ್ಪ ತಾಲೂಕಿನಲ್ಲಿಯೂ - ಜನಸಂಖ್ಯೆ ಹೊಂದಿದ್ದು, - ಬುಡಕಟ್ಟು ಹೊಂದಿದ್ದು, ಈ ತಾಲೂಕಿನಲ್ಲಿ ವ್ಯವಸಾಯ ಹೆಚ್ಚಾಗಿ ಕಂಡುಬರುತ್ತದೆ. ಈ ಪ್ರದೇಶದಲ್ಲಿಯೂ ಭೂಮಾಲೀಕರು ಇದ್ದಾರೆ. ಇಲ್ಲಿ ಹೆಚ್ಚಾಗಿ ಬುಡಕಟ್ಟು ಜನರು, ಕೃಷಿ ಕೂಲಿಕಾರ್ಮಿಕರು ಆಗಿ ಜೀವನ ನಡೆಸುತ್ತಿದ್ದಾರೆ. ಜೊತೆಗೆ ಸಣ್ಣ ಪುಟ್ಟ ವ್ಯಾಪಾರ ಮಾಡುವಂತವಹ ಜನರು ಚಿತ್ರಮಂದಿರದಲ್ಲಿ ಕೆಲಸ ಮಾಡುತ್ತಿರುವವರು, ಸಕ್ಕರೆ ಕಾರ್ಖಾನೆಗಳಲ್ಲಿ ದುಡಿಯುವವರು, ದೊಡ್ಡ ದೊಡ್ಡ ಅಕ್ಕಿ ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ದುಡಿಯುವಂತವರು ಇಲ್ಲಿ ಕಂಡುಬರುತ್ತಾರೆ.

ಹೊಸಪೇಟೆ ತಾಲೂಕಿನ ಪ್ರದೇಶದ ಜನರು - ಹೊಂದಿದ್ದು, - ಹಳ್ಳಿಗಳಿಂದ ಕೂಡಿದ್ದು, - ಬುಡಕಟ್ಟುಗಳು ಹೊಂದಿದ್ದು, ಈ ಪ್ರದೇಶದ ಜನರು ಹೆಚ್ಚಾಗಿ ಮ್ಯಾಂಗನೀಸ್ ದೊರೆಯುವ ಪ್ರದೇಶವಾಗಿದ್ದು, ಈ ಹಿನ್ನೆಲೆಯಲ್ಲಿ ಅನೇಕ ಬುಡಕಟ್ಟುಗಳು ಗಣಿ ಮಾಲೀಕರ ಹತ್ತಿರ ಕೂಲಿ ಕೆಲಸ ಮಾಡುವಂತದ್ದು ಮೈನ್ಸ್ ಕಲ್ಲುಗಳನ್ನು ಕೀಳುವುದು ಕಲ್ಲುಗಳನ್ನು ಹೊಡೆಯುವುದು, ಲಾರಿಗಳಿಗೆ ತುಂಬುವಂತಹ ಕೆಲಸದಲ್ಲಿ ಹೆಚ್ಚು ತೊಡಗಿರುವುದು ಕಂಡುಬರುತ್ತದೆ. ಜೊತೆಗೆ ಕೃಷಿ ಚಟುವಟಿಕೆಗಳಲ್ಲಿ ಸ್ತ್ರೀ ಪುರುಷರು ಮಕ್ಕಳು ತೊಡಗಿಸಿಕೊಂಡು ಜೀವನ ಸಾಗಿಸುವುದು ಕಂಡುಬರುತ್ತದೆ. ಇನ್ನೂ ಕೆಲ ಜನರು ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ, ಚಿತ್ರಮಂದಿರದಲ್ಲಿ ಕಾರ್ಮಿಕರಾಗಿ, ಸಣ್ಣಪುಟ್ಟ ವ್ಯಾಪಾರಸ್ಥರಾಗಿ ಜೀವನ ಸಾಗಿಸುವಂತದ್ದು ಕಂಡುಬರುತ್ತದೆ.

ಕೂಡ್ಲಿಗಿ ತಾಲೂಕಿನಲ್ಲಿ ಹೆಚ್ಚಾಗಿ - ಜನಸಂಖ್ಯೆ ಹೊಂದಿದ್ದು, - ಹಳ್ಳಿಗಳಿಂದ ಕೂಡಿದ್ದು, - ಬುಡಕಟ್ಟುಗಳಿಂದ ಕೂಡಿದ್ದು, ಈ ಪ್ರದೇಶದ ಜನರು ಹೆಚ್ಚಾಗಿ ನಾಯಕ ಜನಾಂಗ ವರ್ಗವು ಕಂಡುಬರುತ್ತದೆ. ಇಲ್ಲಿನ ಜನರ ಆರ್ಥಿಕ ಜೀವನ ತೂಗಿಸಲು ದೇವದಾಸಿ ಪದ್ಧತಿಯೂ ಸ್ತ್ರೀಯರಲ್ಲಿ ತೊಡಗಿಸಿಕೊಂಡಿರುವುದು ಕಂಡುಬರುತ್ತದ. ಜೊತೆಗೆ ಸ್ತ್ರೀ ಪುರುಷರು ಕೃಷಿ ಚಟುವಟಿಕೆಗಳಲ್ಲಿ ಕೂಲಿ ಕೆಲಸ ಮಾಡುವುದು ಕಂಡುಬರುತ್ತದೆ. ಜೊತೆಗೆ ಹೈನುಗಾರಿಕೆ, ಹುಲ್ಲು ಮಾರಾಟ, ಸ್ತ್ರೀಯರು ಮನೆಕೆಲಸ ಮಾಡುವರು ಮತ್ತು ಹೋಟೆಲ್ ಗಳಲ್ಲಿ ಕೂಲಿಕೆಲಸ, ಚಿತ್ರಮಂದಿರಗಳಲ್ಲಿ ಕೂಲಿಕೆಲಸ, ಸಣ್ಣಪುಟ್ಟ ಬೀದಿ ವ್ಯಾಪಾರಗಳು, ಕಾಯಿಪಲ್ಯೆ ವ್ಯಾಪಾರ ಹೀಗೆ ಅಲ್ಲಿನ ಜನರು ಆರ್ಥಿಕ ತೊಂದರೆಗಳ ಮೂಲಕ ಬದುಕುತ್ತಿದ್ದಾರೆ.

ಹಗರಿಬೊಮ್ಮನಹಳ್ಳಿ ಈ ತಾಲೂಕಿನಲ್ಲಿ - ಜನಸಂಖ್ಯೆ ಹೊಂದಿದ್ದು, - ಹಳ್ಳಿಗಳಿಂದ ಕೂಡಿದ್ದು, - ಬುಡಕಟ್ಟುಗಳಿಂದ ಕೂಡಿದ್ದು, ಈ ಪ್ರದೇಶದ ಜನರು ಈ ಪ್ರದೇಶದಲ್ಲಿ ಬಂಜರು ಭೂಮಿ ಹೊಂದಿದ್ದು, ಇಲ್ಲಿನ ಜನರು ಕೂಲಿ ಮಾಡುವುದು, ಸಣ್ಣಪುಟ್ಟ ವ್ಯಾಪಾರ, ಭಿಕ್ಷೆ, ತರಕಾರಿ ಮಾರುವುದು ಹೀಗೆ ಶ್ರಮಿಸುವುದರ ಮುಖಾಂತರ ಜೀವನ ಸಾಮಾಜಿಕವಾಗಿ, ಆರ್ಥಿಕವಾಗಿ ಅನೇಕ ಸಮಸ್ಯೆಗಳಲ್ಲಿ ಬುಡಕಟ್ಟುಗಳು ಜೀವನ ನಡೆಸುತ್ತಿರುವುದು ಕಂಡುಬರುತ್ತದೆ.

ಹಡಗಲಿ ತಾಲೂಕಿನಲ್ಲಿ ಈ ಪ್ರದೇಶದಲ್ಲಿ - ಜನಸಂಖ್ಯೆ ಹೊಂದಿದ್ದು, - ಹಳ್ಳಿಗಳಿಂದ ಕೂಡಿದ್ದು, ಬುಡಕಟ್ಟುಗಳು ಹೊಂದಿದೆ. ಇಲ್ಲಿನ ಜನರು ಹೊಲಗಳಲ್ಲಿ ಶ್ರಮಿಕರಾಗಿ, ಕೂಲಿ ಕಾರ್ಮಿಕರಾಗಿ ಕೆಲಸಮಾಡಿ ಜೀವನ

ಸಾಗಿಸುವುದರ ಮೂಲಕ ಅಲ್ಲಿನ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ಅಲ್ಲಿನ ಬುಡಕಟ್ಟು ಜನರು ಸಾಮಾಜಿಕವಾಗಿ, ಆರ್ಥಿಕವಾಗಿ ಜೀವನ ನಡೆಸುತ್ತಿದ್ದಾರೆ.

ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ, ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಹಿನ್ನೆಲೆ ಹಾಗೂ ಭೌಗೋಳಿಕ ಸ್ಥಿತಿ-ಗತಿಗಳು, ಬೇಡ ಬುಡಕಟ್ಟಿನ ಹಿನ್ನೆಲೆ ಹಾಗೂ ಬಳ್ಳಾರಿ ಜಿಲ್ಲೆಯ ಬೇಡ ಬುಡಕಟ್ಟು

ಸರಿಹದ್ದು

ಬಳ್ಳಾರಿ ಜಿಲ್ಲೆಯು ಕರ್ನಾಟಕ ರಾಜ್ಯದ ಪೂರ್ವಭಾಗದ ದಕ್ಷಿಣೋತ್ತರದವರೆಗೆ ಹಬ್ಬಿದೆ. ೧೪'-೧೩' ಮತ್ತು ೧೫'-೫೦' ಉತ್ತರ ಅಕ್ಷಾಂಶ ಹಾಗೂ ೭೫'-೪೦' ಮತ್ತು ೭೭'-೧೧' ಪೂರ್ವ ರೇಖಾಂಶ ಇವುಗಳ ಮಧ್ಯದಲ್ಲಿದೆ. ಜಿಲ್ಲೆಯ ಉತ್ತರದಲ್ಲಿ ರಾಯಚೂರು ಜಿಲ್ಲೆ, ಪಶ್ಚಿಮದಲ್ಲಿ ಧಾರವಾಡ ಜಿಲ್ಲೆ, ದಕ್ಷಿಣದಲ್ಲಿ ಚಿತ್ರದುರ್ಗ ಜಿಲ್ಲೆ ಹಾಗೂ ಪೂರ್ವದಲ್ಲಿ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆ ಮತ್ತು ಅನಂತಪುರ ಜಿಲ್ಲೆಗಳಿಂದ ಸುತ್ತುವರೆದಿದೆ. ತುಂಗಭದ್ರಾ ನದಿಯ ಜಿಲ್ಲೆಯ ಪಶ್ಚಿಮ ಮತ್ತು ಉತ್ತರ ಮೇರೆಯಾಗಿ ಹರಿಯುತ್ತದೆ.

ಪ್ರಕೃತಿ ಲಕ್ಷಣಗಳು : ತುಂಗಭದ್ರಾ ನದಿಯು ಜಿಲ್ಲೆಯ ನೈಸರ್ಗಿಕ ಮೇರೆಯಾಗಿದ್ದು, ಪಶ್ಚಿಮದಲ್ಲಿ ಧಾರವಾಡ ಜಿಲ್ಲೆಯನ್ನು ಹಾಗೂ ಉತ್ತರದಲ್ಲಿ ರಾಯಚೂರು ಜಿಲ್ಲೆಯಲ್ಲು ಪ್ರತ್ಯೇಕಿಸುತ್ತದೆ. ಪೂರ್ವದಲ್ಲಿ ಹಗರಿ ನದಿಯು ಹರಿಯುತ್ತದೆ. ಜಿಲ್ಲೆಯ ಪೂರ್ವಭಾಗದಲ್ಲಿ ಸಾಮಾನ್ಯವಾಗಿ ಕಪ್ಪುಮಣ್ಣಿನ ಪ್ರದೇಶ ಹೆಚ್ಚಾಗಿರುತ್ತದೆ. ಸಂಡೂರು ತಾಲೂಕಿನಲ್ಲಿ ಎತ್ತರವಾದ ಗುಡ್ಡಗಳಿದ್ದು ಅವುಗಳ ಎತ್ತರವು ಸಮುದ್ರದ ಮಟ್ಟಕ್ಕೆ ೩೪೦೦ ಅಡಿ ಎತ್ತರದಲ್ಲಿವೆ.

ಭೂವಿಜ್ಞಾನ : ಜಿಲ್ಲೆಯ ಕರ್ನಾಟಕ ಪ್ರಿಕೇಂಬ್ರಿಮ್ ಭೂಭಾಗವಾಗಿದ್ದು, ಕಲ್ಲು ಮತ್ತು ಬೆಂಚು ಕಲ್ಲುಗಳಿಂದ ಕೂಡಿದೆ. ಪ್ರಮುಖ ಖನಿಜಗಳಾದ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರುಗಳು ಹೇರಳವಾಗಿ ದೊರೆಯುತ್ತವೆ. ಅತಿ ಹೆಚ್ಚು ಅದಿರು ದೊರೆಯುವ ಪ್ರದೇಶಗಳು ಶೇಕಡಾ ೭೩.೭೫ ಸಂಡೂರು ತಾಲೂಕಿನಲ್ಲಿದ್ದು, ಹೊಸಪೇಟೆ ಎರಡನೇ ಸ್ಥಾನದಲ್ಲಿದೆ.

ಮಣ್ಣಿನ ನಮೂನೆ : ಜಿಲ್ಲೆಯಲ್ಲಿ ಕಪ್ಪು ಮತ್ತು ಕೆಂಪುಮಣ್ಣಿನ ನಮೂನೆಗಳಿವೆ. ಬಳ್ಳಾರಿ ತಾಲೂಕು ಒಂದರಲ್ಲೇ ಕಪ್ಪುಮಣ್ಣಿನ ಪ್ರದೇಶ ಹೆಚ್ಚಾಗಿದೆ. ಕಪ್ಪುಮಣ್ಣು ಮೂಲದಲ್ಲಿ ಫಲವತ್ತಾಗಿದ್ದು, ಹೆಚ್ಚಿನ ನೀರಿನ ಅಂಶವನ್ನು ಹಿಡಿದುಕೊಳ್ಳುವ ಗುಣವನ್ನು ಹೊಂದಿದೆ. ಈ ಕಪ್ಪುಮಣ್ಣು ಶೇಕಡಾ ೭೨ ರಷ್ಟು ಜೇಡಿಮಣ್ಣಿನಿಂದ ಕೂಡಿರುತ್ತದೆ. ಹೊಸಪೇಟೆ, ಹಡಗಲಿ, ಕೂಡ್ಲಿಗಿ ಮತ್ತು ಸಂಡೂರು ತಾಲೂಕುಗಳಲ್ಲಿ ಉಸುಕು ಮಿಶ್ರಿತ ಕೆಂಪುಮಣ್ಣು ಮತ್ತು ಜಿಗುಟು ಮಣ್ಣುಗಳು ದೊರೆಯುತ್ತವೆ. ತುಂಗಭದ್ರಾ ಜಲಾಶಯದಲ್ಲಿನ ಕಪ್ಪುಮಣ್ಣಿನಲ್ಲಿ ೨ ರಿಂದ ೪ ಅಡಿಗಳವರೆಗೆ ಆಳವಾಗಿಯೂ ಮತ್ತು ಮಣ್ಣಿನ ರಚನೆಯಲ್ಲಿ ಭಾರವಾಗಿಯೂ ಹಾಗೂ ಶೇಕಡಾ ೪೫ ರಿಂದ ೫೫ ರಷ್ಟು ಜಿಗುಟು ಮಣ್ಣಿನಿಂದ ಕೂಡಿರುತ್ತದೆ. ಭೂಗರ್ಭದಲ್ಲಿ ನೀರು ೭.೫ ಮೀಟರ್ ನಿಂದ ೩.೫ ಮೀಟರ್ ಗಳವರೆಗೆ ಇರುತ್ತದೆ.

ನದಿಗಳು

ಜಿಲ್ಲೆಯ ಮುಖ್ಯವಾದ ನದಿ ತುಂಗಭದ್ರಾ. ಇದರ ಉಪನದಿಗಳು ಹಗರಿ ಮತ್ತು ಚಿಕ್ಕಹಗರಿ. ತುಂಗಭದ್ರಾ ನದಿಯು ಜಿಲ್ಲೆಯ ಪಶ್ಚಿಮ ಮತ್ತು ಉತ್ತರ ದಿಕ್ಕಿನಲ್ಲಿ ಹರಿಯುತ್ತಿದ್ದು, ವರ್ಷದಲ್ಲಿ ಸದಾಕಾಲ ನೀರಿನಿಂದ ಕೂಡಿರುತ್ತದೆ. ಈ ನದಿಯು ಹಡಗಲಿ ತಾಲೂಕಿನ ಕುರುವತ್ತಿ ಗ್ರಾಮದಲ್ಲಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಇದರ ನೀರು ಕುಡಿಯಲು ರುಚಿಕರವಾಗಿದ್ದು, ಗಂಗಾಸ್ನಾನ ತುಂಗಪಾನ ಎಂಬ ನಾಣ್ನುಡಿಯನ್ನು ಸ್ಮರಣೆಗೆ ತಂದುಕೊಡುತ್ತದೆ. ಆದರೆ ಚಿಕ್ಕಹಗರಿ ಮತ್ತು ದೊಡ್ಡಹಗರಿ ನದಿಗಳಲ್ಲಿ ನೀರು ವರ್ಷದಲ್ಲಿ ಕೇವಲ ಕೆಲವು ಕಾಲ ಮಾತ್ರ ಇರುತ್ತದೆ. ನಾರಿಹಳ್ಳ ಜಲಾಶಯವು ಸಂಡೂರು ತಾಲೂಕಿನಲ್ಲಿದ್ದು, ತಾರಾನಗರ ಗ್ರಾಮದ ಹತ್ತಿರ ಹಳ್ಳಿಕ್ಕೆ ಒಡ್ಡುಹಾಕಿ ನೀರಾವರಿ ಸೌಲಭ್ಯ ಮಾಡಲಾಗಿದೆ. ಇದೇ ರೀತಿ ಹಗರಿಬೊಮ್ಮನಹಳ್ಳಿ ತಾಲೂಕಿನ ಮಾಲ್ವಿ ಎಂಬ ಗ್ರಾಮದ ಹತ್ತಿರ ಚಿಕ್ಕಹಗರಿ ನದಿಗೆ ಆಣೆಕಟ್ಟು ಕಟ್ಟಿ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ.

ಹವಾಮಾನ

ಜಿಲ್ಲೆಯ ಹವಾಮಾನವು ವರ್ಷದಲ್ಲಿ ಹೆಚ್ಚಿನ ಭಾಗ ಶುಷ್ಕವಾಗಿದ್ದು ಬೇಸಿಗೆಯ ಉಷ್ಣಾಂಶಗಳಿಂದ ಕೂಡಿರುತ್ತದೆ. ಡಿಸೆಂಬರ್ ನಿಂದ ಫೆಬ್ರವರಿವರೆಗೆ ವಾತಾವರಣ ತಂಪಾಗಿರುತ್ತದೆ. ಚಳಿಗಾಲದಲ್ಲಿ ಕನಿಷ್ಠ ಉಷ್ಣಾಂಶವು ೯-೧೦ ಸೆಲ್ಸಿಯಸ್ ಇದ್ದು ಗರಿಷ್ಠ ಉಷ್ಣಾಂಶವು ೩೫ ರವರೆಗೆ ಇರುತ್ತದೆ. ಬೇಸಿಗೆ ಕಾಲವು ಮಾರ್ಚ್‌ನಿಂದ.- ಮೇವರೆಗೆ ಇದ್ದು ರಾಜ್ಯದಲ್ಲಿಯೇ ಹೆಚ್ಚು ಉಷ್ಣಾಂಶತೆಯಿಂದ ಕೂಡಿರುತ್ತದೆ. ಬೇಸಿಗೆಯಲ್ಲಿ ಕನಿಷ್ಠ ೧೫ ಸೆಲ್ಸಿಯಸ್ ನಿಂದ ಗರಿಷ್ಠ ೪೪ ಸೆಲ್ಸಿಯಸ್ ವರೆಗೆ ಉಷ್ಣಾಂಶ ಇರುತ್ತದೆ.

ವಿಸ್ತೀರ್ಣ ಮತ್ತು ಆಡಳಿತ ವಿಭಾಗಗಳು : ಜಿಲ್ಲೆಯ ೮೪೨೦ ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು, ರಾಜ್ಯದ ಒಟ್ಟು ಶೇಕಡಾ ೬ರಷ್ಟು ವಿಸ್ತೀರ್ಣವನ್ನು ಹೊಂದಿದ್ದು, ೧೧ನೇ ಸ್ಥಾನದಲ್ಲಿದೆ. ಜಿಲ್ಲೆಯು ವಿಸ್ತೀರ್ಣದಲ್ಲಿ ಬಳ್ಳಾರಿ ತಾಲೂಕು ಹೆಚ್ಚಿನ ವಿಸ್ತೀರ್ಣ ಅಂದರೆ ೧೬೮೬ ಚ.ಕಿ.ಮೀ. (ಶೇ. ೨೦) ಹೊಂದಿದ್ದು, ಅತೀ ಕಡಿಮೆ ಎಂದರೆ ೯೩೪ ಚ.ಕಿ.ಮೀ. (ಶೇ. ೧೧) ರ ವಿಸ್ತೀರ್ಣವನ್ನು ಹೊಸಪೇಟೆ ತಾಲೂಕು ಹೊಂದಿರುತ್ತದೆ. ಜಿಲ್ಲೆಯ ಬಳ್ಳಾರಿ, ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಕೂಡ್ಲಿಗಿ, ಸಂಡೂರು ಹಾಗೂ ಸಿರುಗುಪ್ಪ ತಾಲೂಕುಗಳನ್ನು ಹೊಂದಿರುತ್ತದೆ. ಜಿಲ್ಲೆಯ ಕೇಂದ್ರಸ್ಥಾನ ಬಳ್ಳಾರಿ. ಅದು ರಾಜ್ಯದ ರಾಜಧಾನಿಯಾದ ಬೆಂಗಳೂರಿನಿಂದ ೩೦೪ ಕಿ.ಮೀ. ದೂರದಲ್ಲಿದೆ.

ಎರಡು ನಗರಸಭೆಗಳು ಬಳ್ಳಾರಿ ಮತ್ತು ಹೊಸಪೇಟೆ ತಾಲೂಕುಗಳಲ್ಲೂ ಹಾಗೂ ಒಂದು ಪುರಸಭೆ. ಕಂಪ್ಲಿ ಸಿರುಗುಪ್ಪ ಹೊಸಪೇಟೆ ಕೂಡ್ಲಿಗಿ ಹಡಗಲಿ ಸಂಡೂರು ಮತ್ತು ಕೂಡ್ಲಿಗಿ ಒಟ್ಟು ೭ ಪಟ್ಟಣ ಪಂಚಾಯತಿಗಳು ಇರುತ್ತವೆ. ಒಟ್ಟು ೧೮ ನಿಯಂತ್ರಿತ ಮುಖ್ಯ ಮಾರುಕಟ್ಟೆಗಳಿವೆ. ಅವುಗಳಲ್ಲಿ ಬಳ್ಳಾರಿ ೪, ಸಿರುಗುಪ್ಪ ೨, ಹೊಸಪೇಟೆ ೩, ಕೂಡ್ಲಿಗಿ ೨, ಹಡಗಲಿ ೨, ಹಗರಿಬೊಮ್ಮನಹಳ್ಳಿ ೧ ಮತ್ತು ಸಂಡೂರು ೨. ಜಿಲ್ಲೆಯಲ್ಲಿ ೫೪೨ ಗ್ರಾಮಗಳಿದ್ದು, ಅವುಗಳಲ್ಲಿ ೫೧೭ ಜನವಸತಿ ಇರುವ (ಚರಾಕ್) ಗ್ರಾಮಗಳಿದ್ದು, ೨೫ ಗ್ರಾಮಗಳು ಜನವಸತಿ ಇರದ (ಬೇಚರಕ್) ಗ್ರಾಮಗಳಿವೆ.

ಜನಸಂಖ್ಯೆ

೧೯೯೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ೧೬.೫೬ ಲಕ್ಷ (ಶೇಕಡಾ ೬೮ರಷ್ಟು) ಜನ ವಾಸಿಸುತ್ತಿದ್ದಾರೆ. ೧೯೮೧ ಮತ್ತು ೧೯೯೧ ದಶಕದಲ್ಲಿ ಜಿಲ್ಲೆಯ ಹಾಗೂ ರಾಜ್ಯದ ಜನಸಂಖ್ಯೆ ಬೆಳವಣಿಗೆ ಪ್ರಮಾಣ ಶೇಕಡಾ ೨೬.೭ ಮತ್ತು ೨೦.೭ ರಷ್ಟು ಇದೆ.

೧೯೯೧ರ ಜನಗಣತಿಯಂತೆ ರಾಜ್ಯದ ಜನಸಾಂದ್ರತೆಯು ಪ್ರತಿ ಚ.ಕಿ.ಮೀ.ಗೆ ೨೩೫ ಇದ್ದರೆ ಜಿಲ್ಲೆಯ ಜನಸಾಂದ್ರತೆಯು ೧೯೭ ಇದ್ದು, ಜನಸಾಂದ್ರತೆಯಲ್ಲಿ ಜಿಲ್ಲೆಯ ೧೩ನೇ ಸ್ಥಾನದಲ್ಲಿದೆ.

ಸ್ತ್ರೀ ಪುರುಷರ ವರ್ಗ : ಪ್ರತಿ ಸಾವಿರ ಪುರಷರಿಗೆ ೯೬೫ ಸ್ತ್ರೀಯರಿದ್ದಾರೆ. ರಾಜ್ಯದಲ್ಲಿ ಪ್ರತಿ ಸಾವಿರ ಪುರುಷರಿಗೆ ೯೬೦ ಸ್ತ್ರೀಯರಿದ್ದಾರೆ.

ಪರಿಶಿಷ್ಟವರ್ಗ

೧೯೯೧ರ ಜನಗಣತಿ ವರದಿ ಪ್ರಕಾರ ಸಾಕ್ಷರತೆ ಪ್ರಮಾಣ ೪೬ರಷ್ಟು ಇದ್ದು ರಾಜ್ಯದ ೧೭ನೇ ಸ್ಥಾನವನ್ನು ಪಡೆದಿರುತ್ತದೆ. ಹಾಗೂ ಸಾಕ್ಷರತೆಯು ಪುರುಷರು ಮತ್ತು ಸ್ತ್ರೀಯರಲ್ಲಿ ಅನುಕ್ರಮವಾಗಿ ಶೇಕಡಾ ೫೯ ಮತ್ತು ಶೇಕಡಾ ೩೨ ಇರುತ್ತದೆ.

ಕೆಲಸಗಾರರು

೧೯೯೧ನೇ ಸಾಲಿನ ಜನಗಣತಿಯ ಪ್ರಕಾರ ಮುಖ್ಯ ಕೆಲಸಗಾರರು ಸಂಖ್ಯೆ ೭.೦೮ ಇದ್ದು ಜಿಲ್ಲೆಯ ಒಟ್ಟು ಜನಸಂಖ್ಯೆಯು ಶೇಕಡಾ ೪೩ ಇರುತ್ತದೆ. ಈ ಕೆಲಸಗಾರರಲ್ಲಿ ಶೇಕಡಾ ೩೩ ರಷ್ಟು ಸಾಗುವಳಿದಾರರು ಶೇಕಡಾ ೪೧ರಷ್ಟು ವ್ಯವಸಾಯ ಕೂಲಿಕಾರರು ಹಾಗೂ ಶೇಕಡಾ ೬ರಷ್ಟು ಉತ್ಪಾದನೆ ಕ್ಷೇತ್ರದಲ್ಲಿ ಮತ್ತು ೨೦ ರಷ್ಟು ಇತರೆ ಕೆಲಸಗಳಲ್ಲಿ ತೊಡಗಿರುವವರಾಗಿದ್ದಾರೆ.

ವಾಸದ ಮನೆಗಳು ಮತ್ತು ಕುಟುಂಬಗಳು

೧೯೯೧ರ ಜನಗಣತಿಯ ಪ್ರಕಾರ ವಾಸದ ಮನೆಗಳು ೨.೮೬ ಲಕ್ಷ ಇದ್ದು ಅದರಲ್ಲಿ ಶೇಕಡಾ ೬೯ ರಷ್ಟು ಗ್ರಾಮೀಣ ಪ್ರದೇಶದಲ್ಲಿ ಇರುತ್ತದೆ. ಒಟ್ಟು ೨.೮೮ ಲಕ್ಷ ಕುಟುಂಬಗಳಿದ್ದು, ೧.೯೩ ಲಕ್ಷ ಕುಟುಂಬಗಳು ಗ್ರಾಮೀಣ ಪ್ರದೇಶದಲ್ಲಿವೆ.

ವ್ಯವಸಾಯ : ೨೦೦೦-೨೦೦೧ನೇ ಸಾಲಿನಲ್ಲಿ ಒಟ್ಟು ಭೌಗೋಳಿಕ ವಿಸ್ತೀರ್ಣದ ೮.೧೩ ಲಕ್ಷಗಳಲ್ಲಿ ೪.೮೭ ಲಕ್ಷ ಹೆಕ್ಟೇರುಗಳಷ್ಟು ಬಿತ್ತನೆಯಾಗಿದ್ದು ಇದರಲ್ಲಿ ಶೇಕಡಾ ೭೧ರಷ್ಟು ನಿವ್ವಳ ಬಿತ್ತನೆಯಾಗಿತ್ತು. ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾಗಿರುವ ಪ್ರದೇಶವು ನಿವ್ವಳ ಬಿತ್ತನೆಯಾಗಿರುವ ಪ್ರದೇಶದ ಶೇಕಡಾ ೧೫ ಇದ್ದು ಒಟ್ಟು

ಬಿತ್ತನೆಯಾಗಿರುವ ಪ್ರದೇಶದಲ್ಲಿ ಮುಖ್ಯವಾಗಿ ಜೋಳವನ್ನು ೧.೯ ಲಕ್ಷದಷ್ಟು ಪ್ರದೇಶದಲ್ಲಿ ಭತ್ತ ಶೇಕಡಾ ೦.೮೪ ಲಕ್ಷದಷ್ಟು ಪ್ರದೇಶದಲ್ಲಿ ಬೆಳೆಯಲಾಗಿತ್ತು.

೧೯೭೭ರ ಜಾನುವಾರು ಗಣತಿಯ ಪ್ರಕಾರ ಜಿಲ್ಲೆಯ ಒಟ್ಟು ಜಾನುವಾರುಗಳ ಸಂಖ್ಯೆ ೨೩.೮೮ ಲಕ್ಷಗಳಿದ್ದು, ಇದರಲ್ಲಿ ದನ ಕರುಗಳು ೪.೨೬ ಲಕ್ಷಗಳು ಎಮ್ಮೆಗಳು ಮತ್ತು ಕೋಣಗಳು ೧.೮೬ ಲಕ್ಷಗಳು ಕುರಿಗಳು ೫.೨೯ ಲಕ್ಷಗಳು, ಆಡುಗಳು ೩.೭೦ ಲಕ್ಷಗಳು, ಹಂದಿಗಳು ೦.೪೦, ಕೋಳಿಗಳು ೧೬.೧೦ ಇರುತ್ತವೆ. ಇತರೆ ಜಾನುವಾರುಗಳು ೦.೦೩೨ ಲಕ್ಷಗಳು.

ಸದರಿ ಸಾಲಿನಲ್ಲಿ ಒಟ್ಟು ಪಶುವೈದ್ಯ ಸಂಸ್ಥೆಗಳು ೧೦೨ ಇದ್ದು ಅವುಗಳಲ್ಲಿ ಪಶು ಆಸ್ಪತ್ರೆ ೮, ಪಶು ಚಿಕಿತ್ಸಾಲಯಗಳು ೪೭, ಪ್ರಾಥಮಿಕ ಪಶುವೈದ್ಯ ಕೇಂದ್ರಗಳು ೩೧, ಕೃತಕ ಗರ್ಭದಾರಣ ಕೇಂದ್ರಗಳು ೯, ಸಂಚಾರಿ ಪಶು ಚಿಕಿತ್ಸಾಲಯಗಳು ೭. ಈ ಸಂಸ್ಥೆಗಳು ಜಿಲ್ಲೆಯ ಜಾನುವಾರುಗಳ ಆರೋಗ್ಯ ಕಾಪಾಡುವುದರಲ್ಲಿ ನೆರವಾಗುತ್ತವೆ.

ವಿದ್ಯುಚ್ಛಕ್ತಿ ಸೌಲಭ್ಯ : ಎಲ್ಲಾ ಪಟ್ಟಗಳು ಹಾಗೂ ೩೬೫ ಉಪಗ್ರಾಮಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಒದಲಾಗಿದೆ. ಅಲ್ಲದೇ ಒಟ್ಟು ೩೬೧೦೭ ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ.

ಕಾರ್ಖಾನೆಗಳು

ಜಿಲ್ಲೆಯ ೨೫೭ ಕಾರ್ಖಾನೆಗಳಿದ್ದು ಅದರಲ್ಲಿ ೧೯೬೭೦ ಉದ್ಯೋಗಿಗಳು ಇರುತ್ತಾರೆ.

ವೈದ್ಯಕೀಯ

ರಾಜ್ಯ ಸರ್ಕಾರದ ಮತ್ತು ಸಾಂಸ್ಥಿಕ ಸಂಸ್ಥೆಗಳಿಂದ ಅನೇಕ ವೈದ್ಯಕೀಯ ಸೌಲಭ್ಯಗಳು ಒದಗಿಸಲ್ಪಟ್ಟಿವೆ. ೧೦ ಸಾರ್ವಜನಿಕ ಆಸ್ಪತ್ರೆಗಳು, ೫೨ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ೧೭ ಪ್ರಾಥಮಿಕ ಆರೋಗ್ಯ ಘಟಕಗಳು, ೧೧ ಡಿಸ್ಪೆನ್ಸರಿಗಳು ಮತ್ತು ೨೮೭ ಉಪಕೇಂದ್ರಗಳು ಹಾಗೂ ೩ ಕುಟುಂಬ ಕಲ್ಯಾಣ ಕೇಂದ್ರಗಳು ವೈದ್ಯಕೀಯ ಸೌಲಭ್ಯವನ್ನು ಒದಗಿಸಿರುತ್ತದೆ.

ಶಿಕ್ಷಣ

೧೫೭೭ ಪ್ರಾಥಮಿಕ ಶಾಲೆಗಳು, ೨೫೫ ಪ್ರೌಢಶಾಲೆಗಳು, ೫೦ ಹಿರಿಯ ಕಾಲೇಜುಗಳು, ೧೯ ಸಾಮಾನ್ಯ ಶಿಕ್ಷಣ ಕಾಲೇಜುಗಳು ಹಾಗೂ ೭ ಪಾಲಿಟೆಕ್ನಿಕ್, ೨ ವೈದ್ಯಕೀಯ, ೨ ವೈದ್ಯಕೀಯ ಸಂಸ್ಥೆ ಮತ್ತು ಬಳ್ಳಾರಿ ತಾಲೂಕಿನಲ್ಲಿ ೩ ಇಂಜಿನಿಯರಿಂಗ್ ಕಾಲೇಜು ಇರುತ್ತವೆ. ಪ್ರಾಥಮಿಕ ಶಾಲೆಗಳಲ್ಲಿ ೩.೬೦ ಲಕ್ಷ ವಿದ್ಯಾರ್ಥಿಗಳು ಪ್ರೌಢಶಾಲೆಗಳಲ್ಲಿ ೦.[illegible] ಸಾವಿರ ಹಿರಿಯ ಕಾಲೇಜುಗಳಲ್ಲಿ ೦.೧೮ ಸಾವಿರ ಸಾಮಾನ್ಯ ಶಿಕ್ಷಣ ಕಾಲೇಜುಗಳಲ್ಲಿ ೦.೯೫ ಸಾವಿರ ಮತ್ತು ಆಯುರ್ವೇದ ಕಾಲೇಜಿನಲ್ಲಿ ೧೯೮ ವಿದ್ಯಾರ್ಥಿಗಳಿರುತ್ತಾರೆ.

ಸಾರಿಗೆ ಮತ್ತು ಸಂಪರ್ಕ

ಜಿಲ್ಲೆಯಲ್ಲಿ ೨೦೦೧-೨೦೦೨ನೇ ಸಾಲಿನ ಅಂತ್ಯದಲ್ಲಿ ೫೦೩೯.೧೯ ಕಿ.ಮೀ. ಉದ್ದಳತೆಯ ರಸ್ತೆ ಇರುತ್ತದೆ. ಇದರಲ್ಲಿ ರಾಷ್ಟ್ರೀಯ ಹೆದ್ದಾರೆ ೧೮೧ ಕಿ.ಮೀ., ರಾಜ್ಯ ಹೆದ್ದಾರಿ ೩೧೦.೨೫ ಕಿ.ಮೀ., ಜಿಲ್ಲಾ ಮುಖ್ಯ ರಸ್ತೆ ೧೧೪೩.೯೧ ಕಿ.ಮೀ., ಇತರೆ ಜಿಲ್ಲಾ ರಸ್ತೆ ೧೦೮ ಕಿ.ಮೀ. ಮತ್ತು ಹಳ್ಳಿ ಮತ್ತು ಮುನಿಸಿಪಾಲಿಟಿ ರಸ್ತೆಗಳು ೧೬೮೮ ಕಿ.ಮೀ., ಟಿ.ಡಿ.ಟಿ. ರಸ್ತೆಗಳು ೭೫೪ ಕಿ.ಮೀ., ಅರಣ್ಯ ರಸ್ತೆಗಳು ೧೫ ಕಿ.ಮೀ. ಹಾಗೂ ನೀರಾವರಿ ರಸ್ತೆಗಳು ೪೨೪ ಕಿ.ಮೀ.ಗಳಿದ್ದು ರೈಲ್ವೆ ಮಾರ್ಗದ ಉದ್ದಳತೆಯ ೩೧೦ ಕಿ.ಮೀ.ಗಳಷ್ಟು ಇದ್ದು, ೨೭ ರೈಲ್ವೆ ನಿಲ್ದಾಣಗಳನ್ನೊಳಗೊಂಡಿದೆ. ಈ ಸಾಲಿನಲ್ಲಿ ಒಟ್ಟು ೩೯೨ ಅಂಚೆಕಛೇರಿಗಳು ಹಾಗೂ ೨೪೮ ತಂತಿ ಸೌಲಭ್ಯವಿರುವ ಅಂಚೆ ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದವು. ಒಟ್ಟು ೧೦೦ ದೂರವಾಣಿ ವಿನಿಮಯ ಕೇಂದ್ರಗಳು ಇದ್ದು ೫೪೭೦೫ ದೂರವಾಣಿಗಳು ಬಳಕೆಯಲ್ಲಿವೆ.

ಜಿಲ್ಲೆಯ ಆದಾಯ

ಜಿಲ್ಲೆಯ ಆದಾಯದ ನಿವ್ವಳ ೯೬.೯೭ನೇ ಸಾಲಿನ ಚಾಲ್ತಿ ಬೆಲೆಗಳಲ್ಲಿ ವಿವಿಧ ಬಾಬ್ತುಗಳಿಂದ ಅಂದರೆ ಕೃಷಿ ೮೫೦೧೧ ಲಕ್ಷ ರೂಪಾಯಿ, ಅರಣ್ಯದಿಂದ ೩೬೫೧ ಲಕ್ಷ ರೂಪಾಯಿ, ಮೀನುಗಾರಿಕೆ ೨೧೪೮ ಲಕ್ಷ ರೂಪಾಯಿ, ಗಣಿಯಿಂದ ೬೪೬೧ ಲಕ್ಷ ರೂಪಾಯಿ, ತಯಾರಿಕೆ ೧೬೦೨೭ ಲಕ್ಷ ರೂಪಾಯಿ, ನಿರ್ಮಾಣ ಕಾರ್ಯ ೧೨೧೬೬ ಲಕ್ಷ ರೂಪಾಯಿ, ವಿದ್ಯುಚ್ಛಕ್ತಿ ಗ್ಯಾಸ್ ನೀರು ಸರಬರಾಜಿನಿಂದ ೨೦೪೩ ಲಕ್ಷ ರೂಪಾಯಿ, ರೈಲ್ವೆ ೧೦೨೪ ಲಕ್ಷ ರೂಪಾಯಿ, ಸಾರಿಗೆ ೭೯೨೩ ಲಕ್ಷ ರೂಪಾಯಿ, ಸಂಪರ್ಕ ೩೯೦೮ ಲಕ್ಷ ರೂಪಾಯಿ, ಶೇಖರಣೆಯಿಂದ ೧೧೧ ಲಕ್ಷ ರೂಪಾಯಿ, ವ್ಯಾಪಾರ ಇತ್ಯಾದಿಗಳಿಂದ ೩೧೭೧೬ ಲಕ್ಷ ರೂಪಾಯಿ, ಬ್ಯಾಂಕ್ ಉದ್ಯಮದಿಂದ ೮೧೪೬ ಲಕ್ಷ ರೂಪಾಯಿ, ಸ್ಥಿರ ಆಸ್ತಿ ವಾಸಗೃಹ ಇತ್ಯಾದಿಗಳಿಂದ ೬೪೮೬ ಲಕ್ಷ ರೂಪಾಯಿ, ಸಾಮಾನ್ಯ ಆಡಳಿತ ೫೫೫೬ ಲಕ್ಷ ರೂಪಾಯಿ, ಇತರೆ ಸೇವೆಗಳಿಂದ ೧೨೩೦೧ ಲಕ್ಷ ರೂಪಾಯಿ ಮತ್ತು ಒಟ್ಟು ಜಿಲ್ಲೆಯ ಆದಾಯ ೨೦೪೭೭೮ ಲಕ್ಷ ರೂಪಾಯಿಗಳಾಗಿದ್ದು ತಲಾ ಆದಾಯ ೯೭೨೧ ಲಕ್ಷ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ.

ರಾಜ್ಯದ ಒಟ್ಟು ಆದಾಯ ೫೧೩೫೯೭ ಲಕ್ಷ ರೂಪಾಯಿಗಳಲ್ಲಿ ಜಿಲ್ಲೆಯ ಆದಾಯ ೨೦೪೭೭೮ ಲಕ್ಷ ರೂಪಾಯಿಗಳಾಗಿದ್ದು, ಇದು ರಾಜ್ಯದ ಒಟ್ಟು ಆದಾಯಕ್ಕೆ ಹೋಲಿಸಿದರೆ ಶೇಕಡಾ ೩.೯೮ ರಷ್ಟಾಗಿರುತ್ತದೆ. ಜಿಲ್ಲೆಯ ತಲಾ ಆದಾಯ ೯೭೨೧ ರೂಪಾಯಿಗಳಿರುತ್ತದೆ. ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಈ ಜಿಲ್ಲೆಯ ಆದಾಯದಲ್ಲಿ ೯ನೇ ಸ್ಥಾನದಲ್ಲಿದೆ. ಸ್ಥಿರ ಬೆಲೆ ೮೦೮೧ ಗಳಲ್ಲಿ ೯೬-೯೭ನೇ ಸಾಲಿನ ಜಿಲ್ಲೆಯ ಆದಾಯ ೪೮೫೮೧ ಲಕ್ಷ ರೂಪಾಯಿಗಳಾಗಿದ್ದು ತಲಾ ಆದಾಯ ೨೩೬೬ ಲಕ್ಷ ರೂಪಾಯಿಗಳಾಗಿರುತ್ತದೆ.

ಮಳೆ

ಈ ಸಾಲಿನಲ್ಲಿ ವಾಡಿಕೆಯ ಮಳೆ ೬೩೬ ಮೀಟರ್ ಗಳಿದ್ದು ೨೦೦೧-೦೨ನೇ ಸಾಲಿಗೆ ವಾಸ್ತವಿಕವಾಗಿ ಮಳೆ

೬೪೦.೬ ಮಿ.ಮೀ. ಆಗಿರುತ್ತದೆ. ಮಳೆಯ ಕನಿಷ್ಠ ಪ್ರಮಾಣದಲ್ಲಿ ಬಳ್ಳಾರಿ ತಾಲೂಕಿನಲ್ಲಿ ೪೭೬.೮ ಮೀ.ಮೀ. ಹಾಗೂ ಗರಿಷ್ಠ ಪ್ರಮಾಣದಲ್ಲಿ ಸಿರುಗುಪ್ಪ ತಾಲೂಕು ೭೮೦ ಮಿ.ಮೀ. ಮಳೆ ಆಗಿರುತ್ತದೆ.

ಜಿಲ್ಲೆಯ ನೀರಾವರಿಯಾದ ವಿಸ್ತೀರ್ಣವು ೧೫೭೩೯೭ ಹೆಕ್ಟೇರ್ ಗಳಾಗಿದ್ದು, ಇದರಲ್ಲಿ ಕಾಲುವೆಗಳಿಂದ ೯೨೨೫೯ ಹೆಕ್ಟೇರ್ (೫೮.೬೧) ರಷ್ಟು, ಕೊಳವೆ ಬಾವಿಗಳಿಂದ ೩೦೩೧೫ ಹೆಕ್ಟೇರ್ (೧೯.೨೬) ರಷ್ಟು ಮತ್ತು ಇತರ ಮೂಲಗಳಿಂದ ೩೪೮೨೩ ಹೆಕ್ಟೇರ್ (೨೨.೧೩) ರಷ್ಟು ನೀರಾವರಿಯಾಗಿರುತ್ತದೆ.

ಜಿಲ್ಲೆಯ ನೀರಾವರಿಯಾದ ವಿಸ್ತೀರ್ಣವು ೧೫೭೩೯೭ ಹೆಕ್ಟೇರ್ ಗಳಾಗಿದ್ದು ಇದರಲ್ಲಿ ಕಾಲುವೆಳಿಂದ ೯೨೨೫೯ ಹೆಕ್ಟೇರ್ (೫೮.೯೧) ರಷ್ಟು, ಕೊಳವೆ ಬಾವಿಗಳಿಂದ ೩೦೩೧೫ ಹೆಕ್ಟೇರ್ (೧೯.೨೬) ರಷ್ಟು ಮತ್ತು ಇತರೆ ಮೂಲಗಳಿಂದ ೩೪೮೨೩ ಹೆಕ್ಟೇರ್ (೨೨.೧೩) ರಷ್ಟು ನೀರಾವರಿಯಾಗಿರುತ್ತದೆ.

ಒಟ್ಟು ೪೫೬ ಕಿ.ಮೀ. ಉದ್ದವಾದ ಕಾಲುವೆಗಳು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಇರುತ್ತವೆ. ಬಳ್ಳಾರಿ ತಾಲೂಕಿನಲ್ಲಿ ಶೇಕಡಾ ೧೭ ರಷ್ಟು ಇದ್ದು ಉಳಿದ ತಾಲೂಕುಗಳಾದ ಸಿರುಗುಪ್ಪ ಶೇಕಡಾ ೧೯, ಹೊಸಪೇಟೆ ಶೇಕಡಾ ೩೫, ಹಗರಿಬೊಮ್ಮನಹಳ್ಳಿ ಶೇಕಡಾ ೨೮ ಮತ್ತು ಸಂಡೂರು ಶೇಕಡಾ ಬಾವಿಗಳಿಂದ ನೀರಾವರಿಯಾದ ನಿವ್ವಳ ವಿಸ್ತೀರ್ಣವು ೧೧೭೯೭ ಹೆಕ್ಟೇರ್ ಇದ್ದು ತಾಲೂಕುವಾರು ಕ್ರಮವಾಗಿ ಹಗರಿಬೊಮ್ಮನಹಳ್ಳಿ ೨೮೯೫ ಹೆಕ್ಟೇರ್, ಸಂಡೂರು ೩೧೫೩ ಹೆಕ್ಟೇರ್, ಹೊಸಪೇಟೆ ೧೯೭೬ ಹೆಕ್ಟೇರ್, ಕೂಡ್ಲಿಗಿ ೧೧೭೬ ಹೆಕ್ಟೇರ್, ಹಡಗಲಿ ೬೧೧ ಹೆಕ್ಟೇರ್, ಬಳ್ಳಾರಿ ೧೪೩೨ ಹೆಕ್ಟೇರ್, ಸಿರುಗುಪ್ಪ ೫೫೪ ಹೆಕ್ಟೇರ್ ಇರುತ್ತದೆ. ಒಟ್ಟು ೮೩೨೯ ಬಾವಿಗಳಿದ್ದು ಇದರಲ್ಲಿ ಶೇಕಡಾ ೨೫ ರಷ್ಟು ಕೂಡ್ಲಿಗಿ ಶೇಕಡಾ ೧೭ ರಷ್ಟು, ಸಂಡೂರು ಶೇಕಡಾ ೧೬ ರಷ್ಟು, ಬಳ್ಳಾರಿ ಶೇಕಡಾ ೧೩ ರಷ್ಟು, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಹಡಗಲಿ, ಸಿರುಗುಪ್ಪ ತಾಲೂಕುಗಳಲ್ಲಿ ಶೇಕಡಾ ೩ ರಷ್ಟು ಇರುತ್ತವೆ.

ವ್ಯವಸಾಯ

ಭೂಮಿಯ ಉಪಯೋಗ

ಜಿಲ್ಲೆಯ ಒಟ್ಟು ೮.೧ ಲಕ್ಷ ಹೆಕ್ಟೇರ್ ಭೌಗೋಳಿಕ ಪ್ರದೇಶವಿದು. ಅದರಲ್ಲಿ ಅರಣ್ಯ ೦.೯೭ ಲಕ್ಷ ಹೆಕ್ಟೇರ್ ವ್ಯವಸಾಯವನ್ನು ಒಟ್ಟು ಇತರೆ ಉದ್ದೇಶಗಳಿಗಾಗಿ ಉಪಯೋಗಿಸಿಕೊಂಡು ಪ್ರದೇಶ ೦.೬೮ ಲಕ್ಷ ಹೆಕ್ಟೇರಗಳು (ಶೇಕಡಾ ೭) ಬಂಜರು ಮತ್ತು ವ್ಯವಸಾಯ ಮಾಡಲು ಸಾಧ್ಯವಿಲ್ಲದ ಪ್ರದೇಶ ೦.೫೩ ಲಕ್ಷ ಹೆಕ್ಟೇರ್ ಗಳು (ಶೇಕಡಾ ೮) ಸಾಗುವಳಿಗೆ ಯೋಗ್ಯವಾದ ಬಂಜರು ೦.೨೫ ಲಕ್ಷ ಹೆಕ್ಟೇರಗಳು (ಶೇಕಡಾ ೩) ಖಾಯಂ ಗೋಮಾಳ ಮತ್ತು ಇತರೆ ಹುಲ್ಲುಗಾವಲುಗಳ ಪ್ರದೇಶ ಹೆಕ್ಟೇರ್ ೦.೦೫ (ಶೇಕಡಾ ೧) ವಿವಿಧ ವೃಕ್ಷ ಮತ್ತು ತೋಪುಗಳಿಂದ ಪ್ರದೇಶ ೦.೦೬ ಲಕ್ಷ ಹೆಕ್ಟೇರ್ ಗಳು (ಶೇಕಡಾ ೧) ಬೀಳು ಜಮೀನು ೦.೬೩ ಲಕ್ಷ ಹೆಕ್ಟೇರ್ (ಶೇಕಡಾ ೮) ಮತ್ತು ಬಿತ್ತನೆಯಾಗಿರುವ ನಿವ್ವಳ ಪ್ರದೇಶ ೪.೮೭ ಲಕ್ಷ ಹೆಕ್ಟೇರ್ (ಶೇಕಡಾ ೬) ರಷ್ಟಾಗಿರುತ್ತದೆ.

ಒಟ್ಟು ಬಿತ್ತನೆಯಾಗಿರುವ ಪ್ರದೇಶ

ಈ ಸಾಲಿನಲ್ಲಿ ಒಟ್ಟು ಬಿತ್ತನೆಯಾಗಿರುವ ಪ್ರದೇಶ ೫.೫೮ ಲಕ್ಷ ಹೆಕ್ಟೇರ್. ಅದರಲ್ಲಿ ನಿವ್ವಳ ಬಿತ್ತನೆಯಾಗಿರುವ ಪ್ರದೇಶ ೪.೮೭ ಲಕ್ಷ ಹೆಕ್ಟೇರ್ ಗಳು. ಇದರಲ್ಲಿ ಬಳ್ಳಾರಿ ೧.೯೯ ಲಕ್ಷ ಹೆಕ್ಟೇರ್ ಗಳಷ್ಟು, ಸಂಡೂರು ೦.೩೫ ಲಕ್ಷ ಹೆಕ್ಟೇರ್ ಮತ್ತು ಸಿರುಗುಪ್ಪ ೦.೮೨ ಲಕ್ಷ ಹೆಕ್ಟೇರ್ ಬಿತ್ತನೆಯಾಗಿರುತ್ತದೆ.

ಭೂ ಹಿಡುವಳಿಗಳು

೯೫-೯೬ನೇ ಸಾಲಿನ ಕೃಷಿ ಗಣತಿಯ ಪ್ರಕಾರ ಜಿಲ್ಲೆಯಲ್ಲಿ ೨.೧೧ ಲಕ್ಷ ಭೂ ಹಿಡುವಳಿಗಳು ಇರುತ್ತವೆ. ಮತ್ತು ೫.೩೩ ಲಕ್ಷ ಹೆಕ್ಟೇರ್ ಗಳಷ್ಟು ಹಿಡುವಳಿ ವಿಸ್ತೀರ್ಣವಿದ್ದು ೯೭-೯೮ನೇ ಸಾಲಿನಲ್ಲಿ ಕೃಷಿ ಗಣತಿಯ ಪ್ರಕಾರ ೧ಕ್ಕಿಂತಲೂ ಕಡಿಮೆ ಇರುವವರ ಸಂಖ್ಯೆ ೬೪೭೨೬.೧ ರಿಂದ ೨ ಹೆಕ್ಟೇರ್ ಇರುವವರ ಸಂಖ್ಯೆ ೫೯೦೯ ಆಗಿದೆ. ೨ ರಿಂದ ೪ ಹೆಕ್ಟೇರ್ ಇರುವವರ ಸಂಖ್ಯೆ ೫೦೫೨೯ ಆಗಿದೆ. ೪ ರಿಂದ ೧೦ ರವರೆಗೆ ೩೧೪೧೧ ಆಗಿದೆ. ೧೦ ಕ್ಕಿಂತ ಜಾಸ್ತಿ ಇರುವವರ ಸಂಖ್ಯೆ ೫೭೮೬ ಒಟ್ಟು ೨೧೧೫೧೬ ಲಕ್ಷ ಹಿಡುವಳಿದಾರರಿರುತ್ತಾರೆ.

೯೭-೯೮ನೇ ಸಾಲಿನ ಕೃಷಿಗಣತಿ ಪ್ರಕಾರ ಹಿಡುವಳಿದಾರರ ವಿಸ್ತೀರ್ಣವು ತಾಲೂಕುವಾರು ಈ ರೀತಿ ಇರುತ್ತದೆ. ಬಳ್ಳಾರಿ ೧೩೮೭೭೮ ಹೆಕ್ಟೇರ್, ಹಡಗಲಿ ೭೨೩೩೪ ಹೆಕ್ಟೇರ್, ಹಗರಿಬೊಮ್ಮನಹಳ್ಳಿ ೬೨೯೦೨ ಹೆಕ್ಟೇರ್, ಹೊಸಪೇಟೆ ೪೧೭೦೨ ಹೆಕ್ಟೇರ್, ಕೂಡ್ಲಿಗಿ ೯೩೯೩೩ ಹೆಕ್ಟೇರ್, ಸಂಡೂರು ೩೬೦೫೯ ಹೆಕ್ಟೇರ್, ಸಿರುಗುಪ್ಪ ೮೭೭೨೩ ಹೆಕ್ಟೇರ್ ಗಳಾಗಿರುತ್ತದೆ.

ಮೂಲಭೂತ ಸೌಕರ್ಯಗಳು

ವಿದ್ಯುಚ್ಛಕ್ತಿ ಹೊಂದಿದ ಪಟ್ಟಣಗಳು ಮತ್ತು ಗ್ರಾಮಗಳು

ವಿದ್ಯುಚ್ಛಕ್ತಿಗಳು ೫೧೭ ಗ್ರಾಮಗಳಿಗೆ ಮತ್ತು ೩೬೫ ಉಪಗ್ರಾಮಗಳಿಗೆ ಒದಗಿಸಲಾಗಿದೆ. ಈ ಸಾಲಿನ ಅಂತ್ಯದಲ್ಲಿ ೩೬೧೦೭ ಪಂಪ್ ಸೆಟ್‌ಗಳಿಗೆ ಈ ಸೌಕರ್ಯವನ್ನು ಒದಗಿಸಲಾಗಿತ್ತು. ೨೦೦೦-೨೧ನೇ ಸಾಲಿಗೆ ಬಳ್ಳಾರಿ ತಾಲೂಕಿನಲ್ಲಿ ೫೧೪೨ ಪಂಪ್ ಸೆಟ್‌ಗಳಿವೆ. ಹಡಗಲಿಯಲ್ಲಿ ೭೧೮೪, ಹಗರಿಬೊಮ್ಮನಹಳ್ಳಿಯಲ್ಲಿ ೫೮೪೩, ಹೊಸಪೇಟೆ ೪೬೦೧, ಕೂಡ್ಲಿಗಿ ೭೩೬೦, ಸಂಡೂರು ೨೭೬೬, ಸಿರುಗುಪ್ಪ ೩೧೧೧ ಇರುತ್ತವೆ.

ಬ್ಯಾಂಕುಗಳು

ಜಿಲ್ಲೆಯಲ್ಲಿ ೧೫೭ ವಾಣಿಜ್ಯ ಮತ್ತು ಗ್ರಾಮೀಣ ಹಾಗೂ ಇತರೆ ಬ್ಯಾಂಕುಗಳಿವೆ. ಜಿಲ್ಲೆಯಲ್ಲಿ ಸರಾಸರಿ ೧೦೫೫ ಜನಸಂಖ್ಯೆಗೆ ಒಂದು ಬ್ಯಾಂಕು ಶಾಖೆಯು ಕಾರ್ಯ ನಿರ್ವಹಿಸುತ್ತಿದೆ. ಈ ಬ್ಯಾಂಕುಗಳು ಕೊಟ್ಟ ಸಾಲ ಒಟ್ಟು ೮೫೭೧೭ ಲಕ್ಷ ರೂಪಾಯಿಗಳಷ್ಟು ಅವುಗಳಲ್ಲಿ ಠೇವಣಿ ೯೨೭೫೮ ಲಕ್ಷ ರೂಪಾಯಿಗಳು.

ಪಡಿತರ ವ್ಯವಸ್ಥೆ

ಈ ಸಾಲಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ೪೫೬ ಹಾಗೂ ನಗರ ಪ್ರದೇಶದಲ್ಲಿ ೧೪೯ ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ಒಟ್ಟು ೩.೨೫ ಲಕ್ಷ ಪಡಿತರ ಚೀಟಿದಾರರು ಇದ್ದು ಹಸಿರು ಪಡಿತರ ಚೀಟಿದಾರರು ೧.೫೧ ಲಕ್ಷ, ಕೇಸರಿ ಪಡಿತರ ಚೀಟಿದಾರರು ೭೨ ಸಾವಿರ, ಹಳದಿ ಪಡಿತರ ಚೀಟಿದಾರರು ೭೩ ಸಾವಿರ ಮತ್ತು ಇತರೆ ಪಡಿತರ ಚೀಟಿದಾರರು ೨೭ ಸಾವಿರ ಇರುತ್ತವೆ.

ಯೋಜನೆ

ಜಿಲ್ಲಾ ಯೋಜನೆಯ ಈ ಸಾಲಿನಲ್ಲಿ ಒಟ್ಟು ೭೨೧೨.೧೫ ಲಕ್ಷ ರೂಪಾಯಿಗಳನ್ನು ಯೋಜನೆಯಡಿಯಲ್ಲಿ ಒದಗಿಸಲಾಗಿದೆ. ಇದರಲ್ಲಿ ರಾಜ್ಯ ಯೋಜನೆಗಳು ಕೇಂದ್ರ ಯೋಜನೆಗಳು ಹಾಗೂ ಪರಿಷ್ಕೃತ ಯೋಜನೆಗಳು ಸೇರಿರುತ್ತದೆ. ಇದರಲ್ಲಿ ರಾಜ್ಯ ಸರ್ಕಾರದ ಪಾಲು ೪೯೮೯.೫೬ ಲಕ್ಷ ರೂಪಾಯಿಗಳಾಗಿದ್ದು ಕೇಂದ್ರ ಸರ್ಕಾರದ ಪಾಲು ೩೨೨೨.೭೫ ಲಕ್ಷ ರೂಪಾಯಿಗಳಾಗಿರುತ್ತದೆ.

ಮನೋರಂಜನೆ

ಜಿಲ್ಲೆಯಲ್ಲಿ ೩೩ ಖಾಯಂ ಚಿತ್ರಮಂದಿರಗಳು ೨೯ ಅರೆಕಾಲಿಕ ಮತ್ತು ಚಿತ್ರಮಂದಿರಗಳು ಮತ್ತು ೫ ವೀಡಿಯೋ ಚಿತ್ರಮಂದಿರಗಳಿರುತ್ತವೆ.

ಜಿಲ್ಲೆಯಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳು ಮತ್ತು ಪ್ರವಾಸ ಕೇಂದ್ರಗಳು ಇವೆ. ಅವುಗಳಲ್ಲಿ ಮುಖ್ಯವಾಗಿ ಹೊಸಪೇಟೆ ತಾಲೂಕಿನಲ್ಲಿರುವ ಐತಿಹಾಸಿಕ ಪ್ರಸಿದ್ಧವಾದ ಹಂಪಿ ಮತ್ತು ಹೊಸಪೇಟೆಯಲ್ಲಿ ತುಂಗಭದ್ರಾ ಆಣೆಕಟ್ಟು ಇವೆ. ಹಡಗಲಿ ತಾಲೂಕಿನಲ್ಲಿ ಮೈಲಾರ ಕ್ಷೇತ್ರ, ಬಳ್ಳಾರಿ ದುರ್ಗಮ್ಮದೇವಿ, ಕೋಟೆ ಮಲ್ಲೇಶ್ವರಿ ಕೂಡ್ಲಿಗಿ ತಾಲೂಕಿನಲ್ಲಿ, ಉಜ್ಜನಿಯ ಮಠ ಸಂಡೂರು ತಾಲೂಕಿನಲ್ಲಿ ಪ್ರಸಿದ್ಧವಾದ ಶ್ರೀ ಕುಮಾರಸ್ವಾಮಿ ದೇವಾಲಯ ಮತ್ತು ದೋಣಿಮಲೈ ಗಣಿಕೆಲಸ, ಬಳ್ಳಾರಿ ತಾಲೂಕಿನ ಚೆಳ್ಳಗುರ್ಕಿ ಗ್ರಾಮದಲ್ಲಿರುವ ಶ್ರೀ ಎರ್ರಿತಾತನವರ ಪ್ರಸಿದ್ಧ ಪ್ರವಾಸಿ ಕೇಂದ್ರಗಳು ದೇಶದ ಬೇರೆ ಬೇರೆ ಭಾಗಗಳಿಂದ ಪ್ರವಾಸಿಗರನ್ನು ಆಕರ್ಷಿಸುವ ಮತ್ತು ಮನೋರಂಜನೆ ನೀಡುವ ಕೇಂದ್ರಗಳಿವೆ.

ಬಳ್ಳಾರಿ ಜಿಲ್ಲಾ ಕೇಂದ್ರದಲ್ಲಿ ಸ್ಥಾಪಿಸಲಾದ ಕ್ರೀಡಾಂಗಣವು ಕ್ರೀಡಾಭ್ಯಾಸ ಮತ್ತು ಕ್ರೀಡಾ ಸ್ಪರ್ಧೆಗಳನ್ನು ನಡೆಸಲು ಸೌಲಭ್ಯಗಳನ್ನು ಒದಗಿಸಲಾಗಿದೆ. ೩೦೦ ಯುವಕ ಮಂಡಳಿಗಳು ಮತ್ತು ೯೨೦೦ ಸದಸ್ಯರಿದ್ದಾರೆ. ೭೬೮ ಮಹಿಳಾ ಮಂಡಳಿಗಳಿದ್ದು ೪೯೬ ಸದಸ್ಯರುಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

(ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ ೨೦೦೧ - ೨೦೦೨, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಬಳ್ಳಾರಿ)

ಪ್ರಸ್ತುತ ಪ್ರಬಂಧದ ವಿಷಯ ವಸ್ತುವಾದ ಬೇಡ ಸಮುದಾಯ ಮೂಲತಃ ಬುಡಕಟ್ಟುವರ್ಗಕ್ಕೆ ಸೇರಿದವರು. ಬೇಟೆ ಪಶುಸಂಗೋಪನೆಗಳನ್ನು ಅವಲಂಬಿಸಿಕೊಂಡು ಕಾಡುವಾಸಿಗಳಾಗಿದ್ದ ಈ ಜನಾಂಗವು ಕಾಲಕ್ರಮೇಣ ನಾಗರೀಕ ಪ್ರಪಂಚಕ್ಕೆ ಪ್ರವೇಶಿಸಿತು. ಸದ್ಯಕ್ಕೆ ಅವರನ್ನು 'ಅರೆಬುಡಕಟ್ಟು'' ಜನಾಂಗದವರು ಎಂದು ಕರೆಯಬಹುದಾಗಿದೆ. ಬೇಡಸಮುದಾಯ ಆಧುನಿಕ ನಾಗರೀಕತೆಗೆ ಎಷ್ಟೇ ಒಗ್ಗಿಕೊಂಡರೂ ಅವರಲ್ಲಿ ಮೂಲ ಸಂಸ್ಕೃತಿಯ ಅಂಶಗಳು ಇನ್ನೂ ಜೀವಂತವಾಗಿವೆ. ಅದರಲ್ಲಿ ಉಂಟಾಗಿರುವ ಈ ನಾಗರೀಕ, ಸಾಮಾಜಿಕ, ಸಾಂಸ್ಕೃತಿಕ ಪರಿವರ್ತನೆ ಇತರೆ ಬುಡಕಟ್ಟುಗಳಿಗೂ ಅನ್ವಯಿಸುವ ವಿಚಾರವಾಗಿದೆ. ಕರ್ನಾಟಕದ ಒಂದು ಪ್ರಮುಖ ಬುಡಕಟ್ಟಾಗಿರುವ ಬೇಡ ಸಮುದಾಯ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಜೀವನ ವಿವರಗಳನ್ನು ಮುಂದಿನ ಅಧ್ಯಾಯದಲ್ಲಿ ದಾಖಲಿಸಲಾಗಿದೆ.

ಮೂಲತಃ ಕಾಡಿನಲ್ಲಿ ವಾಸವಾಗಿದ್ದುಕೊಂಡು ಬೇಟೆಯ ವೃತ್ತಿಯಿಂದ ಬದುಕುವ ಜನಾಂಗವನ್ನು ಬೇಡಸಮುದಾಯ ಎಂದು ಕರೆಯಲಾಗಿದೆ. ನಾಗರೀಕತೆಯ ಬೆಳವಣಿಗೆಯ ಹಂತದಲ್ಲಿ ಇವರು ಗ್ರಾಮವಾಸಿಗಳಾಗಿ ಕೃಷಿ ಮತ್ತಿತ್ತರ ವೃತ್ತಿಗಳನ್ನು ಕೈಗೊಂಡರು. ಇವರಿಗೆ ಬೇರಾದ್ , ಕಿರಾತ್ , ಶಬರ, ವ್ಯಾಧ ಎಂಬ ಬೇರೆ-ಬೇರೆ ಹೆಸರುಗಳು ಉಂಟು.

ಬೇಡರು ಕಣ್ವ ಋಷಿಯ ವಂಶಜರೆಂದು ನಂಬಿಕೆಯಿದೆ. ಅದಕ್ಕಾಗಿಯೇ ಅವರು ತಮ್ಮನ್ನು ''ಕಾಣ್ವಮ್ '' ಕುಲದವರೆಂದು ಕರೆದುಕೊಳ್ಳುತ್ತಾರೆ. ತಮ್ಮ ವಂಶದ ಮೂಲಪುರುಷ ವಾಲ್ಮೀಕಿ ಮಹರ್ಷಿಯೆಂಬ ಇನ್ನೊಂದು ನಂಬಿಕೆಯೂ ಇರುವುದರಿಂದ ನಮ್ಮನ್ನು ವಾಲ್ಮೀಕಿ ಕ್ಷತ್ರಿಯರೆಂದೂ ಕರೆದುಕೊಳ್ಳುತ್ತಾರೆ. ಪೂರ್ವದಲ್ಲಿ ದಾರಿಹೋಕರನ್ನು ಹಿಡಿಸಿ ಅವರಿಂದ ವಸ್ತುಗಳನ್ನು ದೋಚಿಕೊಳ್ಳುತ್ತಿದ್ದರು. ತಮಿಳುನಾಡಿನಲ್ಲಿ ಆಗಿಹೋದ ೬೩ ಪುರಾತನ ಶಿವಶರಣರಲ್ಲಿ ಒಬ್ಬನಾಗಿರುವ ''ಬೇಡರ ಕಣ್ಣಯ್ಯ'' ಎನ್ನುವ ವ್ಯಕ್ತಿಯು ಈ ಜನಾಂಗದ ಆದರಣೀಯ ವ್ಯಕ್ತಿ.

ವಿದೇಶಿ ವಿದ್ವಾಂಸರಾದ ಬುಟಾನನ್‌ರವರು ''ಬೇಡರು ಮೂಲತಃ ದ್ರಾವಿಡ ಜನಾಂಗಕ್ಕೆ ಸೇರಿದವರಾಗಿರಬಹುದು ಎಂದು ಹೇಳಿದ್ದಾರೆ. ಉತ್ತರ ಮಲಬಾರಿನ ಪೆರಿಂಗಾಲ್ ಪೆಟೆವಾನ್ಸ್ ಅವರು ಟ್ರಿವೆಂಕೂರಿನ ಮಾಲಬೇದರ್ಸ್, ಸಿಲೋನಿನವೆಡ್ಡಾ ಮತ್ತು ಕರ್ನಾಟಕದ ಬೇಡರು ಒಂದೇ ಮೂಲದವರೆಂಬುದು ರೈಸ್ ಅವರ ಅಭಿಪ್ರಾಯವಾಗಿದೆ.'' ವ್ಯಾಪಾಕವಾದ ತೌಲಕಿನ ಅಧ್ಯಯನದ ಮೂಲಕ ಈ ಅಭಿಪ್ರಾಯ ರೂಪ ಪಡೆಯಬೇಕಿದೆ.

ನಮ್ಮ ದೇಶದಲ್ಲಿ ಬಹು ಪುರಾತನ ಕಾಲದಿಂದಲೂ ಈ ಜನಾಂಗ ಅಸ್ತಿತ್ವದಲ್ಲಿರುತ್ತದೆ ಎಂಬ ಬಗೆಗೆ ಅನುಮಾನವಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಪೌರಾಣಿಕ-ಸಾಂಸ್ಕೃತಿಕ ಹಿನ್ನೆಲೆಯ ಹಲವಾರು ಉಲ್ಲೇಖಗಳು ಉಪಲಬ್ಧವಿದೆ.

ಕನ್ನಡದ ಪ್ರಾಚೀನ ಕೃತಿ ವಡ್ಡಾರಾಧನೆಯಲ್ಲಿ ಈ ಜನಾಂಗಕ್ಕೆ ಸಂಬಂಧಿಸಿದ ಉಲ್ಲೇಖಗಳು ಇವೆ. ಇವುಗಳಲ್ಲಿ ಚಿಲಾತಪುತ್ರನ ಕಥೆ ಒಂದು. ಚಿಲಾತಪುತ್ರ ಎಂಬುದು ಸಂಸ್ಕೃತದ ಕಿರಾತಪುತ್ರ ಎಂಬುದರ ಪ್ರಾಕೃತ ರೂಪವೆಂದು

ವಿದ್ವಾಂಸರು ನಿರ್ಧರಿಸಿದ್ದಾರೆ. ಅದೇ ಗ್ರಂಥದ ವಿದ್ಯುಚ್ಚೋರನೆಂಬ ಕಥೆಯಲ್ಲಿ ಮದಂಡನೆಂಬ ತಳವಾರನ ಉಲ್ಲೇಖವಿದೆ. ತಳವಾರ, ಬೇಡ ಜನಾಂಗದ ಒಂದು ಉಪಪಂಗಡ ಆಗಿದೆ. ಇಲ್ಲಿ ತಳಾರ ಎಂದರೆ ನಗರ ರಕ್ಷಕನಾದ ಅಧಿಕಾರಿ. ಇದೇ ರೀತಿ ಸುಕುಮಾರ ಸ್ವಾಮಿಯ ಕಥೆಯಲ್ಲಿ ಬರುವ ಸುಧಾಮೆಯ ಉಪಕಥೆಯಲ್ಲಿಯೂ ತಳವಾರನ ಉಲ್ಲೇಖವಿದೆ. ಇದರಿಂದ ಕನ್ನಡ ವಡ್ಡಾರಾಧನೆಗೆ ಮೂಲ ಗ್ರಂಥವಾಗಿರುವ ಭಗವತೀ ಆರಾಧನೆಯ ಕಾಲಕ್ಕಾಗಲೇ ಈ ಜನಾಂಗವು ನಗರ ಜೀವನದಲ್ಲಿ ಮಿಳಿತವಾಗಿತ್ತು.

ಹನ್ನೆರಡನೆಯ ಶತಮಾನದ ಶರಣರಲ್ಲಿ ಕೆಲವರಾದರೂ ಬೇಡ ಜನಾಂದವರಿರಬೇಕೆಂದು ತೋರುತ್ತದೆ.

ಸೋಮಾಸಿಮಾರ, ಕಂಗುಲಿಯ ಕಲಿಯರು, ಇರಿಭಕ್ತ, ಕನ್ನಣ್ಣ ಇವರು ಬೇಡ ಜನಾಂಗಕ್ಕೆ ಸಂಬಂಧಿಸಿದ ಶರಣರು ಎಂದು ಊಹಿಸಲಾಗಿದೆ.

ಪ್ರಾಚೀನ ಕಾವ್ಯಗಳಲ್ಲಿ "ಮೃಗಯಾವಿನೋದ"ದ ವರ್ಣನೆ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಅಂಥಲ್ಲಿ ಬೇಡರ ಬಗೆಗಿನ ಸವಿವರ ವರ್ಣನೆಗಳು ಸೇರಿಕೊಂಡಿವೆ.

ಮೂಲತಃ ಬಲಿಷ್ಠರೂ, ಧೈರ್ಯಶಾಲಿಗಳೂ ಆಗಿದ್ದ ಬೇಡರನ್ನು ಸಾಮಂತರು, ಮಾಂಡಲಿಕರು, ಅರಸರು ತಮ್ಮ ಸೈನ್ಯಕ್ಕೆ ಸೇರಿಸಿಕೊಳ್ಳಲಾರಂಭಿಸಿದರು. ಎಷ್ಟೋ ರಾಜಮನೆತನಗಳು ಸೈನ್ಯದಲ್ಲಿ ಬೇಡ ಪಡೆಯೇ ಪ್ರಮುಖವಾಗಿತ್ತು. ನಿಷ್ಠಾವಂತ ಸೈನಿಕರಾಗಿ ಪ್ರಾಣದ ಹಂಗು ತೊರೆದು ಹೋರಾಡಿದ ಬೇಡರು ತಮ್ಮ ದೊರೆಗಳ ಮೆಚ್ಚಿಗೆ ವಿಶ್ವಾಸ ಗಳಿಸಿದರು. ಇದರ ಪರಿಣಾಮವಾಗಿ ಇವರಿಗೆ ಸೈನ್ಯದಲ್ಲಿ ಬೇರೆ-ಬೇರೆ ಅಧಿಕಾರಗಳು ಪ್ರಾಪ್ತವಾದವು. ಅನೇಕರು ಸೇನಾ ನಾಯಕರಾದರು. ಈ ಬೆಳವಣಿಗೆಯ ಹಂತದಲ್ಲಿ ಸೇನಾನಾಯಕರಾಗಿದ್ದ ಬೇಡ ಕುಲಕ್ಕೆ "ನಾಯಕ" ಎಂಬ ವಿಶೇಷಣ ಸೇರಿತು. ಮುಂದೆ ಅದು ಬೇಡ ಪದಕ್ಕೆ ಪರ್ಯಾಯವಾಗಿ ಬಳಕೆಗೆ ಬಂತು. ಇಂಥ ಬಲಿಷ್ಠ ಸೇನಾನಾಯಕರು ಕ್ರಮೇಣ ಚಿಕ್ಕಪುಟ್ಟ ಪಾಳೆಯಗಾರರಾದರು.

ಯುದ್ಧ ಕಲೆಯಲ್ಲಿ ನುರಿತವರೂ ಧೀರ ಯೋಧರೂ ಆಗಿದ್ದ ಬೇಡ ಕುಲದವರು ಕರ್ನಾಟಕದಲ್ಲಿಯ ಸೈನಿಕ ಜನಾಂಗಗಳಲ್ಲಿ ಬಹುಮುಖ್ಯರಾಗಿದ್ದರು. ಏಳನೆಯ ಶತಮಾನದಿಂದ ಇವರ ಪ್ರತ್ಯೇಕ ರಾಜ್ಯಗಳೇ ಇದ್ದವೆಂದು "ಗದ್ದೆಮನೆ ಶಾಸನ"ದಿಂದ ತಿಳಿದು ಬರುತ್ತದೆ. ಆ ಶಾಸನದಲ್ಲಿ "ಸ್ವಸ್ತಿಶ್ರೀ ಶೀಲ ಆದಿತ್ಯನ್ ದಿಶಾಮನ್ ಭಾಗವಾನ್ ಅಗ್ಗಳಕಣ್ಣನ್ ಪೇರಾಳ್ವವರೆ ಪೆಟ್ಟಿಣಿ ಸತ್ಯಾಂಕನ್ ಅಟ್ಟಿಳ್ಪಭಟನ್ ಬೆದರೆ ಮಹೇನ್ದ್ರನ್ ಬೇಡರಾಯನ ಮಲಪರ್ ಕಾಳೆಗದುಳೆವಿರುದು ಸ್ವರ್ಗಾಲಯಕ್ಕೆ ರಿದನ್" ಎಂದು ಬೇಡರು ವೀರವೃತ್ತಿಯನ್ನು ವರ್ಣಿಸಲಾಗಿದೆ.

ಆದಿಕಾವ್ಯವಾದ 'ರಾಮಾಯಣ'ದ ರಚನಕಾರ ವಾಲ್ಮೀಕಿಮುನಿ ಬೇಡರನ್ನು ಈತ ಪೂರ್ವಾಶ್ರಮದಲ್ಲಿ ದರೋಡೆಕೋರನಾಗಿದ್ದು ಸಪ್ತರ್ಷಿಗಳ ಪ್ರಭಾವದಿಂದಾಗಿ ತನ್ನ ಕ್ರೂರ ವೃತ್ತಿಯನ್ನು ತ್ಯಾಗಮಾಡಿದನು. ಆಮೇಲೆ ರಾಮಾಯಣ ರಚಿಸಿ ಆದಿಕವಿ ಎಂದು ಖ್ಯಾತನಾದನು. ಇದು ಪರಂಪರೆಯಾಗಿ ಬಂದ ಹೇಳಿಕೆ. ರಾಮಾಯಣದ ಕರ್ತೃತ್ವವನ್ನು ಕುರಿತಂತೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಬೇಡನಾಗಿದ್ದ ವಾಲ್ಮೀಕಿಯು ಅವಿರತ ಸಾಧನೆಯಿಂದ

ಆದಿಕವಿಯಾಗಿ ಬದಲಾವಣೆ ಹೊಂದಿದ. ಆತನ ಚರಿತ್ರೆಯಲ್ಲಿ ಹಲವಾರು ಭಾವುಕ ಅತಿಶಯೋಕ್ತಿಗಳು ರೂಢಿಗೆ ಬಂದುದು ಸ್ವಾಭಾವಿಕ. ವಿಶೇಷವಾಗಿ 'ರಾಮನಾಮ' ಮಹಿಮೆಯನ್ನು ಪ್ರತಿಷ್ಠಾಪಿಸಲೋಸುಗ ವಾಲ್ಮೀಕಿ ತನ್ನ ಪೂರ್ವಾಶ್ರಮದಲ್ಲಿ ದುಷ್ಟನಿದ್ದನೆಂದೂ ರಾಮನಾಮದ ಮಹಿಮೆಯಿಂದ ಋಷಿಯಾದನೆಂದೂ ಹೇಳುವುದು ಪ್ರಚಾರಕ್ಕೆ ಬಂದಂತೆ ತೋರುತ್ತಿದೆ. ಈ ಹೇಳಿಕೆಯಂತೆ ನಂಬುದಾದರೆ ವಾಲ್ಮೀಕಿಯು ಬೇಟೆಯೇ ಜೀವನ ವೃತ್ತಿಯಾಗಿ ಬೆಳೆಯಿತು. ಅವನ ತಂದೆ ಪ್ರಚೇತಸನು ಕಾಡನ್ನು ಕಡಿದು ಬಯಲು ಮಾಡಿದನು. ಪ್ರಚೇತಸನ ಹೆಂಡತಿ ವೃಷಕನ್ಯೆಯಾಗಿದ್ದಳು. ಮುಂತಾದ ವಿವರಗಳು ವಾಲ್ಮೀಕಿಯು ಕಾಡಿನಲ್ಲಿ ವಾಸವಾಗಿದ್ದ ಬೇಡನೆಂಬುದನ್ನು ಸೂಚಿಸುತ್ತದೆ.

ರಾಮಾಯಣದ ಶಬರಿ ಬೇಡ ಕುಲದವಳು. ಶಬರಿಯನ್ನು "ಬೇಡತಿ" ಎಂದು ರಾಮಾಯಣದಲ್ಲಿ ಕರೆಯಲಾಗಿದೆ. ರಾಮಯ ಭಕ್ತಳಾಗಿ ಪಂಪಾಕ್ಷೇತ್ರದ ಸಮೀಪ ಇವಳು ವಾಸವಾಗಿದ್ದಳು. ರಾಮ-ಲಕ್ಷ್ಮಣರು ಅಲ್ಲಿಗೆ ಆಗಮಿಸಿದಾಗ ಅವರಿಗೆ ಬೋರೆಯ ಹಣ್ಣುಗಳನ್ನು ನೀಡಿ ಸತ್ಕರಿಸಿದಳೆಂದೂ ಹೇಳಲಾಗಿದೆ.

ಮಹಾಭಾರತದಲ್ಲಿಯೂ ಬೇಡ ಜನಾಂಗದ ಉಲ್ಲೇಖಗಳು ಮಹತ್ವಪೂರ್ಣವಾಗಿದ್ದು ಸಂಖ್ಯೆಯ ದೃಷ್ಟಿಯಿಂದಲೂ ಹೆಚ್ಚಾಗಿವೆ. ಪುಲಿಂದ, ನಿಷಾದ, ಕಿರಾತ, ವ್ಯಾಧ ಮುಂತಾದ ಹೆಸರುಗಳಿಂದ ಅವರು ಕರೆಯಲ್ಪಟ್ಟಿದ್ದಾರೆ. ಬೇಡ ಕುಲದವರು ಪ್ರತ್ಯೇಕ ರಾಜ್ಯಗಳೇ ಇದ್ದ ಬಗೆಗೆ ಅದರಲ್ಲಿ ಆಧಾರಗಳಿವೆ. "ಏಕಲವ್ಯ"ನು ನಿಷಾದ ರಾಜನ ಮಗನಾಗಿದ್ದ ಎಂಬ ಸಂಗತಿ ಪ್ರಸಿದ್ಧವಾದುದು. ಅಲ್ಲದೆ ದ್ರೋಣಾಚಾರ್ಯರ ನೆಚ್ಚಿನ ಶಿಷ್ಯನಾಗಿ ಅಪೂರ್ವ ಮಾನವತಾ ಗುಣಗಳನ್ನು ರೂಢಿಸಿಕೊಂಡು ಜಗದ್ವಿಖ್ಯಾತನಾಗ ಬಗ್ಗೆ ಮಹಾಭಾರತದಲ್ಲಿನ ಅನೇಕ ಉಲ್ಲೇಖಗಳು ಇದನ್ನು ದೃಢಪಡಿಸುತ್ತಿವೆ.

ಶಿವನ ಇಪ್ಪತ್ತೈದು ಲೀಲೆಗಳನ್ನು ಒಂದಾದ ಕಿರಾತರುದ್ರ ಲೀಲೆಯ ಪ್ರಸಂಗವು ಮಹಾಭಾರತದ ಅರಣ್ಯಕ ಪರ್ವದಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿದೆ. ಶಿವನ ಬೇಡ ವೇಷದಿಂದ ಮೂಷಕ ದಾನವನ್ನು ಸಂಹರಿಸಿ ಅರ್ಜುನನಿಗೆ ಪಾಶುಪತಾಸ್ತ್ರ ದಾನ ಮಾಡಿದ್ದು ಪ್ರಸಿದ್ಧವಾದ ಅಖ್ಯಾಯಿಕೆ. ರಾಮಾಯಣ-ಮಹಾಭಾರತಗಳಲ್ಲದೇ ಇನ್ನಿತರ ಪ್ರಾಚೀನ ಗ್ರಂಥಗಳಾದ ಅರ್ಥಶಾಸ್ತ್ರ-ಸ್ಮೃತಿಗಳು, ಭಾಸ-ಕಾಳಿದಾನಂಥ ಕವಿ-ಕೃತಿಗಳೂ ಕೂಪಾ ಬೇಡ ಜನಾಂಗಕ್ಕೆ ಸಂಬಂಧಿಸಿದ ವಿವರಗಳನ್ನು ಕೊಡುತ್ತವೆ. ಗ್ರಂಥಸ್ತ ಸಾಹಿತ್ಯವು ಇವರ ಬಗೆಗೆ ಹೆಚ್ಚಿನ ವಿವರಗಳನ್ನು ಕೊಡುವುದಿಲ್ಲ. ಇವರ ಬೇಟೆಗಾರಿಕೆಯನ್ನು ಮಾತ್ರ ಕೆಲ ಗ್ರಂಥಗಳು ಉಲ್ಲೇಖಿಸುತ್ತವೆ. ಹೀಗೆ ಕರ್ನಾಟಕದಲ್ಲಿ ಈ ಜನಾಂಗವನ್ನು ಕುರಿತಂತೆ ಅತ್ಯಂತ ಪ್ರಾಚೀನ ಮತ್ತು ಖಚಿತವಾದ ಉಲ್ಲೇಖವೆಂದರೆ ಇದೆ ಇರಬೇಕು. ಶಾಸನಗಳಿರುವಂತೆ "ಬೇಡರಾಜ" ಎಂದರೆ ಬೇಡರ ರಾಜನ ಸ್ಪಷ್ಟ ನಿರ್ದೇಶನವಿದೆ.

ತರುವಾಯ ರಾಜಮನೆತನಗಳಲ್ಲಿ ಕಂಪಲಿ ರಾಜ್ಯದ ಕಂಪಿಲರಾಯ ಹಾಗೂ ಇವರ ಮಗ ಕುಮಾರರಾಮನು ಕೂಡ ಬೇಡ ಜನಾಂಗಕ್ಕೆ ಸಂಬಂಧಿಸಿದವರಾಗಿದ್ದಾರೆ. ಅಲ್ಲದೆ ಅನೇಕ ಪಾಳೆಯಗಾರರೂ ಈ ಜನಾಂಗದಲ್ಲಿದ್ದರೆಂಬುದಕ್ಕೆ ನಿದರ್ಶನಗಳುಂಟು. ವಿಜಯನಗರ ಸಾಮ್ರಾಜ್ಯಕ್ಕೆ ಕಾಲಕ್ಕೆ ಸೇನೆಯ ಗೌರವಾನ್ವಿತ ಸ್ಥಾನಗಳಲ್ಲಿ ಹೆಚ್ಚಿನ ಹುದ್ದೆಗಳನ್ನು ಬೇಡ ಜನಾಂಗದವರು ಹೊಂದಿದ್ದರು. ನಂತರ ಹೈದರಾಲಿ, ಟಿಪ್ಪು ಕಾಲಕ್ಕೆ ಅವರ ಸೈನ್ಯದ ಮುಂಚೂಣಿಯ ನಾಯಕರಾಗಿ

ಸೇವೆ ಸಲ್ಲಿಸಿದರು. ವಿಜಯನಗರದ ಪತನಾಂತರ ಕರ್ನಾಟಕದ ಪ್ರಮುಖ ಪಾಳೆಯಗಾರನಾಗಿ ಚಿತ್ರದುರ್ಗದಲ್ಲಿಯೂ ಆಳ್ವಿಕೆ ನಡೆಸಿದರು.

ಕಾಲಾಂತರದಲ್ಲಿ ವೃತ್ತಿಯ ವೈವಿಧ್ಯತೆಯಿಂದಾಗಿ ಮತ್ತು ಇತರೆ ಕಾರಣಗಳಿಂದಾಗಿ ಅನೇಕ ಹೊಸ ಹೆಸರುಗಳು ರೂಢಿಗೆ ಬಂದವು. ಕಾಡುಗಳಿದ್ದು ಪಶುಪಾಲನೆಯನ್ನು ಮುಖ್ಯ ವೃತ್ತಿಯಾಗಿ ಅವಲಂಬಿಸಿದರು. ಕಾಡು ಸಂಚರೆಂದೂ, ಮೂಗನಾಯಕರೆಂದೂ, ಅನುಯಾಯಿಗಳು ನಾಯಕರೆಂದೂ ರಾಜಕೀಯ ಅಧಿಕಾರವನ್ನು ಸ್ಥಾಪಿಸಿಕೊಂಡವರು ಪಾಳೆಗಾರ ಅಥವಾ ದೊರೆಗಳೆಂದು ಪಾಳೆಗಾಲರ ಅಂತರಂಗದ ಸೇವಕರಂತಿದ್ದವರು ರಾಜಪರಿವಾರದವರೆಂದೂ ಊರಿನ ರಕ್ಷಣೆ ಕಾರ್ಯಕ್ಕೆ ತೊಡಗಿಸಿಕೊಂಡವರು ತಳವಾರರೆಂದು ಕರೆದುಕೊಂಡಿದ್ದಾರೆ.

ಬೇಡ ಜನಾಂಗವು ಕರ್ನಾಟಕದ ತುಂಬೆಲ್ಲಾ ವಾಸಮಾಡುವುದು ಕಂಡುಬಂದರೂ ಬಳ್ಳಾರಿ, ಬೆಳಗಾವಿ, ಧಾರವಾಡ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ ಹೆಚ್ಚಾಗಿ ಚಿತ್ರದುರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ದಟ್ಟವಾಗಿಯೂ ಇರುವುದು ಕಂಡುಬರುತ್ತದೆ. ಗುಡ್ಡದ ಸಾಲುಗಳ ಒತ್ತಿನಲ್ಲಿರುವ ಹಲವಾರು ಊರುಗಳು ಸಂಪೂರ್ಣ ಬೇಡ ಜನಾಂಗದವರೇ ವಾಸವಾಗಿರುವ ಹಳ್ಳಿಗಳಾಗಿವೆ. ಬೇಡರ ಕರ್ನಾಟಕದ ಪಶ್ಚಿಮ ಘಟ್ಟದಲ್ಲಿ ವಾಸವಾಗಿಲ್ಲ. ಬಯಲು ಸೀಮೆಯಲ್ಲಿ ಅಲ್ಲಲ್ಲಿ ಹಬ್ಬಿರುವ ಗುಡ್ಡದ ಹರಿಗಳಲ್ಲಿ ವಾಸವಾಗಿದ್ದಾರೆ.

ಕ್ರಿ.ಶ. ೧೮೦೦ರಲ್ಲಿ ಭಾರತಕ್ಕೆ ಅಗಮಿಸಿದ ವಿದೇಶಿ ವಿದ್ವಾಂಸನ ಬುಟಾನನು ಬೇಡರ ಕುರಿತು ಈ ರೀತಿ ಹೇಳಿದ್ದಾನೆ. ಚಿತ್ರದುರ್ಗ ಜಿಲ್ಲೆಯ ಉತ್ತರ ದಿಕ್ಕಿನ ಗುಡ್ಡಗಾಡು ತೀರದ ಪ್ರದೇಶದಲ್ಲಿ ವ್ಯವಸಾಯಕ್ಕಾಗಿಯೇ ಸೀಮಿತವಾದ ಪ್ರದೇಶಗಳಲ್ಲಿ ಬೇಟೆಯಾಡುವ ಬೇಡರು ವಾಸಿಸುತ್ತಿದ್ದರು. ಟಿಪ್ಪುವಿನ ಕಾಲಕ್ಕೆ ಅವರು ಸೇನೆಯಲ್ಲಿದ್ದು ೪-೫ ಪಗಾರವನ್ನು ಹೊಂದಿದ್ದರು. ಅವರು ಬೇಟೆಯ ವೃತ್ತಿಗೆ ಪರಿಣಿತರಾದುರಿಂದ ಸೈನಿಕ ಕಾರ್ಯಚರಣೆಯಲ್ಲಿ ಮತ್ತು ನಿಶ್ಚಿತವಾದ ವಿಜಯವನ್ನು ಸಾಧಿಸುವಲ್ಲಿ ಸಹಕಾರಿಗಳಾಗಿದ್ದರು.

ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಅನೇಕ ಹೋರಾಟಗಳಲ್ಲಿ ಅವರಿಂದ ಯಶಸ್ಸನ್ನು ಪಡೆದಿದ್ದರು. ಬೇಪ ಜನಾಂಗದವರು ಸದ್ಯಕ್ಕೆ ವ್ಯವಸಾಯವನ್ನೇ ಅವಲಂಬಿಸಿ ಕಾಲಯಾಪನೆ ಮಾಡುತ್ತಿದ್ದಾರೆ. ಅವರು ಅಂದಿನ ಕಾಲಕ್ಕೆ ಬೇಟೆಗಾಗಿ ಬಳಸುತ್ತಿದ್ದ ಆಯುಧಗಳನ್ನು ಇಂದಿಗೂ ಇಟ್ಟುಕೊಂಡಿದ್ದಾರೆ. ಬನವಾಸಿಯ ಕದಂಬರೂ ಈ ಬೇಪ ಜನಾಂಗದವರು.

ಮತ್ತೊಬ್ಬ ವಿದೇಶಿಯನಾದ ವಿಲ್ಕ್ಸನು ಃಭೋಯಾಗಳು ಮತ್ತು ಬೇಡರು ಒಂದೇ. ಇವರುಗಳು ಬಹಳ ತಾಳ್ಮೆಯುಳ್ಳವರು ಹಾಗೂ ಹಂತ-ಹಂತವಾಗಿ ಉನ್ನತ ಹುದ್ದೆಗಳನ್ನು ಪಡೆಯುತ್ತಿದ್ದರು. ಹೈದರಾಲಿಯ ಕಾಲಕ್ಕೆ ಇವರು ಇಸ್ಲಾಂ ಧರ್ಮದ ಮತಾಂತರಗೊಳ್ಳಲಾರಂಭಿಸಿದರು. ಅವರ ಸೇನೆಯಲ್ಲಿ ಇವರದೇ ಪ್ರತ್ಯೇಕ ತುಕಡಿಗಳನ್ನು ರಚಿಸಲಾಗುತ್ತಿತ್ತು ಎಂದು ಹೇಳಿದ್ದಾನೆ.

ರೈಸ್ ಅವರು ಈ ತುಕಡಿಗಳನ್ನು ಬೇಡರ, ಭೋಯಾ ಅಥವಾ ಚೇಲಾ ಎಂದು ಸಂಬೋಧಿಸಲಾಗಿತ್ತು. ಅಲ್ಲದೆ ನಾಯಕ, ಬಾರಿಕೆ, ಕಣ್ಣಯ್ಯಗಳೆಂದು ಕರೆಯಲಾಗುತ್ತಿತ್ತು. ಈ ಬೇಡರು ಬೇರೆ-ಬೇರೆ ಜನಾಂಗದ ಸಂಪ್ರದಾಯ ಹಾಗೂ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದಾರೆ. ಅವರ ಸ್ಥೂಲಕಾಯ, ದಪ್ಪನೆಯ ಮೂಗು, ಗುಂಗುರು ಕೂದಲುಗಳನ್ನು ನೋಡಿದಾಗ ಬಹುಶಃ ಅವರು ಮೂಲತಃ ಅನಾರ್ಯ ಎಂದು ಸಾಬೀತಾಗುತ್ತದೆ ಎಂದು ಹೇಳಿದ್ದಾರೆ.

ಬೇಡ ಸಮುದಾಯದ ಉಪ ಪಂಗಡಗಳು

ಒಂದು ಜನಾಂಗ ಒಂದೇ ಭೌಗೋಳಿಕ (ಸಮುದಾಯ) ಪರಿಸರದಲ್ಲಿ ಒಟ್ಟಿಗೆ ಕೂಡಿ ಇದ್ದಾಗ ಅವರಲ್ಲಿ ವೈವಿಧ್ಯತೆಗಳು ಉಂಟಾಗುವುದಿಲ್ಲ. ಭೌಗೋಳಿಕ-ಸಾಮಾಜಿಕ-ಆರ್ಥಿಕ ಕಾರಣಗಳಿಂದಾಗಿ ಒಂದೇ ಜನಾಂಗದ ಬೇರೆ-ಬೇರೆ ಗುಂಪುಗಳು ವಿಭಿನ್ನ ಪರಿಸರದಲ್ಲಿ ವಾಸಿಸಲು ಪ್ರಾರಂಭಿಸಿದಾಗ ಭಿನ್ನತೆಗಳು ಗೋಚರಿಸುತ್ತವೆ. ಕಾಲಾಂತರದಲ್ಲಿ ಈ ಭಿನ್ನತೆಗಳ ಪ್ರಮಾಣ ಬೆಳೆದು ಅವೇ ಉಪಪಂಗಡಗಳೆನಿಸುತ್ತವೆ. ಹೊರನೋಟಕ್ಕೆ ಈ ಉಪಪಂಗಡಗಳಲ್ಲಿ ಭಿನ್ನತೆಗಳಿದ್ದರೂ ಅವು ಮೂಲತಃ ಕೆಲವು ಸಾಮಾನ್ಯ ಅಂಶಗಳನ್ನು ಒಳಗೊಂಡಿರುತ್ತವೆ. ಬೇಡ ಜನಾಂಗವೂ ಅದಕ್ಕೆ ಹೊರತಾದುದಲ್ಲ. ಸದ್ಯಕ್ಕೆ ಬೇಡ ಜನಾಂಗದಲ್ಲಿ ಈ ಕೆಳಗಿನ ಉಪ ಪಂಗಡಗಳನ್ನು ಗುರುತಿಸಬಹುದು.

ನಾಯಕ (ಬೇಡ)

ಊರು ಬೇಡ (ನಾಯಕ) **ಮ್ಯಾಸನಾಯಕ (ಮ್ಯಾಸ ಬೇಡ)**

ವಾಲ್ಮೀಕಿ

ತಳವಾರ

ನಾಯಕ ಮಕ್ಕಳು

ಪರಿವಾರ

ನಾಯಕ ವಾಡಿ

ಬೇರದ್

ವೇದನ್

ಭೋಯಾ

ರಾಮೋಶಿ

ಮತ್ತೊಂದು ಸಂಗ್ರಹಣದ ಪ್ರಕಾರ

ಮ್ಯಾಸನಾಯಕರು

ಊರು ನಾಯಕರು

ಮೇಲ್ಕಾಣಿಸಿದ ಎಲ್ಲ ಉಪ ಪಂಗಡಳಿಗೆ ಆಯಾ ಹೆಸರು ಬರಲು ಔದ್ಯೋಗಿಕ ಹಾಗೂ ರಾಜಕೀಯ ಹಿನ್ನೆಲೆಗಳಿರುವುದನ್ನು ಗುರುತಿಸಬಹುದು.

ವಾಲ್ಮೀಕಿ : ರಾಮಾಯಣ ಕಾವ್ಯದ ಕರ್ತೃ ಆದ ವ್ಯಾಸನಾಗಿದ್ದ ವಾಲ್ಮೀಕಿ ತಮ್ಮ ಪ್ರಸಿದ್ಧ ಪೂರ್ವಜನೆಂದು ಭಾವಿಸಿದ ಒಂದು ಪಂಗಡ ತಮ್ಮನ್ನು ವಾಲ್ಮೀಕಿಗಳೆಂದು ಕರೆದುಕೊಂಡರು.

ತಳವಾರ

ಸೇವಾ ವರ್ಗವನ್ನು ಸೂಚಿಸುವ ಪದವಾಗಿದೆ. ತಳವಾರ ಎಂಬುದು ಮೂಲತ: ತಲಕಾರ ಎಂಬುದರಿಂದ ಬಂದುದು ಆರಕ್ಷಕರು ಎಂಬ ಅರ್ಥದಲ್ಲಿ ಬಳಕೆಯಾಗುತ್ತಿತ್ತು. ಇದೇ ಅರ್ಥದಲ್ಲಿ ಹಳೆಗನ್ನಡದಲ್ಲಿಯ ತಳಾ'ಮ ತಳಾವರ ಎಂಬ ರೂಪದಲ್ಲಿ ಪ್ರಯೋಗಗೊಳ್ಳುತ್ತಿತ್ತು. ತಳರಾಯ ಎಂದರೆ ಉತ್ಪನ್ನ ಅಥವಾ ಕರ ಎಂದರ್ಥ ಉಂಟು. ಹಗಲಿರುಳು ಗ್ರಾಮರಕ್ಷಣೆ ಕಾರ್ಯಕ್ಕಾಗಿ ನಿಯಮಿಸಲ್ಪಟ್ಟರೆ ಈ ಕಾಯಕವನ್ನು ಒಪ್ಪಿಕೊಂಡವರ ಸಂತತಿಯವನಿಗೆ ತಳವಾರ ಎಂದು ಕರೆಯುತ್ತಾರೆ.

ನಾಯಕ ಮಕ್ಕಳು

ರಾಜಕೀಯ ಬೆಳವಣಿಗೆಯ ಹಂತದಲ್ಲಿ ದೊರೆಯ ನಾಯಕ ಸ್ಥಾನದಿಂದ ನಾಯಕರಾಗಿದ್ದ ವಂಶಸ್ಥರ ಕುಟುಂಬಕ್ಕೆ ನಾಯಕ ಮಕ್ಕಳು ಎಂದು ಕರೆಯಲ್ಪಡುವರು.

ಪರಿವಾರ

ಪಾಳೆಗಾರರ ಆಸ್ಥಾನದಲ್ಲಿ ಅಂತರಂಗ ಸೇವಕರಂತೆ ಸಮೂಹದವರನ್ನು ಪರಿವಾರದವರೆಂದು ಕರೆಯಲಾಗುತ್ತದೆ.

ಬೇರದ್ ವೇದನ್

ಇವುಗಳ ಮೂಲಾರ್ಥ ಬಹುಶಃ ಬೇಟೆಯಾಡುವುದು ಎಂದು ಬಹು ದಿನಗಳವರೆಗೆ ಬೇಟೆ ವೃತ್ತಿಯಲ್ಲಿ ಉಳಿದುಕೊಂಡು ಸಮಾಜಕ್ಕೆ ಈ ಪದನಾಮಗಳು ಉಳಿದುಕೊಂಡಿವೆ.

ಭೋಯಿ

ಭೋಯಿ ಅಥವಾ ಭೋವ ಎಂದರೆ ಮೇಣೆ, ಮುಂತಾದ ಭಾರಗಳನ್ನು ಹೊರುವ ಸಮೂಹ ಎಂದರ್ಥ.

ರಾಮೋಶಿ

ಇದು ಸಾಂಸ್ಕೃತಿಕ ಸ್ತರ ಸೂಚಿಸುವ ಪದವಾಗಿದೆ. ಪ್ರಸಿದ್ಧ ಕವಿ ವಾಲ್ಮೀಕಿ ರಚನೆಯ ರಾಮಾಯಣದ ಕಥಾನಾಯಕರಾದ ರಾಮನೇ ತಮ್ಮ ಮೂಲಪುರುಷ ಎಂದು ಭಾವಿಸುವ ವರ್ಗಕ್ಕೆ 'ರಾಮೋಶಿ' ಎಂದು ಕರೆಯಲಾಗುತ್ತದೆ

ನಾಯಕ (ಬೇಡ)

ಜನಾಂಗದ ಉಪ ಪಂಗಡ ಕುರಿತು ವಿದ್ವಾಂಸರ ಎಡ್ಗರ್ ಥರಸ್ಟನ್ (Edger Turston) :-

Bedos are split two main divisions. of 'URU' or Village men and myasa or gras-lan-men and each. of these divisions is any in sub divided. into a number of exogamous. Bedags four of the best known of these sub divisons are yammalavara or buffalomen. Mandalavara or men of the herd Pulavaru or F lower men and minalavara of F lshmen ಹೀಗೆ ಅಭಿಪ್ರಾಯಪಡಿಸಿದ್ದಾರೆ.

ಕಾಡುಗಳಿದ್ದು ಪ್ರಾಣಿಗಳನ್ನು ಕೊಂದು ಪಶುಪಾಲನೆಯನ್ನು ಮುಖ್ಯ ವೃತ್ತಿಯಾಗಿ ಅವಲಂಬಿಸಿದವರು ತಮ್ಮ ಸಾಕುಪ್ರಾಣಿಗಳನ್ನು ಕಾಡಿನಿಂದ ಕಾಡಿಗೆ ಅಟ್ಟಿಕೊಂಡು ಹೋಗಿ ಪೋಷಿಸುತ್ತಿದ್ದುದರಿಂದ ಅಂತಹವರನ್ನು 'ಕಾಡು ಸಂಚರು' ಎಂದು ಕರೆಯುತ್ತಾರೆ. ಆದರೆ ಈ ಸೂಚಿತ ಜನಾಂಗವು ಕರ್ನಾಟಕದಲ್ಲಿ ಕಾಣಸಿಗದೆ ಆಂಧ್ರಪ್ರದೇಶದ ಗುಡ್ಡಗಾಡಿನಲ್ಲಿ ವಾಸಿಸಿರುವುದಾಗಿ ತಿಳಿದುಬರುತ್ತದೆ. ಒಂದು ಗುಂಪಿನಲ್ಲಿನ ಕೆಲವರು ತಮ್ಮ ಪಶುಗಳನ್ನು ಅಟ್ಟಿಕೊಂಡು ಬೇಟೆಯಾಡುತ್ತಾ ಅಡವಿಯತ್ತ ಅಲೆದರು. ಈ ತೆರನಾಗಿ ಪಶುಗಳನ್ನು ಮೇಯಿಸುತ್ತ ಒಂದು ಗುಂಪು ಹೊರಟರು. ಈ ಗುಂಪನ್ನು ಮೇಯಿಸುವವರು ಮ್ಯಾಸರು ಎಂದು ಕರೆಯಲ್ಪಟ್ಟಿದೆ.

ಬೇಡರು (ಊರ ನಾಯಕರು)

ಊರುಗಳಲ್ಲಿ ವಾಸಿಸುವುದರಿಂದಲೇ ಇವರಿಗೆ ಊರು ನಾಯಕರು ಎಂದು ಹೆಸರು ಬಂದಿರಬೇಕು. ಮೂಲದಲ್ಲಿದ್ದ ಪಶುಪಾಲನೆ, ಬೇಟೆಗಾರಿಕೆ, ಪಾಳೇಗಾರಿಕೆಗಳು ಕ್ರಮೇಣ ಕಡಿಮೆಯಾಗಿರುವುದರಿಂದ ಇಂದು ನಾಗರಿಕತೆಯ ಬದುಕಿಗೆ ಹತ್ತಿರವಾಗಿ ನಾನಾ ಉದ್ಯೋಗಗಳನ್ನು ಕೈಗೊಂಡು ಬದುಕುತ್ತಿದ್ದಾರೆ.

ಬೇಡ ಸಮುದಾಯ ಜನರ ರಾಜಕೀಯ ಸ್ಥಾನಮಾನ

ಅರಣ್ಯ ವಾಸಿಗಳಾಗಿದ್ದರಿಂದ ಬೇಟೆ ವೃತ್ತಿಯ ಉಪಜೀವನವಾಗಿರುವುದರಿಂದ ಧೀರರು ನುರಿತ ಹೋರಾಟಗಾರಾಗಿದ್ದುದರಿಂದ ಸೈನ್ಯದಲ್ಲಿ ಇವರಿಗೆ ಆದ್ಯತೆ ದೊರೆಯುತ್ತ ಬಂದಿತ್ತು. ಕಂಪಲಿ ರಾಜ್ಯದ ಕಂಪಿಲರಾಯನು ಬೇಡರವನು. ಕುಮ್ಮಟದುರ್ಗದಲ್ಲಿದ್ದು ಮುಸ್ಲಿಂರ ಆಕ್ರಮಣವನ್ನು ನಿಗ್ರಹಿಸಿದನು. ಈತನ ಮಗ ಕುಮಾರರಾಮನು ತನ್ನ ಶೀಲ ಮತ್ತು ಪರಾಕ್ರಮಕ್ಕಾಗಿ ಪ್ರಖ್ಯಾತನಾಗಿದ್ದಾನೆ. ಹೊಯ್ಸಳ ಮತ್ತು ದೆಹಲಿಯ ಸುಲ್ತಾನರ ಸೈನ್ಯಗಳನ್ನು ಸೋಲಿಸಿದ ಕೀರ್ತಿಗೆ ಪಾತ್ರನಾಗಿದ್ದಾನೆ. ಅಲ್ಲದೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾನೆ.

ವಿಜಯನಗರ ರಾಜ್ಯದ ಕಾಲದಲ್ಲಿ ಕರ್ನಾಟಕದ ಅನೇಕ ಕಡೆ ಪಾಳೆಯಪಟ್ಟುಗಳು ಹರಡಿದ್ದವು. ಈ ಪಾಳೆಯಪಟ್ಟುಗಳ ಅಧಿಪತಿಗಳಲ್ಲಿ ಕೆಲವರು ಬೇಡ ಜನಾಂಗದವರಿದ್ದರೆಂದು ತಿಳಿಯುತ್ತದೆ. ತಿರುಮಲರಾಯನನ್ನು

ತನ್ನ ಚಿಕ್ಕದೇವರಾಯನ ವಂಶಾವಳಿಯಲ್ಲಿ ಚಿಂತಕಲ್ಲು ಚಿಕ್ಕನಾಯಕನಹಳ್ಳಿ ಬಾಣಾವರು ಬಸವ ಪಟ್ಟಣ ಸೀರೆ (ಸಿರಾ) ಮುಂತಾದ ಪಟ್ಟಣಗಳಲ್ಲಿ ಬೇಡರು ಪಾಳೆಯಪಟ್ಟಗಾರರಾಗಿ ಆಳುತ್ತಿದ್ದರು ಎಂಬುದು ತಿಳಿಯುತ್ತದೆ.

ಸೀರೆ (ಸಿರಾ)

ಹಲಗಲಿಯ ಬೇಡರು ಬ್ರಿಟೀಷರ ವಿರುದ್ಧ ಒಂದಾಯ ಮಾಡಿ ಪ್ರಸಿದ್ಧರಾಗಿದ್ದಾರೆ. ತಮ್ಮ ಶಸ್ತ್ರಗಳನ್ನು ಒಪ್ಪಿಸಬೇಕಂದಾಗ ಅದಕ್ಕೊಪ್ಪದೆ ವೀರಾವೇಶದಿಂದ ಹೋರಾಡಿದರು. ಸಿಂಧೂರ ಲಕ್ಷ್ಮಣನು ಹಲವು ಕಾಲ ಬ್ರಿಟೀಷರ ವಿರುದ್ಧ ಹೋರಾಡಿದನು. ಸಿಂಹದಂತೆ ಸಂಚರಿಸುತ್ತಿದ್ದ ಇವನನ್ನು ಬ್ರಿಟೀಷರು ಮೋಸದಿಂದ ಸೆರೆಹಿಡಿದು ಘಟನೆಗಳ ಉಲ್ಲೇಖಗಳ ಇತಿಹಾಸದಲ್ಲಿ ಇನ್ನೂ ಉಳಿದುಕೊಂಡಿದೆ. ಹೀಗೆ ಬೇಡ ಜನಾಂಗಕ್ಕೆ ಸೇರಿದ ಇನ್ನೂ ಹಲವಾರು ಚಿಕ್ಕ ಪುಟ್ಟ ಪಾಳೆಯಗಾರರು ಕರ್ನಾಟಕ ಹಾಗೂ ನೆರೆಹೊರೆ ರಾಜ್ಯಗಳಲ್ಲಿ ಆಳಿ ಹೋಗಿರಬೇಕು.

ಊರ ನಾಯಕರಲ್ಲಿಯೂ ಕೆಲವು ಉಪ ಪಂಗಡಗಳನ್ನು ಕಾಣುತ್ತೇವೆ. ಬೇಟೆ ಹಾಗೂ ಯುದ್ಧದಲ್ಲಿ ಇತರೇ ಉದ್ಯೋಗವನ್ನು ಸೂಚಿಸುವ ಅರ್ಥದಿಂದ ಕೆಲವು ಗುಂಪುಗಳಿಗೆ ಆಯಾ ಹೆಸರುಗಳು ಬಂದಿವೆ.

ಒಂದು ಸಂಪ್ರದಾಯಿಕ ವಿಶ್ಲೇಷಣೆ ಹೀಗಿದೆ : ವಾಲ್ಮೀಕಿಯು ಹನ್ನೆರಡು ಮಕ್ಕಳಿಂದ ಬೆಳೆದ ಸಂತತಿಯನ್ನು ಕಲಾಂತರದಲ್ಲಿ ತಮ್ಮಲಿನ ಭಿನ್ನಾಭಿಪ್ರಾಯಗಳಿಂದಾಗಿ ಹೊಡೆದಾಟ ಬಡಿದಾಟಗಳಲ್ಲಿ ತೊಡಗಿ ೬ ಮಂದಿ ಸಾವಿಗೀಡಾದರು. ಇವರಲ್ಲಿ ಹಿರಿಯವನು ಮಂದಲ ಮಣ್ಣೆಭಟ್ಟ ರಾಜ ಎನ್ನುವವನು ಹೊಡೆದಾಟದ ಸ್ಥಳಕ್ಕೆ ಹೋಗಿ ತಾನೇ ಅವರನ್ನು ಬಂಧಿಸಲು ಪ್ರಯತ್ನಿಸುತ್ತಾನೆ. ಆಗ ಇವನನ್ನು ನೋಡಿದ ಕೆಲವರು ಅವನಿಗೆ ಹೆದರಿ ಅಲ್ಲಿಂದ ಕಾಲ್ಕಿತ್ತು ಅಲ್ಲಲ್ಲಿಯೇ ಅಡಗಿಕೊಳ್ಳುತ್ತಾರೆ. ಆಗ ಮಣಿಭಟ್ಟ ರಾಜನು ಅಡಗಿಕೊಂಡು ಸ್ಥಳದಲ್ಲಿಯೇ ಅವರನ್ನು ಬೇರೆ ಬೇರೆ ಗುಂಪುಗಳನ್ನಾಗಿ ಪ್ರತ್ಯೇಕಿಸಿ ಅಲ್ಲಿಯೇ ವಾಸಿಸಲು ನಿರ್ದೇಶಿಸುತ್ತಾನೆ. ಅಲ್ಲದೇ ಮಂದಲ ಮಣ್ಣೆಭಟ್ಟ ರಾಜನು ಅವರಿಗೆ ಮುಖ್ಯಸ್ಥನಾಗುತ್ತಾನೆ. ಈ ಹಿನ್ನೆಲೆಯಿಂದ ಇಂದೂ ಬೇಡರ ಮದುವೆಗಳಲ್ಲಿ ಮೊದಲು ಮಣ್ಣೆಭಟ್ಟ ರಾಜನ ಹೆಸರಿಗೆ ವೀಳ್ಯೆಯನ್ನು ಎನ್ನುತ್ತಾರೆ.

ವಿವಾಹ ಪದ್ಧತಿ

ಒಂದು ಗೋತ್ರಕ್ಕೆ ಸಂಬಂಧಿಸಿದ ಗಂಡು ಹೆಣ್ಣುಗಳಲ್ಲಿ ಮದುವೆಯನ್ನು ನಿಷೇಧಿಸಲಾಗಿದೆ. ವಯಸ್ಕ ಮದುವೆಗೆ ಹೆಚ್ಚಿನ ಪ್ರಾತಿನಿಧ್ಯತೆವಿದ್ದರೆ ಬಾಲ್ಯ ವಿವಾಹಗಳೂ ನಡೆಯುತ್ತವೆ. ಬಹುಪತ್ನಿತ್ವ ರೂಢಿಯಲ್ಲಿ ಇದೆ.

ಆಚರಣೆಗಳು

ಗಂಡನ್ನು ಬೀಸುವಕಲ್ಲಿನ ಮೇಲೆ ನಿಲ್ಲಿಸುತ್ತಾರೆ. ಮದುಮಗಳೂ ಜೋಳ ತುಂಬಿದ ಪುಟ್ಟಿಯಲ್ಲಿ ನಿಲ್ಲಿಸುತ್ತಾರೆ. ಈ ಪುಟ್ಟಿಗೆ ಮಟ್ಟಿಕಿಪುಟ್ಟಿ ಎಂದು ಕರೆಯುತ್ತಾರೆ. ಆಚರಣೆಗೆ ಮಟ್ಟಿಕ್ಕಿ ಪುಟ್ಟಿ ಕಾರ್ಯವೆಂತಲೂ ಕರೆಯುವುದುಂಟು. ಮದುವೆಯ ಮನೆಯಿಂದ ಮದುವಣಿಗನನ್ನು ಎತ್ತಿನ ಮೇಲೆ ಕುಳ್ಳಿರಿಸಿಕೊಂಡು ಕುಲದೇವರಾದ ಹನುಮಂತ ದೇವರ

ಗುಡಿಗೆ ಹೋಗಿ ಬರುತ್ತಾರೆ. ಈ ಕಾರ್ಯಕ್ಕೆ ದಾರಿ ಎತ್ತಿನ ಕಾರ್ಯ ಎಂದು ಕರೆಯುತ್ತಾರೆ. ಹೆಚ್ಚಾಗಿ ಹೆಣ್ಣಿನ ಮನೆ ಮುಂದೆ ಮದುವೆ ಕಾರ್ಯ ನಡೆಯುತ್ತದೆ. ವಧು ವರರ ನಡುವೆ ಬಟ್ಟೆ, ಪಂಚೆ ಅಡ್ಡಲಾಗಿ ಇಡಲಾಗುತ್ತದೆ. ಮದುವೆ ಮುಹೂರ್ತಕ್ಕೆ ವೀರಶೈವ ಧರ್ಮಗುರುಗಳನ್ನು ಆಮಂತ್ರಿಸುತ್ತಾರೆ.

ದೇವದಾಸಿ ಪದ್ಧತಿ

ಈ ಪದ್ಧತಿಯು ನಾಯಕ ಜನಾಂಗದಲ್ಲಿ ಬಹು ದಿನಗಳಿಂದ ಆಚರಣೆಯಲ್ಲಿ ಬಂದಿದೆ. ಲೇಸಿ ದಾಸಿ ಎಂಬ ಪದಗಳಿಂದಲೂ ಈ ಪದ್ಧತಿಯ ಸ್ತ್ರೀಯರನ್ನು ಕರೆಯುತ್ತಾರೆ. ಯಾವುದೇ ಒಂದು ಕುಟುಂಬದ ಗಂಡುಸಂತಾನವಿಲ್ಲದಂತಹ ಸಂದರ್ಭದಲ್ಲಿ ಕುಲದೇವತೆಯ ಹೆಸರಿನಿಂದ ದೇವದಾಸಿ ಬಿಡುವ ಪದ್ಧತಿ ರೂಢಿಗೆ ಬಂದಿತೆಂದು ಹೇಳುತ್ತಾರೆ. ಆದರೆ ಈ ಪದ್ಧತಿಯು ಇಂದು ಕಡಿಮೆಯಾಗಿದೆ.

ಶವಸಂಸ್ಕಾರ

ಜೀವ ಹೋದ ತಕ್ಷಣ ಬಂಧುಗಳೆಲ್ಲ ಸೇರುತ್ತಾರೆ. ಶವವನ್ನು ಮನೆಯ ಹೊರಗಡೆ ತಂದು ಸ್ನಾನ ಮಾಡಿಸಿ ಹೊಸ ಬಟ್ಟೆ ತೊಡಿಸಿ ಕುಳ್ಳಿಸುತ್ತಾರೆ. ಚಟ್ಟವನ್ನು ಸಿದ್ದಮಾಡಿ ಮಸಣಕ್ಕೆ ತೆಗೆದುಕೊಂಡು ಹೋಗುವರು. ಮುದ್ರೆ ಹಾಕಿಸಿಕೊಂಡವರನ್ನು ಸುಡುವ ಪದ್ಧತಿ ಇದೆ. ಹದಿನಾರನೆ ಅಥವಾ ಮೂವತ್ತನೆಯ ದಿನ ದಿನಕರ್ಮ ಮಾಡುತ್ತಾರೆ. ಉಳಿದಂತೆಲ್ಲಾ ಇತರೆ ಜನಾಂಗದವರ ಆಚರಣೆಗಳನ್ನು ಕಾಣುತ್ತೇವೆ.

ಋತುಮತಿ ಪ್ರಸಂಗದಲ್ಲಿ ಹೆರಿಗೆ ಸಂದರ್ಭದಲ್ಲಿ ಮುಟ್ಟಿನ ಗುರುತಿಸಲು ನಿರ್ಮಿಸಿ ಅಲ್ಲಿ ಆಚರಣೆಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ಇವರು ಆಂಜನೇಯ ಎಲ್ಲಮ್ಮ ಹುಲಿಗೆಮ್ಮ ಆರಾಧನೆಯ ದೇವತೆಗಳಾಗಿದ್ದರೆ ಮುಖ್ಯ ನಾಯಕರಿಗೆ ಪೆಟ್ಟಿಗೆ ದೇವರುಗಳು ಆಚರಣೆಯ ಪ್ರಮುಖ ದೇವತೆಗಳಾಗಿವೆ.

ಬೇಡ ಸಮುದಾಯದ ಸಾಮಾಜಿಕ ಜೀವನ ಮತ್ತು ಸಮಾಜದ ಶ್ರೇಣಿಗಳು

ಯಾವುದೇ ಒಂದು ಸಮಾಜ ಮೇಲ್ನೋಟಕ್ಕೆ ಸರಳವಾಗಿ ಕಂಡರೂ ಅಂತರಂಗದಲ್ಲಿ ಅದು ಸಂಕೀರ್ಣ ವ್ಯವಸ್ಥೆಯನ್ನುಳ್ಳದಾಗಿರುತ್ತದೆ. ಸ್ವರಕ್ಷಣೆ ಭದ್ರತೆ ಸುಗಮ ಕಾರ್ಯ ನಿರ್ವಹಣೆ ಮುಂತಾದ ಉದ್ದೇಶಗಳಿಗಾಗಿ ಸಮಾಜದಲ್ಲಿ ಹಲವು ಶ್ರೇಣಿಗಳ ನಿರ್ಮಾಣಗೊಂಡಿರುತ್ತವೆ. ಇಂಥ ಸಾಮಾಜಿಕ ಶ್ರೇಣಿಗಳು ಬೇಡ ಸಮುದಾಯದಲ್ಲಿಯೂ ಇವೆ. ಈ ಸಮಾಜವು ಈ ಸಾಮಾಜಿಕ ಶ್ರೇಣಿಗಳನ್ನು ಅತ್ಯಂತ ನಿಷ್ಠೆಯಿಂದ ಕಾಪಾಡಿಕೊಂಡು ಬಂದಿದೆ.

ಈ ನಾಲ್ಕು ಸಾಮಾಜಿಕ ಶ್ರೇಣಿಗಳು ಹೀಗಿವೆ.

೧. ದೊರೆಗಳು

೨. ಯಜಮಾನ

೩. ದಾಸಯ್ಯ

೪. ಕಿಲಾರಿಗಳು

ದೊರೆಗಳು

ಈ ಸಮುದಾಯದ ಜನರು ಪ್ರತಿಷ್ಠಿತ ಗುಂಪಿಗೆ ಸೇರಿದವರಾಗಿರುತ್ತಾರೆ. ವಂಶಪಾರಂಪರ್ಯವಾಗಿ ಈ ದೊರೆತನ ಬರುತ್ತದೆ. ನ್ಯಾಯ ನಿರ್ಣಯ ಸಂದರ್ಭದಲ್ಲಿ ಪ್ರಮುಖ ಪಾತ್ರ ವಹಿಸುವ ಕಟ್ಟೆ ಮನೆಯ ಮುಖ್ಯಸ್ಥರಿಗೆ ದೊರೆಗಳೆಂದು ಕರೆಯುವುದುಂಟು. ಒಂದೊಂದು ಕಟ್ಟೆಗೆಯ ಮನೆಗೆ ಒಬ್ಬ ದೊರೆ ಇರುತ್ತಾನೆ. ಇವನು ಸಮಾಜದ ಹಿರಿಯವನಾಗಿದ್ದು ಬೇಡ ಸಮುದಾಯದ ಯಾವುದೇ ಸಮಾರಂಭದಲ್ಲಿ ಗೌರವಾನ್ವಿತ ಆಮಂತ್ರಿಕನಾಗಿರುತ್ತಾನೆ.

ಯಜಮಾನ : ಯಜಮಾನರು ಎರಡನೆ ಶ್ರೇಣಿಯವರಾಗಿರುತ್ತಾನೆ. ದೊರೆಗಳ ನಂತರದ ಸ್ಥಾನ ಗೌರವ ಇವರಿಗಿರುತ್ತಾನೆ. ಇವರು ಬೇಡ ಸಮುದಾಯದ ಜನಾಂಗದಲ್ಲಿ ವಿಶೇಷ ಮನ್ನಣೆಗೆ ಪಾತ್ರರಾಗಿದ್ದಾರೆ. ಕುಲಸಂಬಂಧ ವ್ಯಾಜ್ಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಮದುವೆ ಉತ್ಸವದಂಥ ಪ್ರಮುಖ ಕಾರ್ಯಗಳಲ್ಲಿ ಇವರ ಮುಂದಾಳತ್ವ ಇರುತ್ತದೆ. ಯಜಮಾನರಿಲ್ಲದೆ ಮದುವೆ ಕಾರ್ಯ ನಡೆಯುವಂತಿಲ್ಲ. ಅನೇಕ ಸಾಂಸ್ಕೃತಿಕ ಧಾರ್ಮಿಕ ಸಾಮಾಜಿಕ ಕಾರ್ಯಗಳಲ್ಲಿ ವಿಧಿ ನಿಯಮಗಳನ್ನು ನಿಯಮ ಬದ್ಧವಾಗಿ ಆಚರಿಸಲ್ಪಡುವಂತೆ ನೋಡಿಕೊಳ್ಳುವ ಜವಾಬ್ದಾರಿ ಇವರಿಗಿರುತ್ತದೆ.

ದಾಸಯ್ಯ

ಮೂರನೆಯ ಶ್ರೇಣಿಯ ದಾಸಯ್ಯಗಳು ಸಾಂಸ್ಕೃತಿಕ ಸಾಮಾಜಿಕ ಸಮಾರಂಭಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಇವರಲ್ಲಿ ಗೊಡಗುದಾಸರು ಗಗ್ಗರಿದಾಸರು ಬೋಡೇದಾಸರು ಎಂದು ಕೆಲವು ಉಪ ವರ್ಗಗಳಿವೆ. ಇವರು ಖಂಬಿ ಜಾಗಟೆ ಗರುಡ ಸ್ಥಂಬಗಳನ್ನು ಹೊಂದಿರುತ್ತಾರೆ. ಇವುಗಳನ್ನು ಸಮಾರಂಭದಲ್ಲಿ ವೈಶಿಷ್ಟಪೂರ್ಣವಾಗಿ ಬಳಸುತ್ತಾರೆ. ಮದುವೆ ಸಂದರ್ಭದಲ್ಲಿ ಜಾಗಟೆ ಬಾರಿಸುತ್ತಾ ಶಂಖವನ್ನು ಊದಿ ಗೋವಿಂದ ಗೋವಿಂದ ಎಂದು ಉಚ್ಚರಿಸಿದ ನಂತರವೇ ಊಟ ಪ್ರಾರಂಭವಾಗುತ್ತದೆ. ದೇವರ ಉತ್ಸವದಲ್ಲಿ ದಾಸಯ್ಯಗಳು ಮುಂಭಾಗದಲ್ಲಿ ಇದ್ದು ಜಾಗಟೆ ಬಾರಿಸುತ್ತಿರುತ್ತಾರೆ.

ಕಿಲಾರಿಗಳು

ನಾಲ್ಕನೆಯ ಶ್ರೇಣಿಯಲ್ಲಿರುವವರು ಕಿಲಾರಿಗಳು. ಎತ್ತಿನ ಕಿಲಾರಿಗಳೆಂದು ಇವರನ್ನು ಕರೆಯಲಾಗುತ್ತದೆ. ಇವರು ನಾಯಕ ಜನಾಂಗದ ಮೂಲವೃತ್ತಿಯಾದ ಪಶುಪಾಲನೆ ಇಂದಿಗೂ ಮುಂದುವರೆಸಿಕೊಂಡು ಬಂದಿದ್ದಾರೆ.

ಅಡವಿಯಲ್ಲಿ ದಟ್ಟವಾದ ಹುಲ್ಲುಗಾವಲು ಪ್ರದೇಶದಲ್ಲಿ ದನಗಳ ಹಟ್ಟಿಯನ್ನು ನಿರ್ಮಿಸಿಕೊಂಡು ೫೦ ರಿಂದ ೬೦ ರಾಸುಗಳ ಹಿಂಡನ್ನು ಪಾಲನೆ ಮಾಡುತ್ತಾರೆ. ಐದು-ಆರು ಕಿಲಾರಿ ತಂಡದಲ್ಲಿ ಒಬ್ಬರು ಊರುಗಳಿಗೆ ಹೋಗಿ ಹಿಟ್ಟು ಅಕ್ಕಿಯನ್ನು ಪಡೆದುಕೊಂಡು ಬರುತ್ತಾನೆ. ಅದನ್ನು ಬೇಯಿಸಿಕೊಂಡು ಊಟ ಮಾಡುತ್ತಾರೆ. ದಟ್ಟಿ ಚಲ್ಲಣ ಕಪ್ಪು ಕಂಬಳಿ ಇವರ ಉಡುಗೆಯಾಗಿರುತ್ತದೆ. ಬೇಡ ಸಮುದಾಯ ನ್ಯಾಯ ನಿರ್ಣಯದಲ್ಲಿ ತಪ್ಪಿತಸ್ಥರನ್ನು ತಮ್ಮ ಹಟ್ಟಿಯಲ್ಲಿ ಶುದ್ಧಗೊಳಿಸುವ ಕಾರ್ಯವೂ ಇವರದ್ದಾಗಿರುತ್ತದೆ.

(ನೋಡಿ : ಮ್ಯಾಸನಾಯಕರು ಒಂದು ಜನಾಂಗಿಕ ಅಧ್ಯಯನ, ೧೯೯೫, ಡಾ. ಕರಿಶೆಟ್ಟಿ ರುದ್ರಪ್ಪ, ಪು. ೧೦, ೪೫, ೧೩೬-೧೪೧)

೩

ಬುಡಕಟ್ಟು ಕ್ರೀಡೆಗಳ ಸ್ವರೂಪ ಮತ್ತು ಲಕ್ಷಣಗಳು

೩

ಬುಡಕಟ್ಟು ಕ್ರೀಡೆಗಳ ಸ್ವರೂಪ ಮತ್ತು ಲಕ್ಷಣಗಳು

ಆಟಗಳ ಕುರಿತಾಗಿ ಸಮಾಜಶಾಸ್ತ್ರ, ಮಾನವಶಾಸ್ತ್ರ, ಮನ:ಶಾಸ್ತ್ರಗಳಲ್ಲಿ ವ್ಯಾಪಕವಾದ ಅಧ್ಯಯನ ನಡೆದಿದೆ. ಬುಡಕಟ್ಟು ಕ್ರೀಡೆಗಳ ಕುರಿತಾಗಿಯೂ ಇಂತಹ ಪ್ರಯತ್ನಗಳು ನಡೆದಿವೆ. ಮೊದಲಿಗೆ ವ್ಯಾಪಕವಾದ ಅರ್ಥದಲ್ಲಿ ಆಟಗಳ ಸಂಖ್ಯೆಗಳನ್ನು ಪರಿಶೀಲಿಸಿ ಬಳಿಕ ಬುಡಕಟ್ಟು ಕ್ರೀಡೆಗಳು ವ್ಯಾಖ್ಯೆ ಮತ್ತು ಸ್ವರೂಪಗಳನ್ನು ಚರ್ಚಿಸಬಹುದಾಗಿದೆ.

'Play', 'Games' ಎಂಬ ಇಂಗ್ಲೀಷ್ ಶಬ್ದಗಳನ್ನು 'ಆಟ' ಮತ್ತು 'ಕ್ರೀಡೆ'ಗೆ ಸಂವಾದಿಯಾಗಿ ಬಳಸಲಾಗುತ್ತದೆ. ವಿನೋದ, ಹಾಸ್ಯ, ತಮಾಷೆ, ಚಟುವಟಿಕೆಯಿಂದ ಮನ ಬಂದಂತೆ ಓಡಾಡು, ಆಟವಾಡು, ಕುಣಿದಾಡು, ಹಾರಾಡು, ನಲಿದಾಡು, ಮೆಲ್ಲನೆ ನಲಿದಾಡು ಇತ್ಯಾದಿ ಅರ್ಥಗಳು ಅರ್ಥಕೋಶದಲ್ಲಿದೆ. ಮನರಂಜನೆ, ತಮಾಷೆ, ಕಿರುಚಾಟ, ಓಡಾಟ, ಬಡಿದಾಟ ಹೀಗೆ ಎಲ್ಲಾ ಕ್ರಿಯೆಗಳನ್ನು ಆಟವೆಂದು ವಿಶಾಲಾರ್ಥದಲ್ಲಿ ಕರೆಯುತ್ತಾರೆ.

ಕಿಟೆಲ್ ಅರ್ಥಕೋಶದಲ್ಲಿ ಆಟ ಎಂಬ ಶಬ್ದಕ್ಕೆ 'Play, Sparts, Dance, Elcting, Stage for mance, a show, Gambling, Transaction in general' ಮೊದಲಾದ ಅರ್ಥಗಳನ್ನು ನೀಡಲಾಗಿದೆ (ಕಿಟೆಲರ ಕನ್ನಡ - ಇಂಗ್ಲೀಷ್ ಶಬ್ದಕೋಶ, ಸಂಪುಟ-೨, ೧೯೬೯). ತಮಿಳು, ತುಳು, ಮಲಯಾಳಂ, ತೆಲುಗು ಮೊದಲಾದ ಭಾಷೆಗಳಲ್ಲಿ 'Gambling' ಒಂದನ್ನು ಬಿಟ್ಟರೆ ಉಳಿದ ಅರ್ಥಗಳನ್ನು ಸೂಚಿಸಲಾಗಿದೆ.

"ವಿಶಿಷ್ಟವಾದ ಅಂತರಾಳದ ಸ್ಫೂರ್ತಿಯನ್ನು ಹೊರಕ್ಕೆ ಚಿಮ್ಮಿಸುವಂತಹದು ಯಾವುದೇ ತೆರದ ವಿನೋದ ಅಥವಾ ಚಟುವಟಿಕೆಯಾಗಿರಬಹುದು. ಸಾಮಾಜಿಕ ಚಟುವಟಿಕೆಯೂ ಆಗಿರಬಹುದು. ಒಬ್ಬರಿಗಿಂತ ಹೆಚ್ಚು ಜನ ಆಡುವಂತಿರಬೇಕು. ಸ್ಪರ್ಧೆಯು ನಿಯಾಮಾವಳಿಗಳಿಂದ ಕೂಡಿದ್ದು, ಸಾಮಾನ್ಯವಾಗಿ ಅಭಿನಯದಿಂದ ಕೂಡಿದಂತಿರಬೇಕು. ಸೋಲು ಗೆಲುವಿರಬೇಕು" (ಅರವಿಂದ ಮಾಲಗತ್ತಿ ೧೯೮೦:೧೨) ಎಂಬ ವ್ಯಾಖ್ಯೆಯನ್ನು ಆಟಗಳಿಗೆ ವಿಶಾಲವಾದ ಅರ್ಥದಲ್ಲಿ ಅನ್ವಯಿಸಬಹುದಾದರೂ ಈ ವ್ಯಾಖ್ಯೆಗೆ ಎಲ್ಲಾ ಆಟಗಳು ಒಳಪಡುವುದಿಲ್ಲ. ಚೆನ್ನಮಣೆ

ಆಟದ ಒಂದು ಪ್ರಕಾರವಾದ ಸೀತಾಟವನ್ನು ತೆಗೆದುಕೊಂಡರೆ ಒಬ್ಬರೇ ಆಡುವ ಆಟವದು. ಅಲ್ಲದೇ ಯಾವುದೇ ರೀತಿಯ ಅಭಿನಯವೂ ಅಲ್ಲಿಲ್ಲ. ಕೆಲವು ಆಟಗಳಲ್ಲಿ ಸೋಲು, ಗೆಲುವು ಮುಖ್ಯವಲ್ಲ.

ಜಾನ್ಲೋ ಎಂಬ ವಿದ್ವಾಂಸರು ತಮ್ಮ 'ಆಟಗಳ ಸ್ವರೂಪ ಒಂದು ವ್ಯಾಖ್ಯಾಯ ಪ್ರಯತ್ನ' ಎಂಬ ಲೇಖನದಲ್ಲಿ ಆಟ (Play), ಕ್ರೀಡೆ (Game), ಓಟ (Sports) ಇವುಗಳ ಲಕ್ಷಣಗಳನ್ನು ವಿಸ್ತಾರವಾಗಿ ಚರ್ಚಿಸುತ್ತಾನೆ. ಅವರು ಆಟಗಳ ಲಕ್ಷಣಗಳನ್ನು ಹೀಗೆ ಗುರುತಿಸುತ್ತಾನೆ. "ಸ್ವಯಂ ಹಾಗೂ ಮುಕ್ತ ಭಾಗವಹಿಸುವಿಕೆಯಿದೆ. ಯಾವುದೇ ರೀತಿಯ ಒತ್ತಾಯ, ಒತ್ತಡಗಳಿರುವುದಿಲ್ಲ. ಆಟದ ಕ್ರಿಯೆಗಳಲ್ಲಿ ಸಮಯ ಮತ್ತು ಕಾಲದ ಮಿತಿಗಳಿವೆ. ನಿಜವಾದ ಆಟವು ಉತ್ಪಾದನೆಯಲ್ಲಿ ಯಾವುದೇ ಪಾತ್ರವನ್ನು ವಹಿಸುವುದಿಲ್ಲ. ಎಲ್ಲರೂ ಒಪ್ಪಿಕೊಳ್ಳುವ ನಿಯಮಗಳೇ ಆಟದ ಸ್ಥಿತಿಯನ್ನು ವಿವರಿಸುತ್ತದೆ. ಆಟದ ನಟನಾ ಸ್ವರೂಪವೇ ಅದನ್ನು ನಿಜವಾದ ಬದುಕಿನಿಂದ ಬೇರ್ಪಡಿಸುತ್ತದೆ" (ಡೊನಾಲ್ಡ್ ಚೋ ೧೯೮೨:೧೩). ಆಟಗಳ ಕುರಿತಾದ ಈ ವಿವರಣೆ ಆಟದ ಸ್ವರೂಪವನ್ನು ಮುಂದೆ ಇಡುತ್ತದೆ. ಅವನು ಕ್ರೀಡೆ ಮತ್ತು ಓಟಗಳನ್ನು ಆಟಗಳಿಂದ ವಿಭಾಗಿಸುತ್ತಾನೆ. ಕ್ರೀಡೆಯನ್ನು ಸಂಸ್ಕೃತೀಕರಣಕ್ಕೊಳಗಾದ ಆಟಗಳೆಂದು ಗುರುತಿಸುತ್ತಾನೆ. ಸ್ವಯಂ ಹಾಗೂ ಮುಕ್ತ ಭಾಗವಹಿಸುವಿಕೆ, ಸಮಯ ಕಾಲದ ಮಿತಿ ಇತ್ಯಾದಿಗಳನ್ನು ಗಮನಿಸಿ ಆಟಗಳಿಗೆ ನೀಡುವ ವಿವರಣೆಯೇ ಜನಪದ ಆಟಗಳ ಸ್ವರೂಪಕ್ಕೂ ಹೊಂದುತ್ತದೆ. ಆದರೆ ಸಮಾಜಶಾಸ್ತ್ರ, ಮಾನವಶಾಸ್ತ್ರ ಮತ್ತು ಮನಃಶಾಸ್ತ್ರಗಳಲ್ಲಿ ಆಟಗಳ ವ್ಯಾಖ್ಯಾಗಳ ಕುರಿತಾಗಿ ಚರ್ಚಿಸಿದ್ದರೂ ಅಲ್ಲಿ ಸಾಂಸ್ಥಿಕರಿಸಲ್ಪಟ್ಟ (Institutionalized) ಆಟಗಳ ಕಡೆಗೆ ಹೆಚ್ಚು ಗಮನ ನೀಡಲಾಗಿದೆ. ಇದರ ಅಧ್ಯಾಯವನ್ನು "Sports psychology sports sociology" ಹೀಗೆ ಕರೆಯಲಾಗಿದೆ. ರೋರ್ಬರ್ಟ್ ಸಿಂಗರ್ ಎಂಬ ಮನಃಶಾಸ್ತ್ರಜ್ಞ ಫೌಲ್ ವೆಸ್ಸಿ ಎಂಬ ತತ್ವಶಾಸ್ತ್ರಜ್ಞ, ಕ್ರೀಡಾಶಾಸ್ತ್ರಜ್ಞರಾದ ರೋರ್ಬರ್ಟ್ ಅಪ್ಸೆ, ಕ್ರೀಡಾ ತತ್ವಶಾಸ್ತ್ರಜ್ಞ ರೋಬರ್ಟ್ ಜೆ.ಹೊಸ್ಮಾರ್ಡ್ ಮೊದಲಾದವರು ಈ ಬಗ್ಗೆ ಚರ್ಚಿಸಿದ್ದಾರೆ. ಸಾಮಾನ್ಯವಾಗಿ ಇವರೆಲ್ಲರೂ ಮೇಲಿನ ಅಭಿಪ್ರಾಯವನ್ನೇ ಹೊಂದಿದ್ದಾರೆ.

ಮುಖ್ಯವಾಗಿ ಆಟಗಳಿಗೆ ಒಂದು ನಿರ್ದಿಷ್ಟ ವ್ಯಾಖ್ಯೆಯನ್ನು ನೀಡುವುದು ಕಷ್ಟ. ಈಗಾಗಲೇ ವಿದ್ವಾಂಸರು ಹಲವಾರು ವ್ಯಾಖ್ಯೆಗಳನ್ನು ನೀಡಿದ್ದಾರೆ. ಆಟಗಳ ಬಗ್ಗೆ ಹಲವಾರು ಸಿದ್ಧಾಂತಗಳೇ ಬಂದಿವೆ. ಪ್ಲೇಟೋ, ಅರಿಸ್ಟಾಟಲ್ ರಂಥ ತತ್ವಜ್ಞಾನಿಗಳೇ ಆಟಗಳ ಬಗ್ಗೆ ಗಮನ ನೀಡಿದ್ದಾರೆ. ಈ ರೀತಿ ಸಮಾಜಶಾಸ್ತ್ರಜ್ಞರು, ಮಾನವ ಶಾಸ್ತ್ರಜ್ಞರು, ಮನಃಶಾಸ್ತ್ರಜ್ಞರು ಆಟಗಳ ಕುರಿತು ವ್ಯಾಖ್ಯೆಯನ್ನು ಕೊಡುವಾಗ ಅವುಗಳು ಆಟಗಳೇ, ಅಲ್ಲವೇ ಎಂಬುದನ್ನು ಖಚಿತಪಡಿಸಿಕೊಂಡಿಲ್ಲ. ಒಟ್ಟಾರೆಯಾಗಿ ಆಟವನ್ನು 'Play', 'Game' ಗೆ ಸಂವಾದಿಯಾಗಿಟ್ಟುಕೊಂಡು ವ್ಯಾಖ್ಯಾನ ಮಾಡಿದ್ದಾರೆ.

ಬುಡಕಟ್ಟು ಆಟಗಳ ವ್ಯಾಖ್ಯೆಗಳು

ಬುಡಕಟ್ಟು ಆಟಗಳ ಕುರಿತಾಗಿ ವ್ಯಾಖ್ಯೆಗಳನ್ನು ನೋಡುವಾಗ ಬುಡಕಟ್ಟುವಲ್ಲದ ಆಟಗಳು ಇವೆಯೋ ಎಂಬ ಪ್ರಶ್ನೆಯು ಸಹಜವಾಗಿ ಮೂಡುತ್ತದೆ. ವಿಶಾಲವಾದ ಅರ್ಥದಲ್ಲಿ ಈ ವಿಭಜನೆಯು ಸರಿ ಇಲ್ಲದಿದ್ದರೂ ಕೆಲವು ಆಟಗಳನ್ನು ಭಿನ್ನವಾಗಿ ಪರಿಗಣಿಸಬೇಕಾಗುತ್ತದೆ. ಇವುಗಳನ್ನು 'ನಿಯಮಬದ್ಧ ಆಟ'ಗಳೆಂದು ಕರೆಯಬಹುದು.

ಇವುಗಳನ್ನೇ ಸಾಂಸ್ಥೀಕರಿಸಲ್ಪಟ್ಟ ಆಟಗಳೆಂದು ಕರೆಯಲಾಗಿದೆ. ಇಲ್ಲಿ ಜನಪದ ಆಟಗಳು ನಿಯಮರಹಿತವಾಗಿವೆ ಎನ್ನುವ ಅರ್ಥವಲ್ಲ. ನಿಯಮಬದ್ಧ ಆಟಗಳು ನಿಯಮಕ್ಕೆ ಹೆಚ್ಚು ಬದ್ಧವಾಗಿದ್ದು, ಬುಡಕಟ್ಟು ಆಟಗಳ ಮಹತ್ವದ ಅಂಶಗಳು ಅವುಗಳಲ್ಲಿ ಇಲ್ಲವೆನ್ನಬಹುದು. ಈ ಆಟಗಳನ್ನೇ ಸಾಂಸ್ಥೀಕರಣಕ್ಕೊಳಗಾದ ಆಟಗಳೆಂದು ಜಾನ್ಸ್ ಕರೆದಿದ್ದಾನೆ. "ನಿಯಮಾತ್ಮಕ ಆಟಗಳಿಗೂ, ಜನಪದ ಆಟಗಳಿಗೂ ವ್ಯತ್ಯಾಸವಿದೆ. ವ್ಯವಸ್ಥಿತ ನಿಯಮಾನುಸಾರ ಆಟಗಳಿಗೆ ಲಕ್ಷಣಗಳು ಇದ್ದಂತೆ. ಬುಡಕಟ್ಟು ಆಟಗಳಿಗೂ ಲಕ್ಷಣಗಳಿವೆ. ಪರಸ್ಪರ ಒಂದಕ್ಕೊಂದು ಲಕ್ಷಣಗಳಲ್ಲಿ ಕೆಲವು ಹೋಲಿಕೆಗಳಿದ್ದು ಕೆಲವೊಂದು ಅಂಶಗಳು ಭಿನ್ನವಾಗಿವೆ" ಎಂದು ಅರವಿಂದ ಮಾಲಗತ್ತಿಯವರು ಗುರುತಿಸಿದ್ದಾರೆ. ಈ ನಿಯಮಬದ್ಧ ಆಟಗಳು ಆಟಗಳೇ ಆಗಿರುವುದಾದರೂ ಒಂದು ನಿರ್ದಿಷ್ಟ ನಿಯಮಗಳನ್ನು ರೂಪಿಸಿ ಅಂತರಾಷ್ಟ್ರೀಯ ಮಟ್ಟದಲ್ಲಿ ಏಕಪ್ರಕಾರವಾಗಿ ಆಡಲಾಗುತ್ತದೆ. ಬುಡಕಟ್ಟು ಆಟಗಳಂತೆ ಮುಕ್ತ ನಿಯಮಗಳು ಇವಕ್ಕಿಲ್ಲ. ಕೆಲವು ಮೂಲಭೂತ ಉದ್ದೇಶಗಳ ದೃಷ್ಟಿಯಿಂದಲೂ ಬುಡಕಟ್ಟು ಆಟಗಳಿಗಿಂತ ಇವು ಭಿನ್ನವಾಗಿವೆ. ಸಾಮಾಜಿಕ ಸಂವಹನಕ್ಕಿಂತ ಮನರಂಜನೆ ಮತ್ತು ಶಕ್ತಿ ಪ್ರದರ್ಶನ ಇವುಗಳ ಮೂಲಭೂತ ಉದ್ದೇಶ ಈ ದೃಷ್ಟಿಯಿಂದ ಆಟಗಳಿಗೆ ಪ್ರತ್ಯೇಕವಾದ ವ್ಯಾಖ್ಯೆ, ಲಕ್ಷಣ, ಸ್ವರೂಪಗಳನ್ನು ಗುರುತಿಸುವ ಅಗತ್ಯವಿದೆ.

ರೋಬರ್ಟ್ ಎ ಜಾರ್ಜ್‌ರವರು 'ಆಟಗಳು ಮತ್ತು ಮನೋರಂಜನೆ' ಎಂಬ ಲೇಖನದಲ್ಲಿ ಆಟಗಳ ಲಕ್ಷಣಗಳನ್ನು ಹೀಗೆ ಗುರುತಿಸುತ್ತಾರೆ. ಈ ಆಟಗಳ ವರ್ತನೆಯು ಎಲ್ಲಾ ಸಂಸ್ಕೃತಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಮನುಷ್ಯನ ಉಳಿವಿಗೆ ಸಂಬಂಧಿಸಿದ ಯಾವುದೇ ಭೌತಿಕ ಚಟುವಟಿಕೆಗಳಲ್ಲಿ ಆಟಗಳು ನೇರವಾಗಿ ಪಾಲ್ಗೊಳ್ಳುವುದಿಲ್ಲ. ಅಂದರೆ ಸಂಪತ್ತಿನ ಉತ್ಪಾದನೆಯಲ್ಲಿ ಅದರ ಯಾವ ಪಾತ್ರವೂ ಇಲ್ಲ. ಅವು ವ್ಯಕ್ತಿಯ ಮಾನಸಿಕ, ಶಾರೀರಿಕ, ಸಾಮಾಜಿಕ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದರೂ ಅದು ಉತ್ಪಾದನಾ ಚಟುವಟಿಕೆ ಅಲ್ಲವೆಂದೇ ಹೇಳಬೇಕು. ಇದರಿಂದ ವ್ಯಕ್ತಿ ಸ್ವಂತ ಆಸಕ್ತಿಯಲ್ಲಿ ಮಾತ್ರ ಆಟಗಳಲ್ಲಿ ಭಾಗವಹಿಸುತ್ತಾನೆ. ಇನ್ನೊಂದು ಮುಖ್ಯ ಲಕ್ಷಣವೆಂದರೆ ಕೆಲವು ಬುಡಕಟ್ಟು ಆಟಗಳು ಕಾಲ ಮತ್ತು ಸ್ಥಳದ ದೃಷ್ಟಿಯಲ್ಲಿ ವಾಸ್ತವಿಕತೆಯಿಂದ ಯಾವಾಗಲೂ ದೂರವಾಗಿರುತ್ತದೆ ಎಂದು ವಿವರಿಸುತ್ತಾರೆ. ಉದಾಹರಣೆಗೆ ಮಕ್ಕಳು ಮದುವೆಯಾಟ ಆಡಿದರೂ ಕಾಲ ಮತ್ತು ಸ್ಥಳ ಅದನ್ನು ವಾಸ್ತವಿಕತೆಯಿಂದ ಬೇರ್ಪಡಿಸುತ್ತದೆ. ಅಲ್ಲದೇ ಆಟಗಳಲ್ಲಿ ಕೆಲವು ನಿಯಮ, ಕಟ್ಟಳೆಗಳು ಇದ್ದೇ ಇರುತ್ತದೆ. ಆಟಗಾರರು ಆಟ ಆರಂಭಿಸುವ ಮೊದಲು ಈ ನಿಯಮ ಕಟ್ಟಳೆಗಳನ್ನು ತಿಳಿದಿರುತ್ತಾರೆ. ಆಟ ಆಗ ಮಾತ್ರ ಮುಂದುವರಿಯಲು ಸಾಧ್ಯ. ಉದಾಹರಣೆಗೆ ಹುಲಿ-ದನ ಆಟವನ್ನು ಆಡುವಾಗ ಹುಲಿಯನ್ನು ಕೋಟೆಯ ಒಳಗೆ ಬಿಡಬಾರದು. ದನವನ್ನು ಬಿಡಬಹುದು ಎಂದು ಸಾಮಾನ್ಯ ನಿಯಮ ಎಲ್ಲರಿಗೂ ಗೊತ್ತಿದೆ.

ಜಾನ್ ಹಿರಾಲ್ಡ್ ಬ್ರೆನ್ವೆಂಡರು ಬುಡಕಟ್ಟು ಆಟಗಳ ಲಕ್ಷಣಗಳನ್ನು ಹೀಗೆ ಗುರುತಿಸುತ್ತಾರೆ. "ಬುಡಕಟ್ಟು ಆಟಗಳು ಮೌಖಿಕವಾಗಿ ಮಕ್ಕಳಿಂದ ಮಕ್ಕಳಿಗೆ ಪ್ರಸರಣವಾಗುತ್ತವೆ ಮತ್ತು ಅವುಗಳ ನಿಯಮ, ಕಟ್ಟಳೆಗಳನ್ನು ಆ ಸಮಾಜದ ನಂಬಿಕೆ, ಆಚರಣೆ, ಸಂಪ್ರದಾಯಗಳು ನಿರ್ಧರಿಸುತ್ತವೆ. ಅದನ್ನು ಆಡುವ ಸಮಾಜದ ಮತ್ತು ವ್ಯಕ್ತಿಗಳ ಅಂತಃಪ್ರೇರಣೆಯಿಂದಲೇ ಅವು ವ್ಯಕ್ತವಾಗುತ್ತವೆ." (ಜಾನ್ ಹೆರಾಲ್ಡ್ ಬ್ರೆನ್ವಿಂಡ್ ೧೯೬೮-೨೨೭-೨೨೭)

ಮಾಲಗತ್ತಿಯವರು ಬುಡಕಟ್ಟು ಆಟಗಳ ಸಾಮಾನ್ಯ ಲಕ್ಷಣಗಳೆಂದು ಪರಾವಲಂಬನೆ, ಪ್ರೇರಣೆಶಕ್ತಿ, ಪ್ರಯೋಗಾತ್ಮಕ ಸಂಭಾಷಣೆ, ಗೆಲುವು, ಸೋಲು, ಸಮಸ್ಯೆ ಮತ್ತು ಪರಿಹಾರ, ಆತ್ಮಪ್ರತಿಷ್ಠೆ, ಭರವಸೆರಹಿತ, ಪುನರಾವರ್ತನೆ, ಪಳೆಯುಳಿಕೆ ಹೊಂದಿರುವುದು, ನಿಯಮ ಮೋಸದ ಮೊತ್ತ, ಸಾಮಾಜಿಕ ಮನ್ನಣೆ ಮುಂತಾದವುಗಳನ್ನು ಆಟದ ಲಕ್ಷಣಗಳೆಂದು ಗುರುತಿಸುತ್ತಾರೆ. (ಅರವಿಂದ ಮಾಲಗತ್ತಿ ೧೯೮೦)

ಬುಡಕಟ್ಟು ಕ್ರೀಡೆಗಳ ಆಟಗಳ ಲಕ್ಷಣಗಳು

ಈಗಾಗಲೇ ವಿದ್ವಾಂಸರು ನಿಯಮಬದ್ಧ ಆಟಗಳಿಗಿಂತ ಭಿನ್ನವಾದ ಬುಡಕಟ್ಟು ಆಟಗಳ ಲಕ್ಷಣವನ್ನು ನೀಡುವ ಪ್ರಯತ್ನವನ್ನು ಮಾಡಿದ್ದಾರೆ. ಆದರೆ ಸ್ಪಷ್ಟವಾದ ಅದರ ಸ್ವರೂಪವನ್ನು ನೀಡಲು ಸಾಧ್ಯವಾಗಿಲ್ಲ. ಇದಕ್ಕೆ ಮುಖ್ಯ ಕಾರಣ ಆ ಆಟಗಳ ಅನನ್ಯತೆ. ಒಂದೊಂದು ಆಟವೂ ಸ್ವಭಾವದಲ್ಲಿ ಒಂದೊಂದು ರೀತಿಯಾಗಿರುತ್ತದೆ. ಹೀಗಿರುವುದರಿಂದ ಎಲ್ಲಾ ಆಟಗಳಿಗೆ ಹೊಂದುವಂತೆ ಸಾವ್ರತ್ರಿಕವಾದ ವ್ಯಾಖ್ಯೆಯನ್ನು ಕೊಡುವುದು ಕಷ್ಟ. ಬುಡಕಟ್ಟು ಆಟಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಕೆಳಗಿನ ಸಾಮಾನ್ಯ ಲಕ್ಷಣಗಳನ್ನು ಬುಡಕಟ್ಟು ಆಟಗಳಲ್ಲಿ ಗುರುತಿಸಬಹುದು.

ಮುಕ್ತಬಂಧ

ಬುಡಕಟ್ಟು ಆಟದಲ್ಲಿ ಆಟಗಾರರು ಮತ್ತು ಪ್ರೇಕ್ಷಕರು ಮುಕ್ತವಾಗಿ ಭಾಗವಹಿಸಬಹುದಾಗಿದೆ. ಸಾರ್ವತ್ರಿಕವಾದ ಯಾವುದೇ ನಿಯಮಗಳಿಗೆ ಬುಡಕಟ್ಟು ಆಟಗಳು ಬದ್ಧವಾಗಿಲ್ಲ. ಇದರರ್ಥ ಆಟಗಳು ನಿಯಮಗಳಿಗೆ ಬದ್ಧವಾಗಿಲ್ಲ ಎಂದಲ್ಲ. ಪ್ರತಿಯೊಂದು ಆಟಕ್ಕೂ ಸಾಮಾನ್ಯವಾದ ಆಡುವ ರೀತಿಗಳಿದ್ದರೂ ಸ್ಥಳ, ಕಾಲ ಮತ್ತು ಪರಿಸರ ಮತ್ತು ಆಟಗಾರರ ಸಂಖ್ಯೆಯನ್ನು ಹೊಂದಿಕೊಂಡು ಆಟವನ್ನು, ಕೆಲವೊಮ್ಮೆ ಕೆಲವು ನಿಯಮಗಳನ್ನು ಪರಿವರ್ತನೆ ಮಾಡುವ ಸ್ವಾತಂತ್ರ್ಯವನ್ನು ಆಟಗಾರರು ಹೊಂದಿರುತ್ತಾರೆ. ಆಚರಣಾತ್ಮಕ ಸಂಬಂಧವಿರುವ ಆಟಗಳಿಗೂ ಈ ಮಾತು ಅನ್ವಯವಾಗುತ್ತದೆ. ಉದಾಹರಣೆಗೆ ಪೊಳಲಿ ರಾಜರಾಜೇಶ್ ವರಿ ದೇವಸ್ಥಾನದಲ್ಲಿ ವರ್ಷಾವಧಿ ನಡೆಯುವ ಚೆಂಡಾಟದ ಸ್ವರೂಪವನ್ನು ಗಮನಿಸಬಹುದು. ಅದರಲ್ಲಿ ಇಷ್ಟೇ ಆಟಗಾರರು ಭಾಗವಹಿಸಬೇಕೆಂದು ನಿಯಮವಿಲ್ಲ. ಒಂದು ದಿನ ಮುನ್ನೂರರಷ್ಟು ಆಟಗಾರರು ಭಾಗವಹಿಸಿದರೆ ಇನ್ನೊಂದು ದಿನ ಇಪ್ಪತ್ತೈದರಷ್ಟು ಜನ ಭಾಗವಹಿಸಿದ್ದಿದೆ. ಇಂತಹ ಆಟಗಳಲ್ಲೂ ಈ ರೀತಿಯ ವ್ಯತ್ಯಾಸಗಳು ಸಾಧ್ಯ. ಕೆಲವೊಮ್ಮೆ ಇಂತಹ ಯಾವುದೇ ನಿಯಮವೂ ಆಟಗಳಲ್ಲಿ ಇರುವುದಿಲ್ಲ.

ಕ್ರಿಯಾತ್ಮಕ ಮತ್ತು ನಾಟಕೀಯ

ಬುಡಕಟ್ಟು ಆಟಗಳು ಕ್ರಿಯಾತ್ಮಕ ಮತ್ತು ನಾಟಕೀಯವಾಗಿವೆ. ಕ್ರಿಯೆ ಮತ್ತು ನಾಟಕೀಯತೆ ಎಲ್ಲಾ ಆಟಗಳ ಲಕ್ಷಣಗಳಾದರೂ ಬುಡಕಟ್ಟು ಆಟಗಳ ಬಹುಮುಖ್ಯ ಲಕ್ಷಣಗಳಾಗಿವೆ. ಬುಡಕಟ್ಟು ಆಟಗಳು ನಿಯಮಕ್ಕೆ ಹೆಚ್ಚು ಮಹತ್ವ ನೀಡದೆ ಕ್ರಿಯೆಯನ್ನು ಹೆಚ್ಚು ಹೊಂದಿಕೊಂಡಿರುವುದು. ಇದಕ್ಕೆ ಮುಖ್ಯ ಕಾರಣ. ಆಟಗಳ ಸ್ವರೂಪದಲ್ಲಿ

ಇರುವ ಮುಕ್ತತೆಯು ಆಟಗಳಲ್ಲಿ ಕ್ರಿಯಾತ್ಮಕತೆ ಹೆಚ್ಚಲು ಕಾರಣ. ಮೂಲಭೂತವಾಗಿ ಎಲ್ಲಾ ಆಟಗಳೂ ನಾಟಕೀಯವಾಗಿದ್ದರೂ ನಾಟಕೀಯತೆ ಬುಡಕಟ್ಟು ಆಟಗಳ ಪ್ರಧಾನ ಲಕ್ಷಣ ಎಂಬುದನ್ನು ಉಲ್ಲೇಖಿಸಬೇಕು. ಕೆಲವು ಆಟಗಳಲ್ಲಂತೂ ನಾಟಕೀಯತೆಯೇ ಪ್ರಧಾನವಾಗಿರುತ್ತದೆ. ಆಟಗಾರರು ವಾಸ್ತವಿಕ ಪಾತ್ರಗಳನ್ನು ತಾವು ಕಂಡಂತೆ ಅಭಿನಯಿಸುವುದು ಇದೆ.

ಪಾಠಾಂತರಗಳು

ಬುಡಕಟ್ಟು ಆಟಗಳನ್ನು ಪ್ರತ್ಯೇಕವಾಗಿ ಗಮನಿಸುವಂತೆ ಮಾಡಲು ಮುಖ್ಯ ಕಾರಣ ಅವುಗಳಲ್ಲಿನ ಪಾಠಾಂತರಗಳು. ಸಾಮಾನ್ಯವಾಗಿ ಒಂದು ಆಟದಲ್ಲಿ ಸಾರ್ವತ್ರಿಕವಾದ ನಿಯಮಗಳು ದೊರೆಯುವುದಾದರೂ ಅದೇ ಆಟ ವಿಭಿನ್ನ ರೀತಿಯಲ್ಲಿ ಬೇರೆ-ಬೇರೆ ಪ್ರದೇಶಗಳಲ್ಲಿ ದೊರೆಯಬಹುದು. ತಮಿಳುನಾಡಿನ ಹುಲಿ-ದನ ಆಟ, ಕೇರಳದಲ್ಲಿ ನರಿ-ಕೋಳಿ ಹಾಗೆಯೇ ತಮಿಳುನಾಡಿನಲ್ಲಿನ ನರಿ-ಕುರಿ, ಇಲಿ-ಬೆಕ್ಕು ಆಟಗಳಾಗಿವೆ. ಕೆಲವೊಮ್ಮೆ ಒಂದೇ ಸಾಂಸ್ಕೃತಿಕ ವಲಯದಲ್ಲೂ ಒಂದೇ ಆಟದ ಭಿನ್ನ ಪಠ್ಯಗಳನ್ನು ಸಂಗ್ರಹಿಸಲು ಸಾಧ್ಯ. ಇದಕ್ಕೆ ಮುಖ್ಯಕಾರಣ ಆಟದಲ್ಲಿ ಆಟಗಾರರಿಗಿರುವ ಸ್ವಾತಂತ್ರ್ಯ ಮತ್ತು ಆ ಪ್ರದೇಶದ ಜನಜೀವನ ಮತ್ತು ಸಂಸ್ಕೃತಿಯಾಗಿದೆ.

ಸಾಂಸ್ಕೃತಿಕ ಸಂಬಂಧ

ಬುಡಕಟ್ಟು ಆಟಗಳು ನೆಲದ ಸಂಸ್ಕೃತಿಯೊಂದಿಗೆ ಅನ್ಯೋನ್ಯ ಸಂಬಂಧಗಳನ್ನು ಹೊಂದಿವೆ. ಆಟಗಳ ಪ್ರಾದೇಶಿಕ ಭಿನ್ನತೆಗೆ ಮುಖ್ಯ ಕಾರಣ ಈ ಸಾಂಸ್ಕೃತಿಕ ಸಂಬಂಧ ಆಟಗಳು ಆಚರಣಾತ್ಮಕ ಸಂಬಂಧವನ್ನು ಪಡೆಯಲು ಮುಖ್ಯ ಕಾರಣ ಅದರ ಸಾಂಸ್ಕೃತಿಕ ಸಂಬಂಧ. ಶಿವಮೊಗ್ಗ, ಉತ್ತರಕನ್ನಡ, ಕೊಡಗು, ತಮಿಳುನಾಡುಗಳಲ್ಲಿ ಚೆನ್ನೆಮಣೆ ಆಟದ ಬಗ್ಗೆ ಮಾಡಿದ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ಹೇಳುವುದಾದರೆ ಈ ಆಟ ತಮಿಳುನಾಡಿನಲ್ಲಿ ಅದರದ್ದೇ ಆದ ಸಾಂಸ್ಕೃತಿಕ ಸಂಬಂಧ, ವೈಶಿಷ್ಟ್ಯತೆ ಮತ್ತು ಅನನ್ಯತೆಗಳನ್ನು ಉಳಿಸಿಕೊಂಡಿದೆ. ನಿಯಮಬದ್ಧ ಆಟಗಳಿಗೆ ಸಾಂಸ್ಕೃತಿಕ ಸಂಬಂಧಕ್ಕಿಂತ ರಾಷ್ಟ್ರೀಯ, ಅಂತರಾಷ್ಟ್ರೀಯಮನ್ನಣೆ ಗಳಿಸಿದ ನಿಯಮಗಳೇ ಅವುಗಳಲ್ಲಿ ಹೆಚ್ಚು ಮುಖ್ಯವಾಗುತ್ತವೆ. ಮದುವೆಯಾಟ, ದೇವರಾಟದಂಥ ಮಕ್ಕಳಾಟಗಳ ಸ್ವರೂಪ ಕೂಡ ಸಂಸ್ಕೃತಿಗೆ ತಕ್ಕಂತೆ ಬದಲಾಗುವುದು ಅನಿವಾರ್ಯವಾಗುತ್ತದೆ.

ಸಾಂಸ್ಕೃತಿಕ ಪಾರಿಭಾಷಿಕ ಸಂಬಂಧಗಳು

ಆಟಗಳಿಗೆ ತಮ್ಮದೇ ಆದ ಪಾರಿಭಾಷಿಕ ಶಬ್ದವಿರುವುದು ಸಹಜವಾಗಿದೆ. ನಿಯಮಬದ್ಧ ಆಟಗಳಲ್ಲಿ ಒಂದು ಆಟಕ್ಕೆ ನಿರ್ದಿಷ್ಟವಾದ ಪಾರಿಭಾಷಿಕ ಶಬ್ದಗಳಿರುವುದಾದರೂ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅವುಗಳ ಉಪಯೋಗ ಒಂದೇ ಆಗಿರುತ್ತದೆ. ಪ್ರತಿಯೊಂದು ಬುಡಕಟ್ಟು ಆಟಗಳಿಗೂ ಸೋಲು-ಗೆಲುವು ಹಾಗೂ ಆಟದ ಹಂತಗಳನ್ನು ಸೂಚಿಸುವುದಕ್ಕೆ ಕೆಲವು ನಿರ್ದಿಷ್ಟ ಪಾರಿಭಾಷಿಕ ಶಬ್ದಗಳಿರುತ್ತವೆ. ಹೀಗೆ ಬಳಸುವ ಪಾರಿಭಾಷಿಕ ಶಬ್ದಕ್ಕೂ

ಸಂಸ್ಕೃತಿಗೂ ಅನ್ಯೋನ್ಯವಾದ ಸಂಬಂಧವಿರುವುದನ್ನು ಗುರುತಿಸಬಹುದಾಗಿದೆ. ಸೋಲಿಗೆ 'ಗಟ್ಟಿ ಆಪಿನಿ' (ಘಟ್ಟಿ ಆಗುವುದು), 'ಗುಟ್ಟೊ ಗ್ಪೋಪಿನಿ' (ಘಟ್ಟಕ್ಕೆ ಹೋಗುವುದು), 'ಗಟ್ಟಿಮಿತರನಿ' (ಘಟ್ಟಿ ಹತ್ತುವುದು), 'ಮದಿಮ ಆಪಿನಿ' (ಮದುವೆ ಆಗುವುದು)ಈ 'ತಪ್ಪುದ ಕಟ್ಟಿ ತುಂಬುನಿ' (ಸೊಪ್ಪಿನ ಕಟ್ಟಿ ಹೋರುವುದು), 'ಪಂಕ್ ದ ಕಟ್ಟಿ ತುಂಬುನಿ' (ಕೂದಲು ಹೊರವುದು), 'ಪೊರಿ ಆಪಿನಿ' (ಹೊದಳು ಬಡಿಸುವುದು) ಇತ್ಯಾದಿ ಶಬ್ಧಗಳನ್ನು ಉಪಯೋಗಿಸಲಾಗುತ್ತದೆ. ಗೆಲುವನ್ನು ಸೂಚಿಸಲು 'ಬುಲೆ ಆಡಿನಿ' (ಬೆಳೆ ಆಗುವುದು), 'ಗೊಬ್ಬು ಆಡಿನಿ' (ಆಟ ಆಗುವುದು), 'ಪರ್ದಾಪುನ್ ' (ಹಣ್ಣಾಗುವುದು), 'ಗೆಂದುನ್ ' (ಗೆಲ್ಲುವುದು), 'ಕಂಜಿಪಾಡುನು' (ಕುರು ಹಾಕುವುದು) ಇತ್ಯಾದಿ ಪದಗಳ ಬಳಕೆಯಿದೆ. ಕಬ್ಬಡಿ ಆಟದಲ್ಲಿ ಕಬ್ಬಡಿ ಆಟವನ್ನು ನಿಯಮಬದ್ಧ ಮತ್ತು ಬುಡಕಟ್ಟು ಆಟವಾಗಿ ಆಡುವಾಗ ಈ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಗಮನಿಸಬಹುದು. ಬುಡಕಟ್ಟು ಆಟದಲ್ಲಿ ಅವುಟಾದಾಗ "ಸೈಪಿನಿ" (ಸಾಯುವುದು) ಎಂದು ಇನ್ನೊಂದು ಪಂಗಡದ ಒಬ್ಬನನ್ನು 'ಅವುಟ್ ' ಮಾಡಿದ ತಂಡಕ್ಕೆ ತಂಡದಲ್ಲಿ ಅವುಟಾದ ಒಬ್ಬರು ಮರುಪ್ರವೇಶಿಸುವುದನ್ನು 'ಜುವ ಆಡಿನಿ' (ಬದುಕುವುದು) ಎನ್ನುತ್ತಾರೆ. ಹೀಗೆ ಬುಡಕಟ್ಟು ಆಟಗಳಲ್ಲಿ ಸಂಸ್ಕೃತಿದತ್ತವಾದ ಪಾರಿಭಾಷಿಕ ಶಬ್ಧಗಳಿವೆ.

ಧಾರ್ಮಿಕ ಆಚರಣಾತ್ಮಕ ಸಂಬಂಧ

ಬುಡಕಟ್ಟು ಆಟಗಳು ಧಾರ್ಮಿಕ ಮತ್ತು ಆಚರಣಾತ್ಮಕ ಸಂಬಂಧವನ್ನು ಉಳಿಸಿಕೊಂಡು ಬಂದಿದೆ. ಕೆಲವು ಆಟಗಳಲ್ಲಿ ಮೇಲ್ನೋಟಕ್ಕೆ ಅಂತಹ ಸಂಬಂಧಗಳು ಇಲ್ಲವೆನ್ನುವಂತಹ ರೀತಿಯಲ್ಲಿ ಕಂಡರೂ ಆಟದ ಆಳದಲ್ಲಿ ಈ ರೀತಿಯ ಸಂಬಂಧಗಳನ್ನು ಗುರುತಿಸಲು ಸಾಧ್ಯ. ಇಂತಹ ಆಚರಣಾತ್ಮಕ ನಂಬಿಕೆ, ಸಂಪ್ರದಾಯಗಳಿಂದ ಅವು ನಿಯಂತ್ರಿಸಲ್ಪಟ್ಟಿರುವುದು ಮನೋರಂಜನೆಯ ಪ್ರಧಾನವಾಗಿ ಕಾಣುವ ಹುಲಿ-ದನದಂತಹ ಆಟಗಳೆಲ್ಲಾ ದನದ ಪಾವಿತ್ರ್ಯದ ಕಲ್ಪನೆ ಧಾರ್ಮಿಕ ನಂಬಿಕೆಗಳಿಂದ ಪ್ರೇರಿತವಾದುದು. ಜುಬುರಿ ಆಟದ ದೇವರ ಕೋಣೆಯ ಕಲ್ಪನೆಯು ಇದನ್ನೇ ಸೂಚಿಸುತ್ತದೆ. ಕೆಲವೊಮ್ಮೆ ಕೆಲವು ಆಟಗಳಿಗೆ ಕಾಲ ಮತ್ತು ಪ್ರದೇಶದ ನಿಷೇಧಗಳಿರುವುದು ಇದೆ. ಹೀಗೆ ಜನಪದ ಆಟಗಳು ಧಾರ್ಮಿಕ ಆಚರಣಾತ್ಮಕ ಸಂಬಂಧವನ್ನು ಹೊಂದಿರಲು ಸಾಧ್ಯ.

ಮೌಖಿಕ ಪ್ರಸರಣ

ಈ ಬುಡಕಟ್ಟು ಆಟಗಳ ಕಲಿಕೆಯ ನೋಡುವಿಕೆ ಮತ್ತು ಮೌಖಿಕವಾಗಿಯೇ ಇರುತ್ತದೆ. ಇಲ್ಲಿ ನೇರವಾಗಿ ಆಟಗಾರರನ್ನು ತರಬೇತಿಗೊಳಿಸುವ ವ್ಯವಸ್ಥೆಯಿಲ್ಲ. ಆಟವನ್ನು ಆಡುವ ಮೂಲಕವೇ ಪ್ರಯತ್ನ ತಪ್ಪು ಮಾದರಿ (Trial and error) ಯಲ್ಲಿ ಕಲಿಕೆಯಾಗುತ್ತದೆ. ಕೆಲವೊಮ್ಮೆ ಆಟದ ಸಂದರ್ಭಕ್ಕನುಸಾರವಾಗಿ ನಿಯಮಗಳನ್ನು ರೂಪಿಸಿಕೊಳ್ಳುತ್ತಾರೆ. ಇದರಿಂದಲೇ ಕೋಚ್, ರೆಫ್ರೀ, ಅಂಪೈಯರ್ ಮೊದಲಾದ ನಿಯಮಪಾಲಕರ ಅಗತ್ಯವಿಲ್ಲದೆ ನಿಯಮಪಾಲನೆಯ ಕ್ರಿಯೆ ರೂಪುಗೊಳ್ಳುತ್ತದೆ. ಇದರಿಂದ ಬುಡಕಟ್ಟು ಆಟಗಳ ಪ್ರಸಾರ ಮೌಖಿಕವಾಗಿ ಇದೆ ಎನ್ನಬಹುದು.

ಪ್ರೇಕ್ಷಕರ ಭಾಗವಹಿಸುವಿಕೆ

ಬುಡಕಟ್ಟು ಆಟಗಳಲ್ಲಿ ಪ್ರೇಕ್ಷಕರು ವಿಶಿಷ್ಟವಾದ ರೀತಿಯಲ್ಲಿ ಭಾಗವಹಿಸುತ್ತಾರೆ. ಅವರ ಪಾತ್ರ ಆಟಗಳನ್ನು ನೋಡುವ ಕ್ರಿಯೆಗೆ ಮಾತ್ರ ಸೀಮಿತವಲ್ಲ. ಹಲವಾರು ರೀತಿಯಲ್ಲಿ ಪ್ರೇಕ್ಷಕರು ಭಾಗವಹಿಸುತ್ತಾರೆ. ಕೆಲವೊಮ್ಮೆ ಸಲಹೆಗಳನ್ನು ಕೊಡಬಹುದು; ಅಭಿಪ್ರಾಯ ವ್ಯಕ್ತಪಡಿಸಬಹುದು. ಕೆಲವೊಂದು ಸಂದರ್ಭಗಳಲ್ಲಿ ಆಟಗಾರರನ್ನು ಸಮರ್ಥಿಸಬಹುದು. ಅನಿವಾರ್ಯವಾದಾಗ ಪ್ರೇಕ್ಷಕನೇ ಆಟಗಾರನಾಗಿ ಪರಿವರ್ತಿತನಾಗುವುದೂ ಇದೆ. ಹುಲಿ-ದನ, ಚೆನ್ನೆಮಣೆ ಆಟಗಳಲ್ಲಿ ಆಟಗಾರರ ಸಂಖ್ಯೆ ನಿರ್ದಿಷ್ಟವಲ್ಲವಾದುದರಿಂದ ಈ ರೀತಿ ಪ್ರೇಕ್ಷಕರಿಗೆ ಸ್ವಾತಂತ್ರ್ಯವಿದೆ. ನಿಯಮಬದ್ಧ ಆಟಗಳಲ್ಲಿ ಸಾಮಾನ್ಯವಾಗಿ ಪ್ರೇಕ್ಷಕನ ಕ್ರಿಯೆ ನೋಡುವುದಕ್ಕಷ್ಟೇ ಸೀಮಿತ. ಆದರೆ ಬುಡಕಟ್ಟು ಆಟಗಳಲ್ಲಿ ಇಲ್ಲೂ ಮುಕ್ತತೆ ಇದೆ.

ಹೀಗೆ ಮುಕ್ತಬಂಧ, ಸಾಂಸ್ಕೃತಿಕ ಸಂಬಂಧ, ಧಾರ್ಮಿಕ ನಂಟು, ವಿಶಿಷ್ಟ ಪಾರಿಭಾಷಿಕ ಶಬ್ದಗಳು, ಕ್ರಿಯಾತ್ಮಕತೆ ಮತ್ತು ನಾಟಕೀಯತೆ, ಪಾಠಾಂತರಗಳು, ಮೌಖಿಕ ಪ್ರಸರಣ, ಪ್ರೇಕ್ಷಕರ ಭಾಗವಹಿಸುವಿಕೆ ಇವು ಮುಖ್ಯ ಲಕ್ಷಣಗಳಾಗಿವೆ. ಈ ದೃಷ್ಟಿಯಿಂದಲೇ ಇವುಗಳನ್ನು ನಿಯಮಬದ್ಧ ಆಟಗಳಿಗಿಂತ ಭಿನ್ನವಾಗಿ ಗುರುತಿಸಬಹುದು.

(ನೋಡಿ : ತುಳುನಾಡಿನ ಜನಪದ ಆಟಗಳು, ೨೦೦೦, ಡಾ. ಗಣನಾಥ ಎಕ್ಕರು, ಪು. ೨೩-೩೦)

ಬುಡಕಟ್ಟು ಕ್ರೀಡೆಗಳು

ಸಂಗ್ರಹಿಸಿದ ಆಟಗಳನ್ನು ವರ್ಗೀಕರಿಸುವುದು ತುಂಬಾ ತೊಡಕಿನ ಕೆಲಸ. ಯಾವ ಬಗೆಯಲ್ಲಿ ವರ್ಗೀಕರಿಸಿದರೂ ವರ್ಗೀಕರಣ ಪರಿಪೂರ್ಣವಾಗುತ್ತದೆಯೆಂದು ಧೈರ್ಯವಾಗಿ ಹೇಳಲಾಗದು. ಆಟಗಳನ್ನು ಹೊರಂಗಣ ಹಾಗೂ ಒಳಾಂಗಣ ಆಟಗಳೆಂದು ವರ್ಗೀಕರಿಸುವುದುಂಟು. ಹೀಗೆ ವಿಶಾಲ ತಳಹದಿಯ ಮೇಲೆ ಆಟಗಳನ್ನು ಎರಡು ಬಗೆಯಲ್ಲಿ ವಿಭಜನೆಗೆ ಅಳವಡಿಸಿಕೊಂಡು ಅಭ್ಯಸಿಸುವುದು ಹೆಚ್ಚಿನ ಪ್ರಯೋಜನವನ್ನೂ ನೀಡಲಾರದು ಕೆಲವು ಎರಡು ಪಂಗಡಕ್ಕೆ ಸೇರಿದಂಥವು.

ಗಂಡುಮಕ್ಕಳು ಹೆಣ್ಣುಮಕ್ಕಳು ಆಟವೆಂದು ವಿಭಾಗ ಮಾಡುವುದಿದೆ. ಆದರೆ ಬುಡಕಟ್ಟು ಆಟಗಳನ್ನು ಚಿಕ್ಕವರಿರುವಾಗ ಗಂಡು ಹೆಣ್ಣೆಂಬ ಭೇದವಿಲ್ಲದೆ ಎಲ್ಲರೂ ಆಡುತ್ತಾರೆ. ಇಷ್ಟೇ ಅಲ್ಲದೆ ಕೆಲವೆಡೆಯಲ್ಲಿ ಹೆಣ್ಣು ಮಕ್ಕಳಾಟವೆಂದು ಪರಿಗಣಿಸಲ್ಪಟ್ಟ ಆಟಗಳನ್ನು ಗಂಡುಮಕ್ಕಳು ಆಡುತ್ತಾರೆ.

ಪ್ರಮುಖ ಪ್ರಕಾರಗಳು : ವಿಶಾಲವಾದ ಕನ್ನಡ ನಾಡಿನಲ್ಲಿ ಪ್ರಚಲಿತವಿರುವ ಆಟಗಳು ನೂರಾರು ಹಲವಾರು ಆಟಗಳನ್ನು ಆಡುವ ರೀತಿ ಒಂದೇ ಬಗೆಯಾಗಿದ್ದರೂ ಅವುಗಳ ಹೆಸರುಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿವೆ. ಕೆಲವು ಕ್ರೀಡೆಗಳು ಅಲ್ಲಿಯ ಪ್ರಾದೇಶಿಕ ಪರಿಸರಕ್ಕೆ ಹೊಂದುವ ರೀತಿಯಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಪಡೆದು ಚಾಲ್ತಿಯಲ್ಲಿವೆ. ಈ ಆಟಗಳು ಪ್ರಮುಖವಾಗಿ (ಬೇಡ ಬುಡಕಟ್ಟು ಕ್ರೀಡೆಗಳು)

ಒಳಾಂಗಣ ಕ್ರೀಡೆಗಳು

ಹೊರಾಂಗಣ ಕ್ರೀಡೆಗಳು

ಒಳಾಂಗಣ ಕ್ರೀಡೆಗಳು

ಸಾಮಾನ್ಯವಾಗಿ ಮಕ್ಕಳು ಗಂಡಸರು ಹೆಂಗಸರು ಹೊರಗೆ ಹೋಗದೆ ಮನೆಯ ಒಳಗೆ ಕುಳಿತು ಮನೆಯಲ್ಲಿ ದೊರಕುವ ಹಲವಾರು ಸಣ್ಣಪುಟ್ಟ ಸಾಧನಗಳನ್ನು ಬಳಸಿಕೊಂಡು ಆಡುವ ಕ್ರೀಡೆಗಳನ್ನು ಒಳಾಂಗಣ ಕ್ರೀಡೆಗಳೆಂದು ಗುರುತಿಸಬಹುದು.

ಹೊರಾಂಗಣ ಕ್ರೀಡೆಗಳು

ಬಿಡುವಿನ ವೇಳೆಯಲ್ಲಿ ಗಂಡುಮಕ್ಕಳು ಹಾಗೂ ಹೆಣ್ಣುಮಕ್ಕಳು ಕೂಡಿಯೇ ಅಥವಾ ಪ್ರತ್ಯೇಕವಾಗಿಯೇ ವಿಶಾಲವಾದ ಬಯಲಿನಲ್ಲಿ ಹಲವಾರು ಸಾಧನಗಳನ್ನು ಬಳಸಿಕೊಂಡು ಆಡುವ ಕ್ರೀಡೆಗಳನ್ನು ಇಲ್ಲಿ ಗುರುತಿಸಬಹುದು.

ಹೊರಾಂಗಣ ಕ್ರೀಡೆಗಳು

೧. ಕುಂಟಾಪಿಲ್ಲೆ
೨. ಕೆರೆದಡ ಆಟ
೩. ಖೋ ಖೋ
೪. ಗೋಲಿಯಾಟ
೫. ಬಗುರಿಯಾಟ
೬. ಬಲಪ್ರಯೋಗದ ಆಟ
೭. ಮರಕೋತಿ ಆಟ
೮. ನಾಟ್ಯದ ಆಟ
೯. ಚಿನ್ನದಾಂಡ ಅಥವಾ ಚಿನ್ನಿಕೋಲು
೧೦. ಚೆಂಡಾಟ
೧೧. ಗಜ್ಜುಗದ ಆಟ
೧೨. ಹಗ್ಗದಾಟ
೧೩. ಗಾಡಿಯಾಟ
೧೪. ದೋಣಿಯ ಆಟ
೧೫. ಪಲ್ಲಕ್ಕಿಯಾಟ
೧೬. ರಥದ ಆಟ
೧೭. ಅಕ್ಕಿಚೀಲ ಎತ್ತುವ ಸ್ಪರ್ಧೆ
೧೮. ಉಯ್ಯಾಲೆ
೧೯ ಕಪ್ಪೆಯಾಟ
೨೦. ಕಬ್ಬಡಿಯಾಟ
೨೧. ಕುಸ್ತಿ
೨೨. ಗೋಣಿಚೀಲ ಆಟ
೨೩. ಚಾರುಬಂಡಿ
೨೪. ಟೊಂಕಾಟ (ಟೊಂಕೆ)
೨೫. ಲಗೋರಿ
೨೬. ಗಣಪತಿ ಆಟ

೨೭. ಗುಂಡು ಎತ್ತುವ ಸ್ಪರ್ಧೆ

೨೮. ಬಂಡಿಗಾಲಿ ಹಾಕುವ ಸ್ಪರ್ಧೆ

೨೯. ಬಂಡಿ ಎಳೆಯುವ ಸ್ಪರ್ಧೆ

೩೦. ಕಾಯಿ ಸುಲಿಯುವುದು

೩೧. ಕಾಯಿ ಒಡೆಯುವುದು

೩೨. ಕಣ್ಣುಮುಚ್ಚಾಲೆ ಆಟ

೩೩. ರತ್ತೊ ರತ್ತೊ ಆಟ

೩೪. ಸೋಡಾಟ

೩೫. ನೆಲ ಬಂಡೆಯಾಟ

೩೬. ಚೀಟಿ ಆಟ

೩೭. ಬಂಡಿಗಳ ಸ್ಪರ್ಧೆ

ಒಳಾಂಗಣ ಕ್ರೀಡೆಗಳು

೧. ಆಣಿಕಲ್ಲು ಆಟ

೨. ಚಾಕಬಾರ ಅಥವಾ ಕಟ್ಟೆಮನೆ ಆಟ

೩. ಕಳ್ಳ ಪೋಲೀಸ್ ಆಟ

೪. ಉಪ್ಪೇರವು ಆಟ

೫. ಹುಣಸೇಬೀಜದ ಆಟ

೬. ಸರಿ ಬೇಸೆದಾಟ

೭. ಚುಕ್ಕೆಯಾಟ

೮. ನೆನಪಿನ ಆಟ

೯. ಗೊಟ ಗೋಣಿಯಾಟ

೧೦. ಬಗಟೇ ಬಗರಿ ಆಟ

೧೧. ಕಾಯಿ ಹೊಡೆಯುವುದು

೧೨. ಕುಸ್ತಿ

೧೩. ಭಾರ ಎತ್ತುವುದು

೧೪. ಅಕ್ಕಿಚೀಲ ಎತ್ತುವ ಸ್ಪರ್ಧೆ

೧೫. ಗುಂಡು ಎತ್ತುವುದು

೧೬. ಗರಡಿ ಮಣ್ಣು ಎಳೆಯುವ ಸ್ಪರ್ಧೆ

೧೭. ಚಾವ ಆಟ - ಏಳುಮನೆ ಕಟ್ಟೆಮನೆ ಚಾವಾ

೧೮. ತುಪ್ಪ ಕಾಯಿಸುವುದು

೧೯. ಕವಡೆಯಾಟ

ಗಂಡಸರ ಕ್ರೀಡೆಗಳು

೧. ಬೇಟೆ
೨. ಓಟದ ಸ್ಪರ್ಧೆ
೩. ಕೋಲಾಟ
೪. ನಿಂಬೆಹಣ್ಣು ಉರುಳಿಸುವುದು
೫. ಮೋಡಿಯಾಟ
೬. ಹುಲಿಮನೆ ಆಟ
೭. ಹಾವಿನ ಪಟ್ಟದ ಆಟ
೮. ಭಾರ ಎತ್ತುವುದು
೯. ಬಂಡೆಗಳ ಜೂಜಾಟ
೧೦. ಕುಸ್ತಿ
೧೧. ಬಂಡಿಗಾಲಿ ಹಾಕುವುದು
೧೨. ಗುಂಡು ಎತ್ತುವುದು
೧೩. ಕಬ್ಬಡಿ
೧೪. ಅಕ್ಕಿ ಎತ್ತುವುದು
೧೫. ಪಲ್ಲಕ್ಕಿಯಾಟ
೧೬. ನಾಣ್ಯದ ಆಟ
೧೭. ಬಲಪ್ರಯೋಗ ಆಟ
೧೮. ಖೋ ಖೋ
೧೯. ಬಂಡೆ ಎಳೆಯುವುದು
೨೦. ರಾಮಸೀತೆ
೨೧. ಕಾಯಿ ಸುಲಿಯುವುದು
೨೨. ಕಾಯಿ ಹೊಡೆಯುವುದು
೨೩. ಚಾಕಬಾರ
೨೪. ಚುಕ್ಕಿಯಾಟ
೨೫. ಗರಡಿಮಣ್ಣು ಎಳೆಯುವುದು
೨೬. ಕವಡೆ
೨೭. ಹಾವಿನಪಟ್ಟ ಆಟ
೨೮. ಕಬ್ಬಿನ ಹೊರೆ ಹಾಕುವುದು
೨೯. ಗರಡಿ

ಹೆಂಗಸರ ಕ್ರೀಡೆಗಳು

೧. ಕುಂಟಾಪಿಲ್ಲೆ
೨. ಕೆರೆದಡ ಆಟ
೩. ಖೋ ಖೋ
೪. ಚೆಂಡಾಟ
೫. ಗಜ್ಜುಗದ ಆಟ
೬. ಹಗ್ಗದಾಟ
೭. ಕಂಬಾಟ
೮. ಕಬ್ಬಡಿಯಾಟ
೯. ಕೈ ಉಯ್ಯಾಲೆ
೧೦. ಚಾರುಬಂಡಿ
೧೧. ಲಗೋರಿ
೧೨. ಆಣೆಕಲ್ಲು ಆಟ
೧೩. ಚಾಕಬಾರ ಅಥವಾ ಕಟ್ಟೆಮನೆ ಆಟ
೧೪. ಉಪ್ಪೇರುಪ್ಪ ಆಟ
೧೫. ಹುಣಸೇಬೀಜದ ಆಟ
೧೬. ಚಕ್ಕುಯಾಟ
೧೭. ಗೊಟಗುಣಿಯಾಟ
೧೮. ಬಗಟೆ ಬಗರಿ
೧೯. ಚಾವ ಆಟ
೨೦. ತುಪ್ಪ ಕಾಯಿಸುವುದು
೨೧. ಕವಡೆಯಾಟ

ಮಕ್ಕಳ ಕ್ರೀಡೆಗಳು

೧. ಕುಂಟಾಪಿಲ್ಲೆ
೨. ಕೆರೆ ದಡ ಆಟ
೩. ಖೋ ಖೋ
೪. ಗೋಲಿಯಾಟ
೫. ಬಗುರಿಯಾಟ
೬. ಮರಕೋತಿಯಾಟ
೭. ನಾಣ್ಯದ ಆಟ
೮. ಚಿನ್ನಿದಾಂಡ
೯. ಚೆಂಡಾಟ
೧೦. ಗಜ್ಜುಗದ ಆಟ
೧೧. ಹಗ್ಗದಾಟ
೧೨. ಗಾಡಿಯಾಟ
೧೩. ದೋಣಿಯಾಟ
೧೪. ಪಲ್ಲಕ್ಕಿಯಾಟ
೧೫. ರಥದ ಆಟ
೧೬. ಉಯ್ಯಾಲೆ ಆಟ
೧೭. ಕುಂಟಾಟ
೧೮. ಕಬ್ಬಡಿ ಆಟ
೧೯. ಗೋಣಿಚೀಲ ಆಟ
೨೦. ಚಾರುಬಂಡಿ
೨೧. ಟೊಂಕಾಟ
೨೨. ಲಗೋರಿ
೨೩. ಗಣಪತಿಬಪ್ಪ
೨೪. ಕಣ್ಣುಮುಚ್ಚಾಲೆ
೨೫. ಆಣಿಕಲ್ಲು ಆಟ
೨೬. ಕಳ್ಳ ಪೋಲೀಸ್ ಆಟ

೨೭. ಉಪ್ಪೇರುಪ್ಪ

೨೮. ಹಣೆಸೇಬೀಜದ ಆಟ

೨೯. ನೆನಪಿನ ಆಟ

೩೦. ಗೊಟಗುಣಿಯಾಟ

೩೧. ಬಗಟೇ ಬಗುರಿ

೩೨. ಚಾವ ಆಟ

೩೩. ತುಪ್ಪ ಕಾಯಿಸುವುದು

೩೪. ಕವಡೆಯಾಟ

ಅಥ್ಲೆಟಿಕ್ಸ (ಓಟದ ಸ್ಪರ್ಧೆ)


ಓಡುವುದು, ಎಸೆಯುವುದು, ಜಿಗಿಯುವುದು ಮುಂತಾದ ನೈಸರ್ಗಿಕ ಚಲನೆಗಳು ಪ್ರಾಚೀನ ಮಾನವನ ಅಸ್ತಿತ್ವದ ಅವಿಭಾಜ್ಯ ಅಂಗಗಳಾಗಿದ್ದವು. ಪ್ರಾಚೀನ ಕಾಲದ ಮಾನವನು ಮೊದಮೊದಲು ಸಸ್ಯಹಾರಿಯಾಗಿದ್ದ ಬೇಟೆಗಾರನಾಗಿರಲಿಲ್ಲ. ತನ್ನನ್ನು ಕ್ರೂರ ಮೃಗಗಳಿಂದ ರಕ್ಷಿಸಿಕೊಳ್ಳಲು ಮೇಲ್ಕಾಣಿಸಿದ ಚಲನೆಗಳನ್ನು ಮಾನವನು ಯಾವುದೇ ತರಹದ ಆಯುಧಗಳನ್ನು ಹೊಂದಿರಲಿಲ್ಲ. ವೇಗವಾಗಿ ಓಡುವ, ಎಸೆಯುವ, ಜಿಗಿಯುವ ಚಲನೆಗಳಲ್ಲಿ ಪರಿಣಿತರಾಗಿರುವ ಮಾನವನು ಮಾತ್ರ ಕ್ರೂರ ಮೃಗಗಳಿಂದ ರಕ್ಷಣೆ ಪಡೆದುಕೊಳ್ಳುತ್ತಿದ್ದನು. ಪ್ರಾಚೀನ ಕಾಲದಲ್ಲಿ ಕಾಡುಮೃಗಗಳಿಂದ ರಕ್ಷಣೆ ಪಡೆದುಕೊಳ್ಳುವುದು ಅಷ್ಟು ಸುಲಭವಾದ ಕಾರ್ಯವಾಗಿರಲಿಲ್ಲ. ಈ ಒಂದು ಕಾರಣದಿಂದ ಮಾನವನು ಈ ಅವಿಭಾಜ್ಯ ನೈಸರ್ಗಿಕ ಚಲನೆಗಳಲ್ಲಿ ದಿನದಿಂದ ದಿನಕ್ಕೆ ಪರಿಣಿತನಾಗುತ್ತಾ ಸಾಗಿದನು. ಆತ್ಮರಕ್ಷಣೆಗಾಗಿ ಶತ್ರು ಸಂಹಾರಕ್ಕಾಗಿ ಮಾನವನ ಬದುಕಿನ ಅವಿಭಾಜ್ಯ ಅಂಗವಾದಂಥ ಈ ಚಲನೆಗಳು ಮುಂದೆ ಕಾಲಕ್ರಮೇಣ ಮನೋಲ್ಲಾಸ ಚಟುವಟಿಕೆಗಳಾಗಿ ಮಾರ್ಪಾಡು ಹೊಂದುತ್ತಾ ಮುಂದೆ ಕ್ರೀಡಾಸ್ಪರ್ಧೆಗಳಾಗಿ ಬದಲಾವಣೆ ಹೊಂದಿ ಅಥ್ಲೆಟಿಕ್ಸ್ ಎಂಬ ಹೆಸರಿನೊಂದಿಗೆ ಸಂಘಟನಾ ರೂಪದಲ್ಲಿ ಮೂಡಿಬಂದವು. ಮುಂದೆ ಸಮಯದ ಪ್ರಾಚೀನ ಗ್ರೀಕ ದೇಶದವರು ಇಂತಹ ಚಟುವಟಿಕೆಗಳನ್ನು ಸ್ಪರ್ಧಾರೂಪದಲ್ಲಿ ಸಂಘಟಿಸಲು ಪ್ರಾರಂಭಿಸಿದರು. ಪ್ರಾಚೀನ ಕಾಲದಲ್ಲಿ ಇವುಗಳಲ್ಲಿ ಪ್ರಮುಖವಾದ ಸ್ಪರ್ಧೆಯೆಂದರೆ ಓಟ. ಪ್ರಾಚೀನ ಗ್ರೀಸದಲ್ಲಿ ಕ್ರೀಡಾಪಟುಗಳು ಮರಳುಗಾಡಿನಲ್ಲಿ ಒಂದು ಪ್ರಾರಂಭದ ಗೆರೆಯನ್ನು ಹಾಕಿ ಓಟವನ್ನು ಪ್ರಾರಂಭಿಸುತ್ತಿದ್ದರು. ಇದು ಅಥ್ಲೆಟಿಕ್ಸ್ ಕ್ರೀಡೆಗಳ ಆರಂಭದ ಮೂಲ “Starting From the Scratch” ಕ್ರೀಡಾ ಪಟುಗಳು ಓಟದ ಆರಂಭಕ್ಕಾಗಿ ಮೈದಾನದಲ್ಲಿ ಚಿಕ್ಕ ಚಿಕ್ಕ ತಗ್ಗುಗಳನ್ನೂ ಸಹತೆಗೆಯುತ್ತಿದ್ದರು. ಆದರೆ ಆಧುನಿಕ ಸಮಯದಲ್ಲಿ ಕ್ರೀಡಾಪಟುಗಳು ಓಟದ ಸ್ಪರ್ಧೆಗಾಗಿ ಅತ್ಯುತ್ತಮ ಪ್ರಾರಂಭವನ್ನು ಪಡೆದುಕೊಳ್ಳಲು ‘‘Starting block” ಗಳನ್ನು ಉಪಯೋಗಿಸುತ್ತಿರುವುದನ್ನು ನಾವು ನೋಡಬಹುದು. ಓಟ ಇದು ಪ್ರಪಂಚದ ಅತ್ಯಂತ ಪ್ರಾಚೀನವಾದಂಥ ಸ್ಪರ್ಧೆ, ಪ್ರಾಚೀನ ಓಲಂಪಿಕ ಕ್ರೀಡೆಗಳಲ್ಲಿ ಓಟ ಪ್ರಮುಖವಾದ ಸ್ಪರ್ಧೆಯಾಗಿತ್ತು ಮುಂದೆ ಅಥ್ಲೆಟಿಕ್ಸ್ ತೂಗುಹಾಕಿದರು ಆಟದ ಮುಖ್ಯ ಉದ್ದೇಶಬಾಲನ್ನು ಗೋಡೆಗೆ ತೂಗುಹಾಕಿರುವ ಅಂತರದಲ್ಲಿ ವಿವಿಧತೆಯುಳ್ಳ ಬದಲಾವಣೆಯಾಗಿ ಅನೇಕ ಸ್ಪರ್ಧೆಗಳು ಸಂಘಟನೆ ವ್ಯಾಪ್ತಿಯ ಬೆಳಕಿಗೆ ಬಂದವು. ಅಥ್ಲೆಟಿಕ್ಸ್ ಕ್ರೀಡಾಕ್ಷೇತ್ರದಲ್ಲಿ ಅತ್ಯಂತ ಉತ್ತಮಮಟ್ಟದ ನಿಯಂತ್ರಣಾ ಸಮಿತಿ ಎಂದರೆ I.A.A.F. ಎಂದರೆ ‘‘ಇಂಟರನ್ಯಾಷನಲ್ ಅಮೇಚೂರ ಅಥ್ಲೆಟಿಕ ಫೆಡರೇಶನ್’’ ಈ ಸಮಿತಿಯು 1912 ರಲ್ಲಿ ಅಸ್ತಿತ್ವದಲ್ಲಿ ಬಂದಿತು. ವಿಶ್ವದ ಎಲ್ಲ ಅಥ್ಲೆಟಿಕ್ಸ್ ಸ್ಪರ್ಧೆಗಳ ಸಂಘಟನಾ ಕಾರ್ಯಕ್ರಮಗಳು ಅದೇ ರೀತಿ ಭಾರತದಲ್ಲಿ ಸಂಘಟನೆಗೊಳ್ಳುವ ವಿವಿಧ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಪಟಗಳು ಅಮೆಚೂರ ಅಥ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾ ಈ ಸಮಿತಿಯ ಮಾರ್ಗದರ್ಶನದಲ್ಲಿ ಸಂಘಟನೆಗೊಳ್ಳುವುದು.


ಆಣೆಕಲ್ಲು ಆಟ

ಇದನ್ನು ಬೇಸರ ಪರಿಹಾರಕ್ಕಾಗಿ ದೊಡ್ಡವರೂ ಆಡುವುದುಂಟು. ಇಬ್ಬರು ಅಥವಾ ಹೆಚ್ಚು ಜನ ಹೆಣ್ಣುಮಕ್ಕಳು ಸೇರಿದಾಗ ಸರದಿಯ ಪ್ರಕಾರ ಒಬ್ಬೊಬ್ಬರಾಗಿ ಆಡುತ್ತಾರೆ. ಐದು ಅಥವಾ ಎಂಟು ಕಲ್ಲುಗಳನ್ನು (ಗಜ್ಜುಗದ ಗಾತ್ರ) ತೆಗೆದುಕೊಂಡು ಆಟ ಪ್ರಾರಂಭಿಸುತ್ತಾರೆ. ಪ್ರಾರಂಭದ ಆಟಗಾರ್ತಿ ಆ ಕಲ್ಲುಗಳನ್ನು ತನ್ನ ಬೊಗಸೆಯಲ್ಲಿ ತುಂಬಿಕೊಂಡು ಒಂದು ಕಲ್ಲನ್ನು ಮೇಲಕ್ಕೆ ಎಸೆದರೆ ಉಳಿದವುಗಳನ್ನು ನೆಲದಮೇಲೆ ಹಾಕುತ್ತಾಳೆ. ಮೇಲೆ ಹಾರಿಸಿದ ಕಲ್ಲು ಕೆಳಕ್ಕೆ ಬರುವಷ್ಟರಲ್ಲೇ ನೆಲದ ಮೇಲಿನ ಕಲ್ಲುಗಳನ್ನು ಮೊದಲೇ ಒಪ್ಪಂದ ಮಾಡಿಕೊಂಡಂತೆ ಒಂದೊಂದೋ, ಎರಡೆರಡೋ, ಮೂರು ಮೂರೋ ಕಲ್ಲುಗಳನ್ನು ಉಳಿದ ಕಲ್ಲುಗಳಿಗೆ ತಾಕದಂತೆ ಜಾಗರೂಕತೆಯಿಂದ ಆಯ್ದುಕೊಂಡು ಮೇಲಿಂದ ಬರುವ ಕಲ್ಲನ್ನು ಜೊತೆ ಹಿಡಿದುಕೊಳ್ಳಬೇಕು. ಒಮ್ಮೊಮ್ಮೆ ನೆಲದ ಮೇಲೆ ಬಿದ್ದ ಕಲ್ಲುಗಳು ಎಷ್ಟೇ ದೂರ ಚದುರಿದ್ದರೂ ಅವನ್ನು ಒಟ್ಟುಗೂಡಿಸಿ ಆಯ್ದುಕೊಳ್ಳಬೇಕು. ಹೀಗೆ ಕಲ್ಲುಗಳನ್ನು ಆಯ್ದುಕೊಳ್ಳುವುದರಲ್ಲಿಯೂ ವೈವಿಧ್ಯವಿದೆ. ಒಂದು ಕಲ್ಲನ್ನು ಮಾತ್ರ ಮುಂಗೈಮೇಲೆ ಆತುಕೊಂಡು ಮತ್ತೆ ಅದು ಕೆಳಗೆ ಬೀಳದಂತೆ ಮೇಲಕ್ಕೆ ಎಸೆದು ಅಂಗೈಯಲ್ಲಿ ಹಿಡಿಯುವುದು. ಹೀಗೆ ಹಿಡಿಯುವಾಗ ಎಲ್ಲಾದರೂ ಕಲ್ಲನ್ನು ಕೈಬಿಟ್ಟರೆ ಅವರ ಆಟ ತಪ್ಪಿ ಹೋಗುತ್ತದೆ. ಆಗ ಅವಳು ಬೇರೆಯವರಿಗೆ ಆಟವನ್ನು ಬಿಟ್ಟುಕೊಡಬೇಕು. ಆಟದಲ್ಲಿ ಗೆಲ್ಲಬೇಕಾದವಳು ಒಂದು ಕಲ್ಲನ್ನು ಮೇಲೆ ಹಾರಿಸಿ ಉಳಿದ ಕಲ್ಲುಗಳನ್ನು ಅಲ್ಲಾಡಿಸದಂತೆ ಆಯ್ದುಕೊಳ್ಳುತ್ತಾ ಅಷ್ಟೇ ಒಂದು, ಆಲ ಎರಡು, ಕೋಲ ಮೂರು, ಕುಣಿಕೆ ನಾಲ್ಕು, ಪಟ್ಟಂಶೆಟ್ಟಿ, ಪಾರತವ್ವ, ನೀಲವ್ವ ಗೊಳಂ, ಗೊಟರ್ ಎಂದು ಹೇಳುತ್ತಾ ಎಲ್ಲಾ ಕಲ್ಲುಗಳನ್ನು ಗೆಲ್ಲುತ್ತಾಳೆ. ಹೀಗೆ ಒಬ್ಬೊಬ್ಬರಾಗಿ ಗೆಲ್ಲುತ್ತಾರೆ. ಸೋತವರು ಒಪ್ಪಂದದ ಪ್ರಕಾರ ಯಾವುದಾದರೂ ಆಟದ ಶಿಕ್ಷೆಗೆ ಒಳಗಾಗುತ್ತಾರೆ.

ಚನ್ನೆಮಣೆ ಆಟ

ಇದು ಒಳಾಂಗಣ ಆಟದಲ್ಲಿ ಹೆಚ್ಚು ಖುಷಿ ಕೊಡುವಂಥದ್ದು. ಹೆಚ್ಚಾಗಿ ಹೆಣ್ಣುಮಕ್ಕಳು ಕೂಡಿ ಆಡುತ್ತಾರೆ. ಇದಕ್ಕೆ ಹರಳುಗುಳಿ ಮಣೆ, ಪತ್ತಾಮಣೆ ಎಂದೂ ಕರೆಯುತ್ತಾರೆ. ಈ ಮಣೆಮರದಿಂದ ಮಾಡಿದ್ದು, ಒಂದೊಂದು ಸಾಲಿನಲ್ಲಿ ಏಳು ಏಳು ಗುಳಿಗಳನ್ನು ಮಾಡಿರುತ್ತಾರೆ. ಅದರ ಎರಡೂ ತುದಿಗಳಿಗೂ ಗೆದ್ದ ಕಾಳುಗಳನ್ನು ತುಂಬಲು ಎರಡು ಕೊಳಗಳನ್ನು ಮಾಡಿರುತ್ತಾರೆ. ಒಂದೊಂದು ಗುಳಿಗೂ ಐದೈದು ಹುಣಸೇಬೀಜ ಅಥವಾ ಹರಳುಗಳನ್ನು ಹಾಕಿಕೊಂಡು ಆಡುತ್ತಾರೆ. ಏಳುಕಾಳುಗಳನ್ನು ಹಾಕಿಕೊಂಡು ಆಡುತ್ತಾರೆ. ಇದರಲ್ಲಿ ಹಸುವಿನ ಆಟ, ಅರಸನ ಆಟ, ಕಾಶಿ ಆಟ, ಮೂಲೆಕಟ್ಟು ಆಟ ಎಂಬ ಬಗೆಗಳಿವೆ. ಹಸುವಿನ ಆಟದಲ್ಲಿ ಆಟ ಪ್ರಾರಂಭಿಸುವವರು ತಮ್ಮ ಕಡೆಯ ಸಾಲಿನ ಯಾವುದಾದರೂ ಒಂದು ಮನೆಯ (ಗುಳಿಯ) ಕಾಳುಗಳನ್ನು ತೆಗೆದುಕೊಂಡು ಮುಂದಿನ ಮನೆಗಳಿಗೆ ಹಾಕುತ್ತಾ ಹೋಗುತ್ತಾರೆ. ಕಾಳು ಮುಗಿದಾಗ ಅದರ ಹಿಂದಿನ ಮನೆಯ ಕಾಳುಗಳನ್ನು ಎತ್ತಿಕೊಂಡು ಮತ್ತೆ ಅದರ ಮುಂದಿನ ಮನೆಗಳಿ ಹಾಕುತ್ತಾ ಹೋಗುತ್ತಾರೆ. ನಡುವೆ ಎಲ್ಲೋ ಖಾಲಿಮನೆ ಸಿಗುತ್ತದೆ ಆಗ ಆ ಮನೆಯನ್ನು ಬಿಟ್ಟು ಅದರ ಮುಂದಿನ ಮನೆಯ ಕಾಳುಗಳನ್ನು ಮತ್ತು ಅದರ ಎದುರಿನ ಸಾಲಿನ ಮನೆಯ ಕಾಳುಗಳನ್ನು ತಮ್ಮ ಪಾಲಿನವುಗಳೆಂದು





ಗೊಲಟು - ಗುಣಿ ಆಟ [ಚನ್ನೆ - ಮಣೆ ಆಟ]



ಹೆಂಗಸರ ಆಣೆ ಕಲ್ಲು ಆಡುವುದು



ಚೌಕಾ ಭಾರ

ತೆಗೆದುಕೊಳ್ಳುತ್ತಾರೆ. ಹೀಗೆ ಆಡುವಾಗ ಮಧ್ಯೆ-ಮಧ್ಯೆ ಖಾಲಿ ಮನೆಗಳಿಗೆ ಕಾಳುಬಿದ್ದು, ನಾಲ್ಕುಕಾಳು ಒಟ್ಟುಗೂಡಿದರೆ ಅವನ್ನು ``ಕರು ಕಟಿದೆ`` ಎಂದು ತೆಗೆದುಕೊಳ್ಳುತ್ತಾರೆ. ಹೀಗೆ ಆಡುವಾಗ ಮುಂದಿನ ಎರಡು ಮನೆ ಖಾಲಿಬಿದ್ದು ಕಾಳು ಅಲ್ಲಿಗೇ ಮುಕ್ತಾಯವಾದರೆ ಅವರು ಆಟವನ್ನು ಬಿಟ್ಟುಕೊಡಬೇಕು. ಹೀಗೆ ಯಾರಾದರೊಬ್ಬರು ಹೆಚ್ಚು ಕಾಳುಗಳನ್ನು ಗೆಲ್ಲುವವರೆಗೂ ಆಟವನ್ನು ಮುಂದುವರೆಸುತ್ತಾರೆ. ಹೀಗೆ ಕೊನೆಯವರೆಗೂ ಆಡಿ ಒಂದು ಮನೆಯನ್ನು ತುಂಬಿಸಲಾರದಷ್ಟು ಕಾಳುಗಳನ್ನು ಉಳಿಸಿಕೊಳ್ಳದೆ ಕಳೆದುಕೊಂಡಾಗ ಅಂದರೆ ಐದು ಕಾಳುಗಳಿಗೂ ಕಡಿಮೆ ಇದ್ದಾಗ ``ಬಿತ್ತರಳು`` ಎಂದು ಒಂದೊಂದು ಮನೆಗೂ ಒಂದೊಂದು ಕಾಳುಹಾಕಿ ಆಡುವುದುಂಟು. ಸೋತವರೆಂದರೆ ಎಲ್ಲಾ ಕಾಳುಗಳನ್ನು ಕಳೆದುಕೊಂಡವರು.

ಅರಸನ ಆಟದಲ್ಲಿ ಮಣೆಯ ಎರಡು ತುದಿಯ ನಾಲ್ಕು-ನಾಲ್ಕು ಮನೆಗಳನ್ನು ಸೇನಾಪತಿಗಳು ಹಂಚಿಕೊಂಡು ಮಧ್ಯದ ಆರು ಮನೆಗಳನ್ನು ರಾಜನಿಗೆ ವಹಿಸಿಕೊಟ್ಟು ಆಟ ಆಡುವುದು. ಆಟದ ಕೊನೆಯಲ್ಲಿ ರಾಜನಿಗೆ ಒಂದೊಂದು ಕಾಳನ್ನು ಈರ್ವರೂ ''ಕಪ್ಪ'' ಎಂದು ಕೊಡುತ್ತಾರೆ. ನಾಲ್ಕು ಮಂದಿ ಆಡುವಾಗ ಇಬ್ಬರು ಮೂರು ಮನೆಗಳನ್ನು, ಇಬ್ಬರು ನಾಲ್ಕು ಮನೆಗಳನ್ನು ಹಂಚಿಕೊಂಡು ಆಡುತ್ತಾರೆ. ಮೂಲೆಕಟ್ಟುವ ಆಟ, ಕಾಶಿಯ ಆಟಗಳೂ ಕೂಡ ಒಂದು ನಿಯಮಕ್ಕೆ ಒಳಪಟ್ಟು ಆಡುವಂಥವು.

ಕಳ್ಳ ಪೋಲೀಸ್ ಆಟ

ಇದರಲ್ಲಿ ಆರು ಜನ ಭಾಗವಹಿಸಬಹುದು. ಆರು ಚೀಟಿಗಳಲ್ಲಿ ರಾಜ, ಮಂತ್ರಿ, ವೈದ್ಯ, ಪೋಲೀಸ್, ಕೋಲುಕಾರ, ಕಳ್ಳ ಎಂಬುದಾಗಿ ಹೆಸರುಗಳನ್ನು ಬರೆದು, ಆ ಚೀಟಿಗಳನ್ನು ಮೇಲೆ ತೂರಿದಾಗ ಕೆಳಕ್ಕೆ ಬಿದ್ದವುಗಳನ್ನು ಆರೂ ಜನವೂ ಕೂಡಲೇ ಒಂದೊಂದನ್ನು ಆಯ್ದುಕೊಳ್ಳುತ್ತಾರೆ. 'ರಾಜ'ನ ಚೀಟಿ ಸಿಕ್ಕವನು 'ಪೋಲೀಸ್' ಯಾರು? ಎಂದು ಪ್ರಶ್ನಿಸುತ್ತಾರೆ ಆಗ ಪೋಲೀಸ್‌ನವನು ನಾನು ಎಂದು ತಿಳಿಸುತ್ತಾರೆ. ರಾಜ ಅವನಿಗೆ ಕಳ್ಳನನ್ನು ಹಿಡಿಯುವಂತೆ ಆಜ್ಞೆ ಮಾಡುತ್ತಾನೆ. ಪೋಲೀಸನಾದವನು ತುಂಬಾ ಬುದ್ಧಿವಂತ ಹಾಗೂ ಸೂಕ್ಷ್ಮಮತಿಯಾಗಿದ್ದರೆ ಕಳ್ಳನ ಮುಖಭಾವವನ್ನು ಗ್ರಹಿಸಿಯೇ ಹಿಡಿದುಬಿಡುತ್ತಾನೆ. ಅವನ ಊಹೆ ತಪ್ಪಾಗಿದ್ದರೆ ಕೋಲುಕಾರ ಅವನಿಗೆ ಏಟನ್ನು ಕೊಡುತ್ತಾನೆ. ಕಳ್ಳನನ್ನು ಸರಿಯಾಗಿ ಹಿಡಿದುಬಿಟ್ಟರೆ ರಾಜನು ಮಂತ್ರಿಯ ಸಲಹೆ ಪಡೆದು ಕಳ್ಳನಿಗೆ ಶಿಕ್ಷೆಯನ್ನು ವಿಧಿಸುತ್ತಾನೆ.

ಉಪ್ಪೇರುಪ್ಪ ಆಟ

ಐದಾರು ಜನ ಮಕ್ಕಳು ಸೇರಿ ಆಡಬಹುದು. ಮನೆಯ ಕಂಬಗಳು ಇಲ್ಲವೇ ಮೂಲೆಗಳನ್ನು ಈ ಆಟಕ್ಕಾಗಿ ಬಳಸಿಕೊಳ್ಳುತ್ತಾರೆ. ಮೊದಲು ಉಪ್ಪು ಬೇಡುವವಳನ್ನು ನಿರ್ಧರಿಸಿಕೊಳ್ಳಲು ಮಕ್ಕಳೆಲ್ಲಾ ವೃತ್ತಾಕಾರವಾಗಿ ನಿಂತು ಒಬ್ಬೊಬ್ಬರನ್ನು ನಿರ್ದೇಶಿಸಿ ಚರ್ಲೆ, ಮರ್ಲೆ, ಪಾಕ, ತೂಕ, ಪರಂಗ್, ಲಾಟ್, ಲೂಟ್, ಚಲ್ ಎಂದು ಯಾರನ್ನು ನಿರ್ದೇಶಿಸಿ ಮುಗಿಯುತ್ತದೋ ಅವರೇ ಗೆದ್ದಂತೆ. ಹೀಗೆ ಒಬ್ಬೊಬ್ಬರಾಗಿ ಗೆದ್ದು ಕೊನೆಯಲ್ಲಿ ಉಳಿದವರು ಇತರರನ್ನು

ಹಿಡಿಯುವ ನಿರ್ದಿಷ್ಟ ಮಗುವಾಗಬೇಕಾಗುತ್ತದೆ. ಉಳಿದವರು ಒಂದೊಂದು ಕಂಬವನ್ನು ಆಶ್ರಯಿಸಿಕೊಂಡು ನಿಲ್ಲುತ್ತಾರೆ. "ಉಪ್ಪುಕೊಡು" "ಉಪ್ಪುಕೊಡು" ಎಂದು ಬೇಡುವವಳು ಪ್ರತಿಯೊಬ್ಬರ ಬಳಿಯೂ ಬರುತ್ತಾಳೆ. ಅವರು ಇಲ್ಲ ಎಂದು ಹೇಳಿ ಮುಂದಿನ ಮನೆಗೆ ಹೋಗು ಎಂದು ಹೇಳಿ ಕಳಿಸುತ್ತಾರೆ. ಅವಳು ಬೇರೆಯವರ ಬಳಿ ಬೇಡಲು ಹೋದಾಗ ಇವರು ಒಬ್ಬರಿಗೊಬ್ಬರು ಕಂಬದಿಂದ ಕಂಬಕ್ಕೆ ಸ್ಥಳ ಬದಲಾಯಿಸಬೇಕು. ಹೀಗೆ ಬದಲಾಯಿಸುವ ಸಮಯದಲ್ಲಿ ವಿಳಂಬವಾದರೆ ಬೇಡುವವಳು ಆ ಕಂಬವನ್ನು ಆಕ್ರಮಿಸಿಕೊಂಡು, ಮೊದಲು ಆ ಕಂಬವನ್ನಾಶ್ರಯಿಸಿದ್ದವಳನ್ನು ಹಿಡಿಯುವವಳನ್ನಾಗಿ ಮಾಡುತ್ತಾಳೆ. ಆಗ ಅವಳೇ "ಉಪ್ಪುಕೊಡು" ಎಂದು ಎಲ್ಲರನ್ನೂ ಬೇಡಲು ಹೋಗುತ್ತಾಳೆ. ಹೀಗೆ ಎಲ್ಲರ ಸರದಿ ಬರುವವರೆಗೂ ಆಟ ಆಡುತ್ತಾರೆ.

ಹುಣಸೇಬೀಜದ ಆಟ

ಇದನ್ನು ಇಬ್ಬರು ಅಥವಾ ಹೆಚ್ಚು ಜನ ಸೇರಿ ಆಡಬಹುದು. ಸಮನಾಗಿ ಹುಣಸೇ ಅಥವಾ ಹಾಲಿವಾಣದ ಬೀಜಗಳನ್ನು ಹಂಚಿಕೊಂಡು ಆಡಬೇಕು. ಮೊದಲು ಆಡುವವರು ಎಲ್ಲಾ ಬೀಜಗಳನ್ನು ತಮ್ಮ ಕೈಯಲ್ಲಿ ಹಿಡಿದು ನೆಲದ ಮೇಲೆ ಚೆಲ್ಲಬೇಕು. ಆಮೇಲೆ ಬಿದ್ದ ಬೀಜಗಳನ್ನು ಒಂದಕ್ಕೊಂದು ತಾಕಿಸುತ್ತಾರೆ. ಹೆಬ್ಬೆರಳಿನಿಂದ ಒಂದು ಬೀಜವನ್ನು ಮತ್ತೊಂದು ಬೀಜಕ್ಕೆ ತಾಕಿಸಿ ಅವುಗಳನ್ನು ಗೆಲ್ಲಬೇಕು. ಹೀಗೆ ತಾಕಿಸುವಾಗ ಮತ್ತೊಂದು ಬೀಜ ಅಲ್ಲಾಡಕೂಡದು. ಹೀಗೆ ಬೇರೆ ಬೀಜಗಳಿಗೆ ತಗುಲದಂತೆ ಬೀಜಗಳನ್ನು ಗೆಲ್ಲುತ್ತಾ ಆಟವನ್ನು ಮುಂದುವರಿಸಬಹುದು. ತಪ್ಪಿದ್ದಲ್ಲಿ ಬೇರೆಯವರಿಗೆ ಆಟ ಬಿಟ್ಟುಕೊಡಬೇಕು. ಎಲ್ಲವನ್ನೂ ಒಬ್ಬರಿಗೊಬ್ಬರು ಗೆದ್ದ ನಂತರ ತಮ್ಮ ಪಾಲಿಗೆ ಬಂದ ಬೀಜಗಳನ್ನು ಎಣಿಸಿಕೊಳ್ಳುತ್ತಾರೆ. ಯಾರು ಹೆಚ್ಚು ಬೀಜಗಳನ್ನು ಗೆದ್ದಿರುತ್ತಾರೋ ಅವರೇ ಗೆದ್ದಂತೆ. ಮತ್ತೆ ಮುಂದಿನ ಆಟಕ್ಕೆ ಸಮನಾಗಿ ಬೀಜಗಳನ್ನು ಹಂಚಿಕೊಂಡು ಆಡಬಹುದು.

ಸರಿ ಬೆಸದಾಟ

ಈ ಆಟವನ್ನು ಅಡಿಕೆ, ಹುಣಸೇಬೀಜ ಅಥವಾ ಹಾಲಿ ವಾಣದ ಬೀಜ ಹೀಗೆ ಯಾವುದಾದರೂ ಬೀಜಗಳನ್ನು ಇಬ್ಬರು ಸಮನಾಗಿ ಹಂಚಿಕೊಂಡು ಆಡುತ್ತಾರೆ. ಮೊದಲು ಆಟ ಪ್ರಾರಂಭಿಸುವವರು ತಮಗೆ ಇಷ್ಟಬಂದಷ್ಟನ್ನು ಒಂದು ಮುಷ್ಟಿಯಲ್ಲಿ ಬಚ್ಚಿಟ್ಟುಕೊಂಡು ಸರಿಯೋ ಬೆಸವೋ? ಎಂದ ಕೇಳುತ್ತಾರೆ. ಎದುರಾಳಿಯು ಸರಿ ಅಥವಾ ಬೆಸವನ್ನು ಊಹಿಸಿ ಹೇಳುತ್ತಾ. ಬೆಸ ಸಂಖ್ಯೆಯೆಂದರೆ ವಿಷಮಸಂಖ್ಯೆಯ ಬೀಜಗಳಿರುತ್ತವೆ. ಮೂರು, ಐದು, ಏಳು ಇತ್ಯಾದಿ. ಹೀಗೆ ಹೇಳಿದಾಗ ಸರಿಯಾಗಿದ್ದರೆ ಅಷ್ಟು ಬೀಜಗಳನ್ನು ಅವರಿಗೆ ಕೊಡಬೇಕು. ತಪ್ಪಾಗಿದ್ದರೆ ಅಷ್ಟೇ ಸಂಖ್ಯೆಯ ಬೀಜಗಳನ್ನು ಸೇರಿಸಿ ಕೊಡಬೇಕು. ಹೀಗೆ ತಮ್ಮಲ್ಲಿರುವ ಎಲ್ಲಾ ಬೀಜಗಳನ್ನು ಸೋಲುವ ತನಕ, ಉಳಿದವರು ಗೆಲ್ಲುವ ತನಕ ಈ ಆಟವನ್ನು ಆಡಬಹುದು. ಮದುವೆ ಶಾಸ್ತ್ರಗಳಲ್ಲಿ ಈ ಆಟ ಪ್ರಮುಖವಾಗಿದೆ.

ಈ ಮೇಲೆ ಹೆಸರಿಸಿದ ಆಟಗಳನ್ನು ಒಳಾಂಗಣ ಆಟಗಳಲ್ಲಿ ಪ್ರಚಲಿತವಿರುವ ಆಟಗಳೆಂದು ಹೇಳಬಹುದು.

ಭೇಟೆಯಾಡುವುದು



ಭೇಟೆ ಯಾಡುವುದು

ಭೇಟೆಯಾಡುವುದು ಪ್ರಾಚೀನ ಕಾಲದಲ್ಲಿ ಮಾನವ ಮಾಂಸಹಾರಿಯಾಗಿದ್ದರು. ಮಾನವ ಮೊದಲು ಪ್ರಾಣಿಗಳನ್ನು ಭೇಟಯಾಡಿ ಹಸಿಮಾಂಸವನ್ನು ತಿನ್ನುವುದರ ಮೂಲಕ ಜೀವನ ಮಾಡುತ್ತಿದ್ದನು. ಭೇಟೆಯಾಡಲು ಚೂಪಾದ ಕಲ್ಲು, ಚೂಪಾದ ಮರದ ಕಟ್ಟಿಗೆ ಇವುಗಳ ಮೂಲಕ ಭೇಟೆಯಾಡುತ್ತೀದ್ದನು. ಕ್ರಮೇಣವಾಗಿ ಬಿಲ್ಲು, ಬಾಣ, ಟೂಬಾಕಿ, ಕತ್ತಿ, ಖಡ್ಗ ಹೀಗೆ ಆಯುದಗಳನ್ನು ಮಾಡಿಕೊಂಡು ಭೇಟೆಯಾಡುತ್ತಿದ್ದರು. ಕ್ರಮೇಣವಾಗಿ ಮಾನವ ಬೆಳವಣಿಯಾದಂತೆ ಕೃಷಿ ಚಟುವಟಿಕೆಯನ್ನು ಅವಲಂಬಿಸಿದರು. ಇದರ ಮೂಲಕ ಮಾನವ ದವಸ ಧಾನ್ಯಗಳು ಮೂಲಕ ಜೀವನ ನೆಡೆಸುತ್ತಾ ಜೊತೆಗೆ ಹಬ್ಬ ಹರಿದಿನಗಳಲ್ಲಿ ನಾಯಕ ಸಮುದಾಯದ ಜನರು ಭೇಟೆಯಾಡುವುದು ಒಂದು ವಿಶೇಷವಾದ ಸಂಭ್ರಮದ ಹಬ್ಬದಂತೆ ಕಾಣುತ್ತದೆ. ಇಂದಿಗೂ ನಾಯಕ ಸಮುದಾಯದವರು ಯುಗಾದಿ ಹಬ್ಬದ ಸಂದರ್ಭದಲ್ಲಿ ಟೂಬಾಕಿ, ಖಡ್ಗ, ಕತ್ತಿ, ತೆಗೆದು ಇವುಗಳ ಮೂಲಕ ಯುವಕರು ಗುಂಪಾಗಿ ಹಬ್ಬದ ಸಂದರ್ಭದಲ್ಲಿ ಭೇಟೆಗೆ ಕಾಡಿನಲ್ಲಿ ಹೋಗುತ್ತಾರೆ. ಯುವಕರು ಈ ಭೇಟೆಯನ್ನು ಮನೋಲ್ಲಾಸವಾಗಿಯೂ ಜೂಜಾಟವಾಗಿಯೂ ಹಬ್ಬದ ಆಚರಣೆಯ ನೆನಪಿನಲ್ಲಿಯೂ ಭೇಟೆಯಾಡುವುದು ಇಂದಿಗೂ ಕಾಣುತ್ತೇವೆ. ಭೇಟೆಯ ಮಾದರಿಯಲ್ಲಿ ಗುರಿ ಎನ್ನುವುದು ಬಹಳ ಮುಖ್ಯವಾಗಿರುತ್ತದೆ. ಇಂದಿಗೂ ಆರ್‌ಚರಿ ಎನ್ನುವಂತದ್ದು ಬಿಲ್ಲು ಬಾಣವಿಡಿದು ಗುರಿ ಒಡೆಯುವುದು. ಈ ಕೀಡ್ರೆಯು ಒಲಂಪಿಕಲ್ಲಿ ಸೇರ್ಪಡೆಯಾಗಿ ಇರುವುದು ಕಾಣುತ್ತೇವೆ.





ಮಕ್ಕಳ ಕುಂಟಾ ಪಿಲ್ಲೆ

ಹಿಡಿಯುವ ನಿರ್ದಿಷ್ಟ ಮಗುವಾಗಬೇಕಾಗುತ್ತದೆ. ಉಳಿದವರು ಒಂದೊಂದು ಕಂಬವನ್ನು ಆಶ್ರಯಿಸಿಕೊಂಡು
ನಿಲ್ಲುತ್ತಾರೆ. ``ಉಪ್ಪುಕೊಡು'' ``ಉಪ್ಪುಕೊಡು'' ಎಂದು ಬೇಡುವವಳು ಪ್ರತಿಯೊಬ್ಬರ ಬಳಿಯೂ ಬರುತ್ತಾಳೆ.
ಅವರು ಇಲ್ಲ ಎಂದು ಹೇಳಿ ಮುಂದಿನ ಮನೆಗೆ ಹೋಗು ಎಂದು ಹೇಳಿ ಕಳಿಸುತ್ತಾರೆ. ಅವಳು ಬೇರೆಯವರ ಬಳಿ
ಬೇಡಲು ಹೋದಾಗ ಇವರು ಒಬ್ಬರಿಗೊಬ್ಬರು ಕಂಬದಿಂದ ಕಂಬಕ್ಕೆ ಸ್ಥಳ ಬದಲಾಯಿಸಬೇಕು. ಹೀಗೆ ಬದಲಾಯಿಸುವ
ಸಮಯದಲ್ಲಿ ವಿಳಂಬವಾದರೆ ಬೇಡುವವಳು ಆ ಕಂಬವನ್ನು ಆಕ್ರಮಿಸಿಕೊಂಡು, ಮೊದಲು ಆ
ಕಂಬವನ್ನಾಶ್ರಯಿಸಿದ್ದವಳನ್ನು ಹಿಡಿಯುವವಳನ್ನಾಗಿ ಮಾಡುತ್ತಾಳೆ. ಆಗ ಅವಳೇ ``ಉಪ್ಪುಕೊಡು'' ಎಂದು
ಎಲ್ಲರನ್ನೂ ಬೇಡಲು ಹೋಗುತ್ತಾಳೆ. ಹೀಗೆ ಎಲ್ಲರ ಸರದಿ ಬರುವವರೆಗೂ ಆಟ ಆಡುತ್ತಾರೆ.

ಹುಣಸೇಬೀಜದ ಆಟ

ಇದನ್ನು ಇಬ್ಬರು ಅಥವಾ ಹೆಚ್ಚು ಜನ ಸೇರಿ ಆಡಬಹುದು. ಸಮನಾಗಿ ಹುಣಸೇ ಅಥವಾ ಹಾಲಿವಾಣದ
ಬೀಜಗಳನ್ನು ಹಂಚಿಕೊಂಡು ಆಡಬೇಕು. ಮೊದಲು ಆಡುವವರು ಎಲ್ಲಾ ಬೀಜಗಳನ್ನು ತಮ್ಮ ಕೈಯಲ್ಲಿ ಹಿಡಿದು
ನೆಲದ ಮೇಲೆ ಚೆಲ್ಲಬೇಕು. ಆಮೇಲೆ ಬಿದ್ದ ಬೀಜಗಳನ್ನು ಒಂದಕ್ಕೊಂದು ತಾಕಿಸುತ್ತಾರೆ. ಹೆಬ್ಬೆರಳಿನಿಂದ ಒಂದು
ಬೀಜವನ್ನು ಮತ್ತೊಂದು ಬೀಜಕ್ಕೆ ತಾಕಿಸಿ ಅವುಗಳನ್ನು ಗೆಲ್ಲಬೇಕು. ಹೀಗೆ ತಾಕಿಸುವಾಗ ಮತ್ತೊಂದು ಬೀಜ
ಅಲ್ಲಾಡಕೂಡದು. ಹೀಗೆ ಬೇರೆ ಬೀಜಗಳಿಗೆ ತಗುಲದಂತೆ ಬೀಜಗಳನ್ನು ಗೆಲ್ಲುತ್ತಾ ಆಟವನ್ನು ಮುಂದುವರಿಸಬಹುದು.
ತಪ್ಪಿದ್ದಲ್ಲಿ ಬೇರೆಯವರಿಗೆ ಆಟ ಬಿಟ್ಟುಕೊಡಬೇಕು. ಎಲ್ಲವನ್ನೂ ಒಬ್ಬರಿಗೊಬ್ಬರು ಗೆದ್ದ ನಂತರ ತಮ್ಮ ಪಾಲಿಗೆ
ಬಂದ ಬೀಜಗಳನ್ನು ಎಣಿಸಿಕೊಳ್ಳುತ್ತಾರೆ. ಯಾರು ಹೆಚ್ಚು ಬೀಜಗಳನ್ನು ಗೆದ್ದಿರುತ್ತಾರೋ ಅವರೇ ಗೆದ್ದಂತೆ. ಮತ್ತೆ
ಮುಂದಿನ ಆಟಕ್ಕೆ ಸಮನಾಗಿ ಬೀಜಗಳನ್ನು ಹಂಚಿಕೊಂಡು ಆಡಬಹುದು.

ಸರಿ ಬೆಸದಾಟ

ಈ ಆಟವನ್ನು ಅಡಿಕೆ, ಹುಣಸೇಬೀಜ ಅಥವಾ ಹಾಲಿ ವಾಣದ ಬೀಜ ಹೀಗೆ ಯಾವುದಾದರೂ ಬೀಜಗಳನ್ನು
ಇಬ್ಬರು ಸಮನಾಗಿ ಹಂಚಿಕೊಂಡು ಆಡುತ್ತಾರೆ. ಮೊದಲು ಆಟ ಪ್ರಾರಂಭಿಸುವವರು ತಮಗೆ ಇಷ್ಟಬಂದಷ್ಟನ್ನು
ಒಂದು ಮುಷ್ಟಿಯಲ್ಲಿ ಬಚ್ಚಿಟ್ಟುಕೊಂಡು ಸರಿಯೋ ಬೆಸವೋ? ಎಂದ ಕೇಳುತ್ತಾರೆ. ಎದುರಾಳಿಯು ಸರಿ ಅಥವಾ
ಬೆಸವನ್ನು ಊಹಿಸಿ ಹೇಳುತ್ತಾ. ಬೆಸ ಸಂಖ್ಯೆಯೆಂದರೆ ವಿಷಮಸಂಖ್ಯೆಯ ಬೀಜಗಳಿರುತ್ತವೆ. ಮೂರು, ಐದು, ಏಳು
ಇತ್ಯಾದಿ. ಹೀಗೆ ಹೇಳಿದಾಗ ಸರಿಯಾಗಿದ್ದರೆ ಅಷ್ಟು ಬೀಜಗಳನ್ನು ಅವರಿಗೆ ಕೊಡಬೇಕು. ತಪ್ಪಾಗಿದ್ದರೆ ಅಷ್ಟೇ ಸಂಖ್ಯೆಯ
ಬೀಜಗಳನ್ನು ಸೇರಿಸಿ ಕೊಡಬೇಕು. ಹೀಗೆ ತಮ್ಮಲ್ಲಿರುವ ಎಲ್ಲಾ ಬೀಜಗಳನ್ನು ಸೋಲುವ ತನಕ, ಉಳಿದವರು
ಗೆಲ್ಲುವ ತನಕ ಈ ಆಟವನ್ನು ಆಡಬಹುದು. ಮದುವೆ ಶಾಸ್ತ್ರಗಳಲ್ಲಿ ಈ ಆಟ ಪ್ರಮುಖವಾಗಿದೆ.

ಈ ಮೇಲೆ ಹೆಸರಿಸಿದ ಆಟಗಳನ್ನು ಒಳಾಂಗಣ ಆಟಗಳಲ್ಲಿ ಪ್ರಚಲಿತವಿರುವ ಆಟಗಳೆಂದು ಹೇಳಬಹುದು.



ಖೋ ಖೋ ಆಟ

ಕಣ್ಣಾಮುಚ್ಚಾಲೆ ಆಟ

ಮಕ್ಕಳೆಲ್ಲಾ ಸೇರಿದಾಗ ಮೊದಲು ''ಕಳ್ಳ'' ರಾಗಬೇಕಾದವರನ್ನು ನಿರ್ಧರಿಸಿಕೊಳ್ಳುತ್ತಾರೆ. ಅನಂತರ ಮನೆಯ ಮುಂಭಾಗದಲ್ಲಿ ಮಕ್ಕಳೆಲ್ಲೆಲ್ಲಾ ಸ್ವಲ್ಪ ದೊಡ್ಡವರು ಅಥವಾ ಮನೆಯಲ್ಲಿ ದೊಡ್ಡವರು ಯಾರಾದರೂ ಬಿಡುವಾಗಿರುವವರು 'ಅಜ್ಜಿ'ಯಾಗಿ ಕಳ್ಳರಾದವರ ಕಣ್ಣುಗಳನ್ನು ಕಾಣಿಸಿದಂತೆ ಮುಚ್ಚಿ 'ಕಣ್ಣಾಮುಚ್ಚೇ, ಕಾಡೆಗೂಡೆ'. ಉದ್ದಿನ ಮೂಟೆ ಉರಳೇ ಹೋಯ್ತು ನಮ್ಮಯ ಹಕ್ಕಿ, ನಿಮ್ಮಯ ಹಕ್ಕಿ ಎಲ್ಲಾರೂ ಬಚ್ಚಿಟ್ಟುಕೊಳ್ಳಿ ಎಂದು ಹೇಳಿ ಬಿಡುವಷ್ಟರಲ್ಲಿ ಎಲ್ಲರೂ ಒಂದೊಂದೆಡೆ ಬಚ್ಚಿಟ್ಟುಕೊಳ್ಳುತ್ತಾ. 'ಕಳ್ಳ'ರಾದವರು ಅವಿತುಕೊಂಡವರನ್ನು ಹುಡುಕಲು ಹೊರಟಾಗ ಅವಳಿಗೆ ಕಾಣದಂತೆ ಓಡಿಬಂದು ಬೇರೆಲ್ಲೋ ಬಚ್ಚಿಟ್ಟುಕೊಂಡಿದ್ದವರು ಓಡಿಬಂದು ಅಜ್ಜಿಯನ್ನು ಮುಟ್ಟಿ ತಿರುಗಿ ಇವರೇ ''ಕಳ್ಳ''ರಾಗ ಬೇಕಾಗುತ್ತದೆ. ಇಲ್ಲವೇ 'ಕಳ್ಳ'ರಾದವರ ಕಣ್ಣಿಗೆ ಯಾರಾದರೂ ಕಂಡುಬಿಟ್ಟರೆ ಇಂತಹವರನ್ನು 'ಕಂಡೆ ಕಂಡೆ' ಎಂದು ಅವಳು ಕೂಗಿಕೊಂಡರೆ ಅವಳೇ 'ಕಳ್ಳಿ' ಯಾಗಬೇಕಾಗುತ್ತದೆ. ಇದೊಂದು ರಮಣೀಯವಾದ ಆಟವೆಂದು ಗುರುತಿಸಬಹುದು.

ಕುಂಟಾಪಿಲ್ಲೆ (ಕುಂಟೇಬಿಲ್ಲೆ)

ಇದನ್ನು ಹೆಚ್ಚಾಗಿ ಹೆಣ್ಣುಮಕ್ಕಳು ಆಡುವುದುಂಟು. ಇದನ್ನು ಇಬ್ಬರು ಅಥವಾ ಮೂವರು ಕೂಡಿ ಆಡಬಹುದು. ಚೌಕಾಕಾರವಾಗಿ ನಾಲ್ಕು, ಆರು, ಎಂಟು ಹೀಗೆ ತಮಗೆ ಅನುಕೂಲವಾಗುವ ರೀತಿಯಲ್ಲಿ ಮನೆಗಳನ್ನು ಎರಡು ಸಾಲಿನಲ್ಲಿ ಬರೆದುಕೊಳ್ಳುತ್ತಾರೆ. ಒಂದು ಮಡಕೆ ಚೂರನ್ನು ನಿಗದಿಯಾದ ಸ್ಥಳದಿಂದ ಒಳಗೆ ಬೀಳುವಂತೆ ಎಸೆದು ಆಟವನ್ನು ಆರಂಭಿಸುತ್ತಾಳೆ. ಒಂದು ಕಾಲಿನಿಂದ ಕುಂಟಿಕೊಂಡು ಆ ಬಚ್ಚವನ್ನು ಮನೆಯಿಂದ ಮನೆಗೆ ಸಾಗಿಸಬೇಕು. ಹೀಗೆ ಬಚ್ಚವನ್ನು ನಡೆಸುವುದರಲ್ಲಿ ವೈವಿಧ್ಯವಿದೆ. ಅಂಗೈಯಲ್ಲಿ ಹಿಡಿದು, ಮುಂಗೈಮೇಲೆ ಹಿಡಿದು, ಮುಷ್ಠಿ ಮೇಲೆ ಹಿಡಿದು, ತಲೆಯಮೇಲೆ ಇಟ್ಟುಕೊಂಡು ಕುಂಟುತ್ತಾ ಮನೆಗಳನ್ನು ದಾಟುತ್ತಾಳೆ. ಕೊನೆಗೆ ಬಚ್ಚವನ್ನು ಹಣೆಯಮೇಲೆ ಇಟ್ಟುಕೊಂಡು ಆಡುತ್ತಾಳೆ. ಕೊನೆಗೆ ನಾಲ್ಕು ಮನೆಗಳಾಚೆ ನಿಂತು ಆ ಬಚ್ಚವನ್ನು ಎಸೆದು ಕಣ್ಣುಮುಚ್ಚಿಕೊಂಡು ಒಂದೊಂದೇ ಮನೆಗಳನ್ನು ಗೆರೆಯಮೇಲೆ ಕಾಲಿಡದಂತೆ ''ಅಮಗೆ ಅಮಟೆ'' (Am i right or am I did not) ಎನ್ನುತ್ತಾ ಕುಂಟಿಕೊಂಡು ಕೊನೆಯ ಮನೆಯಿಂದ ಹಾರಿ ಬಚ್ಚದ ಮೇಲೆ ಕಾಲಿಡಬೇಕು. ಹೀಗೆ ಹಾರುವಾಗ ಬಚ್ಚದ ಮೇಲೆ ಕಾಲಿಡಬೇಕು. ಹೀಗೆ ಹಾರುವಾಗ ಬಚ್ಚದ ಮೇಲೆ ಕಾಲು ಇಡಲಾಗದಷ್ಟು ದೂರ ಇದ್ದರೆ, ಅವಳು ಆಟ ಬಿಟ್ಟುಕೊಡಬೇಕಾಗುತ್ತದೆ. ಬಚ್ಚಕ್ಕೆ ಸರಿಯಾಗಿ ಕಾಲು ತಾಕಿಸಿದರೆ ಅದನ್ನು ಕೈಯಿಂದ ತೆಗೆದುಕೊಂಡು ಮನೆಗಳಿಗೆ ಬೆನ್ನುಹಾಕಿ ಹಿಂತಿರುಗಿ ನೋಡದೇ ಯಾವುದಾದರೂ ಒಂದು ಮನೆಯೊಳಗೆ ಬೀಳುವಂತೆ ಎಸೆಯಬೇಕು. 'ಬಚ್ಚ' ಮನೆಯ ಒಳಗೆ ಬಿದ್ದರೆ ಆ ಮನೆಯನ್ನು ಅವಳು ಸಂಪಾದಿಸಿದಂತಾಗುತ್ತದೆ. ಮನೆಯೊಳಗೆ ಬೀಳದೆ ಗೆರೆಯ ಮೇಲೋ ಅಥವಾ ಬೇರೆ ಕಡೆಯೋ ಬಿದ್ದರೆ ಅವಳ ಆಟ ತಪ್ಪಿಹೋದಂತೆ. ಹೀಗೆ 'ಮನೆ'ಗಳನ್ನು ಯಾರು ಹೆಚ್ಚು ಸಂಪಾದಿಸುತ್ತಾರೋ ಅವರು ಗೆದ್ದಂತೆ. ಮತ್ತೊಬ್ಬಳು ಆಡುವಾಗ ಒಬ್ಬಳು ಸಂಪಾದಿಸಿದ ಮನೆಯನ್ನು ಹಾರಿ ಕುಂಟಿಕೊಂಡು ಮುಂದಿನ ಮನೆಗೆ ನೆಗೆದು ಆಡಬೇಕು. ಇದರಲ್ಲೇ ಏಳು ಮನೆಯನ್ನು ಬರೆದುಕೊಂಡು ಹಾಗೂ ''ರಾಕೇಟ್ '' ರೀತಿ ಬರೆದುಕೊಂಡು ಆಡುತ್ತಾರೆ.

ಕಣ್ಣಾಮುಚ್ಚಾಲೆ ಆಟ

ಮಕ್ಕಳೆಲ್ಲಾ ಸೇರಿದಾಗ ಮೊದಲು "ಕಳ್ಳ" ರಾಗಬೇಕಾದವರನ್ನು ನಿರ್ಧರಿಸಿಕೊಳ್ಳುತ್ತಾರೆ. ಅನಂತರ ಮನೆಯ ಮುಂಭಾಗದಲ್ಲಿ ಮಕ್ಕಳೆಲ್ಲೆಲ್ಲಾ ಸ್ವಲ್ಪ ದೊಡ್ಡವರು ಅಥವಾ ಮನೆಯಲ್ಲಿ ದೊಡ್ಡವರು ಯಾರಾದರೂ ಬಿಡುವಾಗಿರುವವರು 'ಅಜ್ಜಿ'ಯಾಗಿ ಕಳ್ಳರಾದವರ ಕಣ್ಣುಗಳನ್ನು ಕಾಣಿಸಿದಂತೆ ಮುಚ್ಚಿ 'ಕಣ್ಣಾಮುಚ್ಚೇ, ಕಾಡೆಗೂಡೆ', ಉದ್ದಿನ ಮೂಟೆ ಉರಳೇ ಹೋಯ್ತು ನಮ್ಮಯ ಹಕ್ಕಿ, ನಿಮ್ಮಯ ಹಕ್ಕಿ ಎಲ್ಲಾರೂ ಬಚ್ಚಿಟ್ಟುಕೊಳ್ಳಿ ಎಂದು ಹೇಳಿ ಬಿಡುವಷ್ಟರಲ್ಲಿ ಎಲ್ಲರೂ ಒಂದೊಂದೆಡೆ ಬಚ್ಚಿಟ್ಟುಕೊಳ್ಳುತ್ತಾ. 'ಕಳ್ಳ'ರಾದವರು ಅವಿತುಕೊಂಡವರನ್ನು ಹುಡುಕಲು ಹೊರಟಾಗ ಅವಳಿಗೆ ಕಾಣದಂತೆ ಓಡಿಬಂದು ಬೇರೆಲ್ಲೋ ಬಚ್ಚಿಟ್ಟುಕೊಂಡಿದ್ದವರು ಓಡಿಬಂದು ಅಜ್ಜಿಯನ್ನು ಮುಟ್ಟಿ ತಿರುಗಿ ಇವರೇ "ಕಳ್ಳ"ರಾಗ ಬೇಕಾಗುತ್ತದೆ. ಇಲ್ಲವೇ 'ಕಳ್ಳ'ರಾದವರ ಕಣ್ಣಿಗೆ ಯಾರಾದರೂ ಕಂಡುಬಿಟ್ಟರೆ ಇಂತಹವರನ್ನು 'ಕಂಡೆ ಕಂಡೆ' ಎಂದು ಅವಳು ಕೂಗಿಕೊಂಡರೆ ಅವಳೇ 'ಕಳ್ಳಿ' ಯಾಗಬೇಕಾಗುತ್ತದೆ. ಇದೊಂದು ರಮಣೀಯವಾದ ಆಟವೆಂದು ಗುರುತಿಸಬಹುದು.

ಕುಂಟಾಪಿಲ್ಲೆ (ಕುಂಟೇಬಿಲ್ಲೆ)

ಇದನ್ನು ಹೆಚ್ಚಾಗಿ ಹೆಣ್ಣುಮಕ್ಕಳು ಆಡುವುದುಂಟು. ಇದನ್ನು ಇಬ್ಬರು ಅಥವಾ ಮೂವರು ಕೂಡಿ ಆಡಬಹುದು. ಚೌಕಾಕಾರವಾಗಿ ನಾಲ್ಕು, ಆರು, ಎಂಟು ಹೀಗೆ ತಮಗೆ ಅನುಕೂಲವಾಗುವ ರೀತಿಯಲ್ಲಿ ಮನೆಗಳನ್ನು ಎರಡು ಸಾಲಿನಲ್ಲಿ ಬರೆದುಕೊಳ್ಳುತ್ತಾರೆ. ಒಂದು ಮಡಕೆ ಚೂರನ್ನು ನಿಗದಿಯಾದ ಸ್ಥಳದಿಂದ ಒಳಗೆ ಬೀಳುವಂತೆ ಎಸೆದು ಆಟವನ್ನು ಆರಂಭಿಸುತ್ತಾಳೆ. ಒಂದು ಕಾಲಿನಿಂದ ಕುಂಟಿಕೊಂಡು ಆ ಬಚ್ಚವನ್ನು ಮನೆಯಿಂದ ಮನೆಗೆ ಸಾಗಿಸಬೇಕು. ಹೀಗೆ ಬಚ್ಚವನ್ನು ನಡೆಸುವುದರಲ್ಲಿ ವೈವಿಧ್ಯವಿದೆ. ಅಂಗೈಯಲ್ಲಿ ಹಿಡಿದು, ಮುಂಗೈಮೇಲೆ ಹಿಡಿದು, ಮುಷ್ಠಿ ಮೇಲೆ ಹಿಡಿದು, ತಲೆಯಮೇಲೆ ಇಟ್ಟುಕೊಂಡು ಕುಂಟುತ್ತಾ ಮನೆಗಳನ್ನು ದಾಟುತ್ತಾಳೆ. ಕೊನೆಗೆ ಬಚ್ಚವನ್ನು ಹಣೆಯಮೇಲೆ ಇಟ್ಟುಕೊಂಡು ಆಡುತ್ತಾಳೆ. ಕೊನೆಗೆ ನಾಲ್ಕು ಮನೆಗಳಾಚೆ ನಿಂತು ಆ ಬಚ್ಚವನ್ನು ಎಸೆದು ಕಣ್ಣುಮುಚ್ಚಿಕೊಂಡು ಒಂದೊಂದೇ ಮನೆಗಳನ್ನು ಗೆರೆಯಮೇಲೆ ಕಾಲಿಡದಂತೆ "ಅಮಗೆ ಅಮಟೆ" (Am i right or am I did not) ಎನ್ನುತ್ತಾ ಕುಂಟಿಕೊಂಡು ಕೊನೆಯ ಮನೆಯಿಂದ ಹಾರಿ ಬಚ್ಚದ ಮೇಲೆ ಕಾಲಿಡಬೇಕು. ಹೀಗೆ ಹಾರುವಾಗ ಬಚ್ಚದ ಮೇಲೆ ಕಾಲಿಡಬೇಕು. ಹೀಗೆ ಹಾರುವಾಗ ಬಚ್ಚದ ಮೇಲೆ ಕಾಲು ಇಡಲಾಗದಷ್ಟು ದೂರ ಇದ್ದರೆ, ಅವಳು ಆಟ ಬಿಟ್ಟುಕೊಡಬೇಕಾಗುತ್ತದೆ. ಬಚ್ಚಕ್ಕೆ ಸರಿಯಾಗಿ ಕಾಲು ತಾಕಿಸಿದರೆ ಅದನ್ನು ಕೈಯಿಂದ ತೆಗೆದುಕೊಂಡು ಮನೆಗಳಿಗೆ ಬೆನ್ನುಹಾಕಿ ಹಿಂತಿರುಗಿ ನೋಡದೇ ಯಾವುದಾದರೂ ಒಂದು ಮನೆಯೊಳಗೆ ಬೀಳುವಂತೆ ಎಸೆಯಬೇಕು. 'ಬಚ್ಚ' ಮನೆಯ ಒಳಗೆ ಬಿದ್ದರೆ ಆ ಮನೆಯನ್ನು ಅವಳು ಸಂಪಾದಿಸಿದಂತಾಗುತ್ತದೆ. ಮನೆಯೊಳಗೆ ಬೀಳದೆ ಗೆರೆಯ ಮೇಲೋ ಅಥವಾ ಬೇರೆ ಕಡೆಯೋ ಬಿದ್ದರೆ ಅವಳ ಆಟ ತಪ್ಪಿಹೋದಂತೆ. ಹೀಗೆ 'ಮನೆ'ಗಳನ್ನು ಯಾರು ಹೆಚ್ಚು ಸಂಪಾದಿಸುತ್ತಾರೋ ಅವರು ಗೆದ್ದಂತೆ. ಮತ್ತೊಬ್ಬಳು ಆಡುವಾಗ ಒಬ್ಬಳು ಸಂಪಾದಿಸಿದ ಮನೆಯನ್ನು ಹಾರಿ ಕುಂಟಿಕೊಂಡು ಮುಂದಿನ ಮನೆಗೆ ನೆಗೆದು ಆಡಬೇಕು. ಇದರಲ್ಲೇ ಏಳು ಮನೆಯನ್ನು ಬರೆದುಕೊಂಡು ಹಾಗೂ "ರಾಕೇಟ್ " ರೀತಿ ಬರೆದುಕೊಂಡು ಆಡುತ್ತಾರೆ.

ಕೆರೆ-ದಡ ಆಟ

ಒಂದು ದೊಡ್ಡ ವೃತ್ತವನ್ನು ರಚಿಸಿ ಅದರ ಮೇಲೆ ಮಕ್ಕಳು ವೃತ್ತಕಾರವಾಗಿ ಗೆರೆಯ ಮೇಲೆ ನಿಲ್ಲುತ್ತಾರೆ. ಯಾರಾದರೊಬ್ಬರು ಕೆರೆ-ದಡ ಎಂದು ಹೇಳುವ ಮುಖಂಡರಾಗಿ ಮಧ್ಯದಲ್ಲಿ ನಿಲ್ಲುತ್ತಾರೆ. "ಕೆರೆ" ಎಂದಾಗ ಒಳಕ್ಕೂ "ದಡ" ಎಂದು ಹೇಳಿದಾಗ ಹಿಂದಕ್ಕೂ ಮಕ್ಕಳು ನೆಗೆಯುತ್ತಿರಬೇಕು. ಹೀಗೆ "ಕೆರೆ-ದಡ" ಹೇಳುತ್ತಿರುವಾಗ ಒಮ್ಮೆಲೇ 'ದಡ' ಎಂದು ನಿಲ್ಲಿಸಿಬಿಡಬಹುದು. ಆಗ ಕೆರೆಗೆ ಹಾರಿದವರೆಲ್ಲರೂ ಆಟದಿಂದ ವಜಾ ಆಗುತ್ತಾರೆ. ಹೀಗೆ ಕೊನೆಯವರೆಗೂ ಅಂದರೆ ಒಬ್ಬಳು ಉಳಿಯುವವರೆಗೂ ಆಟವಾಡಿ ಅವಳನ್ನು ಗೆಲ್ಲಿಸಬಹುದು.


ಇದು ಈಗಿನ "ಸಂಗೀತ ಕುರ್ಚಿ" (Musical Chair) ಆಟವನ್ನೇ ಬಹುಮಟ್ಟಿಗೆ ಹೋಲುವಂಥದ್ದಾಗಿದೆ. ಮಕ್ಕಳ ಗ್ರಹಣಶಕ್ತಿಯ ವೃದ್ಧಿಗೆ ಇಂಥ ಆಟ ತುಂಬಾ ಸಹಕಾರಿಯಾಗಿದೆ.

ಖೋಖೋ ಆಟ

ಇದು ಪ್ರಾಚೀನ ಕಾಲದ ರಾಜ ರಾಣಿಯರು ಅರಮನೆಗಳಲ್ಲಿ ಮನೋಲ್ಲಾಸಕ್ಕಾಗಿ ಕಂಬದಿಂದ ಕಂಬಕ್ಕೆ ಆಡುತ್ತಿದ್ದ ಆಟ. ಕ್ರಮೇಣವಾಗಿ ಗ್ರಾಮೀಣ ಪ್ರದೇಶದಲ್ಲಿ ಪ್ರಚಲಿತದಲ್ಲಿದೆ. ಭಾರತ ದೇಶದಲ್ಲಿ ಮಹಾರಾಷ್ಟ್ರದಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ. ಈ ಕ್ರೀಡೆಯು ವ್ಯಕ್ತಿಯ ಮನೋಲ್ಲಾಸ ಜೊತೆಗೆ ಚಲನಾತ್ಮಕ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಯಾವುದೇ ವೆಚ್ಚರಹಿತವಾಗಿದೆ. ಇದು ಕ್ರಮೇಣವಾಗಿ ೧೯೧೪ರಲ್ಲಿ ಮಹಾರಾಷ್ಟ್ರದ ಬರೋಡಾದ ಡಕ್ಕನ್ ಜಮಖಾನದಲ್ಲಿ ಆರಂಭವಾಯಿತು. ಇದನ್ನು ಯಾವುದೇ ನಿಯಮಗಳಿಲ್ಲದೆ ಆರಂಭದಲ್ಲಿ ಆಡುತ್ತಿದ್ದರು. ನಂತರ ೧೯೫೭ರಲ್ಲಿ ಇದರ ನಿಯಮಗಳು ರೂಪಿತವಾದವು. ಈ ಕ್ರೀಡೆಯು ಇತರ ರಾಜ್ಯಗಳಿಗೆ ಮಾದರಿಯಾಯಿತು. ಈ ಕ್ರೀಡೆಯನ್ನು ಯುವಕರು ಮತ್ತು ಯುವತಿಯರು ಆಡುವರು. ತಂಡದ ಬಲ ೧೨ ಜನ. ೮ ಜನರು ಕಂಬದಿಂದ ಕಂಬದ ಮಧ್ಯದ ಕೋಣೆಗಳಲ್ಲಿ ಕುಳಿತುಕೊಳ್ಳುತ್ತಾರೆ. ಒಬ್ಬರು ಕಂಬದ ಹತ್ತಿರ ಮುಕ್ತ ವಲಯದಲ್ಲಿ ನಿಲ್ಲುತ್ತಾರೆ. ಮೂರು ಜನ ಬದಲಾವಣೆ ಆಟಗಾರರಾಗಿರುತ್ತಾರೆ. ಈ ಕ್ರೀಡೆಯ ಎದುರಾಳಿ ತಂಡದವರು ೩ ಜನ ರಕ್ಷಣೆಗಾರರಾಗಿ ಮೈದಾನದಲ್ಲಿ ಪ್ರವೇಶಿಸುತ್ತಾರೆ. ಹೀಗೆ ಕ್ರೀಯಾತ್ಮಕ ದಾಳಿಗಾರನು ಖೋ ಕೊಡುವುದರ ಮೂಲಕ ಆಟವನ್ನು ಪ್ರಾರಂಭವಾಗುತ್ತದೆ. ಹೀಗೆ ಒಂಬತ್ತು ನಿಮಿಷಕ್ಕೆ ಒಂದು ಸುತ್ತಿನಂತೆ, ನಾಲ್ಕು ಸುತ್ತುಗಳಿರುತ್ತವೆ. ಒಂದು ತಂಡಕ್ಕೆ ಎರಡು ಸುತ್ತುಗಳಿದ್ದು, ಅವುಗಳಲ್ಲಿ ಹೆಚ್ಚು ಅಂಕ ಪಡೆದವರು ಗೆಲುವನ್ನು ಸಾಧಿಸುತ್ತಾರೆ.

ಗೋಲಿಯಾಟ

ಇದನ್ನು ಪ್ರಧಾನವಾಗಿ ಗಂಡುಮಕ್ಕಳ ಆಟವೆಂದು ಗುರುತಿಸಬಹುದು. ಒಮ್ಮೆಗೆ ಎಷ್ಟು ಜನ ಬೇಕಾದರೂ ಆಡಬಹುದು. ನೆಲದಲ್ಲಿ ಒಂದು ಬದು ತೋಡಿ, ನಿಗದಿಯಾದ ದೂರದಿಂದ ಬದ್ದಿನ ಕಡೆಗೆ ಒಬ್ಬೊಬ್ಬರಾಗಿ ತಮ್ಮ ತಮ್ಮ ಗೋಲಿಗಳನ್ನು ಬಿಡುತ್ತಾರೆ. ಹೀಗೆ ಬಿಡುವಾಗ ಒಂದೇ ಪಟಿಗೆ ಗೋಲಿಯನ್ನು ಬದ್ದಿಗೆ ತುಂಬಿದವನು ಗದ್ದ...



ಹಗ್ಗ ಜಗ್ಗುವ ಆಟ



ಬಗರಿ

ಇಲ್ಲವೇ ಗೋಲಿ ಬಿಟ್ಟಾಗ ಒಪ್ಪಂದದಂತೆ ಅತಿ ಹತ್ತಿರವಿರುವವನೋ (ಕುಳಿ) ಅಥವಾ ಅತಿ ದೂರವಿರುವವನೋ (ಗಟ್ಟಿ) ಮೊದಲು ಆಡಬೇಕು. ಆತ ಬದ್ದು ತುಂಬಿ ಯಾವುದಾದರೊಂದು ಗೋಲಿಗೆ ಹೊಡೆಯುತ್ತಾನೆ. ಮತ್ತೆ ಬದ್ದು ತುಂಬುತ್ತಾನೆ, ಮತ್ತೆ ಹೊಡೆಯುತ್ತಾನೆ. ಮಧ್ಯೆ ತಪ್ಪಿದರೆ ಅವನ ಆಟ ಅಲ್ಲಿಗೆ ನಿಲ್ಲುತ್ತದೆ. ಮತ್ತೆ ಮುಂದಿನ ಗೋಲಿಯವನ ಆಟ ಪ್ರಾರಂಭವಾಗುತ್ತದೆ. ಹೀಗೆ ಮೊದಲು ೧೦ ಪಾಯಿಂಟುಗಳನ್ನು ಮಾಡಿದವನು ಗೆದ್ದಂತೆ. ಒಬ್ಬನು ಮೊದಲೇ ಹತ್ತು ಮಾಡಿ ಬಿಟ್ಟರೆ ಬಾಕಿಯವರ ಲೆಕ್ಕ ವಜಾ ಆಗುತ್ತದೆ. ಹೀಗೆ ಕೊನೆಯಲ್ಲಿ ಉಳಿಯುವವನೇ ಸೋತವನೆಂದು ಹೇಳುತ್ತಾರೆ. ಸೋತವನು ತನ್ನ ಗೋಲಿಯನ್ನು ನಿಗದಿಯಾದ ದೂರದಿಂದ ಎಸೆದು ಬದ್ದಿನ ಕಡೆಗೆ ಬಿಟ್ಟು ತುಂಬಬೇಕು. ತುಂಬಿದರೆ ಮೊದಲು ಗೆದ್ದವನಿಗೆ ಆಟ ಕೊಟ್ಟಂತಾಗುತ್ತದೆ. ಆದರೆ ಗೋಲಿಯು ಬದ್ದಿಗೆ ಬೀಳದಿದ್ದರೆ ಗೆದ್ದವನು ಬದ್ದಿನ ಹತ್ತಿರದಿಂದ ಸೋತವನ ಗೋಲಿಯನ್ನು ಹೊಡೆಯ ದೂರ ಓಡಿಸುತ್ತಾನೆ. ಆ ಗೋಲಿಯನ್ನು ಸೋತವನು ಒಪ್ಪಂದದಂತೆ ಬೆರಳಿನಿಂದಲೋ ಮೊಳಕೈನಿಂದಲೋ ದೇಕ (ತಳ್ಳಿ) ಬೇಕು. ಮತ್ತು ಬದ್ದು ತುಂಬಬೇಕು. ತುಂಬಿದರೆ ಮಾತ್ರ ಆತ ಗೆದ್ದಂತೆ. ಇಲ್ಲದಿದ್ದರೆ ಮತ್ತೆ ದೇಕಬೇಕಾಗುತ್ತದೆ. ಇದರಲ್ಲೇ ಪೇಂದಾ ಆಟ, ಗುಂಡಿಯ ಆಟ ಎಂಬ ಬಗೆಗಳನ್ನು ಆಡುತ್ತಾರೆ.

ಬಗುರಿಯಾಟ

ಹಳ್ಳಿಯಲ್ಲಿ ಗಂಡುಮಕ್ಕಳು ಇದನ್ನು ತಾವೇ ತಯಾರಿಸಿಕೊಂಡ ಮರದ ಬಗುರಿಯಿಂದ ಆಡುತ್ತಾರೆ. ಇದರಲ್ಲಿ ಅಪೀಟ್ ಆಟ, ಗುನ್ನೆದ ಆಟ ಎಂಬ ಬಗೆಗಳೂ ಇವೆ. ಆಟಕ್ಕೆ ಸೇರಿದವರೆಲ್ಲಾ ತಮ್ಮ ಬಗುರಿಗಳಿಗೆ ಹುರಿ ಸುತ್ತಿಬಿಡುತ್ತಾರೆ. ಅವರಲ್ಲಿ ಯಾರು ಕೊನೆಗೆ ಹುರಿಯ ಸಹಾಯದಿಂದ ಬಗುರಿಯನ್ನು ಎತ್ತಿಕೊಳ್ಳುತ್ತಾರೋ ಅವರು ತಮ್ಮ ಬಗುರಿಯನ್ನು ಬಿಟ್ಟು ಹೊಡೆಯುತ್ತಾರೆ. ಮೊದಲೇ ಬರೆದ ವೃತ್ತದಿಂದ ಆ ಬಗುರಿ ಹೊರಬಂದ ಮೇಲೆ ಆಟವನ್ನು ಹೊಸದಾಗಿ ಪ್ರಾರಂಭಿಸುತ್ತಾರೆ. ಅಪೀಟ್ ಆಟದಲ್ಲಿ ಒಂದು ವೃತ್ತವನ್ನು ಬರೆದು ಅದರಲ್ಲಿ ಒಂದು ಕಡ್ಡಿಯನ್ನು ಇಡುತ್ತಾರೆ. ಆಟಗಾರರೆಲ್ಲಾ ಸೇರಿ ಕಡ್ಡಿಯನ್ನು ವೃತ್ತದಿಂದ ಹಾರಿಸಿ ಅಪೀಟ್ ಎಂದು ತೆಗೆದುಕೊಳ್ಳುತ್ತಾರೆ. ಹೀಗೆ ಅಪೀಟ್ ತೆಗೆದುಕೊಳ್ಳುವಲ್ಲಿ ವಿಫಲವಾದವರು ತಮ್ಮ ಬಗುರಿಗೆ ಹುರಿಸುತ್ತಿ ಇಡುತ್ತಾರೆ. ಉಳಿದವರು ಅದಕ್ಕೆ ಹೊಡೆದು ಅದನ್ನು ಆವರಣದಿಂದ ಹೊರಕ್ಕೆ ಚದುರಿಸುತ್ತಾರೆ. ಆ ಬಗುರಿಯವ ಕೂಡಲೇ ಅದನ್ನು ತೆಗೆದುಕೊಂಡು ನೆಲಕ್ಕೆ ಬಿಟ್ಟು ಅಪೀಟ್ ತೆಗೆದುಕೊಳ್ಳಬೇಕು ಇಲ್ಲದಿದ್ದರೆ ಆತ ಸೋತಂತೆ.

ಗುನ್ನದ ಆಟದಲ್ಲಿ ಎಲ್ಲರೂ ತಮ್ಮ ತಮ್ಮ ಬಗುರಿಗಳಿಗೆ ಹುರಿಸುತ್ತಿ ಬಿಟ್ಟಾಗ, ಯಾರು ಕೊನೆಯಲ್ಲಿ ಬಗುರಿಯನ್ನು ಅಪೀಟ್ ತೆಗೆದುಕೊಳ್ಳುತ್ತಾರೋ ಅವರು ತಮ್ಮ ಬಗುರಿಯನ್ನು ಇಡುತ್ತಾರೆ. ಉಳಿದವರು ಅದನ್ನು ಎಬ್ಬಿಸುತ್ತಾರೆ. ಹೀಗೆ ಹೊಡೆಯುವಾಗ ಮೊಳೆ ತಾಕಿ ಗುಂಡಿ ಬಿದ್ದರೆ ಅದನ್ನು 'ಗುನ್ನ' ಎಂದು ಕರೆಯುತ್ತಾರೆ.

ಬಲಪ್ರಯೋಗದಾಟ

ಇದರಲ್ಲಿ ಎರಡು ಪಂಗಡಗಳಿರುತ್ತವೆ. ಎರಡೂ ಕಡೆಯೂ ಐದೈದು ಮಂದಿಯನ್ನು ಹಂಚಿಕೊಂಡು ಒಂದು

ಮರ ಕೋತಿ ಆಟ



ಪಂಗಡದವರು ಮತ್ತೊಂದು ಪಂಗಡದವರ ಎದುರು ಬದುರಾಗಿ ನಿಂತುಕೊಳ್ಳುತ್ತಾರೆ. ಮಧ್ಯದಲ್ಲಿ ಒಂದು ಗಡಿರೇಖೆಯನ್ನು ಹಾಕಿಕೊಂಡಿರುತ್ತಾರೆ. ಮೊದಲು ಉಭಯ ಪಕ್ಷಗಳಲ್ಲಿದ್ದವರು ತಮಗಿಷ್ಟವಾದ ಹಣ್ಣಿನ, ಹೂವಿನ, ದೇವರ ಇತ್ಯಾದಿ ಹೆಸರುಗಳನ್ನು ಇಟ್ಟುಕೊಂಡು ಪರಸ್ಪರ ಪರಿಚಯಮಾಡಿಕೊಳ್ಳುತ್ತಾರೆ. ಅಂದರೆ ತಮ್ಮಲ್ಲಿ ಇಂಥ ಹೂವುಗಳು ಇವೆ ಎಂದು ಆದರೆ ಯಾರು ಯಾವ ಹೂವು ಎಂದು ಹೇಳಿಕೊಡುವುದಿಲ್ಲ. ಅನಂತರ ಆಟವನ್ನು ಪ್ರಾರಂಭಿಸುತ್ತಾರೆ. ಮೊದಲು ಎದುರು ಪಕ್ಕದವರು ಒಬ್ಬರಿಗೊಬ್ಬರು ಹೆಗಲಮೇಲೆ ಕೈಹಾಕಿಕೊಂಡು ಸಾಲಾಗಿ ನಿಂತು ನಾಲ್ಕೈದು ಹೆಜ್ಜೆ ಮುಂದೆ ಬರುತ್ತಾ "ವಿಮಲ ಸೆಂಟುನಾಸಿಮೇ ನಾಸಿಮೇ" ಎಂದು ಕೇಳುತ್ತಾರೆ. ಆಗ ವಿರೋಧ ಪಕ್ಷದವರು "ವಿಮಲ ಸೆಂಟು ಬೆದರಿಮೇ ಬೆದರಿಮೇ" ಎನ್ನುತ್ತಾರೆ. ಆಗ ಮತ್ತೆ ಎದುರು ಪಕ್ಷದವರು "ನಿಮಗೆ ಯಾರು ಬೇಕಮ್ಮಾ?" ಎಂದು ಪ್ರಶ್ನಿಸುತ್ತಾರೆ. ವಿರೋಧ ಪಕ್ಷದವರು ಯಾವುದಾದರೂ ಅವರ ಕಡೆಯ ಒಂದು ಹೆಸರನ್ನು ಸೂಚಿಸುತ್ತಾ "ನಮಗೆ ಸಂಪಿಗೆ ಬೇಕಮ್ಮ, ಬೇಕಮ್ಮ" ಎಂದು ಹೇಳಿದಾಗ 'ಸಂಪಿಗೆ'ಯಾದ ಹೆಸರಿನ ಹುಡುಗಿ ಮುಂದಕ್ಕೆ ಬರುತ್ತಾಳೆ. ಅವಳ ಸೊಂಟ ಹಿಡಿದು ಉಳಿದವರೆಲ್ಲಾ ಅವಳ ಹಿಂದೆ ಸಾಲಾಗಿ ಒಬ್ಬರಿಗೊಬ್ಬರು ನಿಲ್ಲುತ್ತಾರೆ. ವಿರೋಧ ಪಕ್ಷದ ಮುಖಂಡರೊಬ್ಬರನ್ನು ಮುಂದೆ-ಮುಂದೆ ಮಾಡಿ ಅವರೂ ಒಬ್ಬರಿಗೊಬ್ಬರ ಸೊಂಟ ಹಿಡಿದು ಸಾಲಾಗಿ ನಿಲ್ಲುತ್ತಾರೆ. 'ಸಂಪಿಗೆ'ಯನ್ನು ಬಲಪ್ರಯೋಗ ನಡೆಸಿ ತಮ್ಮ ಕಡೆ ಎಳೆದುಕೊಳ್ಳಲು ತೊಡಗುತ್ತಾರೆ. ಆಕಡೆಯವರೂ ಸಂಪಿಗೆಯನ್ನು ಬಿಡದಂತೆ ಹಿಂದಕ್ಕೆಳೆದುಕೊಳ್ಳುತ್ತಾರೆ. ಈ ಸೆಣಸಾಟದಲ್ಲಿ ಸಂಪಿಗೆ ಕಡೆಯವರ ಬಲ ಕಡಿಮೆಯಾಗಿ ಅವಳು ಮಧ್ಯದ ಗಡಿರೇಖೆಯನ್ನು ದಾಟಿ ಈ ಕಡೆ ಬಂದು ಬಿಟ್ಟರೆ ಇವರಿಗೆ ಒಂದು ಪಾಯಿಂಟು. ಅವರ ಬಲ ಕಡಿಮೆಯಾಗುತ್ತದೆ. ಹೀಗೆ ಒಂದು ಕಡೆಯ ಬಲವನ್ನು ಕಡಿಮೆ ಮಾಡುತ್ತಾ ತಮ್ಮ ಪಕ್ಷದ ಬಲವನ್ನು ಹೆಚ್ಚಿಸುತ್ತಾ ಆಟವನ್ನು ಮುಕ್ತಾಯಗೊಳಿಸುತ್ತಾರೆ.

ಮರಕೋತಿ ಆಟ

ಹತ್ತಾರು ಹುಡುಗರು ಸೇರಿದಾಗ ಈ ಆಟವನ್ನು ಆಡುತ್ತಾರೆ. ಕೈತಾಳ ಹಾಕುವುದರ ಮೂಲಕ 'ಕೋತಿಯಾಗಬೇಕಾದವನನ್ನು ನಿರ್ಧರಿಸಿಕೊಳ್ಳುತ್ತಾರೆ. ಆಮೇಲೆ ಹತ್ತಲು, ಇಳಿಯಲು ಸುಲಭವಾಗುವಂತಹ ಒಂದು 'ಮರ'ವನ್ನು ಹುಡುಕಿಕೊಂಡು ಅದರ ಕೆಳಗೆ ಎಲ್ಲರೂ ಸೇರುತ್ತಾರೆ.

ಆ ಮರದ ಕೆಳಗೆ ಒಂದು ಸಣ್ಣ ವೃತ್ತವನ್ನು ಬರೆದುಕೊಳ್ಳುತ್ತಾರೆ. ಒಂದು ಕೋಲನ್ನು ಮೊದಲು ಯಾರಾದರೂ ಒಬ್ಬರು ಬೀಸಿ ದೂರ ಎಸೆಯುತ್ತಾರೆ. ಕೋತಿಯಾದವನು ಆ ಕೋಲನ್ನು ಓಡಿಹೋಗಿ ತಂದು ಆ ವೃತ್ತದೊಳಗೆ ಇಟ್ಟು ಉಳಿದವರನ್ನು ಹಿಡಿಯಲು ಬರಬೇಕು. ಅವನು ಕೋಲನ್ನು ತರಲು ಓಡಿದಾಗ ಉಳಿದವರೆಲ್ಲಾ ಸರಸರನೆ ಮೇಲೆ ಹತ್ತುತ್ತಾರೆ. ಕೋತಿ ಕೋಲನ್ನು ತಂದು ವೃತ್ತದೊಳಗೆ ಇಟ್ಟು ಮರ ಹತ್ತುವಾಗ ಯಾರಾದರೊಬ್ಬರು ಆತನಿಗೆ ಗೊತ್ತಾಗದಂತೆ ಮರದಿಂದ ಜಿಗಿದು ಮತ್ತೆ ಕೋಲನ್ನು ದೂರಕ್ಕೆ ಎಸೆಯುತ್ತಾನೆ. ಆಗ ಕೋತಿಯಾದವನು ಚಾಣಾಕ್ಷನಾಗಿದ್ದರೆ ಕೂಡಲೇ ಮರದಿಂದ ಇಳಿದು ಹಾಗೆ ಎಸೆಯುವುದನ್ನು ಮುಟ್ಟಿಬಿಟ್ಟರೆ ಆತನೇ ಕೋರೆಯಾಗಬೇಕಾಗುತ್ತದೆ. ಇಲ್ಲದಿದ್ದರೆ ಮೊದಲು ಕೋರೆಯಾದವನೇ ಆ ಕೋಲನ್ನು ತರಲು ಹೋಗುತ್ತಾನೆ. ಮತ್ತೆ ಇವರು ಆತನನ್ನು ಸತಾಯಿಸುತ್ತಾರೆ. ಹೀಗೆ ಆಟ ಸಾಗುತ್ತದೆ.



ಚಿನ್ನಿ ದಂಡ

ಚಿನ್ನಿದಾಂಡು ಅಥವಾ ಚಿಣ್ಣಿಕೋಲು ಆಟ

ಇದು ಪ್ರಧಾನವಾಗಿ ಮಕ್ಕಳ ಆಟ ಹಾಗೂ ಅವರಿಗೆ ಬಹುಪ್ರಿಯವಾದ ಆಟ. ಇದಕ್ಕೆ ಒಂದು ಚಿಕ್ಕ ಕೋಲು (ಚಿನ್ನಿ) ಹಾಗೂ ಒಂದಡಿ ಉದ್ದದ ಕೋಲು (ದಾಂಡು) ಗಳನ್ನು ಬಳಸಿಕೊಳ್ಳುತ್ತಾರೆ. ಒಮ್ಮೆಲೇ ಆಟದಲ್ಲಿ ಎಷ್ಟು ಮಂದಿಯಾದರೂ ಭಾಗವಹಿಸಬಹುದು. ಮೊದಲೇ ಗುರುತುಮಾಡಿಕೊಂಡಿದ್ದ "ಪತ" ಅಥವಾ "ಬದ್ದು"ವಿನ ಹತ್ತಿರಕ್ಕೆ "ಚಿನ್ನಿ"ಯನ್ನು ಮೂರು ಅಥವಾ ನಾಲ್ಕು ಗಜ ದೂರದಿಂದ ಒಬ್ಬೊಬ್ಬರಾಗಿ ಎಸೆಯುತ್ತಾರೆ. ಚಿನ್ನಿ ನೇರವಾಗಿ ಬದುವಿನ ಹತ್ತಿರಕ್ಕೆ ಹೋಗಿ ಬಿದ್ದರೆ ಎಸೆದವರು ಗೆದ್ದಂತೆ. ಇಲ್ಲವೇ ದೂರದಲ್ಲೆಲ್ಲಾದರೂ ಬಿದ್ದಿದ್ದರೆ ಆ ಜಾಗವನ್ನು "ತೂತೂ ಕೊಂಡಿ, ರೆಂಡಸ್ಕೊಟ್ಲಿ ಬುಡುವಿನಚಾಲು, ನಾರಿಗೆ ನಾಲು, ಐದರಿಗಿರಿ, ಲಾರು ಪಟಕ, ಲೇಡಪಿಲ್ಲ" ಎಂದು ಹೇಳಿಕೊಂಡು ದಾಂಡಿನಿಂದ ಬದುವಿನವರೆಗೆ ಅಳತೆಮಾಡಿಕೊಳ್ಳುತ್ತಾ ಹೋಗುತ್ತಾನೆ. ಅನಂತರ ದಾಂಡಿನಿಂದ ಚಿಣ್ಣಿಯ ತುದಿಯನ್ನು ಎಬ್ಬಿಸಿ ಅದು ಪುಟಿಸಿಗಿದು ಮೇಲಕ್ಕೆ ಎರಗುವಂತೆ ಹೊಡೆಯುತ್ತಾನೆ. ದೂರದಲ್ಲಿದ್ದ ಮತ್ತೊಬ್ಬ ಆಟಗಾರ ಅದನ್ನು ಕಾಯ್ದುಕೊಂಡಿದ್ದು ಕೈಯಿಂದ ಹಿಡಿದು ಬಿಡಬಹುದು. ಇಲ್ಲವೇ ಅದು ಬಿದ್ದ ಸ್ಥಳದಿಂದ ಬೀಸಿಬದ್ದಿನ ಕಡೆಗೆ ಎಸೆಯುತ್ತಾನೆ. ಅದು ಸರಿಯಾಗಿ ತಲುಪಿದರೆ ಅವನು ಗೆದ್ದಂತೆ. ಹೊಡೆದವನು ಸೋತಂತೆ. ಇಲ್ಲದಿದ್ದರೆ ಹೊಡೆಯುವವನೇ ಪುನಃ ಪುನಃ ಆಡಲು ಅವಕಾಶಗಳಿರುತ್ತವೆ. ಹೀಗೆ ಆತ ಹೊಡೆಯುವುದರಲ್ಲಿ ನೂರು ಸಂಖ್ಯೆಯನ್ನು ತಲುಪಿದರೆ ಒಂದು "ಬ್ಯಾಂಕ್" ಎಂದು ಲೆಕ್ಕಹಾಕಿ ಆಟ ಮುಂದುವರಿಸುತ್ತಾರೆ. ಮುಂದೆ ಮತ್ತೊಬ್ಬ ಆಟಗಾರ ಈ ಲೆಕ್ಕವನ್ನು ತೀರಿಸಬೇಕಾಗುತ್ತದೆ.

ನಾಣ್ಯದ ಆಟ

ಒಂದು ನಾಣ್ಯವನ್ನು ತೆಗೆದುಕೊಂಡು ಅದರ ಎರಡು ಮುಖಗಳಿಗೆ ಒಂದು "ರಾಜಾ" ಮತ್ತೊಂದು "ರಾಣಿ" ಎಂದು ಹೆಸರನ್ನು ಗೊತ್ತುಮಾಡಿ ಅನಂತರ ಆಟವನ್ನು ಪ್ರಾರಂಭಿಸುತ್ತಾರೆ. ಒಬ್ಬರು ಆ ನಾಣ್ಯವನ್ನು ಮೇಲಕ್ಕೆ ಚಿಮ್ಮಿ ಅದು ಕೆಳಕ್ಕೆ ಬಂದಾಗ ಕೂಡಲೇ ಕೈಯಿಂದ ಮುಚ್ಚಿ "ರಾಜನೋ", "ರಾಣಿನೋ" ಎಂದು ಪ್ರಶ್ನಿಸುವುದು. ಎದುರಾಳಿಯು ಸರಿಯಾದ ಉತ್ತರವನ್ನು ಹೇಳಿದರೆ ಅವರಿಗೆ ಆಟವನ್ನು ಬಿಟ್ಟುಕೊಡಬೇಕು. ತಪ್ಪು ಹೇಳಿದರೆ ಇವರಿಗೆ ಪಾಯಿಂಟ್ ದೊರಕುತ್ತದೆ. ಹೀಗೆ ಹೆಚ್ಚು ಪಾಯಿಂಟ್ ಮಾಡಿದವನು ಗೆದ್ದಂತೆ.

ಚೆಂಡಾಟ

ಕೆಲವು ಗ್ರಾಮ ಪ್ರದೇಶಗಳಲ್ಲಿ ರಬ್ಬರ್ ಚೆಂಡಿಗೆ ಬಂದ ಲಾಗಿ ಸೀಗೇಜಿ ಕಾಯಿಯನ್ನೋ, ಪದ್ದಿಕಾಯಿಯನ್ನೋ ಮೆತ್ತಗೆ ಮಾಡಿಕೊಂಡು ಅದನ್ನು "ಚೆಂಡು" ಎಂದುಕೊಂಡು ಸ್ಪರ್ಧೆಗಳನ್ನೇರ್ಪಡಿಸಿಕೊಂಡು ಆಡುತ್ತಾರೆ. ಮೊದಲೇ ನಿಗಧಿಪಡಿಸಿದ ದೂರದಿಂದ ಚೆಂಡನ್ನು ಹಿಡಿದು ಗುರಿ ಹೊಡೆಯುವುದು. ಒಂದು ಮಣೆಯನ್ನು ತಮ್ಮ ಗುರಿಯಾಗಿಟ್ಟುಕೊಂಡು ಅದನ್ನು ತಮ್ಮ ಚೆಂಡಿನಿಂದ ಹೊಡೆದು ಉರುಳಿಸಬೇಕು. ಇದರಲ್ಲೂ ಕೆಲವು ನಿಯಮಗಳಿರುತ್ತವೆ. ಇಷ್ಟೇ ದೂರ ಎಂದು "ಇಷ್ಟು ಬಾರಿ" ಎಂದು ತೀರ್ಮಾನಿಸಿಕೊಂಡು ಆಡುತ್ತಾರೆ. ಅಷ್ಟರಲ್ಲಿ ಗುರಿ ಸಾಧಿಸದಿದ್ದರೆ ಮೊದಲೇ ಒಪ್ಪಂದ ಮಾಡಿಕೊಂಡಂತಹ ಶಿಕ್ಷೆಗಳನ್ನು ಅನುಭವಿಸಬೇಕಾಗುತ್ತದೆ.



ಚಿನ್ನಿ ಕೋಲಾಟ, ಮಕ್ಕಳು ಓಡುವುದು



ಚಿನ್ನಿ ಕೋಲಾಟ, ಆಟದ ಪ್ರಾರಂಭ

ರಬ್ಬರ್ ಚೆಂಡನ್ನು ಬಳಸಿ ಆಡುವ ಆಟಗಳಲ್ಲಿ "ಲಗ್ಗಿಚೆಂಡು", "ಸೂರುಚೆಂಡು", "ರಾಮಚೆಂಡು" ಇತ್ಯಾದಿ ಬಗೆಗಳಿವೆ. ಲಗ್ಗೆ ಚೆಂಡು ಆಟವನ್ನು ವಿಶಾಲವಾದ ಬಯಲಿನಲ್ಲಿ ಎಷ್ಟು ಜನವಾದರೂ ಕೂಡಿ ಆಡಬಹುದು. ಮೊದಲು ಆಟಗಾರರಲ್ಲಿ ಎರಡು ಪಂಗಡಗಳನ್ನು ಮಾಡಿಕೊಳ್ಳಬೇಕು. ಚೆಂಡನ್ನು ಹೊಡೆಯುವವರು, ಚೆಂಡನ್ನು ಕಾಯುವವರು ಎಂದು ವಿಭಾಗಿಸಿಕೊಳ್ಳಬೇಕು. ಚಪ್ಪಟೆಯಾಕಾರದ ಏಳುಕಲ್ಲುಗಳನ್ನು ಒಂದರಮೇಲೊಂದು ಜೋಡಿಸಿಟ್ಟಿರುತ್ತಾರೆ. ಚೆಂಡನ್ನು ಕಾಯಬೇಕಾದವರು ಅದರ ಎಡ ಬಲಗಳಲ್ಲಿ ನಿಂತಿರುತ್ತಾರೆ. ಹೊಡೆಯುವ ಸರದಿಯವರು ಒಬ್ಬೊಬ್ಬರಾಗಿ ಬಂದು ಆ ಲಗ್ಗಿಗೆ ಗುರಿಯಿಟ್ಟು ಹೊಡೆಯುತ್ತಾರೆ. ಒಬ್ಬರಿಗೆ ಮೂರು ಅವಕಾಶಗಳನ್ನು ಲಗ್ಗಿಗೆ ಹೊಡೆಯಲು ಕೊಡುತ್ತಾರೆ. ಅಷ್ಟರಲ್ಲಿ ಅವನು ಲಗ್ಗಿಯನ್ನು ಉರುಳಿಸಿದರೆ ಆ ಕಡೆಯವರಿಗೆ ಆಟದ ಅವಕಾಶ ಬರುತ್ತದೆ. ಒಂದುವೇಳೆ ಯಾರ ಚೆಂಡೂ ಲಗ್ಗಿಯನ್ನು ಬೀಳಿಸದಿದ್ದರೆ ಅವರ ಪಂಗಡ ಸೋತಂತೆ. ಆಗ ಎದುರು ಪಂಗಡದವರು ಹೊಡೆಯುವ ಸರದಿಗೆ ಬರುತ್ತಾರೆ. ಆದರೆ ಯಾರಾದರೂ ಲಗ್ಗಿಯನ್ನು ಉರುಳಿಸಿದರೆ ಕಾಯುವವರೆಲ್ಲ ಕೂಡಲೇ ದೂರ ದೂರ ಚದುರಿ ಓಡುತ್ತಾರೆ. ಎದುರು ಪಕ್ಷದವರು ಅದೇ ಚೆಂಡಿನಿಂದ ಓಡುವವರನ್ನು ಹೊಡೆದರೆ ಅವರು ಸೋತಂತೆ, ಇವರು ಗೆದ್ದಂತೆ. ಇಲ್ಲವೇ ತನಗೆ ಏಟು ಬೀಳದಂತೆ ಜಾಗರೂಕತೆಯಿಂದ ಓಡಿಬಂದು ಲಗ್ಗೆಯನ್ನು ಕಟ್ಟಿಬಿಟ್ಟರೆ ಅವರೇ ಗೆದ್ದಂತೆ. ಇವರು ಸೋತಂತೆ.

"ಸೂರುಚೆಂಡು" ಆಟದಲ್ಲಿ ಆಟಗಾರರೆಲ್ಲಾ ಸೇರಿ ಒಂದು ಚೆಂಡನ್ನು ತೆಗೆದುಕೊಂಡು ಮೇಲೆ ಎಸೆಯುತ್ತಾರೆ. ಅದು ಯಾರಾದರೂ ಒಬ್ಬರ ಕೈಗೆ ಬೀಳುತ್ತದೆ. ಅವನು ಅದರಿಂದ ಪಕ್ಕದಲ್ಲಿದ್ದವನಿಗೆ ಬೀಸಿ ಬೆನ್ನಿಗೆ ಹೊಡೆಯುತ್ತಾನೆ. ಅನಂತರ ಚೆಂಡಿನ ಹೊಡೆತ ತಿಂದವನು ಅದನ್ನು ಮೇಲೆ ಎಸೆಯುತ್ತಾನೆ. ಅದು ಮತ್ತೊಬ್ಬನಿಗೆ ಸಿಕ್ಕಿದಾಗ ಉಳಿದವರೆಲ್ಲಾ ದೂರ-ದೂರ ಓಡಿಹೋಗುತ್ತಾರೆ. ಇದಕ್ಕೆ "ಬೆನ್ನಿಗೆ ಹೊಡೆಯು ಆಟ" ಎಂದೂ ಕರೆಯುತ್ತಾರೆ.

"ರಾಮಚೆಂಡು" ಈ ಆಟದಲ್ಲಿ ನಾಲ್ಕೈದು ಜನ ಆಟಗಾರರು ಸೇರಿ ಸಾಲಾಗಿ ನಿಲ್ಲುತ್ತಾರೆ. ಮೊದಲು ಚೆಂಡು ಆಡಿದವನು ಅದನ್ನು ಬೀಸಿ ಪಕ್ಕದಲ್ಲಿದ್ದವನಿಗೆ ಹೊಡೆಯುತ್ತಾನೆ. ಆ ಚೆಂಡು ಸಿಕ್ಕಿದ ಆತ ತನ್ನ ಹಿಂದಿನವನಿಗೆ ಹೊಡೆಯುತ್ತಾನೆ. ಆತ ಮತ್ತೆ ಅದೇ ಚೆಂಡಿನಿಂದ ತನ್ನ ಹಿಂದಿದ್ದವನಿಗೆ ಹೊಡೆಯುತ್ತಾನೆ. ಹೀಗೆ ಚೆಂಡು ರಾಮಬಾಣದಂತೆ ಒಬ್ಬರ ಕೈಯಿಂದ ಮತ್ತೊಬ್ಬರಿಗೆ ಸಾಗುತ್ತಿರುತ್ತದೆ. ಈ ಆಟಕ್ಕೆ ಉಪಯೋಗಿಸುವ ಚೆಂಡು ಬಟ್ಟೆಯಿಂದ ನಿರ್ಮಿಸುವಂಥದಾಗಿದ್ದು, ಜೋರಾಗಿ ಏಟು ಬೀಳಬಹುದು. ಆದ್ದರಿಂದ ಬಹಳ ಚಾಕಚಕ್ಯತೆಯಿಂದ ಆಟವನ್ನೇ ಆಡಬೇಕು.

ಗಜ್ಜುಗದ ಆಟ

ಇದಕ್ಕೆ ಒಂದಷ್ಟು ಗಜ್ಜುಗಗಳು ಹಾಗೂ ಆಟಕ್ಕೆ ಸೇರಿರುವವರೆಲ್ಲರೂ ಒಂದೊಂದು "ಬಚ್ಚ"ವನ್ನು ಇಟ್ಟುಕೊಂಡಿರುತ್ತಾರೆ. ಎಲ್ಲರೂ ಇಂತಿಷ್ಟು ಗಜ್ಜುಗಗಳನ್ನು ಎಣಿಸಿ ಒಂದು ಸಣ್ಣ ಕಟ್ಟೆಯನ್ನು ಮಾಡಿ ಅದರ ಮೇಲೆ ಸಾಲಾಗಿ ಇಡುತ್ತಾರೆ. ಒಂದು ಗಜ್ಜುಗವನ್ನು ಈ ಸಾಲಿಗಿಂತ ಎತ್ತರವಾಗಿ ಇಟ್ಟಿರುತ್ತಾರೆ. ಒಂದು ಗೊತ್ತಾದ

ಗೋಲಿಯಾಟ



ಹಗ್ಗದಾಟ



ಮಾರದಿಂದ ಎಲ್ಲರೂ ತಮ್ಮ-ತಮ್ಮ `ಬಚ್ಚ'ಗಳನ್ನು ಎಸೆಯುತ್ತಾರೆ. ಮೊದಲೇ ನಿರ್ಧರಿಸಿದಂತೆ ಹೀಗೆ ಎಸೆದಾಗ ಆ ಏಟಿಗೆ ಗಜ್ಜುಗ ಈಚೆಗೆ ಹಾಕಿದರೆ ಬಳಿ ಹೊಡೆದಂತಾಗುತ್ತದೆ. ಬಚ್ಚ ಎಲ್ಲಿಯ ಗೀರಿನ ಮೇಲೆ ಬಿದ್ದರೆ ಬಿದ್ದಷ್ಟು ಗಜ್ಜುಗಗಳನ್ನು ''ವಟ್ಟಿ'' ಎಂದು ಕೊಡಬೇಕಾಗುತ್ತದೆ. ಗಜ್ಜುಗ ಸ್ವಲ್ಪ ಅಲುಗಾಡಿದರೆ ಆತನಿಗೆ ಮೊದಲು ಆಡುವ ಅವಕಾಶವಿರುತ್ತದೆ. ಇಲ್ಲವೆ ''ಹಳಿ'' ಹೊಡೆದವನಿದ್ದರೆ ಅಂಥವನಿಗೂ ಮೊದಲಾಡುವ ಅವಕಾಶವಿರುತ್ತದೆ. ಇಂಥವರು ಯಾರೂ ಇಲ್ಲದಿದ್ದಾಗ ಒಪ್ಪಂದದಂತೆ ಗಟ್ಟಿ ಅಥವಾ ಕುಳ್ಳಿ (ಅಂದರೆ ಹತ್ತಿರ ಅಥವಾ ದೂರ) ಗಜ್ಜುಗದವನು ಮೊದಲಾಡುತ್ತಾನೆ. ಹೀಗೆ ಬಚ್ಚದಿಂದ ಹೊಡೆದು ಗಜ್ಜುಗಳನ್ನು ಹೊರ ಹೊರಡಿಸಿದವುಗಳನ್ನು ಅವನು ತನ್ನ ಗಜ್ಜುಗಗಳೆಂದು ಇಟ್ಟುಕೊಳ್ಳುತ್ತಾನೆ. ಹೀಗೆ ಯಾರು ಹೆಚ್ಚು ಗಜ್ಜುಗಗಳನ್ನು ಸಂಪಾದಿಸುತ್ತಾರೋ ಅವರೇ ಗೆದ್ದಂತೆ. ಇದಕ್ಕೆ ''ಕಲ್ಲು'' ಗಜ್ಜುಗದಾಟವೆಂದೂ ಕರೆಯುತ್ತಾರೆ.

ಹಗ್ಗದಾಟ

ಇದು ಹೆಣ್ಣುಮಕ್ಕಳಿಗೆ ಬಹುಪ್ರಿಯವಾದ ಆಟ. ಸುಮಾರು ಎರಡು ಎರಡೂವರೆ ಗಜ ಉದ್ದದ ಹಗ್ಗವನ್ನು ಇದಕ್ಕೆ ಬಳಸಿಕೊಳ್ಳುತ್ತಾರೆ. ಆಟವನ್ನು ಪ್ರಾರಂಭಿಸುವವಳು ಹಗ್ಗದ ಎರಡು ತುದಿಗಳನ್ನು ತನ್ನ ಎರಡು ಕೈಗಳ ನಾಲ್ಕು ಬೆರಳಿಗೆ ಗಟ್ಟಿಯಾಗಿ ಸುತ್ತಿ ಹಿಡಿದುಕೊಂಡು ತನ್ನ ಸುತ್ತಲೂ ಅದನ್ನು ಮೇಲಕ್ಕೂ, ಕೆಳಕ್ಕೂ ಆಡಿಸುತ್ತಾ ಹಗ್ಗ ಕಾಲಿಗೆ ಸಿಕ್ಕಿಹಾಕಿಕೊಳ್ಳದಂತೆ ಮುಂಗಾಲುಗಳಿಂದ ನೆಗೆಯುತ್ತಿರುತ್ತಾಳೆ. ಹೀಗೆ ನೆಗೆಯುವುದರಲ್ಲಿಯೂ ವೈವಿಧ್ಯವಿರುತ್ತದೆ. ಒಮ್ಮೊಮ್ಮೆ ಒಂದೇ ಕಾಲಿನಿಂದ ನೆಗೆಯುವುದು, ಮತ್ತೊಮ್ಮೆ ಎರಡು ಕಾಲುಗಳಿಂದಲೂ ನೆಗೆಯುವುದು, ಮಗದೊಮ್ಮೆ ಒಂದು ಕಾಲನ್ನು ಊರಿ ಮತ್ತೊಂದು ಕಾಲಿನಿಂದ ಕುಟುತ್ತಾ ನೆಗೆಯುವುದು. ಹೀಗೆ ನಾನಾ ವಿಧವಾಗಿ ಕಾಲುಗಳಿಗೆ ವ್ಯಾಯಾಮ ಕೊಡುತ್ತಾರೆ. ಇದೇ ಹಗ್ಗವನ್ನು ಇಬ್ಬರು ಹಾಗೂ ಮೂರು ಜನ ಸೇರಿ ಆಡಬಹುದು. ಇಬ್ಬರು ಆಡುವಾಗ ಹಗ್ಗವನ್ನು ಹಿಡಿದವಳಿಗೆ ಮುಖಮಾಡಿ ಮತ್ತೊಬ್ಬಳು ನಿಲ್ಲುತ್ತಾಳೆ. ಹಗ್ಗ ಮೇಲೆ ಕೆಳಗೆ ಸುತ್ತಿ ಬಂದಾಗ ಇಬ್ಬರೂ ಒಟ್ಟಿಗೆ ನೆಗೆದು ಆಡುತ್ತಾರೆ. ಹೀಗೆ ಆಡುವಾಗ ಯಾರಾದರೂ ಕಾಲಿಗೆ ಹಗ್ಗ ಸಿಕ್ಕು ತೊಡರಿ ಬೀಳಬಹುದು. ಆದ್ದರಿಂದ ತುಂಬಾ ಜಾಗರೂಕತೆಯಿಂದ ಈ ಆಟವನ್ನು ಆಡಬೇಕಾಗುತ್ತದೆ. ಮೂವರು ಕೂಡಿ ಆಡುವಾಗ ಇಬ್ಬರು ಹಗ್ಗದ ಎರಡು ತುದಿಗಳನ್ನು ಹಿಡಿದು ಅದನ್ನು ಮೇಲಕ್ಕೂ ಕೆಳಕ್ಕೂ ಆಡಿಸುತ್ತಿರುತ್ತಾರೆ. ಮೂರನೆಯವಳು ಅದರ ಸುತ್ತಿಗೆ ಸಮನಾಗಿ ಮಧ್ಯದಲ್ಲಿ ನೆಗೆದು ಆಡುತ್ತಿರುತ್ತಾಳೆ. ಹೀಗೆ ವೈವಿಧ್ಯಪೂರ್ಣವಾಗಿ ಈ ಆಟ ಸಾಗುತ್ತದೆ. ಇದೇ ಹಗ್ಗವನ್ನು ಹಲವಾರು ಮಂದಿ ಆಡುವಾಗ ಎಷ್ಟೋ ದೂರದವರೆಗೆ ಹಗ್ಗವನ್ನು ಆಡಿಸುತ್ತಾ ಓಡುವಂಥ ಪಂಥ ಕಟ್ಟಿಕೊಂಡು ಆಡುತ್ತಾರೆ.

ಕೋಲಾಟ

ಆಟಗಳೆಲ್ಲೆಲ್ಲಾ ಅತ್ಯಂತ ಕಲಾತ್ಮಕವಾದ ಆಟವೆಂದರೆ ಕೋಲಾಟ. ಅದರಲ್ಲೂ ಬೆಳದಿಂಗಳಿದ್ದಾಗ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಈ ಆಟಕ್ಕೆ ವಿಶೇಷವಾದ ರಂಗು ಬರುತ್ತದೆ. ಈ ಆಟಕ್ಕೆ ಬಳಸುವ ಕೋಲುಗಳು ಸುಮಾರು


ಒಂದೂಕಾಲು ಅಡಿ ಉದ್ದವಿರುತ್ತದೆ. ಕೋಲುಗಳನ್ನು ಎರಡೂ ಕೈಲೂ ಹಿಡಿದು, ಅವುಗಳನ್ನು ತಮ್ಮ ಕಾಲಿನ ಗತಿಗೆ ತಕ್ಕಂತೆ ಹೊಯ್ಯುತ್ತಾ ಸಾಗುತ್ತಾರೆ. "ಕೋಲು ಕೋಲಣ್ಣ ಕೋಲೆ" ಚಿನ್ನದ, ಬಣ್ಣದ, ಬಿದಿರಿನ ಕೋಲು ಕೋಲನ್ನೆ ಕೋಲೆ" ಎಂದು ಹಾಡುತ್ತಾ ಈ ಆಟವನ್ನು ಮುಂದುವರಿಸುತ್ತಾರೆ. ಈ ಕೋಲಾಟದಲ್ಲಿ ಹಲವಾರು ಒಳಬೇಧಗಳಿವೆ. ಸುತ್ತುಕೋಲು, ಜಡೆಕೋಲು. ಗೀಜುಗನ ಕೋಲು, ತೇರುಕೋಲು, ಮನೆಕೋಲು, ಕೊರವಂಜಿ ಕೋಲು ಇತ್ಯಾದಿಗಳು ಪ್ರಮುಖವಾದುವೆಂದು ಹೇಳಬಹುದು. ಸುತ್ತು ಕೋಲು ಆಟದಲ್ಲಿ ಆಟಗಾರರೆಲ್ಲಾ ತಮ್ಮ-ತಮ್ಮ ಕೋಲುಗಳನ್ನು ಹೊಯ್ಯುತ್ತಾ ವೃತ್ತಾಕಾರವಾಗಿ ಸುತ್ತುತ್ತಾ ಒಂದೇ ಲಯ ಗತಿಯಲ್ಲಿ ಕುಣಿಯುತ್ತಾರೆ. "ಜಡೆಕೋಲು" ಆಟದಲ್ಲಿ ಎಷ್ಟು ಜನ ಕೋಲು ಹೊಯ್ಯುತ್ತಾರೋ ಅಷ್ಟು ಮಂದಿಗಾಗುವ ಹಗ್ಗಗಳನ್ನು ಜಡೆಯಂತೆ ಹೆಣೆದು ಒಟ್ಟುಗೂಡಿಸಿ ಅವುಗಳ ತುದಿಯನ್ನು ಬಿಡಿಯಾಗಿಯೇ ಬಿಟ್ಟಿರುತ್ತಾರೆ. ಆ ತುದಿಗಳನ್ನು ತಮ್ಮ ಸೊಂಟಕ್ಕೆ ಬಿಗಿದುಕೊಳ್ಳುತ್ತಾರೆ. ಜಡೆಯ ದಿಂಡನ್ನೇ ಮೇಲೆ ಗಟ್ಟಿಯಾಗಿ ಯಾವುದಾದರೂ ಒಂದು ಸ್ಥಳಕ್ಕೆ ನೇತುಹಾಕಿರುತ್ತಾರೆ. ಅನಂತರ ಎಲ್ಲರೂ ಸೇರಿ ಕೋಲು ಹೊಯ್ಯತೊಡಗುತ್ತಾರೆ. ಆಗ ಆ ಹಗ್ಗಗಳೆಲ್ಲಾ ಸೇರಿ ಜಡೆಯಂತೆ ಹೆಣೆದುಕೊಳ್ಳುತ್ತವೆ. ಮತ್ತೆ ಬಿಚ್ಚಿಕೊಳ್ಳುತ್ತವೆ. ಹಾಗೆ ಜಡೆ ಎಣೆದು ಬಿಚ್ಚುಂತೆ ಕೋಲುಗಾರರು ಸರಾಗವಾಗಿ ಕೋಲು ಹೊಯ್ಯುತ್ತಾರೆ. ಇದೇ ಆ ಆಟದ ವೈಶಿಷ್ಟ್ಯ.

ರತ್ತೋ-ರತ್ತೋ ಆಟ

ಈ ಆಟದಲ್ಲಿ ಹುಡುಗರೂ, ಹುಡುಗಿಯರು ಭಾಗವಹಿಸಬಹುದು. ಆಟಕ್ಕೆ ಸೇರುವವರೆಲ್ಲರೂ ವೃತ್ತಾಕಾರವಾಗಿ ನಿಲ್ಲುತ್ತಾರೆ. ಯಾರಾದರೂ ಇಬ್ಬರು ಹುಡುಗಿಯರು ಆ ವೃತ್ತದ ಹೊರಗೆ ಒಬ್ಬಳು, ಒಳಗೆ ಒಬ್ಬಳು ನಿಂತು ಪರಸ್ಪರ ತಮ್ಮ ಕೈ ಹಿಡಿದುಕೊಂಡು ವೃತ್ತಾಕಾರವಾಗಿ ನಿಂತುಕೊಂಡಿದ್ದ ಒಬ್ಬೊಬ್ಬರ ತಲೆಯಮೇಲೂ ಕೈ ಇಡುತ್ತಾ "ರತ್ತೋ ರತ್ತೋ ರಾಯನ ಮಗಳೆ, ಬಿತ್ತೋ ಬಿತ್ತೋ ಭೀಮನ ಮಗಳೆ ಹದಿನಾರೆಮ್ಮ ಕರೆಯಲಾರೆ, ಕಾಯಲಾರೆ, ಕಾಸಲಾರೆ, ಬೈಟುಗಬ್ಬಿ ಬಾಳೇಕಂಬ, ಕುಕ್ಕೆರ ಬಸವಿ, ಕೂರು ಬಸವಿ" ಎಂದು ಹೇಳುತ್ತಾ ಆ ಹಾಡು ಯಾರ ತಲೆಯಮೇಲೆ ಇಟ್ಟಾಗ ಮುಗಿಯುತ್ತದೋ ಅವರು ಕುಳಿತುಕೊಳ್ಳಬೇಕು. ಹೀಗೆ ಕೊನೆಯಲ್ಲಿ ಇಬ್ಬರು ಉಳಿಯುವವರೆಗೂ ಈ ಆಟವನ್ನೇ ಆಡುತ್ತಾರೆ.

ಹೀಗೆ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಅಲ್ಲಲ್ಲಿ ಪ್ರಧಾನವಾಗಿ ಮಕ್ಕಳು ಆಡುವ ಆಟಗಳನ್ನು ಮತ್ತು ಅವುಗಳ ವಿಧಾನಗಳನ್ನು ಇಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಈ ಆಟಗಳ ಸ್ವರೂಪದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಕೆಲವು ಆಟಗಳು ಸ್ವರೂಪದಲ್ಲಿ ಒಂದೇ ಆಗಿದ್ದರೂ, ಹೆಸರುಗಳಲ್ಲಿ ಭಿನ್ನತೆ ಕಂಡುಬರುತ್ತದೆ. ಮೇಲೆ ವಿವರಿಸಲಾದ ಹಲವು ಆಟಗಳಲ್ಲಿರುವ ಒಳಬೇಧಗಳನ್ನು ಗುರುತಿಸಬೇಕಾದರೆ ಒಂದು ಶಾಸ್ತ್ರೀಯವಾದ ವಿಭಜನಾ ಕ್ರಮದ ಅವಶ್ಯಕತೆ ಇದೆ. ಆದರೆ ಇಲ್ಲಿ ಅಂತಹ ಶಾಸ್ತ್ರೀಯವಾದ ಕ್ರಮಕ್ಕೆ ಹೋಗದೆ ಸ್ಥೂಲವಾದ ಚಿತ್ರವನ್ನು ಕೊಡಲಾಗಿದೆ.

83



ಪಲ್ಲಕ್ಕಿ

ಗಾಡಿಯಾಟ

ಇಬ್ಬರು ಮಕ್ಕಳು ಎದುರು ಬದುರಾಗಿ ಕೈಗಳನ್ನು ಹಿಡಿದುಕೊಂಡು ನಿಲ್ಲುತ್ತಾನೆ. ಒಬ್ಬನು ಅವರ ಕೈಗಳ ಮಧ್ಯೆ ತನ್ನ ಕಾಲನ್ನು ಇಳಿಬಿಡುತ್ತಾನೆ. ಅವರ ಮುಂದೆ ಹೋದಂತೆ ಇವನು ಒಂದು ಕಾಲಲ್ಲಿ ಮುಂದೆ ಹೋಗುತ್ತಾನೆ. ಗಾಡಿಗಳಿಗೆ ಎತ್ತನ್ನು ಕಟ್ಟಿ ಗಾಡಿ ಹೊಡೆಯುವಂತೆ ನಟನೆ ಮಾಡುತ್ತಾನೆ. ಹೀಗೆ ಸ್ವಲ್ಪ ಹೊತ್ತಿನ ನಂತರ ಸ್ಥಾನಗಳನ್ನು ಬದಲು ಮಾಡಿಕೊಳ್ಳುತ್ತಾರೆ. ಕೈ ಹಿಡಿದವನು ಗಾಡಿಯವನಾದರೆ ಗಾಡಿ ಹೊಡೆದವನ್ನು ಕೈ ಹಿಡಿಯುತ್ತಾನೆ.

ಪಲ್ಲಕ್ಕಿಯಾಟ

ಪಲ್ಲಕ್ಕಿ ಹೊರುವುದನ್ನು ಈ ಆಟದಲ್ಲಿ ಅನುಕರಿಸುವುದರಿಂದ ಈ ಆಟವನ್ನು ಪಲ್ಲಕ್ಕಿ ಆಟ ಎಂದು ಕರೆಯುತ್ತಾರೆ. ಈ ಆಟದಲ್ಲಿ ಇದು ಅಥವಾ ಆರು ಜನ ಆಟಗಾರರು ಭಾಗವಹಿಸುತ್ತಾರೆ. ಹಲಗೆ ಅಥವಾ ಕೋಲುಗಳಿಂದ ಪಲ್ಲಕ್ಕಿಯನ್ನು ತಯಾರಿಸುತ್ತಾರೆ. ಇಂದು ಹೊರಾಂಗಣ ಆಟವಾಗಿದೆ. ಪಲ್ಲಕ್ಕಿಯನ್ನು ತಯಾರಿಸಿದ ಆಟಗಾರರು ಒಬ್ಬನನ್ನು ಅದರಲ್ಲಿ ಕುಳಿತುಕೊಳ್ಳುವಂತೆ ಹೇಳುತ್ತಾರೆ. ಅವನನ್ನು ಹೊತ್ತುಕೊಂಡು ನಿರ್ದಿಷ್ಟ ದೂರದವರೆಗೆ ಹೋಗುತ್ತಾರೆ. ಆ ಬಳಿಕ ಹೊತ್ತುಕೊಂಡು ಇನ್ನೊಬ್ಬ ಆಟಗಾರನು ಕುಳಿತು ಉಳಿದವರು ಹೊತ್ತುಕೊಳ್ಳುತ್ತಾರೆ. ಕೆಲವೊಮ್ಮೆ ದೇವರಾಟವನ್ನು ಪಲ್ಲಕ್ಕಿಯನ್ನು ಉಪಯೋಗಿಸಿ ಆಡುವುದಿದೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಶ್ರೀ ಕ್ಷೇತ್ರ ಕೊಟ್ಟೂರಿನಲ್ಲಿ ಶ್ರೀ ಕೊಟ್ಟೂರೇಶ್ವರ ಸ್ವಾಮಿ ಪಲ್ಲಕ್ಕಿಯ ಮಾದರಿಯಾಗಿ ರಟ್ಟಿನ ಡಬ್ಬದ ಮೂಲಕ ಚಿಕ್ಕ ಚಿಕ್ಕ ಮಕ್ಕಳು ಯಾವುದೇ ಬೇದ ಭಾವವಿಲ್ಲದೆ ಕಾರ್ತಿಕ ಮಾಸದಲ್ಲಿ ರಸ್ತೆಯು ಪಲ್ಲಕ್ಕಿಯ ಹಿಡಿದುಕೊಂಡು ಆಟವನ್ನು ಆಡುವುದು ವಿಶೇಷವಾಗಿ ಕಂಡುಬರುವುದು.

ಉಯ್ಯಾಲೆ ಆಟ

ನಾಗರಪಂಚಮಿ ಸಂದರ್ಭದಲ್ಲಿ ಉಯ್ಯಾಲೆ ಆಟವನ್ನು ಆಡುತ್ತಾರೆ. ಮರದ ಕೊಂಬೆಗಳಿಗೆ ಹಗ್ಗ ಸೀರೆ ಬೀಳು ಇತ್ಯಾದಿಗಳನ್ನು ಕಟ್ಟಿ ಉಯ್ಯಾಲೆಯನ್ನು ತಯಾರಿಸುತ್ತಾರೆ. ಮನೆಯ ಒಳಗೆ ಕಂಬಗಳಿಗೂ ಹಗ್ಗ ಬಟ್ಟೆಗಳನ್ನು ಕಟ್ಟಿ ಉಯ್ಯಾಲೆ ತಯಾರಿಸುತ್ತಾರೆ. ಹೀಗೆ ತಯಾರಿಸಿದ ಉಯ್ಯಾಲೆಯಲ್ಲಿ ಕುಳಿತು ಆಡುವುದರಿಂದ ಇದನ್ನು ಉಯ್ಯಾಲೆ ಆಟವೆನ್ನುತ್ತಾರೆ. ಒಬ್ಬರು ಈ ಆಟವನ್ನು ಒಬ್ಬರು ಈ ಆಟವನ್ನು ಆಡುವುದಿದೆ. ಹಲವು ಮಕ್ಕಳು ಸೇರಿಯೂ ಈ ಆಟವನ್ನು ಆಡಬಹುದು. ಈ ಆಟವನ್ನು ಮುಖ್ಯವಾಗಿ ಶ್ರಾವಣಮಾಸದಲ್ಲಿ ನಾಗರಪಂಚಮಿ ನಾಯಕ ಕುಟುಂಬದವರು ಊರಿನ ಹೊರಗಡೆ ದೊಡ್ಡ ಮರಗಳಿಗೆ ಉಯ್ಯಾಲೆ ಹಾಕಿ ಆಟವನ್ನು ಜೂಜಟಾವಾಗಿ ಆಡುತ್ತಾರೆ ಮತ್ತು ತಿನ್ನಲು ಊಟವನ್ನು ವ್ಯವಸ್ಥೆ ಮಾಡಿರುತ್ತಾರೆ. ಇದು ಕನಿಷ್ಟ ಒಂದು ತಿಂಗಳವರೆಗೆ ಈ ಉಯ್ಯಾಲೆ ಹಿರಿಯರು ಕಿರಿಯರು ಸ್ತ್ರೀಯರು ಆಡುವ ಈ ಆಟವಾಗಿದೆ.

ಗೋಣಿಚೀಲದ ಆಟ

ಇದನ್ನು ಗೋಣಿಚೀಲದ ಆಟ ಎಂದು ಕರೆಯುತ್ತಾರೆ. ಆಟಗಾರರು ತಮ್ಮ ಕಾಲಿನಿಂದ ಸೊಂಟದವರೆಗೆ ಗೋಣಿಚೀಲವನ್ನು ಕಟ್ಟಿಕೊಳ್ಳಬೇಕು. ಗೋಣಿಚೀಲವನ್ನು ಕಟ್ಟಿದ ಬಳಿಕ ಒಂದು ನಿಗದಿಗೊಳಿಸಿದ ಸ್ಥಳದವರೆಗೆ ಹೋಗಬೇಕು. ಯಾರು ಮೊದಲು ಆ ಸ್ಥಳವನ್ನು ತಲುಪುತ್ತಾರೊ ಅವರು ಗೆಲ್ಲುತ್ತಾರೆ. ಗೋಣಿಚೀಲದ ಮೂಲಕ ಕಾಲಿಗೆ ಅಡಚಣೆಯನ್ನು ನಿರ್ಮಿಸಿ ಆ ಅಡಚಣೆಯನ್ನು ಗೆಲ್ಲಲು ಪ್ರಯತ್ನಿಸುವುದು ಈ ಆಟದ ವೈಶಿಷ್ಟ್ಯ. ಇತ್ತೀಚೆಗೆ ಗೋಣಿಚೀಲದ ಓಟದ ಸ್ಪರ್ಧೆಗಳು ನಡೆಯುತ್ತಿರುವಷ್ಟು ಈ ಆಟವು ಜನಪ್ರಿಯವಾಗಿದೆ.

ಸೋಡಾಟ

ಸೋಡವನ್ನು ತಯಾರಿಸುವ ಮಾದರಿಯಲ್ಲಿ ಈ ಆಟವನ್ನು ಆಡುವುದರಿಂದ ಇದನ್ನು ಈ ಹೆಸರಿನಿಂದ ಕರೆಯುತ್ತಾರೆ. ಇದನ್ನು ಆಡಲು ಮೂವರು ಆಟಗಾರರು ಬೇಕಾಗುತ್ತಾರೆ. ಇಬ್ಬರು ಆಟಗಾರರು ಪರಸ್ಪರ ಎದುರು ಬದುರಾಗಿ ನಿಂತು ಕೈಗಳನ್ನು ಹಿಡಿಯುತ್ತಾರೆ. ಕೈಗಳನ್ನು ನೇರವಾಗಿ ಹಿಡಿಯದೇ ತುಸು ಬಗ್ಗಿಸುತ್ತಾರೆ. ಕೈಗಳ ಮಧ್ಯೆ ಇನ್ನೊಬ್ಬ ಆಟಗಾರನನ್ನು ತೂರಿಸಿ ಅವನನ್ನು ಸೋಡಾ ತಿರುಗಿಸುವ ರೀತಿಯಲ್ಲಿ ಎತ್ತಿ ನಿಲ್ಲಿಸುತ್ತಾರೆ. ಹೀಗೆ ಪರಸ್ಪರ ಕೈಗಳನ್ನು ಬದಲಾಯಿಸಿಕೊಂಡು ಆಟವನ್ನು ಮುಂದುವರಿಸುತ್ತಾರೆ.

ಚುಕ್ಕಿಯಾಟ

ಚುಕ್ಕೆಗಳನ್ನು ಹಾಕಿ ಈ ಆಟಗಳನ್ನು ಆಡುವುದರಿಂದ ಇದನ್ನು ಚುಕ್ಕಿಯಾಟ ಎಂದು ಕರೆಯುತ್ತಾರೆ. ಇಬ್ಬರು ಆಟಗಾರರು ಈ ಆಟವನ್ನು ಆಡುತ್ತಾರೆ. ಇದೊಂದು ಒಳಾಂಗಣ ಆಟವಾಗಿದೆ. ಒಂದು ಕಾಗದದ ಮೇಲೆ ಮೇಲಿನ ವಿನ್ಯಾಸವನ್ನು ಚುಕ್ಕಿಗಳನ್ನು ಹಾಕಬೇಕು. ಚುಕ್ಕಿಗಳ ಮೂಲಕ ಒಂದು ಚೌಕವನ್ನು ರಚಿಸಬೇಕು. ಈ ರಚನೆಯ ನಂತರ ಕ್ರಮವಾಗಿ ಆಟಗಾರರು ಗೆರೆಯನ್ನು ಹಾಕುತ್ತಾ ಹೋಗುತ್ತಾರೆ. ಹೀಗೆ ಗೆರೆಯನ್ನು ಹಾಕುತ್ತಾ ಆಟಗಾರರು ಚುಕ್ಕೆಗಳ ಒಳಗೆ ಎಂದು ಚಾಕವನ್ನು ಪಡೆಯಬೇಕು. ಈ ಚಾಕವನ್ನು ಕೋಣೆ ಎಂದು ಕರೆಯುತ್ತಾರೆ. ತಾವು ಪಡೆದ ಚಾಕಕ್ಕೆ ಸಂಖ್ಯೆ ಅಥವಾ ಯಾವುದಾದರೂ ಅಕ್ಷರವನ್ನು ನೀಡಬಹುದು. ಯಾವ ಆಟಗಾರನು ಹೆಚ್ಚು ಕೋಣೆಯನ್ನು ಪಡೆಯುತ್ತಾನೋ ಅವನು ಗೆಲ್ಲುತ್ತಾನೆ ಇದೊಂದು ಜಾಣ್ಮೆಯ ಆಟವಾಗಿದೆ.

ನೆನಪಿನ ಆಟ

ಇದೊಂದು ಸಾಮೂಹಿಕ ಆಟ. ನೆನಪಿಡುವ ಸಾಮರ್ಥ್ಯವನ್ನು ಈ ಆಟದಲ್ಲಿ ಪರೀಕ್ಷಿಸುವುದರಿಂದ ಈ ಆಟವನ್ನು ನೆನಪಿನ ಆಟವೆಂದು ಕರೆಯುತ್ತಾರೆ. ಇದರಲ್ಲಿ ಆಟಗಾರರ ಸಂಖ್ಯೆಗೆ ಮಿತಿಯಿಲ್ಲ. ಇದೊಂದು ಒಳಾಂಗಣ ಆಟವಾಗಿದೆ.

ಆರಂಭದಲ್ಲಿ ಒಂದು ನಿರ್ದಿಷ್ಟ ಸ್ಥಳದಲ್ಲಿ ವಿವಿಧ ಬಗೆಯ ಹಲವಾರು ವಸ್ತುಗಳನ್ನು ಇಡಲಾಗುತ್ತದೆ.



ಮಹಿಳೆಯರ ಲಗೋರಿ ಆಟ



ಮಕ್ಕಳ ಲಗೋರಿ ಆಟ

ಆಟಗಾರರಿಗೆ ಕೆಲವು ನಿಮಿಷಗಳನ್ನು ೨-೩ ಅಥವಾ ೫ ನಿಮಿಷಗಳು ಕೊಟ್ಟು ಆ ವಸ್ತುಗಳನ್ನು ನೋಡುವಂತೆ ಹೇಳಬೇಕು. ಅನಂತರ ತಾವು ನೋಡಿದ ವಸ್ತುಗಳನ್ನು ಬರೆಯುವಂತೆ ಹೇಳಬೇಕು. ಯಾರು ಹೆಚ್ಚು ವಸ್ತುಗಳನ್ನು ಬರೆಯುತ್ತಾರೋ ಅವರು ಗೆಲ್ಲುತ್ತಾರೆ. ಇಲ್ಲಿ ಹೇಳುವ ಘಟನೆ ಎಷ್ಟು ವರ್ಷಗಳ ಹಿಂದಿನದೆಂಬುದನ್ನು ಗೆಲುವನ್ನು ನಿರ್ಧರಿಸುವ ಅಂಶವಾಗಿದೆ. ಒಬ್ಬ ಆಟಗಾರನು ಒಂದು ಘಟನೆಯನ್ನು ಹೇಳಿದರೆ ಇನ್ನೊಬ್ಬ ಆಟಗಾರನು ಅದಕ್ಕೆ ಪ್ರತಿಯಾಗಿ ಇನ್ನೊಂದು ಘಟನೆಯನ್ನು ಹೇಳುತ್ತಾನೆ. ಹೀಗೆ ಆಟವು ಮುಂದುವರಿಯುತ್ತದೆ.

ಲಗೋರಿ ಆಟ

ಮಕ್ಕಳಿಗೆ ಪ್ರಿಯವಾದ ಆಟವಾದ ಲಗೋರಿ ಆಟವು ಇದನ್ನು ಗೋರಿ ಆಟವೆಂದೂ ಕರೆಯುತ್ತಾರೆ. ಚಪ್ಪಟೆಯಾದ ಏಳು ಕಲ್ಲುಗಳನ್ನು ಒಂದರಮೇಲೆ ಒಂದಂತೆ ಇಟ್ಟಾಗ ಉಂಟಾಗುವ ರಚನೆಯನ್ನು ಲಗೋರಿ ಅಥವಾ ಗೋರಿಯೆಂದು ಕರೆಯುತ್ತಾರೆ. ಇದರಿಂದ ಈ ಆಟಕ್ಕೆ ಈ ಹೆಸರು ಬಂದಿದೆ. ಆಟಗಾರರು ಆಟವಾಡಲು ನಿರ್ಧರಿಸಿ ಮೈದಾದ ಅಥವಾ ಗದ್ದೆಯಲ್ಲಿ ಸೇರುತ್ತಾರೆ. ಆಟಕ್ಕೆ ಮೊದಲು ಗೋರಿ ಕಟ್ಟುವುದಕ್ಕಾಗಿ ಚಪ್ಪಟೆಯಾದ ಏಳುಕಲ್ಲಿನ ತುಂಡುಗಳನ್ನು ಆಯ್ಕೆ ಮಾಡುತ್ತಾರೆ. ಆಟಗಾರರು ಎರಡು ತಂಡಗಳಾಗಿ ವಿಭಾಗಿಸಿಕೊಳ್ಳುತ್ತಾರೆ. ಪ್ರತಿಯೊಂದು ತಂಡದಲ್ಲೂ ಸಮಾನ ಸಂಖ್ಯೆಯ ಆಟಗಾರರು ಇರಬೇಕು. ಒಂದು ತಂಡದ ಆಟಗಾರರು ಗೋರಿಯನ್ನು ಹೊಡೆಯುವುದಾದರೆ ಇನ್ನೊಂದು ತಂಡದ ಆಟಗಾರರು ಗೋರಿಯನ್ನು ಕಟ್ಟುತ್ತಾರೆ. ಟಾಸ್ ಹಾಕುವ ಮೂಲಕ ಮೊದಲು ಗೋರಿ ಕಟ್ಟುವವರು ಯಾರು ಎಂಬುದನ್ನು ನಿರ್ಧರಿಸಲಾಗುತ್ತದೆ. ಗೋರಿ ಹೊಡೆಯುವ ಆಟಗಾರನು ಗೋರಿಗಿಂತ ನಿರ್ದಿಷ್ಟ ದೂರದಲ್ಲಿ ಹಾಕಿದ ಗೆರೆಯ ಮೇಲೆ ನಿಂತು ಚೆಂಡಿನಿಂದ ಗೋರಿಯ ಇನ್ನೊಂದು ಮಗ್ಗುಲಲ್ಲಿ ನಿಂತು ಚೆಂಡನ್ನು ಹಿಡಿಯುತ್ತಾರೆ. ಗೋರಿಯ ಮೇಲೆ ಬಡಿದ ಚೆಂಡು ಗೋರಿಗೆ ತಾಗದೆ ನೇರವಾಗಿ ವಿರುದ್ಧ ಆಟಗಾರರ ಕೈ ಸೇರಿದರೆ ಆಗ ಗೋರಿಗೆ ಹೊಡೆದ ಆಟಗಾರನು ಮತ್ತೊಮ್ಮೆ ಹೊಡೆಯುವಂತಿಲ್ಲ ಬಳಿಕ ಆ ತಂಡದ ಎರಡನೆ ಆಟಗಾರನು ಗೋರಿಗೆ ಹೊಡೆಯುತ್ತಾನೆ.

ಹೀಗೆ ಹೊಡೆದಾಗ ಗೋರಿ ಮುರಿದು ಕಲ್ಲುಗಳು ಚೆಲ್ಲುತ್ತವೆ ಆಗ ಗೋರಿ ಮುರಿದ ಆಟಗಾರರು ಅದನ್ನು ಮರಳಿ ಕಟ್ಟಬೇಕು. ಹೀಗೆ ಕಟ್ಟುವಾಗ ವಿರುದ್ಧ ಆಟಗಾರರು ಚೆಂಡಿನಿಂದ ಕಟ್ಟುವ ಆಟಗಾರರಿಗೆ ಬಡಿಯುತ್ತಾರೆ. ಹೀಗೆ ಬಡಿಯುವಾಗ ಚೆಂಡು ತಾಗಿದರೆ ಆ ತಂಡವು ಆಟವನ್ನು ಬಿಟ್ಟು ಕೊಡಬೇಕು. ಗೋರಿ ಕಟ್ಟುವ ತಂಡವು ವಿರುದ್ಧ ಆಟಗಾರ ಚೆಂಡಿನ ಪೆಟ್ಟಿನಿಂದ ತಪ್ಪಿಸಿಕೊಂಡು ಬಿದ್ದ ಗೋರಿಯನ್ನು ಮತ್ತೆ ರಚಿಸಿ ಆ ರೀತಿ ರಚಿಸಿದ ಆಟಗಾರನು ಲಗೋರಿ ಎನ್ನಬೇಕು. ಆಗ ಅವರಿಗೆ ಒಂದು ಅಂಕ ಸಿಗುತ್ತದೆ. ಹೀಗೆ ಯಾವ ತಂಡ ಹೆಚ್ಚು ಅಂಕ ಗಳಿಸುತ್ತದೋ ಅದು ಗೆಲ್ಲುತ್ತದೆ.

ಮಕ್ಕಳನ್ನು ಸಾಂಸ್ಕೃತೀಕರಣಗೊಳಿಸುವಲ್ಲಿ ಮೇಲಿನ ಆಟಗಳು ಪರಿಣಾಕಾರಿ ಪಾತ್ರವನ್ನು ವಹಿಸುತ್ತವೆ. ಈ ದೃಷ್ಟಿಯಿಂದ ಪ್ರತಿಯೊಂದು ಆಟವನ್ನು ಸ್ವತಂತ್ರವಾಗಿ ವಿವರವಾಗಿ ಅಧ್ಯಯನ ಮಾಡುವ ಅಗತ್ಯವಿದೆ. ಆಟಗಳ

ಸಾಂಸ್ಕೃತಿಕ ಅಧ್ಯಯನವು ಜನರ ಮಾನಸಿಕ ಯೋಚನಾಕ್ರಮದ ಅಧ್ಯಯನವೇ ಆಗಿದ್ದರೂ ಆಟಗಳು ಮನಸ್ಸಿನ ಮೇಲೆ ಬೀರುವ ಪರಿಣಾಮಗಳನ್ನು ಗಮನಿಸಬೇಕಾಗುತ್ತದೆ. ಇದರಿಂದ ಮಕ್ಕಳ ಮನಸ್ಸಿನ ಮೇಲೆ ಬೀರುವ ಪರಿಣಾಮದ ದೃಷ್ಟಿಯಿಂದ ಮೇಲಿನ ಆಟಗಳು ಮುಖ್ಯವಾಗುತ್ತದೆ.

ಅಕ್ಕಿಚೀಲ ಎತ್ತುವುದು

ಅಕ್ಕಿಚೀಲ ಎತ್ತುವ ಸ್ಪರ್ಧೆಯು ಮುಖ್ಯವಾಗಿ ಹಮಾಲಿ ಕೆಲಸವನ್ನು ಮಾಡಿ ಜೀವನ ನಡೆಸುವ ಯುವಕರು ಈ ಸ್ಪರ್ಧೆಯಲ್ಲಿ ಭಾಗವಹಿಸುತ್ತಾರೆ. ಮುಖ್ಯವಾಗಿ ಹಮಾಲಿ ಯುವಕರು ಶಾರೀರಕವಾಗಿ ಬಲವಾಗಿದ್ದು ಅವರ ಮೂಲ ಜೀವನ ಹಮಾಲಿ ಇದಕ್ಕೆ ಬಲ ಅವಶ್ಯಕವಾಗಿ ಬೇಕು. ಈ ಹಿನ್ನೆಲೆಯಲ್ಲಿ ಒಳ್ಳೆಯ ಆಹಾರ ವ್ಯಾಯಾಮ ಮಾಡಿ ಬಲವಾಗಿ ಇರುತ್ತಾರೆ. ಈ ಯವಕರು ಈ ಸ್ಪರ್ಧೆಯಲ್ಲಿ ಭಾಗವಹಿಸುತ್ತಾರೆ. ಮುಖ್ಯವಾಗಿ ಅಕ್ಕಿಚೀಲ ಎತ್ತುವುದು ಸ್ಪರ್ಧೆಯು ಯಾವುದೇ ತಮ್ಮ ಕೆಲಸದಲ್ಲಿ ಜೂಜಾಗಿ ಕಟ್ಟಿಕೊಂಡು ಕೆಲಸವನ್ನು ಮಾಡುವುದು ಕಾಣುತ್ತೇವೆ.

ಭಾರ ಎತ್ತುವುದು

ಭಾರ ಎತ್ತುವ ಆಟವು ಸಹ ವರ್ಷದಲ್ಲಿ ಒಮ್ಮೆ ಅಥವಾ ಎರಡು ಬಾರಿ ನಾಯಕ ಸಮುದಾಯವು ಈ ಭಾರ ಎತ್ತುವ ಸ್ಪರ್ಧೆಯನ್ನು ಸಂಘಟಿಸುತ್ತದೆ. ಇದರಲ್ಲಿ ಹೆಚ್ಚಾಗಿ ಈ ನಾಯಕ ಸಮುದಾಯವು ಹೆಚ್ಚಾಗಿ ಬಾಗಿಯಾಗುತ್ತಾರೆ. ಮತ್ತು ಈ ಭಾರ ಎತ್ತುವ ಸ್ಪರ್ಧೆಯಲ್ಲಿ ಈ ಸಮುದಾಯದವರು ತರಬೇತಿಯನ್ನು ಮೊದಲಿನಿಂದಲೇ ಹೊಂದಿದ್ದು ತಯಾರಾಗಿರುತ್ತಾರೆ ಮತ್ತು ಈ ಭಾರ ಎತ್ತುವ ಸ್ಪರ್ಧೆಯಲ್ಲಿ ಈ ನಾಯಕ ಸಮುದಾಯವು ಹೆಚ್ಚಾಗಿ ಸ್ಥಾನಗಳನ್ನು ಪಡೆಯುತ್ತಾರೆ.

ಕುಸ್ತಿ

ಕುಸ್ತಿಯು ಇದು ಗ್ರಾಮೀನ ಕ್ರೀಡೆಯಾಗಿ ಇಂದು ರಾಷ್ಟ್ರಮಟ್ಟ ಅಂತರಾಷ್ಟ್ರಮಟ್ಟಕ್ಕೆ ಬೆಳೆದಿದೆ. ಈ ಕುಸ್ತಿಯು ಗರಡಿಮನೆಗಳಲ್ಲಿ ಅಭ್ಯಾಸ ಮಾಡುತ್ತಾರೆ. ಗರಡಿಮನೆ ಎಂದರೆ ಕುಸ್ತಿ ಆಡಲು ಮತ್ತು ಕಲಿಯಲು ನಿರ್ದಿಷ್ಟವಾದ ಒಂದು ಸ್ಥಳ. ಈ ಸ್ಥಳ ಗರಡಿ ಎನ್ನುತ್ತಾರೆ. ಗರಡಿಯು ಚಿಕ್ಕದಾಗಿ ಬಾಗಿಲು ಒಳಭಾಗ ಬೆಳಕು ಗಾಳಿ ಇರದೆ ಕತ್ತಲೆಯಾಗಿ ಇರುತ್ತದೆ. ಗರಡಿಮನೆಯ ಒಳಗೆ ಮಾಹಬುಸುಬಾನಿ ಮುಸ್ಲಿಂ ದೇವರು ಮತ್ತು ಆಂಜನೇಯಸ್ವಾಮಿ ಪೂಜೆ ಮಾಡುತ್ತಾರೆ. ಗರಡಿ ಒಳಭಾಗದಲ್ಲಿ ಸುಮಾರು ೩ ಅಡಿ ಆಳವಾಗಿದ್ದು ಇದರಲ್ಲಿ ಕೆಂಪುಮಣ್ಣನ್ನು ಸಮುದ್ರದ ತೀರದ ಕಡೆಯಿಂದ ತಂದು ಈ ಗರಡಿಮನೆಯಲ್ಲಿ ಸ್ವಚ್ಛಗೊಳಿಸಿ ಹಾಕಿರುತ್ತಾರೆ. ಈ ಮಣ್ಣು ಯಾವುದೇ ರೀತಿ ಹಾನಿಕಾರಕವಾಗಿರದ ಕುಸ್ತಿಪಟುಗಳು ಇದರಮೇಲೆ ಬಿದ್ದರೆ ಪೆಟ್ಟು ಗಾಯ ಆಗದೆ ಇರುವದು ಕಾಣುತ್ತೇವೆ. ಮತ್ತು ಕುಸ್ತಿಪಟುಗಳು ಗರಡಿಮನೆಗೆ ಒಳಗೆ ಅಭ್ಯಾಸಕ್ಕೆ ಹೋದಕೂಡಲೇ ಪ್ರಾರಂಭಿಕ ವ್ಯಾಯಾಮ ಮಾಡುತ್ತಾರೆ. ಈ ವ್ಯಾಯಮದಲ್ಲಿ ಮೊದಲು ಕಟ್ಟಿಗೆ ಗದ ತಿರುಗಿಸುವುದು ಮತ್ತು ದೊಡ್ಡ ದೊಡ್ಡ ಸಲಾಕೆಯ ಮೂಲಕ ಮಣ್ಣನ್ನು ಗೂಡಿಸುವುದು



ಕುಸ್ತಿ ಪಟುಗಳು



ಕುಸ್ತಿ

ಈ ಚಟುವಟಿಕೆ ಜಪಾನದಲ್ಲಿ ಜನ್ಮ ತಾಳಿ 2000 ವರ್ಷಗಳ ಹಿಂದೆ ಸಾಂಪ್ರದಾಯಿಕವಾಗಿ ಸಿಂಧೋ ಧರ್ಮ ಪ್ರಾಂತ್ಯದಿಂದ ಬೆಳಕಿಗೆ ಬಂದಿತು. ಪ್ರಾಚೀನ ಸಮಯದಲ್ಲಿಯೂ ಈ ಆಟವನ್ನು (ಸುಗ್ಗಿ) ರಾಶಿ ಸಮಯದಲ್ಲಿ ಸಂಘಟನೆ ಮಾಡಲಾಗುತ್ತಿತ್ತು ಆದರೆ ಇಂದಿನ ದಿವಸಸೊಮೋ ರೆಸ್ಲಿಂಗ್ ಜಪಾನ್‌ದಲ್ಲಿ ಪ್ರೇಕ್ಷಕರ ತೃಪ್ತಿಯ ವಿಷಯವಾಗಿ ವಿಚಾರ ಮಾಡಿದಾಗ ಅತ್ಯಂತ ಆಕರ್ಷಕವಾದ ಹಾಗೂ ಜನಪ್ರೀಯವಾದ ಕ್ರೀಡೆಯಾಗಿದೆ. ಈ ಸೊಮೋ ರೆಸ್ಲಿಂಗ್‌ನಲ್ಲಿ ಭಾಗವಹಿಸುವ ಕುಸ್ತಿಪಟುಗಳು ದೈತ್ಯಾಕಾರದಲ್ಲಿ ಭಾರ ಹಾಗೂ ದೈಹಿಕ ನಿಲುವನ್ನು ಹೊಂದಿರುತ್ತಾರೆ. ಸಾಮಾನ್ಯವಾಗಿ ಒಬ್ಬ ಸೊಮೋ ಕುಸ್ತಿಪಟುವಿನ ಭಾರ ಕಡಿಮೆ ಎಂದರೆ 136 Kgms ಇರುವುದು. ಸ್ಪರ್ಧೆಗೆ ಅನುಗುಣವಾಗಿ ನಿರ್ಮಿಸಿದ ವರ್ತುಳದಲ್ಲಿ ದೈತ್ಯಾಕಾರದ ಇಬ್ಬರು ಸೋಮೋ ಕುಸ್ತಿ ಪಟುಗಳು ಪರಸ್ಪರವಾಗಿ ತಳ್ಳುತ್ತಾ ಅಂತಿಮವಾಗಿ ವರ್ತುಳದಿಂದ ಹೊರಗೆ ತಳ್ಳಲ್ಪಟ್ಟ ಸೋಮೋ ಕುಸ್ತಿಪಟುವನ್ನು ಪರಾಭವೀ ಕುಸ್ತಿಪಟು ಎಂದೂ, ವರ್ತುಳದೊಳಗೆ ಉಳಿದ ಸೋಮೋ ಕುಸ್ತಿಪಟುವನ್ನು ವಿಜಯಿ ಕುಸ್ತಿಪಟು ಎಂದು ಘೋಷಿಸಲಾಗುವುದು. ಕುಸ್ತಿಯು ಕ್ರೀಡಾಕ್ಷೇತ್ರದಲ್ಲಿಯೇ ಅತೀ ಪ್ರಾಚೀನವಾದ ಸ್ಪರ್ಧೆ. ಕುಸ್ತಿಯನ್ನು ಆಧುನಿಕ ಶೈಲಿಯಲ್ಲಿ ಎರಡು ಪ್ರಕಾರಗಳಲ್ಲಿ ಸಂಘಟನೆ ಮಾಡಲಾಗುವುದು. 1) ಫ್ರೀಸ್ಟೈಲ್ 2) ಗ್ರೀಕೋರೋಮನ್

ಗ್ರೀಕೋರೋಮನ ಪದ್ಧತಿಯಲ್ಲಿ ಸ್ಪರ್ಧಾಳುಗಳೂ ತಮ್ಮ ಕಾಲುಗಳ ಉಪಯೋಗವನ್ನು ಮಾಡುವಂತಿಲ್ಲ ಕುಸ್ತಿಪಟುಗಳು ಇಬ್ಬರಲ್ಲಿ ಒಬ್ಬರು ಅಂತಿಮವಾಗಿ ಕೆಳಗಡೆ ಬಿದ್ದು, ಏಕಕಾಲಕ್ಕೆ ಭುಜಗಳನ್ನು ಕುಸ್ತಿ ಅಂಗಣಕ್ಕೆ ಸ್ಪರ್ಶ ಮಾಡಿದ ತಕ್ಷಣವೇ ವಿಜಯೀ ಕುಸ್ತಿಪಟುವನ್ನು ನಿರ್ಧರಿಸಲಾಗುವುದು. ಕುಸ್ತಿಪಟುಗಳನ್ನು ಈ ಕೆಳಗಿನಂತೆ ಅವರ ದೇಹದ ತೂಕದ ಅನುಸಾರವಾಗಿ ಗುಂಪುಗಳಲ್ಲಿ ವಿಂಗಡಿಸಿ ಸ್ಪರ್ಧೆಗಳನ್ನು ಸಂಘಟನೆ ಮಾಡಲಾಗುವುದು.

ಬಾರ ಎತ್ತುವುದು





ಗರಡಿ ದೇವರ ಕೋಣೆ

ಮಣ್ಣನ್ನು ಹಸನು ಮಾಡುವುದು ಇದರಿಂದ ದೇಹಕ್ಕೆ ಪ್ರಾರಂಭಿಕ ವ್ಯಾಯಾಮ ಉಂಟಾಗಿ ಶರೀರ ಕಾವೇರುತ್ತದೆ. ನಂತರ ಕುಸ್ತಿಯ ಅಭ್ಯಾಸವನ್ನು ಮಾಡುತ್ತಾರೆ. ಈ ಕುಸ್ತಿಯ ಸ್ಥಳಕ್ಕೆ ಇನ್ನೊಂದು ಹೆಸರು ಕಣ ಎಂದು ಕರೆಯುತ್ತಾರೆ. ಈ ನಾಯಕ ಸಮುದಾಯ ಪ್ರತಿಯೊಂದು ಕೆರೆಯಲ್ಲಿ ತಮ್ಮದೇಯಾದ ಕುಸ್ತಿ ಅಭ್ಯಾಸಕ್ಕೆ ಗರಡಿಗಳ ಮಾಡಿಕೊಂಡಿರುವುದು ಇಂದಿಗೂ ಕಾಣುತ್ತೇವೆ.

ತುಪ್ಪ ಕಾಯಿಸುವ ಆಟ

ಈ ಆಟವನ್ನು ಹೆಚ್ಚಾಗಿ ಮಕ್ಕಳು ಆಡುತ್ತಾರೆ. ಈ ಆಟದಲ್ಲಿ ಮಕ್ಕಳು ಕೈಯನ್ನು ಒಂದಕ್ಕೊಂದು ಚಪ್ಪಾಳೆಯನ್ನು ತಟ್ಟುವ ಆಕಾರದಲ್ಲಿ ಕೈಯನ್ನು ಮುಂದೇ ಚಾಚಿ ಹಿಡಿಯಬೇಕು. ಅದಕ್ಕೆ ಒಬ್ಬನು ಅವನ ಕೈಯನ್ನು ಮುಖಕ್ಕೆ ಸವರುವುದರ ಮುಖಾಂತರ ಅವನ ಕೈಗೆ ಹೊಡೆಯುವುದಕ್ಕೆ ಮತ್ತು ಆ ಕೈ ಚಾಚಿದವನು ಆ ಹೊಡೆತದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವುದು. ಇಗೋ ಒಬ್ಬರಿಗೊಬ್ಬರು ಈ ಪ್ರಕಾರವಾಗಿ ಆಟವನ್ನು ಮುಂದುವರೆಸುತ್ತಾರೆ. ಹೀಗೆ ಆಟವನ್ನು ಆಡುವುದರಿಂದ ಅವರಿಗೆ ಮನೋರಂಜನೆ ಕೂಡಾ ದೊರೆತಂತಾಗುತ್ತದೆ.

ಬಂಡಿ ಎಳೆಯುವುದು

ಬಂಡಿಯನ್ನು ವ್ಯಕ್ತಿಯು ಒಬ್ಬನೇ ಯಾರ ಸಹಾಯವಿಲ್ಲದೆ ವ್ಯಕ್ತಿಯು ನಿರ್ದಿಷ್ಟಪಡಿಸಿದ ಸ್ಥಳದವರೆಗೆ ಬಂಡಿಯನ್ನು ಎಳೆದುಕೊಂಡು ಹೋಗುವುದು. ಈ ಸ್ಪರ್ಧೆಯ ಯುವಕರು ಹೆಚ್ಚಾಗಿ ಭಾಗವಹಿಸುತ್ತಾರೆ. ಯುವಕರ ಸಾಮರ್ಥ್ಯವನ್ನು ಪ್ರದರ್ಶಿಸುವ ಸ್ಪರ್ಧೆಯಾಗಿರುತ್ತದೆ.

ಕಾಯಿ ಸುಲಿಯುವುದು

ಗ್ರಾಮೀಣ ಪ್ರದೇಶದಲ್ಲಿ ಈ ಆಟವು ಬಾಯಿ ಹಲ್ಲುಗಳ ಮೂಲಕ ತೆಂಗಿನಕಾಯಿಯ ಸಿಪ್ಪೆಯನ್ನು ಸುಲಿಯುವುದು ಯಾರು ಬೇಗ ಎಷ್ಟು ತೆಂಗಿನಕಾಯಿ ನಿರ್ದಿಷ್ಟಪಡಿಸಿದ ಸಮಯದಲ್ಲಿ ಯಾರು ಸುಲಿಯುತ್ತಾರೆ ಅವರು ಗೆದ್ದಂತೆ. ಹೀಗೆ ಯುವಕರ ಸಮರ್ಥ್ಯವನ್ನು ಪರೀಕ್ಷಿಸುತ್ತಾರೆ.

ಕಾಯಿ ಹೊಡೆಯುವುದು

ಕೈಗಳ ಸಾಮರ್ಥ್ಯದಲ್ಲಿ ಯುವಕರು ತಮ್ಮ ಬಲವನ್ನು ತೋರಿಸಿಕೊಳ್ಳಲು ಯುವಕರು ಕಾಯಿ ಹೊಡೆಯುವ ಸ್ಪರ್ಧೆಯಲ್ಲಿ ಭಾಗವಹಿಸುತ್ತಾರೆ. ಯುವಕರು ಕಾಯಿಯನ್ನು ಒಂದೇ ಕೈ ಮೂಲಕ ಹೊಡೆಯುವುದು ನಿರ್ದಿಷ್ಟಪಡಿಸಿದ ಸಮಯದಲ್ಲಿ ಕಾಯಿಗಳನ್ನು ಹೆಚ್ಚು ಹೊಡೆಯುವರು ಅವರಿಗೆ ಬಹುಮಾನವನ್ನು ಕೊಡುವರು. ಹೀಗೆ ಕಾಯಿ ಹೊಡೆಯುವ ಸ್ಪರ್ಧೆಯನ್ನು ಗ್ರಾಮೀಣ ಕ್ರೀಡೆಗಳಲ್ಲಿ ಸಂಘಟಿಸುತ್ತಿದ್ದರು ಮತ್ತು ಹೆಚ್ಚಾಗಿ ಯುವಕರು ಭಾಗವಹಿಸುತ್ತಿದ್ದರು.



ಬಂಡೆ ಗಾಲಿ ಎತ್ತುವುದು



ಬಂಡಿ ಎಳೆಯುವುದು

ಗರಡಿ ಮಣ್ಣು ಎಳೆಯುವುದು

ಗರಡಿ ಮನೆಯೊಳಗೆ ಕುಸ್ತಿಪಟುಗಳು ಮುಖ್ಯವಾಗಿ ಆಟದ ಅಭ್ಯಾಸದ ಮುಂಚಿತವಾಗಿ ಗರಡಿ ಮನೆಯೊಳಗಿನ ಮಣ್ಣು ಎಳೆಯುವುದು ಮಣ್ಣನ್ನು ಹಸನಾಗಿ ಮಾಡುವುದು ಇದೆ ಮೊದಲಾದ ವ್ಯಾಯಾಮ ಇದರಿಂದ ಗರಡಿ ಕುಸ್ತಿ ಪ್ರಾರಂಭದ ವ್ಯಾಯಾಮವು ಕುಸ್ತಿಯಾಗಿರುತ್ತದೆ.

ಬಂಡಿಗಾಲಿ ಹಾಕುವುದು

ಈ ಸ್ಪರ್ಧೆಯು ಹಬ್ಬ ಆಚರಣೆಯ ಸಮಯದಲ್ಲಿ ಪುರುಷರು ಮುಖ್ಯವಾಗಿ ಈ ಸ್ಪರ್ಧೆಗಳನ್ನು ಸಂಘಟಿಸುತ್ತಾರೆ ಮತ್ತು ಈ ಸ್ಪರ್ಧೆಯಲ್ಲಿ ಅನೇಕ ನಾಯಕ ವರ್ಗದ ಪುರುಷರು ಶಾರೀರಿಕವಾಗಿ ಬಲಢ್ಯ ಹೊಂದಿದವರು ಇದರಲ್ಲಿ ಭಾಗವಹಿಸುತ್ತಾರೆ. ಇದರಲ್ಲಿ ಮುಖ್ಯವಾಗಿ ಬಂಡಿಗಾಲಿಯನ್ನು ಯಾರು ಏಕಾಂಗಿಯಾಗಿ ಬಿಚ್ಚಿ ಅವರು ಯಾರ ಸಹಾಯವಿಲ್ಲದೆ ಬಂಡಿಗಾಲಿಯನ್ನು ಜೋಡಿಸುತ್ತಾರೋ ಅವರಿಗೆ ಸೂಕ್ತ ಬಹುಮಾನ ಮತ್ತು ಹಣವನ್ನು ಕೊಡುವುದರೊಂದಿಗೆ ಗೌವರಿಸುತ್ತಾರೆ. ಈ ಸ್ಪರ್ಧೆಯು ಶ್ರಾವಣಮಾಸದಲ್ಲಿ ಯುಗಾದಿ, ಜಾತ್ರೆ, ಹಬ್ಬ, ಹರಿದಿನಗಳಲ್ಲಿ ಸಂಘಟಿಸುತ್ತಾರೆ.

ಗುಂಡು ಎತ್ತುವುದು


ಈ ಸ್ಪರ್ಧೆಯು ಗ್ರಾಮೀಣ ಭಾಗದಲ್ಲಿ ಮುಖ್ಯವಾಗಿ ಈ ಸ್ಪರ್ಧೆಯ ಜಾತ್ರೆ, ಹಬ್ಬ ಆಚರಣೆಗಳ ಸಂದರ್ಭದಲ್ಲಿ ಸಂಘಟಿಸುತ್ತಾರೆ. ಈ ಸ್ಪರ್ಧೆಯಲ್ಲಿ ಮುಖ್ಯವಾಗಿ ಪುರುಷರು, ಯುವಕರು ಶಾರೀರಿಕವಾಗಿ ಬಲ ಹೊಂದಿದವರು ಭಾಗವಹಿಸುತ್ತಾರೆ. ಗುಂಡನ್ನು ಯಾರ ಸಹಾಯವಿಲ್ಲದೆ ಮೇಲಕ್ಕೆ ಎತ್ತುವುದು ಈ ಸ್ಪರ್ಧೆಯ ಗುರಿ. ಯಾರು ಕಡಿಮೆ ಸಮಯದಲ್ಲಿ ಗುಣಮಟ್ಟವಾಗಿ ಗುಂಡನ್ನು ಎತ್ತಿದರೆ ಅವರಿಗೆ ಹಣದ ರೂಪದಲ್ಲಿ ಕಾಣಿಕೆ ಕೊಟ್ಟು ಗೌರವಿಸುತ್ತಾರೆ. ಈ ಸ್ಪರ್ಧೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ನಾಗೇನಹಳ್ಳಿ ಗ್ರಾಮದಲ್ಲಿ ಹೆಚ್ಚಾಗಿ ನಡೆಯುವುದು ಕಂಡುಬರುತ್ತದೆ.

ತೊಟ್ಟಿಲು ಆಟ

ಈ ಆಟವು ಸ್ತ್ರೀಯರು ಮತ್ತು ಪುರುಷರು ಮನರಂಜನೆಗಾಗಿ ನಾಗರಪಂಚಮಿ ಸಂದರ್ಭದಲ್ಲಿ ಈ ಆಟವು ಊರಿನ ಹೊರಗಡೆ ದೊಡ್ಡ ಮರಗಳಿಗೆ ಹಗ್ಗವನ್ನು ಹಾಕಿ ಜೋಕಾಲಿಯನ್ನು ಸ್ತ್ರೀಯರು ಮತ್ತು ಪುರುಷರು ಸರಿಬಿರಿಯಾಗಿ ಸ್ಪರ್ಧಾತ್ಮಕವಾಗಿ ಆಡುತ್ತಾರೆ. ಈ ಆಟದಲ್ಲಿ ಮರಗಳಿಗೆ ತಿಂಡಿ ತಿನಿಸುಗಳನ್ನು ಕಟ್ಟುವುದರ ಮೂಲಕ ಅವುಗಳನ್ನು ಮುಟ್ಟಲು ಸ್ಪರ್ಧಾತ್ಮಕವಾಗಿ ಆಡುತ್ತಾರೆ. ಈ ಆಟದಲ್ಲಿ ಸಂಖ್ಯೆಯ ಮಿತಿ ಇರುವುದಿಲ್ಲ. ತೊಟ್ಟಿಲಲ್ಲಿ ಮಾತ್ರ ಒಬ್ಬರು ಮಾತ್ರ ಕುಳಿತುಕೊಂಡು ಆಡುತ್ತಾರೆ.

ಬಂಡೆ ಜೂಜಾಟ





ಬಂಡೆ ಗಾಲಿ ಹಾಕುವುದು

ಟೊಂಕೆ ಆಟ

ಈ ಆಟವು ಮಕ್ಕಳು ಮತ್ತು ಯುವಕರು-ಯುವತಿಯರು ಆಡುವಂತಹ ಆಟವಾಗಿದೆ. ಇದು ಮನರಂಜೆಗೆ ಉತ್ತಮವಾದ ಆಟವಾಗಿದೆ. ಇದು ಆಲದಮರಕ್ಕೆ ತೂಗುಬಿದ್ದ ಟೊಂಗೆಗಳನ್ನು ಹಿಡಿದುಕೊಂಡು ಗಿಡದ ಕೆಳಗೆ ೨ ರಿಂದ ೩ ಜನದವರೆಗೂ ಅದಕ್ಕೆ ತೂಗುಬಿದ್ದು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ತೂಗಾಡುತ್ತಾರೆ. ಇದರಿಂದ ಯಾರು ಎಷ್ಟು ಸಲ ತೋಗುತ್ತಾರೆ ಎಂಬುವುದರ ಮೂಲಕ ಆಡುತ್ತಾರೆ. ಈ ಆಟದಲ್ಲಿಯೂ ಸ್ಪರ್ಧಾತ್ಮಕವಾಗಿಯೇ ಆಟವನ್ನು ಆಡುತ್ತಾರೆ. ಇದರಿಂದ ಒಬ್ಬರಿಗೊಬ್ಬರೂ ಮನೋಲ್ಲಾಸವನ್ನು ಇದರಲ್ಲಿ ಪಡೆಯುತ್ತಾರೆ.

ಕಪ್ಪೆ ಆಟ

ಈ ಆಟವನ್ನು ಹೆಚ್ಚಾಗಿ ಚಿಕ್ಕಮಕ್ಕಳು ಮಾತ್ರ ಈ ಆಟವನ್ನು ಆಡುತ್ತಾರೆ. ಇದು ಕೂಡಾ ಒಂದು ಮನರಂಜನೆಯ ಆಟವಾಗಿದೆ. ಇದನ್ನು ೧೦ ಅಡಿಗಳಷ್ಟು ಅಂತರದಲ್ಲಿ ಎರಡೂ ಗೇರೆಗಳನ್ನು ಹಾಕಿ ಈ ಆಟವನ್ನು ಆಡುತ್ತಾರೆ. ಈ ಆಟದಲ್ಲಿ ಒಂದು ಸಾಲಿನಿಂದ ಎಲ್ಲರೂ ಸಾಲಾಗಿ ನಿಂತು ಎಲ್ಲರೂ ಒಮ್ಮೆಲೇ ಕೆಳಗೆ ಕುಳಿತು ಕೈಗಳನ್ನು ಕಾಲುಗಳ ಮೊಣಕಾಲುಗಳ ಒಳಭಾಗದಲ್ಲಿ ನೆಲಕ್ಕೆ ಹಚ್ಚಿ ಕಪ್ಪೆಯತರ ಕುಳಿತಿರಬೇಕು. ಎಲ್ಲರೂ ಒಂದೇ ಸಮಯದಲ್ಲಿ ವಿರುದ್ಧವಾಗಿ ಹಾಕಿರುವ ಗೇರೆಗೆ ಎಲ್ಲರೂ ಕಪ್ಪೆಯಂತೆ ಕೂತು ಜೀಗಿಯಯುತ್ತಾ ಹೋಗಬೇಕು. ಅದರಲ್ಲಿ ಅದನ್ನು ಯಾರು ಆ ಗೇರೆಯನ್ನು ಮುಟ್ಟುವರು ಅವರೇ ಅದರಲ್ಲಿ ಪ್ರಥಮರು. ಇದರಿಂದ ಮಕ್ಕಳಿಗೆ ಮನರಂಜನೆಯು ತೋರಿದಂತಾಗುತ್ತದೆ. ಇದರಿಂದ ಸ್ಪರ್ಧಾತ್ಮಕ ಮನೋಭಾವನೆಯೂ ಇದರಲ್ಲಿ ಬೆಳೆಯುತ್ತದೆ.

ಗಣಪತಿಬೋಪ್ಪ

ಈ ಆಟವು ಕೂಡಾ ಮಕ್ಕಳು ಆಡುವಂತಹ ಆಟವಾಗಿದೆ. ಇದರಲ್ಲಿ ಮಕ್ಕಳು ಇಬ್ಬರೂ ಕೂಡಿ ತಮ್ಮ ಕೈಯನ್ನು ಒಬ್ಬರ ಕೈಯನ್ನು ಒಬ್ಬರ ಮೇಲೆ ಹಾಕಿ ಒಬ್ಬನನ್ನು ಅದರ ಮೇಲೆ ಕೂರಿಸಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅವನನ್ನು ಒತ್ತು ಹೋಗುತ್ತಾರೆ. ಇಲ್ಲಿ ಒತ್ತು ಹೋಗುವಾಗ ಮಕ್ಕಳು ಎಲ್ಲರೂ ಇನ್ನುಳಿದವರು ಇವರ ಒಂದೆ ಇರುತ್ತಾರೆ. ಅವರು ಬೋಪ್ಪರೇಬೋಪ್ಪ ಗಣಪತಿ ಬೋಪ್ಪ ಎಂದು ಹೇಳುತ್ತಾ ಒಬ್ಬಬ್ಬರನ್ನು ತಂದು ಮೇಲೆ ಕೂರಿಸಿ ತಂದು ಹಾರುತ್ತಾರೆ. ಇದರಲ್ಲಿ ಎಲ್ಲರೂ ಎಲ್ಲರ ಮೇಲೆ ಕೂರುವರು. ಇದರಿಂದ ಎಲ್ಲರೂ ಈ ಆಟವನ್ನು ಆಡಿದಂತಾಗುತ್ತದೆ. ಇದರಿಂದ ಅವರಲ್ಲಿ ಮನರಂಜನೆಯೂ ದೊರೆತಂತಾಗುತ್ತದೆ.

ದೋಣೆಯ ಆಟ

ಈ ಆಟವು ಕೂಡಾ ಮಕ್ಕಳು ಮಳೆ ಬಂದಾಗ ಅಥವಾ ನೀರುನಿಂತ ಸ್ಥಳದಲ್ಲಿ ಎಲ್ಲ ಮಕ್ಕಳು ಸೇರಿ ಪೇಪರ್ ಿಂದ ದೋಣೆಯನ್ನು ಮಾಡಿ ಅದರಲ್ಲಿ ಎರಡು ಸಣ್ಣ ಹರಳುಗಳನ್ನು ಹಾಕಿ ಅದನ್ನು ನೀರಿನಲ್ಲಿ ತೇಲಲು ಬಿಡುತ್ತಾರೆ. ಆ ದೋಣೆಯು ನೀರಿನಲ್ಲಿ ತೇಲುತ್ತದೆ. ಇದೇ ಮಕ್ಕಳು ಸಾಕಷ್ಟು ದೋಣೆಯನ್ನು ಮಾಡಿ ನೀರಿನಲ್ಲಿ ಬಿಡುತ್ತಾರೆ. ಇದರಿಂದ ಎಲ್ಲರೂ ಖುಷಿ ಪಡುತ್ತಾರೆ.

ಹುಲಿಯನೆ ಆಟ



ಸರಗೂಲ ಆಟ



ಕಣ್ಣಾಮುಚ್ಚಾಲೆ ಆಟ

ಈ ಆಟದಲ್ಲಿ ಎಲ್ಲ ಮಕ್ಕಳು ಸೇರಿ ತಮ್ಮ ಕೈಯನ್ನು ಒಬ್ಬರ ಮೇಲೆ ಒಬ್ಬರು ಹಾಕುತ್ತಾರೆ. ಇದರಲ್ಲಿ ಅಂಗೈಯನ್ನು ತೋರಿಸಿದವರು ಗೆದ್ದಹಾಗೆ ಹೀಗೆ ಸೋತ ಒಬ್ಬನನ್ನು ಒಬ್ಬನು ಕಣ್ಣು ಮುಚ್ಚುತ್ತಾನೆ ಉಳಿದವರನ್ನು ಸಾಲಾಗಿ ನಿಲ್ಲಿಸಿ ಕಣ್ಣುಮುಚ್ಚಿದವನಿಂದ ಇವರು ಯಾರು ಎಂದು ಕೇಳುತ್ತಾರೆ. ಅವರ ಬಿಟ್ಟು ಇವರ್ನಬಿಟ್ಟು ಇವರ್ಯಾರು ಎಂದು ಕೇಳುತ್ತಾರೆ. ಆಗ ಅವನು ಸರಿಹೇಳಿದರೆ ಆಗ ಹೇಳಿಸಿಕೊಂಡವವನ್ನು ಜೂಟ್ ಆಗುತ್ತಾನೆ. ಹೀಗೆ ಎಲ್ಲರಿಗೂ ಈ ಆಟವು ಸಿಗುತ್ತದೆ. ಇದಕ್ಕೆ ಸಂಖ್ಯೆಯ ಮಿತಿ ಇರುವುದಿಲ್ಲ.

ಬಗಟೆ ಬಗರೆ

ಈ ಆಟವು ಕೂಡ ಮಕ್ಕಳು ಆಡುವಂತಹ ಆಟವಾಗಿದೆ. ಇದರಲ್ಲಿ ಮಕ್ಕಳು ಒಬ್ಬರ ಕೈಯನ್ನು ಒಬ್ಬರೂ ಕತ್ತರಿ ಆಕಾರದಲ್ಲಿ () ಇಡಿದು ಒಬ್ಬರಿಗೊಬ್ಬರೂ ತಮ್ಮ ವಿರುದ್ಧವಾಗಿ ನಿಂತು ಒಬ್ಬರನ್ನೊಬ್ಬರು ಹಿಂದಕ್ಕೆ ಜಗ್ಗುತ್ತಾ ಪರಸ್ಪರ ತಿರುಗುವರು. ಹೀಗೆ ಆಟವನ್ನು ದನ ಕಾಯುವವರೂ ಆಡುವರು. ಇದರಿಂದ ಮಕ್ಕಳು ಮನರಂಜನೆಯನ್ನು ಪಡೆಯುವರು.


ಚವ್ಹಾ

ಈ ಆಟವು ಮನೆಯಲ್ಲಿ ಬೇಸರವನ್ನು ಕಳೆಯಲು ಸ್ತ್ರೀ-ಪುರುಷರು ಈ ಆಟವನ್ನು ಆಡುತ್ತಾರೆ. ಈ ಆಟದಲ್ಲಿ ಹುಣಿಸೇಹಣ್ಣಿನ ಬೀಜವನ್ನು ತೆಗೆದುಕೊಂಡು ಚೌಕಾಕಾರದಲ್ಲಿ ಮನೆಗಳನ್ನು ಹಾಕಿ, XXXXXXXXXXX ಇಲ್ಲಿ ಒಂದು ಚಿತ್ರ ಬರಬೇಕು


ಈ ರೀತಿಯಾಗಿ ಮನೆಗಳನ್ನು ಹಾಕಿ ೪ ಬೀಜಗಳನ್ನು ತೆಗೆದುಕೊಂಡು ೪ ಟೊಪ್ಪೆ ಆಕಾರದಲ್ಲಿ ಬಿದ್ದರೆ ೪ ಮತ್ತು ೮ ಟೊಪ್ಪೆಗಳು ವಿರುದ್ಧವಾಗಿ ಬಿದ್ದರೆ ೮ ಸಂಖ್ಯೆಗಳು ಸಿಗುತ್ತವೆ. ಇದರಿಂದ ಆಟವನ್ನು ಆಡಬಹುದು. ೪ ಜನ ಅಥವಾ ೨ ಜನ ಈ ಆಟವನ್ನು ಆಡಬಹುದು.

ಕವಡೆ ಆಟ

ಈ ಆಟವು ಸ್ತ್ರೀ-ಪುರುಷರು ಆಡುತ್ತಾರೆ. ಇದು ಕವಡೇ ಬೀಜದಿಂದ ಆಡುವಂತಹ ಆಟವಾಗಿದೆ. ಇದು ಕೂಡ ಚವ್ಹಾ ಆಟದಂತಿದೆ. ಇದರಿಂದ ಕವಡಿಯನ್ನು ೮ ಬೀಜಗಳನ್ನು ತೆಗೆದುಕೊಂಡು ಕೈಯ ಮುಷ್ಠಿಯಲ್ಲಿ ಅವಗಳನ್ನು ಅಲುಗಾಡಿಸಿ ಬೀಡಬೇಕು. ಆಗ ಅವು ಟೊಪ್ಪೆ ಆಕಾರದಲ್ಲಿ ಬಿದ್ದವುಗಳು ಮತ್ತು ಅದರ ವಿರುದ್ಧವಾಗಿ ಬಿದ್ದವುಗಳನ್ನು ಸಂಖ್ಯೆಯನ್ನು ಎಣಿಸಿ ಚೌಕಾಕಾರದ ಮನೆಯಲ್ಲಿ ಈ ಆಟವನ್ನು ಆಡುತ್ತಾರೆ.



ಹುಲ್ಲಿ - ಕಟ್ಟು - ಆಟ



ಏಳು ಮನೆ - ಕಟ್ಟೆ ಮನೆ ಆಟ



ರಸ್ತೆಯಲ್ಲಿ ನಿಂಬೆಹಣ್ಣು ಉರುಳಿಸುವುದು

ನಿಂಗಬೆ ಹಣ್ಣು ಉರುಳಿಸುವುದು

ಈ ಆಟವು ನಾಯಕ ಸಮುದಾಯದ ಯುವಕರು ಹೆಚ್ಚಾಗಿ ಹಬ್ಬದ ಸಂದರ್ಭದಲ್ಲಿ ಶ್ರಾವಣ ಮಾಸದಲ್ಲಿ ರಸ್ತೆಗಳಲ್ಲಿ ನಿಂಬೆಹಣ್ಣನನ್ನು ಉರುಳಿಸುವ ಆಟವಾಗಿದೆ. ಈ ಆಟವು ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ರಸ್ತೆಗಳಲ್ಲಿ ಮನೋಲ್ಲಾಸಕ್ಕಾಗಿಯೂ ಜೂಜಾಟವಾಗಿಯೂ ಆಡುತ್ತಾರೆ. ಈ ಆಟದಲ್ಲಿ ನಿಂಬೆಹಣ್ಣನನ್ನು ರಸ್ತೆಯಲ್ಲಿ ಒಂದು ನಿರ್ದಿಷ್ಟ ಪಡಿಸಿದ ಸ್ಥಳದವರೆಗೆ ಉರುಳಿಸಿದ ನಿಂಬೆಹಣ್ಣನನ್ನು ಯಶಸ್ವಿಯಾಗಿ ಹೋದರೆ ಅವರು ಗೆದ್ದಂತೆ. ಅದು ಹೋಗದಿದ್ದಲ್ಲಿ ಸೋತಂತೆ ಹೀಗೆ ಈ ಆಟವು ಜೂಜಾಟವಾಗಿಯೂ ಮನೋಲ್ಲಾಸವಾಗಿಯೂ ಆಡುತ್ತಾರೆ. ಈ ಆಟವು ನಾಯಕ ಸಮುದಾಯವು ಹೆಚ್ಚು ಯುವಕರು ಈ ಆಟದಲ್ಲಿ ಭಾಗಿಯಾಗಿರುತ್ತಾರೆ.

ಬಂಡೆಗಳ ಜೂಜಾಟ

ನಾಯಕ ಸಮುದಾಯ ಯುವಕರು ಕೃಷಿ ಚಟುವಟಿಕೆಯಲ್ಲಿ ತೊಡಿಗಿರುವುದರಿಂದ ಅವರ ದಿನನಿತ್ಯದ ಕೆಲಸದಲ್ಲಿ ಹೊಲಗದ್ದೆಗಳಲ್ಲಿ ಈ ಆಟವು ಯುವಕರು ಯುವಕರ ಮಧ್ಯದಲ್ಲಿ ಬಂಡೆಗಳ ಜೂಜಾಟವನ್ನು ಆಡುವುದು ಆಡುತ್ತೇನೆ. ಈ ಆಟದಿಂದ ನಾಯಕರ ಸಮುದಾಯದ ವ್ಯವಸಾಯಕ್ಕೆ ಮೂಲವಾಗಿರುವ ಬಂಡಿ, ಎತ್ತು ಮತ್ತು ಯುವಕನ ಸಾಮರ್ಥ್ಯವನ್ನು ಅಳಿಯಲು ಮತ್ತು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲು ಈ ಸಮುದಾಯದವರು ಹಬ್ಬ ಹರಿದಿನಗಳಲ್ಲಿ ಈ ಸ್ಪರ್ಧೆಯನ್ನು ಏರ್ಪಡಿಸುತ್ತಾ ರೆ. ಈ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನವನ್ನು ಕೊಡುವರು ಮತ್ತು ಎತ್ತುಬಂಡೆಗೆ ಮೇರವಣಿಗೆಯನ್ನು ಮಾಡುತ್ತಾರೆ. ಈ ರೀತಿ ನಾಯಕ ಸಮುದಾಯದಲ್ಲಿ ಆಟವನ್ನು ಸಂಘಟಿಸುವುದು ಕಾಣುತ್ತೇವೆ.

ಬಾರ ಎತ್ತುವುದು

ಈ ಸಮುದಾಯದಲ್ಲಿ ಯುವಕರು ಹೆಚ್ಚಾಗಿ ಪ್ರಬಲಾಗಿರಲು ಕಾರಣವೇನೆಂದರೆ ಹಿರಿಯರ ಹೇಳಿಕೆಯ ಸಂಪ್ರದಾಯ ಪ್ರಕಾರ ಅವರು ಬಯಸುವುದು ಮಕ್ಕಳ ಸದೃಢನಾಗಬೇಕು. ಯಾವುದೇ ವಿಷಯಕ್ಕೂ ತಲೆ ಬಾಗದೇ ಮೇರೆಯ ಬೇಕು. ಎನ್ನುವ ಉದ್ದೇಶದಿಂದ ತಮ್ಮ ನಾಯಕ ಸಮುದಾಯದ ಮಕ್ಕಳನ್ನು ಬಾರ ಎತ್ತುವ ಉಪಕರಣಗಳನ್ನು ಉಪಯೋಗಿಸಲು ಉತ್ತೇಜನವನ್ನು ಹಿರಿಯರು ಕೊಡುತ್ತಾರೆ. ಜೊತೆಗೆ ಪೌಷ್ಠಿ ಆಹಾರ ಕೊಡವುದರಲ್ಲಿ ಯಶಸ್ವಿಯಾಗಿದ್ದಾರೆ ಮತ್ತು ಇಂದಿಗೂ ಈ ಸಮುದಾಯ ಜನರು ವ್ಯವಸಾಯ ತಮ್ಮ ಮೂಲ ವೃತ್ತಿಯಾಗಿರುವುದರಿಂದ ಅವರು ಮಾಡುವ ಕೆಲಸವು ಬಲಾಡ್ಯವಾಗಿದ್ದು ಈ ಹಿನ್ನಲೆಯ ಮೂಲಕ ಈ ಸಮುದಾಯದವರು ವ್ಯಾಯಮ ಮಾಡಲು ತಮ್ಮ ತಮ್ಮ ಕೇರೆಗಳಲ್ಲಿ ವ್ಯಾಯಮ ಶಾಲೆಗಳನ್ನು ನಿರ್ಮಾಣಮಾಡಿ ಅವುಗಳನ್ನು ಉಪಯೋಗಿಸುವುದು ಇಂದಿಗೂ ಕಾಣುತ್ತೇವೆ. ಜೊತೆಗೆ ಆಗ ಆಗಾ ಬಾರ ಎತ್ತು ಸ್ಪರ್ಧೆಗಳು ಈ ಸಮುದಾಯದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಜೋತೆಗೆ ಗೆದ್ದವರಿಗೆ ಬಹುಮಾನ ಕೊಡುವುದರ ಮೂಲಕ ಮೇರವಣಿಗೆ ಮಾಡಿ ಸನ್ಮನಾಸುತ್ತಾರೆ. ಇಂದಿಗೂ ವಿಶ್ವದಲ್ಲಿ ಪ್ರಚಲಿತವಾಗಿರುವುದು ಮತ್ತು ಇತರ ಸಮುದಾಯಗಳಿಗೆ ಮಾದರಿಯಾಗಿರುವುದು ಕಂಡುಬರುತ್ತದೆ.

ಬಂಡೆ ಜೂಜಾಟ





ಗರಡಿ ಮನೆಯ ವ್ಯಾಯಾಮ ಉಪಕರಣಗಳು

ಅಖಾಡಾ (ಗರಡಿ)

ಅಖಾಡಾ ಎಂದರೆ ಕನ್ನಡದಲ್ಲಿ ಗರಡಿ ಎಂಬ ಅರ್ಥವನ್ನು ಸೂಚಿಸುವುದು. ಗರಡಿ ಈ ಪದವು ಮೂಲಕವಾಗಿ ''ಗರುಡ'' ಎಂಭ ಪದಕ್ಕೆ ಸಂಬಂಧಪಡುವುದು. 'ಗರುಡ' ಎಂದರೆ ಅಂಗರಕ್ಷಕ, ಅಂಗರಕ್ಷಕನಿಗೆ ಮಲ್ಲವಿದ್ಯೆಯ ಜ್ಞಾನ ಬಹಳ ಅವಶ್ಯಕ, ಈ ಮಲ್ಲವಿದ್ಯೆಯನ್ನು ರೂಢಿ ಮಾಡಿಕೊಳ್ಳುವ ಸ್ಥಳಕ್ಕೆ ನಾವು ಗರಡಿ ಎಂದು ಕರೆಯುತ್ತೇವೆ. ಅದೇ ರೀತಿ ಗರಡಿದು ಕುಸ್ತಿಶಾಲೆ ಅಥವಾ ಕುಸ್ತಿ ಪಟುಗಳನ್ನು ತರಬೇತಿಗೊಳಿಸುವ ಸ್ಥಳ ಎಂದು ಹೇಳಬಹುದು. ಪ್ರಾಚೀನ ಪುರಾಣ ಕಥೆಗಳಲ್ಲಿ ಆಂಜನೇಯ, ಸುಗ್ರೀವ, ಕೀಚಕ, ಜರಾಸಂಧ, ಭೀಮ, ದುರ್ಯೋಧನ ಮೊದಲಾದ ಖ್ಯಾತ ಕುಸ್ತಿಪಟುಗಳು. ಆಂಜನೇಯ ಕುಸ್ತಿಪಟುಗಳಿಗೆ ಆರಧ್ಯ ದೈವ. ಉತ್ತಮವಾದ ಗರಡಿ ಅಥವಾ ಅಖಾಡಾಕ್ಕೆ ಜರಾಸಂಧ ಅಖಾಡಾ ಎಂದು ಗೌರವದ ಹೆಸರು ನಮ್ಮ ದೇಶದಲ್ಲಿ ಇದೆ. ನಮ್ಮದೇಶದಲ್ಲಿ ಗರಡಿ ಶಿಕ್ಷಣಹೆಚ್ಚಾಗಿ ಜನಪ್ರಿಯ ಪ್ರಚಾರದಲ್ಲಿದ್ದುದ್ದು ಮಹಾರಾಷ್ಟ್ರದಲ್ಲಿ ಶಿವಾಜಿಯ ಗುರು ಸಮರ್ಥ ರಾಮದಾಸರಾ ಹಲವಾರು ಶರೀರ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸಿದ್ದರು. ಅವರ ಕಾಲದಲ್ಲಿ 1200 ಗರಡಿ ಮನೆಗಳು ಸ್ಥಾಪನೆಗೊಂಡಿವು. ಇವುಗಳು ಅಖಾಡಾಗಳೆಂದು ಕರೆಯಲ್ಪಟ್ಟು, ಆ ಕೇಂದ್ರಗಳಲ್ಲಿ ಕುಸ್ತಿ ಅಭ್ಯಾಸವಲ್ಲದೇ ಪೂರಕ ಅಂಗಸಾಧನೆಗಳು ನಡೆಯುತ್ತಿದ್ದವು. ಸೂರ್ಯ ನಮಸ್ಕಾರ ದಂಡ, ಬೈಠಕ, ಮಲ್ಲಕಂಭ, ಲಾಠಿವರಸೆ, ಗದೆ ತಿರುಗಿಸುವುದು ಹಾಗೂ ಕುಸ್ತಿ ಮುಂತಾದವುಗಳು ಅಲ್ಲಿನಡೆಯುತ್ತಿದ್ದ ಚಟುವಟಿಕೆಗಳಲ್ಲಿ ಮುಖ್ಯವಾದವುಗಳು. ಪ್ರತಿಯೊಂದು ಅಖಾಡಾವು ಆಂಜನೇಯ ಗುಡಿಯನ್ನು ಹೊಂದಿದ್ದವು. ಅಖಾಡಾದಲ್ಲಿ ಕುಸ್ತಿ ಅಭ್ಯಾಸಕ್ಕೆ ವಿಶೇಷವಾದ ನೆಲವನ್ನು ತಯಾರು ಮಾಡಿದ್ದು ಇದಕ್ಕೆ 'ಮಟ್ಟಿ' ಎನ್ನುವರು. ಮುಟ್ಟಿಯು ಕೆಂಪು ಮಣ್ಣಿನಿಂದ ಕೂಡಿರುತ್ತದೆ. ಕೇಸರಿ ಕುಂಕುಮ ಮತ್ತು ಕೆಲವು ಔಷಧಿಗಳನ್ನು ಬೆರೆಸಿರುತ್ತಾರೆ. ಈ ಮಣ್ಣುಸ್ಫೂರ್ತಿದಾಯಕವೂ ಆಗಿರುವುದು. ಕುಸ್ತಿಪಟುಗಳಿಗೆ ಕೈಕಾಲು ಮಂಡಿಗಳಿಗೆ ಗಾಯವಾದರೆ ಮಟ್ಟಿ ಮಣ್ಣನ್ನು ಹಚ್ಚಿಕೊಂಡು ಗಾಯವು ಗುಣವಾಗುವಂತೆ ಮಾಡಲಾಗುವುದು. ನಮ್ಮ ನಾಡಿನ ಪ್ರತಿಯೊಂದು ಹಳ್ಳಿಯಲ್ಲಿ ಗರಡಿ ಮೆನಗಳಿದ್ದವು. ಈಗ ಹಿಂದಿನಂತೆ ಗರಡಿಮನೆಗಳ ಮಹತ್ವ ಉಳಿದಿಲ್ಲ. ಆದರೆ ಆ ಪರಂಪರೆ ಮಾತ್ರ ಉಳಿದಿದೆ.




ಗರಡಿ ಮನೆ ಬಾಗಿಲು

ಗರಡಿ

ಗರಡಿ ಮನೆ ಎಂದರೇ ಕುಸ್ತಿಯಾಡಲು ತನ್ನದೇಯಾದ ನಿರ್ದಿಷ್ಟಪಡಿಸಿದ ಒಂದು ಸ್ಥಳ, ಒಂದು ಕೋಣೆ ಎಂದು ಹೇಳಬಹುದು. ಗರಡಿ ಮನೆಗೆ ಇನ್ನೊಂದು ಹೆಸರು ಅದಕ್ಕೆ ಅಖಾಡ ಎನ್ನುತ್ತಾರೆ. ಗರಡಿ ಇದಕ್ಕೆ ಬೇಡಸಮುದಾಯವು ಮುಖ್ಯವಾಗಿ ಹೆಚ್ಚು ಮಹತ್ವವನ್ನು ಕೊಟ್ಟಿರುವುದು ಕಾಣುತ್ತೇವೆ. ಗರಡಿಯ ಮನೆಯ ಬೇಡ ಜನಾಂಗದ ಅವರ ಕೇರಿಗಳಲ್ಲಿ ಒಂದು ಗರಡಿ ಪ್ರಾಚೀನದಿಂದಲೂ ಕಾಣುತ್ತೇವೆ. ಇಂದು ವಿಜಯನಗರ ಸಾಮ್ರಾಜ್ಯ ಅರಸರುಗಳ ಕಾಲದಿಂದಲೂ ಗರಡಿ ಮನೆಗಳ ನಿರ್ಮಾಣಕ್ಕೆ ಅವಕಾಶ ಕಲ್ಪಿಸಿ ಪ್ರೋತ್ಸಾಹಿಸಿರುವುದು ತಿಳಿಯುತ್ತಾರೆ. ವಿಜಯನಗರ ಸಾಮ್ರಾಜ್ಯ ಅರಸರು ಕುಸ್ತಿಯಾಡುವ ಸಂಖ್ಯೆ ರಾಜರುಗಳ ಸೈನಿಕ ತರಬೇತಿಯಲ್ಲಿ ಮಹತ್ವವಿತ್ತು ಮತ್ತು ಕುಸ್ತಿಪಟುಗಳು ಹೆಚ್ಚಾಗಿ ಸೈನಿಕ ಸೇವೆ ಮಾಡುತ್ತಾ ಇದ್ದರು. ಸೈನಿಕರ ಬಲಾಢ್ಯಕ್ಕಾಗಿ ಗರಡಿಗಳನ್ನು ವಿಜಯನಗರದ ಸಾಮ್ರಾಜ್ಯರು ಹೆಚ್ಚು ಮಹತ್ವ ಕೊಟ್ಟಿದ್ದರು. ಅದು ಇಂದಿಗೂ ಗರಡಿಗಳು ಕೆಲವು ಕಡೆ ಉಳಿದಿವೆ, ಕೆಲವು ಕಡೆ ನಾಶವಾಗಿವೆ. ಗರಡಿ ಆಚರಣೆಯು ವಿಜಯನಗರ ಕಾಲದಿಂದಲೂ ಬಂದಿರುವ ಒಂದು ಆಚರಣೆ. ಈ ಆಚರಣೆಯೂ ಮುಖ್ಯವಾಗಿ ಗರಡಿಯ ಮಟ್ಟಿ ಎನ್ನುತ್ತಾರೆ. ಈ ಮಟ್ಟಿಯ ಎಲ್ಲಿ ದೊರೆಯುತ್ತದೆ ಆ ಪ್ರದೇಶದಲ್ಲಿ ಬೇಡ ಜನಾಂಗವು ಹೋಗಿ ಅಲ್ಲಿ ದೊರೆಯುವ ಮಣ್ಣನ್ನು ಪೂಜೆ ಮಾಡಿ ಬಂಡಿಗಳ ಮೂಲಕ ಅಥವಾ ಟ್ರಾಕ್ಟರ್ ಗಳ ಮೂಲಕ ತರುತ್ತಾರೆ. ಮತ್ತು ತಂದು ಕೆಲವು ಕಡೆಗೆ ಗರಡಿ ಒಳಗಡೆಗೆ ಹಾಕುತ್ತಾರೆ. ಕೆಲವು ಕಡೆ ಸಾಂಪ್ರದಾಯಿಕವಾಗಿ ಅದಕ್ಕೆ ಪೂಜೆಮಾಡಿ ಅದರಲ್ಲಿ ಕೆಂಪು ಹರಿಷಿಣ ಗಂಧ ಇತ್ಯಾದಿ ಸೇರಿಸಿ ಅದರಲ್ಲಿ ಕುಸ್ತಿ ಆಡಿಸಿ ನಂತರ ಆ ಮಣ್ಣು ಗರಡಿ ಒಳಗೆ ಹಾಕುವುದು ಕಾಣುತ್ತೇವೆ ಮತ್ತು ಗರಡಿಮನೆಯ ಒಳಗಡೆ ಮಣ್ಣು ಯಾವುದೇ ಗಾಯವಾಗದೆ ನೋವಾಗದೆ ಇರಲು ಕೆಲವು ವಸ್ತುಗಳಾದ ಕುಂಕುಮ ಹರಿಶಿಣ ಗಂಧ ಇತ್ಯಾದಿ ಸೇರಿಸಿರುತ್ತಾರೆ ಮತ್ತು ಮಣ್ಣಿನ ವಾಸನೆಯೂ ಸುವಾಸನೆಯಾಗಿರುತ್ತದೆ. ಈ ರೀತಿ ಬೇಡಸಮುದಾಯು ಗರಡಿ ಮಣ್ಣು ತರುವದು ಒಂದು ವಿಶಿಷ್ಟವಾದ ಆಚರಣೆಯಾಗಿರುತ್ತದೆ.

ಗರಡಿ ಅಭ್ಯಾಸ ಹಾಗೂ ನಿಯಮಗಳು

ಗರಡಿ ಅಭ್ಯಾಸವು ಪ್ರತಿ ಮನೆಯಿಂದ ಒಬ್ಬರನ್ನು ಬೇಡಸಮುದಾಯ ಕುಸ್ತಿಪಟುವಾಗಲು ನಿರ್ದಿಷ್ಟವಾಗಿ ಬಿಟ್ಟಿರುತ್ತಾರೆ. ಆ ವ್ಯಕ್ತಿಗೆ ಆಹಾರ, ವಿಶ್ರಾಂತಿ ಮತ್ತು ಅವನ ಅಭಿವೃದ್ಧಿಗೆ ಬೇಕಾದ ಪೌಷ್ಠಿಕ ಅಂಶಗಳು ಕೊಡುತ್ತಾರೆ ಮತ್ತು ಅವನು ಬೇಡಿದ್ದನ್ನು ತಿನ್ನಲು ತಂದುಕೊಡುತ್ತಾರೆ. ಹೀಗೆ ಪ್ರಾಚೀನದಿಂದಲೂ ಕುಸ್ತಿಪಟುವಾಗಲು ಬೇಡಸಮುದಾಯದ ಹಿರಿಯರು ಆಶಿಸುತ್ತಾರೆ. ಇವರು ಅಭ್ಯಾಸ ಮಾಡುವುದೇ ಒಂದು ಕೆಲಸ. ಯಾವುದೇ ಬೇರೆ ಕೆಲಸ ಇರುವುದಿಲ್ಲ. ಆದರೆ ಇತ್ತೀಚೆಗೆ ಹಮಾಲಿ ಮಾಡುವುದು ಮತ್ತು ಹೊಟ್ಟೆಪಾಡಿಗಾಗಿ ಇನ್ನಿತರ ಕೆಲಸಕ್ಕೆ ಹೋಗುವುದನ್ನು ನಾವು ಕಾಣುತ್ತೇವೆ.



ಗರಡಿ ಮನೆ ಉಪಕರಣಗಳು

ಗರಡಿಯಲ್ಲಿ ಕುಸ್ತಿ ಆಡುವಾಗ ನಿಯಮಗಳ ಕ್ರಮವಿಲ್ಲ. ಕುಸ್ತಿಯನ್ನು ಆಡಿಸುವವರಿಗೆ ಉಸ್ತಾದ್ ಎನ್ನುತ್ತಾರೆ. ಈ ಉಸ್ತದ್ ತರಬೇತಿದಾರ ನಿರ್ಣಯ ಇವರ ೧೫೦ ಕೌಶಲ್ಯಗಳನ್ನು ಹೇಳಿಕೊಟ್ಟಿರುತ್ತಾರೆ. ಈ ಕೌಶಲ್ಯ ಆಧರಿಸಿ ನಿರ್ಣಯ ಕೊಡುತ್ತಾರೆ. ಹೀಗೆ ಗರಡಿ ಅಭ್ಯಾಸದ ನಿಯಮವು ಗರಡಿಯಲ್ಲಿ ಕಾಣುತ್ತೇವೆ. ಉಸ್ತಾದ್ ಎಂದರೇ ಗರಡಿಮನೆಯ ಕುಸ್ತಿಯ ಬಗ್ಗೆ ಅಪಾರ ಜ್ಞಾನ ಅನುಭವ ಹೊಂದಿದವರು. ಇವರು ಕುಸ್ತಿಯ ನಿರ್ಣಯಕ ಎನ್ನುತ್ತಾರೆ. ಕುಸ್ತಿ ಕ್ರೀಡಾಧಿಕಾರಿ ಎಂದು ಕರೆಯಬಹುದಾಗಿದೆ. ಇವರು ಕುಸ್ತಿ ಆಡಿದವರು ಆಗಿರುತ್ತಾರೆ. ಇವರು ನಂತರ ಕುಸ್ತಿ ನಿರ್ಣಯಕರು ಅನುಭವದ ಹಿರಿಯರಿಗೆ ಉಸ್ತಾದ್ (ಪೈಲಾವನ್) ಎನ್ನತ್ತಾರೆ.

ಗರಡಿ ಸಾಮಾಗ್ರಿಗಳು

ಗರಡಿ ಸಾಮಾಗ್ರಿಗಳು ಮುಖ್ಯವಾಗಿ ಗಜಾ, ದೊಡಗಜಾ, ಚಿಕ್ಕಗಜಾ, ಸಲಾಕೆ, ಡಂಬಲ್ಯಾ ಎರಡೂ ಕೈಗಳಿಂದ ಮಾಡುವ ಗಜಾ ಭಾರ ಎತ್ತುವ ಉಪಕರಣಗಳು ಮಣ್ಣು ಎಳೆಯುವ ಸಲಕರಣೆಗಳ ಇವುಗಳಿಂದ ವ್ಯಾಯಾಮ ಮಾಡುತ್ತಾರೆ.

ವ್ಯಾಯಾಮ ಮಾಡುವ ಮುಂಚೆ ಗರಡಿಯಾಳಗಿನ ಮಹಾಬೂಸೂಬಾನಿ ದೇವರ ಆಂಜನೇಯನಿಗೆ ನಮಸ್ಕರಿಸಿ ವ್ಯಾಯಾಮ ಮಾಡಿ ಗರಡಿ ಕಣಕ್ಕೆ ಕುಸ್ತಿಯಾಡಲು ಇಳಿಯುತ್ತಾರೆ.

ಕುಸ್ತಿಗಳು ಗರಡಿಮನೆಗಳ ಬಯಲಿನಲ್ಲಿ ನಿರ್ಮಾಣಮಾಡಿ ಸಂಘಟಿಸುತ್ತಾರೆ. ಇದರಲ್ಲಿ ಸಂಘಟಕರು ಬೇಡ ಸಮುದಾಯವೇ ಹೆಚ್ಚು ಮತ್ತು ಭಾಗವಹಿಸುವರೇ ಪಟುಗಳು ಬೇಡ ಸಮುದಾಯದವರು ಇವರೇ ಕುಸ್ತಿಯನ್ನು ಆಡುತ್ತಾರೆ. ಕುಸ್ತಿಯನ್ನು ಸಂಘಟಿಸಿದವರು ಮತ್ತು ಮುಖ್ಯವಾಗಿ ಈ ಸಮುದಾಯ ವಿಶೇಷವಾಗಿ ಕಾಣುವುದೇನಂದರೆ ಕುಸ್ತಿ ಒಂದೇ ಕೆರೆಯವರು ಒಂದೇ ಕೆರೆಯ ಮೇಲೆ ಸ್ಪರ್ಧೆಗೆ ಬಿಡುವ ಸಂಪ್ರದಾಯವಿಲ್ಲದೇ ಇರುವುದು ಪ್ರಮುಖ ನಿಯಮವಾಗಿರುವುದು ಇಂದಿಗೂ ಕಂಡುಬರುತ್ತದೆ.

ಕುಸ್ತಿ ಇನಾಮು ಕುಸ್ತಿ ಆಡಿದವರಿಗೆ ಬೆಳ್ಳಿಯ ಕಡಗವನ್ನು ತೊಡಿಸಿ ಮೆರವಣಿಗೆ ಮಾಡುತ್ತಾರೆ. ಬೆಳ್ಳಿಯ ಗಜಾವನ್ನು ಕೊಡುತ್ತಾರೆ. ಹಣವನ್ನು ಕೊಡುತ್ತಾರೆ. ಹೀಗೆ ಇನಾಮು ಕೊಟ್ಟು ಗೌರವವನ್ನು ನೀಡುತ್ತಾರೆ. ಸನ್ಮಾನ ಮಾಡಿ ಮೆರವಣಿಗೆ ಮಾಡುತ್ತಾರೆ. ಗರಡಿ ಮನೆಗಳು ಇಂದೂ ನಾಶವಾಗುತ್ತಿವೆ. ಆದರೆ ಪ್ರಾಚೀನ ಕಾಲದಿಂದ ರಾಜಮನೆತನಗಳ ಗರಡಿಮನೆ ಕುಸ್ತಿಗೆ ಮಹತ್ವ ಸಹಾಯ ಸಹಕರಿಸುತ್ತಿದ್ದರು. ಮತ್ತು ಬೇಡ ಸಮುದಾಯ ಮೂಲ ಕ್ರೀಡೆ ಗರಡಿ ಕುಸ್ತಿ. ಇದನ್ನು ಉಳಿಸಿಕೊಂಡು ಬರುವುದು ಕೊನೆಯಾಗುತ್ತಾ ಇರುವುದು ಕ್ಷೇತ್ರಕಾರ್ಯ ಮೂಲಕ ತಿಳಿಯುತ್ತೇವೆ.

ಪೈಲ್ವಾನರಿಗೆ ಒಂದೆ ಗೌರವ ಸ್ಥಾನ ಮಾನ ಕೊಡುತ್ತಿದ್ದರು ಮತ್ತು ಅವರಿಗೆ ಎಲ್ಲಾ ಕ್ಷತ್ರಿಯರು ಮಾನ್ಯತೆ ನೀಡುತ್ತಿದ್ದರು. ಪೈಲ್ವಾನರಿಗೆ ಆದರೆ ಇಂದೂ ಆರ್ಥಿಕ ಪರಿಸ್ಥಿತಿ ಎದರಿಸಬೇಕಾದ ಹಿನ್ನೆಲೆಯು ಪೈಲಾನರಿಗೆ ಗೌರವ

ಸ್ಥಾನವು ಕಡಿಮೆಯಾಗಿ ಕುಸ್ತಿಯು ನಾಶವಾಗುತ್ತಿದೆ. ಮತ್ತು ಗರಡಿಮನೆಗಳು ಕುಸ್ತಿ ಅಭ್ಯಾಸ ನಿಂತು ಗರಡಿಮನೆ ಹಾಳಾಗುತ್ತಾ ಇವೆ. ಮುಖ್ಯವಾಗಿ ಬೇಡಸಮುದಾಯಕ್ಕೆ ಮೂಲ ಕ್ರೀಡೆಯಾದ ಕುಸ್ತಿಯು ನಾಶವಾಗಲು ಸರ್ಕಾರವೇ ಕಾರಣ ಎಂದು? ಎಳಬಹುದು. ಗರಡಿಮನೆ ಅಭಿವೃದ್ಧಿ, ಕುಸ್ತಿಯ ಸಂಘಟನೆ ಮತ್ತು ಕ್ರೀಡಾಪಟುಗಳಿಗೆ ಆದ್ಯತೆ, ಶಿಕ್ಷಣದಲ್ಲಿ ಆದ್ಯತೆ ಕೊಡದೇ ಸರ್ಕಾರ ನಿರ್ಲಕ್ಷ್ಯದಿಂದ ಇರುವುದರಿಂದ ಇಂದು ಗರಡಿಮನೆಗಳು ನಾಶವಾಗುತ್ತಿವೆ.



ಚಿತ್ರಕೇರಿ ಗರಡಿ ಮನೆ



ಬಾಣದ ಕೇರಿ ಗರಡಿ ಮನೆ

ಮಕ್ಕಳ ಲಗೋರಿ ಆಟ





ಗರಡಿ ಮನೆ



ಚೀಟಿ ಕಿತ್ತುವ ಆಟ

೪

ಬೇಡ ಬುಡಕಟ್ಟಿನ ಕ್ರೀಡೆಗಳು ಮತ್ತು ಆಧುನಿಕ ಕ್ರೀಡೆಗಳು

೪

ಬೇಡ ಬುಡಕಟ್ಟಿನ ಕ್ರೀಡೆಗಳು ಮತ್ತು ಆಧುನಿಕ ಕ್ರೀಡೆಗಳು

ಸಮಾಜದಲ್ಲಿ ಬೇಡ ಬುಡಕಟ್ಟಿನ ಕ್ರೀಡೆಗಳು ಮಕ್ಕಳಲೋಕದಲ್ಲಿ ಗಂಡಸರ ಹೆಂಗಸರ ಕ್ರೀಡೆಗಳಿಗೆ ವಿಶೇಷವಾದ ಸ್ಥಾನವಿದೆ. ಲೀಲೆಯಾದೊಡೆ ಉಮಾಪತಿ ಲೀಲೆ ತಪ್ಪಿದೊಡೆ ಸ್ವಯಂಭು ಎಂದು ಹಾಗೆ ಮಕ್ಕಳು ಮನಸ್ಸು ಮಾಡಿ ಆಟ ಪ್ರಾರಂಭಿಸಿದರೆ ಶಿವನ ನಾಟಕವೇ ನಡೆದಂತೆ ಅದನ್ನು ನೋಡುವವರಿಗೆ ಮೋಜು ಅಭಿಮಾನ. ಮಕ್ಕಳ ಆಟಗಳ. ಹೆಚ್ಚಾಗಿ ಸಾಂಪ್ರಾದಾಯಿಕವಾಗಿ ಬಂದವುಗಳು. ಕಾಲಕ್ಕೆ ತಕ್ಕಂತೆ ಅವುಗಳಲ್ಲಿ ಬದಲಾವಣೆ ಆಗುವುದು ಉಂಟು. ಅವುಗಳನ್ನು ಹೀಗೆಯೇ ಆಡಬೇಕೆಂದು ಎಲ್ಲಿಯೂ ಬರೆದಿಟ್ಟಿಲ್ಲ. ಹಿರಿಯರ ಬಾಯಿಂದ ವಾರಿಗೆಯವರಿಂದ ಅರಿತುಕೊಳ್ಳಬೇಕಾಗುತ್ತದೆ. ಇತ್ತೀಚೆಗೆ ಬುಡಕಟ್ಟುಗಳ ಅಭ್ಯಾಸದತ್ತ ವಿಶೇಷ ಒಲವು ಮೂಡಿದ್ದರಿಂದ ಇವುಗಳ ಕುರಿತು ಲೇಖನ ಪುಸ್ತಿಕೆಗಳ ಪ್ರಕಟವಾಗುತ್ತಿರುವುದು ಶುಚಿಸೂಚಕ.

ಮಕ್ಕಳ ಶಾರೀರಕ ಹಾಗೂ ಮಾನಸಿಕ ಬೆಳವಣಿಗೆಗೆ ಬುಡಕಟ್ಟು ಕ್ರೀಡೆಗಳು ಬಹಳಷ್ಟು ಸಹಕಾರಿಯಾಗಿವೆ. ಮಕ್ಕಳ ವಯೋಗುಣಕ್ಕನುಗುಣವಾಗಿ ಕ್ರೀಡೆಗಳು ರೂಢಿಯಲ್ಲಿದ್ದುದನ್ನು ನೋಡಬಹುದಾಗಿದೆ. ಯಾವ ಜಾತಿ. ಜನಾಂಗದ ಭಿನ್ನ ಬೇಧವಿಲ್ಲದೆ ಹೆಣ್ಣು ಗಂಡೆಂಬ ತಾರತಮ್ಯ ಎನಿಸದೆ ಭಾಷೆಯ ಸಂಕುಚಿತತೆಗೆ ಅಂಟಿಕೊಳ್ಳದೆ ಮಕ್ಕಳು ತಾವೆಲ್ಲರೂ ಒಂದು ಎಂಬ ಮನೋಭಾವನೆಯನ್ನು ಮೂಡಿಸಿಕೊಂಡು ಆಟ ಆಡುವುದನ್ನು ಕಾಣುತ್ತೇವೆ. 'ಇಂದಿನ ಬಾಲಕರೇ ನಾಳಿನ ನಾಗರಿಕರು' ಎಂಬ ಗಾದೆಯ ಮಾತಿನಂತೆ ಬಾವಿ, ನಾಗರಿಕರೂ, ಸಜ್ಜನರೂ, ಸದೃಢರೂ, ಮೇಧಾವಿಗಳೂ, ವೀರರೂ ಆಗಬೇಕಾದಲ್ಲಿ ಮಕ್ಕಳ ಅವಸ್ಥೆಯಲ್ಲಿಯೇ ಆ ಬೀಜಗಳನ್ನು ಬಿತ್ತಬೇಕಾಗುತ್ತದೆ. ಬೆಳೆಯ ಸಿರಿಯನ್ನು ಮೊಳಕೆಯಲ್ಲಿಯೇ ಕಾಣುವಂತೆ ಮಕ್ಕಳನ್ನು ಕಂಡಾಗ ಬಾವೀ ಸಿರಿಸಂಪತ್ತಿನ ಅರಿವೂ ಮೂಡಬರುತ್ತದೆ. ಅದನ್ನು ಉಳಿಸಿ ಬೆಳೆಸಿಕೊಂಡು ಬರಬೇಕಾದುದು ಹಿರಿಯರ ಕರ್ತವ್ಯವಾಗಿರುತ್ತದೆ. ಅಂತೆಯೇ ಮಕ್ಕಳ ದೈಹಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ಆದ್ಯ ಗಮನ ಕೊಡಬೇಕಾಗುತ್ತದೆ.

ಮಗುವಿಗೆ ಮಾತು ಬಂದಾಗ ಕಾಲುಚಾಚಿ ನಡೆಯಲು ಕಲಿತಾಗ ಅದು ತನ್ನ ಸುತ್ತಮುತ್ತಲಿ- ಪರಿಸರಕ್ಕನುಗುಣವಾಗಿ ಅನುಕರಣೆಗಿಳಿಯುತ್ತದೆ. ತಾಯಿಯ ಅನುಕರಣೆಯಂತೂ ಇದ್ದೇ ಇರುತ್ತದೆ. ತಾಯಿ ಮಾತನಾಡಿದಂತೆ ಮಾತಾನಾಡುತ್ತದೆ. ನಡೆಸಿದಂತೆ ನಡೆಯುತ್ತದೆ. ಹೀಗೆ ತಾಯಿಯಿಂದ ನುಡಿಯ ಕಲಿಯುತ್ತ ಪರಿಸರದ ವಸ್ತುಗಳ ಪರಿಚಯ ಮಾಡಿಕೊಳ್ಳುತ್ತಾ ಆಟ ಆಡಲು ಪ್ರಾರಂಭಿಸುತ್ತದೆ. ಮಗುವಿನ ಜೊತೆ ತಾಯಿಯೂ ಆಟವಾಡುತ್ತಾಳೆ. ಮಗು ದೊಡ್ಡದಾದಂತೆ ತಾಯಿಯ ಕೈ ಬಿಟ್ಟು ಹೊರಗೆ ಹೋಗಿ ಆಡುತ್ತದೆ. ಹಾಗೆ ಆಡಲು ಹೋದಾಗಲೇ ತಾಯಿಗೆ ಹಿಗ್ಗು. ಕ್ವಾಣೆ ಕೂಸ ಕೋಳಿತು, ಜಣೆ ಕೂಸು ಬೆಳಿತು ಎಂಬ ನಾಣ್ಣುಡಿಯೂ ಇದಕ್ಕೆ ಸಾಕ್ಷಿ. ಮಗು ಆಡಿ ಬಂದಾಗ ಅವಳಿಗೆ ಹಿಡಿಸಲಾರದ ಹಿಗ್ಗು.

ಆಡಿಬಾ, ನನಕಂದ ಅಂಗಾಲ ತೊಳದೇನಾ
ತೆಂಗಿನಕಾಯಿ ತಿಳಿನೀರ ತಕ್ಕೊಂಡು
ಬಂಗಾರ ಮಾರಿ ತೊಳೆದೇನಾ

ಹೀಗೆ ಅಂಗಳದಲ್ಲಿ ಆಡಿ ಮೈತುಂಬಾ ಧೂಳ ಹತ್ತಿದ ಮಗು ಓಡಿ ಮನೆಗೆ ಬಂದಾಗ ತಾಯಿ ಅವನನ್ನು ಅಪ್ಪಿಕೊಂಡು ತೆಂಗಿನ ತಿಳಿನೀರಿನಿಂದ ಬಂಗಾರದ ಮಾರಿ ತೊಳೆದ ದೃಶ್ಯ ಅವಳ ಹಾಡಿನಲ್ಲಿ ಅಚ್ಚೊತ್ತಿವೆ, ಅಷ್ಟೇ ಭವ್ಯವೂ ಆಗಿವೆ. ಈ ತಾಯಿಗಾದ ದು:ಖ-ದುಮ್ಮಾನಗಳ ಮಗು ತೊಡೆಯಮೇಲೆ ಬಂದು ಆಡಿದಾಗ ಕಳಚಿ ಹೋಗುತ್ತವೆ. ಅಂತೆಯೇ,

ಅಸರಕಿ ಬ್ಯಾಸರಕಿ ಯಾರಿಂದ ಕಳೆಯಲಿ
ಕೂಸಕಂದಯ್ಯ ತೊಡೆಯಮೇಲೆ ಆಡಿದರ
ಬಂದ ಬ್ಯಾಸರಕಿ ಬಯಲಾಗಿ

ಎಂದು ಹಾಡಿ ಸಂತೋಷಪಟ್ಟಿದ್ದಾಳೆ.

ಹೀಗೆ ತಾಯಿ ಹಾಡಿ ಮಗುವಿನ ಮನಕ್ಕೆ ಸಂಸ್ಕಾರಮುದ್ರೆ ಮೆತ್ತುತ್ತಾಳೆ. ಮೊದಮೊದಲು ಆತನೊಂದಿಗೆ ಆಟವಾಡಿ ಮುಂದೆ ಅವನನ್ನೇ ಆಡಲು ಬಿಟ್ಟು ಅವನ ದೈಹಿಕ ಬೆಳವಣಿಗೆಗೆ ತರಬೇತಿ ನೀಡುತ್ತಾಳೆ. ಮಗು ಬೆಳೆದಂತೆ ತಾಯಿಯ ಕೈ ಬಿಡುತ್ತದೆ. ಮನೆಬಿಟ್ಟು ಹೊರಗೆ ಹೋಗುತ್ತದೆ. ತನ್ನ ಹಾಗೆಯೇ ಹೊರಬಂದ ಮಕ್ಕಳ ಕೂಟದೊಂದಿಗೆ ಅಲ್ಲಿ ಅಂಗಳದಲ್ಲಿ ಜಮೆಯಾಗುತ್ತದೆ. ಸಾಮೂಹಿಕವಾಗಿ ಮಕ್ಕಳು ಹಾಡುತ್ತಾರೆ. ಹಾಗೆ ಆಡುವ ಕ್ರೀಡೆಗಳಿಗೆ ಲೆಕ್ಕವಿಲ್ಲ. ತಮ್ಮ ಕಣ್ಣಮುಂದೆ ಕಂಡ ಪ್ರಪಂಚದ ನಾಟಕ ಆಡಿ ತೋರಿಸುತ್ತಾರೆ. ತಾವೇ ಗಂಡ ಹೆಂಡಿರಾಗಿ ತಾಯಿ ತಂದೆಯಾಗಿ ಒಡೆದು ಆಳು ಇಲ್ಲವೆ ಹೊಳೆದಂತೆ ಹಾಡುತ್ತಾರೆ. ಆ ಮೊದಲು ನುಡಿಗಳಲ್ಲಿಯ ಅರ್ಥಕ್ಕೆ ಬೆನ್ನು ಹತ್ತಿ ವಿಷಯ ವಿವೇಚನೆಗೆ ಇಳಿಯುವುದಲ್ಲ. ಪ್ರಾಸಕ್ಕೆ ಮಾರುಹೋಗಿ ಶಬ್ದಗಳ ಸುರಿಮಳೆಗೆ ಅಚ್ಚರಿಪಡಬೇಕಾಗುತ್ತದೆ. ತಮ್ಮದೇ ಆದ ಸೃಷ್ಟಿಯಲ್ಲಿ ಮಕ್ಕಳು ಮನೆ ಕಟ್ಟುತ್ತಾರೆ. ಕಲ್ಲು ಇಟ್ಟಿಗೆಗಳ ತುಣುಕುಗಳಿಂದ ಒಮ್ಮೊಮ್ಮೆ ಕಾಗದ ರಟ್ಟುಗಳಿಂದ ಆದ ಸೃಷ್ಟಿಯಲ್ಲಿ ಮಕ್ಕಳು ಮನೆ ಕಟ್ಟುತ್ತಾರೆ. ಮನೆಯಲ್ಲಿಂದ ತಂದ [illegible] ಕಟಿಗೆಗಳಿಂದ ಅಷ್ಟಿಷ್ಟು ತಪ್ಪಲು ಹರಿದುತಂದು ಅಡಿಗೆ ಮಾಡುತ್ತಾರೆ.

ಪುಟಾಣಿ ಚುರುಮುರಿ ಸಕ್ಕರೆ ಇದು ಅವರ ಪ್ರಸಾದವಾಗುತ್ತದೆ. ದಾಸೋಹ ನಡೆಸಿ ಬಂದವರಿಗೆಲ್ಲಾ ಉಣಬಡಿಸುತ್ತಾರೆ. ಮನೆಗೆಲಸ ಹೊಲಗೆಲಸಗಳ ಅನುಕರಣೆಗಿಳಿದು ಕಟ್ಟುವುದು, ಬೀಸುವುದು, ಅಡಿಗೆ ಮಾಡುವುದು, ನಟ್ಟು ಕಡಿಯುವುದು, ಗಳೆ ಹೊಡೆಯುವುದು ಹೀಗೆ ಒಂದೇ ಎರಡೇ ತಮ್ಮದೇ ಕಾಯಕದಲ್ಲಿ ನಿರತರಾಗುತ್ತಾರೆ. ಅನುಕರಣದ ಕಾಮಕದೊಂದಿಗೆ ನಿರತರಾಗುತ್ತಾರೆ. ಅನುಕರಣದ ಕಾಯಕದೊಂದಿಗೆ ಮಧ್ಯೆ ಮಧ್ಯೆ ಆಟ ಆಡುತ್ತಾರೆ. ಬಗರಿ ಹೀಗೆ ಹಲವಾರು ಕ್ರೀಡೆಗಳನ್ನಾಡಿ ಹಾಡು ಹೇಳುತ್ತಾರೆ. ಗೊಂಬೆಯ ತಮ್ಮ ಮಗುವೆಂದು ಆಡಿಸಿ ಹಾಡು ಹೇಳುತ್ತಾರೆ. ಹೀಗೆ ಜನಪದ ಕ್ರೀಡೆಗಳಿಗೊಂದಿಕೊಂಡು ಹೊರಹೊಮ್ಮುವ ಹಾಡುಗಳೇ ಮಕ್ಕಳ ಹಾಡುಗಳಾಗಿರುತ್ತವೆ.

ಮಕ್ಕಳ ಹಾಡುಗಳು ಪ್ರತಿಯೊಂದು ದೇಶ ಭಾಷೆಯಲ್ಲಿ ಇರುತ್ತವೆ. ಸುರಕ್ಷಿತ ಜನ ಇವೆಂಥ ಹಾಡುಗಳು ಎಂದು ತಿರಸ್ಕರಿಸಿ ಪರಭಾಷಾ ವ್ಯಾಮೋಹದಲ್ಲಿ ಸಿಲುಕಿ ಇಂಗ್ಲೀಷ್ ಮಾಧ್ಯಮದಿಂದ ಶಿಶು ವಿವಾಹಗಳಿಗೆ ತಮ್ಮ ಮಕ್ಕಳನ್ನು ಕಳದಿ ಬ್ಯಾ ಬ್ಯಾ ಬ್ಲ್ಯಾಕ್ ಶಿಪ್ ಔಕ್ ಎಂದಜಿಲ್ ಇಲ್ಲವೇ ಡಿಂಗ್ ಡಾಂಗ್ ಡಾಂಗ್ ಬೆಲ್ ದಂತಹ ಹಾಡುಗಳನ್ನು ಮಕ್ಕಳು ಕಲಿತು ಮಮ್ಮಿ ಡ್ಯಾಡಿ ಎಂದಾಗ ತಿಳಿದು ತಿಳಿಯದ್ದಕ್ಕೂ ಹೂ ಸುರುತ್ತಿರುವುದು ನಾಚಿಕೆಪಡುವ ಸಂಗತಿಯಾಗಿದೆ. ಯಾವ ಕಾಸೂ ಇಲ್ಲದೆ ಅಂಗಳದಲ್ಲಿ ವಾರಿಗೆಯ ಮಕ್ಕಳೊಂದಿಗೆ ಆಡುತ್ತಾ ಹಾಡುವ ಹಾಡು ಕಲಿತು ಬಂದಾಗ ಏಕೆ ಸಂತೋಷಪಡಬಾರದು. ಜಾನಪದ ಗರತಿ ಮಾತ್ರ ಅಂಥ ಸಂತೋಷದಲ್ಲಿ ನೀಯ್ಯು ಹಾಡಿದ್ದನ್ನು ಸ್ಮರಿಸಿಕೊಳ್ಳಬಹುದಾಗಿದೆ.

ಕನ್ನಡ ಭಾಷೆಯಲ್ಲಿ ಸಾವಿರಾರು ಮಕ್ಕಳ ಹಾಡುಗಳಿವೆ, ಆಟಗಳಿವೆ. ಅವುಗಳನ್ನು ಅರಿಯಬೇಕಾದರೆ ನಾವು ಮಕ್ಕಳೊಂದಿಗೆ ಮಕ್ಕಳಾದಾಗ ತಿಳಿಯುತ್ತೇವೆ. ಇಲ್ಲವೇ ಇಂಥ ಅವಸ್ಥೆಯಲ್ಲಿ ನಾವೂ ಆ ಸಂಸ್ಕಾರದ ಮುದ್ರೆ ಮೂಡಿಸಿಕೊಂಡಿದ್ದಲ್ಲಿ ಈಗ ಸ್ಮರಿಸಿಕೊಳ್ಳಬೇಕಷ್ಟೆ.

ಇಂಗ್ಲೀಷ್ ಭಾಷೆಯಲ್ಲಿ ಮಕ್ಕಳ ಹಾಡುಗಳಿಗೆ ನರ್ಸರಿ ರಾಯಿಯೆ ಎಂದೂ ಅಮೇರಿಕೆಯ ಜನ ಮದರ್ ಗೂಚ್ ಎಂದೂ ಕರೆದಿದ್ದಾರೆ. ನಮ್ಮಲ್ಲಿಯೇ ಮಕ್ಕಳ ಹಾಡು, ಚುಕ್ಕೋಳ ಪದ, ಶಿಶುಪ್ರಾಸ, ಮಕ್ಕಳ ಬುಡಕಟ್ಟು, ಸಾಹಿತ್ಯ ಶಿಶುಬಾಲ ಸಾಹಿತ್ಯ, ಬುಡಕಟ್ಟು ಆಟಪಾಟ, ಬೇಡ ಬುಡಕಟ್ಟು ಕ್ರೀಡೆಗಳು ಎಂದು ಹಲವು ಹೆಸರುಗಳಿಂದ ಕರೆಯುತ್ತಿದ್ದೇವೆ.

(ನೋಡಿ : ಕರ್ನಾಟಕ ಜನಪದ ಸಮೀಕ್ಷೆ, ಜನಪದ ಕ್ರೀಡೆಗಳು, ಡಾ. ಮಲ್ಲಿಕಾರ್ಜುನ ಶಿ. ಲಠ್ಠೆ, ಪು. ೩೨೦-೩೨೪)

ಕ್ರೀಡೆಗಳ ಮಾರ್ಪಾಟು

ವರ್ತಮಾನದಲ್ಲಿ ನಾವು ಆಡುವ ಕ್ರೀಡೆಗಳೆಲ್ಲವೂ ಅನಾದಿಕಾಲದಿಂದಲೂ ಈಗಿದ್ದಂತೆಯೇ ಇದ್ದವು ಎಂದು ಹೇಳಲಾಗದು. ಅವು ಮೇಲಿನಿಂದ ಮೇಲೆ ಆದ ಸಾಮಾಜಿಕ ರಾಜಕೀಯ ಸ್ಥಿತ್ಯಂತರಗಳು. ಧಾರ್ಮಿಕ ವಿಧಿ ನಿಷೇಧಗಳು. ಔದ್ಯೋಗೀಕರಣದಿಂದಾಗಿ ಆರ್ಥಿಕ ಏರುಪೇರುಗಳ ದುಡಿಮೆ. ಬಿಡುವುಗಳ ನೀತಿಯಿಂದಾಗಿ ಉಂಟಾದ ಅನುಕೂಲ ಅನಾನುಕೂಲಗಳು. ಪ್ರಾದೇಶಿಕ ಪರಿಸರಗಳ ಪ್ರಭಾವ ಈ ಮುಂತಾದ ಕಾರಣಗಳಿಂದ ಅನೇಕ ಆಟಗಳು

ಕಾಲಮಾನಗಳಲ್ಲಿ ಬದಲಾವಣೆಗಳಾಗಿವೆ. ಜನಮನವನ್ನು ರಂಜಿಸುವಲ್ಲಿ ಶಕ್ತವಾದ ಕೆಲವು ಜನಪ್ರಿಯ ಕ್ರೀಡೆಗಳು ಇನ್ನೂ ಬಾಳಿ ಬದುಕಿವೆ. ಇನ್ನೂ ಕೆಲವು ಕ್ರೀಡೆಗಳು ವರ್ತಮಾನದ ತುರ್ತಿಗೆ ತಕ್ಕಂತೆ ಮಾರ್ಪಾಡುಗೊಂಡಿವೆ. ಸಾಮಾಜಿಕ ಮೌಲ್ಯಗಳ ಬದಲಾವಣೆಗಳೂ ಕೆಲವು ಕ್ರೀಡೆಗಳು ಉಳಿದು ಅಳಿವುಗಳಿಗೆ ಕಾರಣಗಳಾಗುತ್ತಿವೆ. ಜೂಜು ಕೋಳಿ ಅಂಕಟಗಳು ಕಾಳಗ ಮುಂತಾದ ಕ್ರೀಡೆಗಳು ಕೆಲವೆಡೆ ಹಿರಿಯರು ಪ್ರಶಂಶಿಸುವುದಿಲ್ಲ. ಇಂಥ ಕಡೆಯಲ್ಲಿ ಈ ಕ್ರೀಡೆಗಳು ಜನಪ್ರಿಯತೆಯನ್ನು ಕಳೆದುಕೊಂಡು ಸಾಯುತ್ತವೆ.

ಪ್ರಾಚೀನ ಕಾಲದ ಕ್ರೀಡೆಗಳು

ಪ್ರಾಚೀನ ಈಜಿಪ್ಟ್ , ಚೀನಾ, ಗ್ರೀಸ್ , ರೋಮ್ , ಅಸ್ಸೀರಿಯ, ಭಾರತ ಮುಂತಾದ ದೇಶಗಳಲ್ಲಿ ಬೇಟೆ, ಮಲ್ಲಯುದ್ಧ, ಬಿಲ್ಲುವಿದ್ಯೆಗಳ ಪ್ರದರ್ಶನ, ಭಾರ ಎತ್ತುವುದು, ಗೋಲಿ, ಚೆಂಡು, ಬಗರಿಯಾಟಗಳು ಪ್ರಚಲಿತವಿದ್ದವಾಗಿ ತಿಳಿದುಬರುತ್ತದೆ. ತಮ್ಮ ಬದುಕಿನಲ್ಲಿ ಹೆಚ್ಚಿನ ವಿರಾಮವನ್ನು ಪಡೆದ ಗ್ರೀಕರು ಆಟ-ಪಾಠಗಳಿಂದ ತಮ್ಮ ದೈಹಿಕ ಹಾಗೂ ಬೌದ್ಧಿಕ ಬಲಗಳನ್ನು ಬೆಳೆಸಿಕೊಂಡರು. ಕಲೆ, ಸಾಹಿತ್ಯಗಳ ಉಪಾಸನೆಯನ್ನು ಮಾಡಿ ಹೃದಯ ಸಂಸ್ಕಾರವನ್ನು ಪಡೆದರು. ಇಂಥ ಪರಿಪೂರ್ಣ ವ್ಯಕ್ತಿತ್ವದ ಸಾಧನೆಯ ಹಿನ್ನೆಲೆಯಲ್ಲಿಯೇ ಗ್ರೀಕರು ಒಲಂಪಿಕ್ ಕ್ರೀಡೆಗಳು ರೂಪುಗೊಂಡವು.

ಗ್ರೀಕ್ ಮಹಾಕಾವ್ಯಗಳಲ್ಲಿ ಅನೇಕ ಕ್ರೀಡೆಗಳ ಉಲ್ಲೇಖಗಳಿವೆ. ನಮ್ಮ ಋಗ್ವೇದದಲ್ಲಿ ಜೂಜುಗಾರನ ಅಳಲಿನ ಪ್ರಸ್ತಾಪವಿದೆ. ಒಗಟ್ಟನ್ನು ಒಡ್ಡುವುದು ಹಾಗೂ ಒಡೆಯುವುದು ಬೇಟೆಯಾಡುವುದು, ಬೇಟೆಯಾಡುವುದು, ಕುದುರೆ ಸವಾರಿ, ಧರ್ನುವಿದ್ಯೆ, ಓಟ, ಈಜು ಮುಂತಾದ ಕ್ರೀಡೆಗಳ ಕುರಿತು ವೇದ ಉಪನಿಷತ್ತು ಅಂತೆಯೇ ರಾಷ್ಟ್ರೀಯ ಮಹಾಕಾವ್ಯಗಳಾದ ರಾಮಾಯಣ ಮಹಾಭಾರತಗಳಲ್ಲಿ ವಿವರಣೆಗಳು ದೊರಕುತ್ತವೆ. ಭಾರತದ ಪ್ರಾಚೀನ ವಿಶ್ವವಿದ್ಯಾಲಯಗಳಲ್ಲಿ ಬಲಸಂವರ್ಧನೆಗಾಗಿ ಈಜುವುದು ಆನೆ, ಕುದುರೆಗಳ ಸವಾರಿ ಮಾಡುವುದು, ರಥ ಓಡಿಸುವುದು, ಕತ್ತಿವರಸೆ, ಈಟಿ ಎಸೆತ, ಕುಸ್ತಿ ಮುಂತಾದ ಕ್ರೀಡೆಗಳಿಗೆ ಪ್ರಾಧಾನ್ಯವೀಯುತ್ತಿದ್ದುದಾಗಿ ತಿಳಿದುಬರುತ್ತದೆ. ಶಿಲಪ್ಪದಿಕಾರು ಎನ್ನುವ ಪ್ರಾಚೀನ ತಮಿಳು ಮಹಾಕಾವ್ಯದಲ್ಲಿ ಗೂಳಿ ಕಾಳಗದ ವರ್ಣನೆ ಬರುತ್ತದೆ. ಇಂಥ ಕಾಳಗದಲ್ಲಿ ಗೆದ್ದ ವೀರರನ್ನು ಕನ್ಯಾಮಣಿಗಳನ್ನು ವಿವಾಹವಾಗುತ್ತಿದ್ದರಂತೆ ಆದಿಕವಿ ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಮರಕೋತಿ ಪೊಡೆಸೆಂದು ಕ್ರೀಡೆಗಳ ಉಲ್ಲೇಖವಿದೆ. ವಡ್ಡಾರಾಧನೆ ಕುಮಾರವ್ಯಾಸ ಭಾರತ ಕುಮಾರರಾಮ ಸಾಂಗತ್ಯ ಮುಂತಾದ ಕೃತಿಗಳಲ್ಲಿ ಕಂದುಕ ಕ್ರೀಡೆಯೇ ಮುಂತಾದ ಹಲವಾರು ಕ್ರೀಡೆಗಳ ವಿವರವಿದೆ.

ನಮ್ಮ ದೇಶದಲ್ಲಿ ಕ್ರೀಡಾ ಸಮ್ಮೇಳನಗಳನ್ನು ಹಬ್ಬಹರಿದಿನಗಳ ಕಾಲಕ್ಕೆ ರಾಜಮಹಾರಾಜರ ಪಟ್ಟಾಭಿಷೇಕ ವಿಜಯೋತ್ಸವ ಹಾಗೂ ಪುತ್ರೋತ್ಸವಗಳ ಕಾಲಕ್ಕೆ ರಾಜಕುಮಾರರ ವಿವಾಹ ಸಂದರ್ಭಗಳಲ್ಲಿ, ರಾಜ್ಯಕ್ಕೆ ಆಗಮಿಸಿದ ಅತಿಥಿ ಅಭ್ಯಾಗತರ ಸತ್ಕಾರ ಸಮಾರಂಭಗಳ ಕಾಲಕ್ಕೆ ಏರ್ಪಡಿಸುವ ಪರಿಪಾಠವಿತ್ತು. ಕರ್ನಾಟಕದಲ್ಲಿ ವಿಜಯನಗರದ ಅರಸರ ಕಾಲಕ್ಕೆ ಪ್ರಚಲಿತವಿದ್ದ ಕ್ರೀಡಾಕೂಟವನ್ನು ಇಂದು ರಾಜ್ಯಮಟ್ಟದಲ್ಲಿ ವ್ಯವಸ್ಥಿತ ರೀತಿಯಲ್ಲಿ ನಡೆಸುತ್ತಿರುವುದನ್ನು

ಈ ಸಂದರ್ಭದಲ್ಲಿ ನೆನೆಯಬಹುದು. ಬುಡಕಟ್ಟು ಸಮುದಾಯವು ಇಂದು ಕೂಡ ಹಬ್ಬ ಹರಿದಿನಗಳ ಸಂದರ್ಭದಲ್ಲಿ ವಿವಿಧ ಕ್ರೀಡೆ ವಿನೋದಗಳಲ್ಲಿ ಕಾಲ ಕಳೆಯುವುದನ್ನು ನಾವು ಅವಲೋಕಿಸಬಹುದು.

(ನೋಡಿ : ಜಾನಪದ ಸಂಬಾರ ಬಟ್ಟಲು, ೧೯೯೨, ಎನ್.ಆರ್.ನಾಯಕ, ೧೯೯೨, ಪು. ೩೪)

ಬೇಡ ಬುಡಕಟ್ಟು ಕ್ರೀಡೆಗಳು ಸುಲಭ ಹಾಗೂ ಕಡಿಮೆ ಖರ್ಚು

ಬುಡಕಟ್ಟು ಕ್ರೀಡೆಗಳಿಗೆ ಹೆಚ್ಚಿನ ಪೂರ್ವ ತಯಾರಿ ಬೇಕಿಲ್ಲ. ಅವು ಅತ್ಯಂತ ಸುಲಭ ಸಂಕೀರ್ಣತೆಗೆ ಅಲ್ಲಿ ಅವಕಾಶವೇ ಇಲ್ಲ. ದುಬಾರಿ ಖರ್ಚಿಲ್ಲದ ಆಟಗಳು ಅವು. ಈ ಕ್ರೀಡೆಗಳಿಗೆ ವ್ಯವಸ್ಥಿತವಾದ ಕ್ರೀಡಾಂಗಣ ಬೇಕೆಂದಿಲ್ಲ. ಮನೆಯ ಒಳಗೆ ಹೊರಗೆ ಅಂಗಳ ಓಣಿ ಸಂದಿ ಗೊಂದಿ ಎಲ್ಲಿಬೇಕೋ ಅಲ್ಲಿ ಈ ಆಟಗಳು ಆರಂಭವಾಗಿ ಮುಕ್ತಾಯಗೊಳ್ಳುತ್ತವೆ. ಇಂತಹ ಆಟಕ್ಕೆ ಬೇಕಾಗುವ ಸಲಕರಣೆಗಳೆಂದರೆ ಮಣ್ಣು, ಕಲ್ಲು, ಹರಳುಗಳು, ಹಂಚಿನ ಚೂರು, ಗೆಂಟೆಯ ಚೂರು, ಹಂಗರಕನ ಬೀಜ, ಹುಣಸೇಬೀಜ, ಗಜ್ಜುಗ, ಸುರುಗಿಕಾಯಿ, ಗೇರುಜೀಜ, ಚೆಂಡುಪುಳಿ, ಸದೆಸೊಪ್ಪು, ಕಸಕಡ್ಡಿ, ಕಾಗದಚೂರು ಮುಂತಾದ ಸುಲಭವಾಗಿ ಲಭ್ಯವಾಗುವ ಬೆಲೆಯಿಲ್ಲದ ವಸ್ತುಗಳು. ಕೆಲವು ಆಟಗಳಿಗೆ ಇವೂ ಬೇಕಾಗಿಲ್ಲ ಕೇವಲ ಆಡುವ ಜನರಿದ್ದರೆ ಸಾಕು. ಚೆನ್ನೆಮಲೆ ಮುಂತಾದ ಆಟಗಳಿಗೆ ಶ್ರೀಮಂತರು ಮಣೆಯನ್ನು ಉಪಯೋಗಿಸಿದರೆ, ಬಡವರು ನೆಲದ ಮೇಲೆ ಗೆರೆ ಸಿಗಿದೋ ಕುಳಿಗಳನ್ನು ತೋಡಿಯೋ ಆಡುತ್ತಾರೆ. ಇದರ ಆಟದ ನಿಯಮಗಳು ನಾಗರೀಕ ಆಟಗಳ ನಿಯಮಗಳಂತೆ ಸಂಕೀರ್ಣವಾದವುಗಳನ್ನು ಸುಲಭವಾಗಿರುವವು. ಆಟದ ನಿಯಮಗಳಲ್ಲಿ ಬಾಯಿಮಾತಿನ ಮೂಲಕ ಆಚರಣೆಯ ಅನುಭವದ ಮೂಲಕ ಸಂವಹನಗೊಳ್ಳುತ್ತವೆ. ಇದರಿಂದ ಹತ್ತುವರ್ಷಗಳ ಮಕ್ಕಳ ಆಟಗಳಲ್ಲಿ ಅಂತಹ ಕಠೋರ ನಿಯಮಗಳೂ ಇರುವುದಿಲ್ಲ. ಅಲ್ಲಿ ಆಟದಿಂದ ಪಡೆಯುವ ಆನಂದವೇ ಮುಖ್ಯವಾಗಿರುತ್ತದೆ. ಸೋಲು ಗೆಲುವು ಕೂಡ ಮುಖ್ಯವಾಗಿರುವುದಿಲ್ಲ. ಮಕ್ಕಳು ಬಾಲ್ಯದ ಮೂಲ ಪ್ರವೃತ್ತಿಯನ್ನು ಅರಿಯುವ ದೃಷ್ಟಿಯಿಂದ ಚಿಕ್ಕಮಕ್ಕಳು ಈ ಕ್ರೀಡೆಗಳು ಬುಡಕಟ್ಟು ವಿದ್ವಾಂಸರಿಗೆ ಮಹತ್ವಪೂರ್ಣವಾಗಿರುತ್ತವೆ. ಮಕ್ಕಳ ಆಟಗಳಿಗೆ ತೀರ್ಪುಗಾರರು ಬೇಕೆಂದಿಲ್ಲ. ಆಟವನ್ನು ಆಡುವವರೇ ತೀರ್ಪುಗಾರರು ಆಗಿರುತ್ತಾರೆ. ಅಪರೂಪಕ್ಕೆ ಆಟದಲ್ಲಿ ವಿವಾದವಿದ್ದರೆ ಪಕ್ಕದಲ್ಲಿ ಯಾರಾದರೂ ಹಿರಿಯರಿಂದ ವಿವಾದವನ್ನು ಬಗೆಹರಿಸಿಕೊಳ್ಳುತ್ತಾರೆ. ಇವರ ಆಟಗಳಿಗೆ ಕಾಲಮಿತಿ ಆಟಗಾರರ ಸಂಖ್ಯಾಮಿತಿ ಇಲ್ಲವೆಂದರೂ ಸಲ್ಲುವುದು.

ಬೇಡ ಸಮುದಾಯವು ತನ್ನದೇಯಾದ ಮುಖ್ಯವಾದ ಕ್ರೀಡೆಗಳನ್ನು ಇತರ ಸಮುದಾಯಕ್ಕೆ ಮಾದರಿಯಾಗಿ ಮತ್ತು ಪ್ರಾಚೀನಕಾಲದಿಂದ ಬುಡಕಟ್ಟು ಕ್ರೀಡೆಗಳು ಯಾವುದೇ ವೆಚ್ಚವಿಲ್ಲದೇ ಉಚಿತವಾಗಿ ಎಲ್ಲಾ ಜನಸಮೂಹ ಸೇರಿಸಿಕೊಂಡು ಮನೋಲ್ಲಾಸ ಮತ್ತು ಬುಡಕಟ್ಟು ಜನರು ಮುಖ್ಯವಾಗಿ ಆಡುವ ಕ್ರೀಡೆಗಳು. ಶರೀರಕವಾಗಿ ಮಾನಸಿಕವಾಗಿ ಸೈದ್ಧಾಂತಿಕವಾಗಿ ಮಾದರಿಯಾಗಿ ಪ್ರಭಾವ ಬೀರುವ ಈ ಕ್ರೀಡೆಗಳು ಮುಖ್ಯವಾಗಿ ಬಡರಾಷ್ಟ್ರಗಳು ಮುಖ್ಯವಾಗಿ ಈ ಕ್ರೀಡೆಗಳು ಹೆಚ್ಚಾಗಿ ಕಾಣುತ್ತೇವೆ. ಸಮುದಾಯದ ಜನರು ಈ ಕ್ರೀಡೆಗಳು ಕೇವಲ ಮನೋಲ್ಲಾಸ ಮಾತ್ರವಲ್ಲದೇ ಶರೀರಕವಾಗಿ ಮತ್ತು ಶಿಕ್ಷಣ ಇವುಗಳ ಮೇಲೆ ಪ್ರಭಾವ ಬೀರುವಂತಹ ಈ ಕ್ರೀಡೆಗಳು.

ಶ್ರೀಮಂತ ರಾಷ್ಟ್ರಗಳು ಈ ಕ್ರೀಡೆಗಳ ಆಧಾರವಾಗಿ ಅಂದರೆ ಮಾದರಿಯಾಗಿ ಹೆಚ್ಚು ವ್ಯಯ ಮಾಡುವಂತ ಕ್ರೀಡೆಗಳು ಪ್ರಾರಂಭಿಸಿದರು. ಅವುಗಳು ಬೇಡ ಸಮುದಾಯದ ಕ್ರೀಡೆಗಳಾದ ಗುಂಡು ಎತ್ತುವುದು, ಗುಂಡು ಉರುಳಿಸುವುದು, ಬಂಡೆಗಾಲಿ ಹಾಕುವುದು, ಬಂಡಿ ಎಳೆಯುವುದು, ಅಕ್ಕಿಮೂಟೆ ಎತ್ತುವುದು, ನಿಂಬೆಹಣ್ಣು ಉರಿಳಿಸುವುದು, ಕುಸ್ತಿ ಒಗೆಯುವುದು ಮತ್ತು ಮಕ್ಕಳು ಓಟದ ಸ್ಪರ್ಧೆ, ಜಿಗಿತ, ಕಬ್ಬಡಿ, ಖೋ ಖೋ, ಚಿನ್ನಿದಾಂಡ, ಲಗೋರಿ, ಚಿನ್ನಿಕೋಲು, ಜೋಕಾಲಿ ಈ ಕ್ರೀಡೆಗಳು ಬೇಡ ಸಮುದಾಯದಲ್ಲಿ ಹೊರಾಂಗಣವಾಗಿ ಮತ್ತು ಚವ, ಗುಟ್ಟಕುಣಿ, ಕವಡೆ, ಹಾವಿನಪಟ ಹೀಗೆ ಒಳಾಂಗಣವಾಗಿ ಈ ಕ್ರೀಡೆಗಳು ಹಾಡುತ್ತಾರೆ. ಇವುಗಳಲ್ಲಿ ಯಾವುದೇ ರೀತಿಯ ಹಣ ಖರ್ಚುಮಾಡದೆ ಪರಿಸರದಲ್ಲಿ ದೊರೆಯುವಂತ ಸಾಮಾಗ್ರಿಗಳನ್ನು ಉಚಿತವಾದ ವಸ್ತುಗಳಿಂದ ಕ್ರೀಡೆಗಳನ್ನು ಆಡುತ್ತಾರೆ, ಸಂಘಟಿಸುತ್ತಾರೆ. ಜೊತೆಗೆ ಶರೀರದ ಆರೋಗ್ಯ ಮಾನಸಿಕ ಬೆಳವಣಿಗೆ ಮತ್ತು ಮನೋಲ್ಲಾಸ ಮತ್ತು ಎಲ್ಲಾ ಜನರ ಸಂಖ್ಯೆಮಿತಿ ಮಿರಿ ಭಾಗವಹಿಸುವುದು, ನೋಡುವುದು ಈ ಬೇಡ ಸಮುದಾಯದ ಕ್ರೀಡೆಗಳಲ್ಲಿ ನಾವು ಕಾಣುತ್ತೇವೆ. ಈ ಕ್ರೀಡೆಗಳ ಮಾದರಿಯಾಗಿ ಇಂದೂ ಆಧುನಿಕ ಕ್ರೀಡೆಗಳು ಅಳವಡಿಸಿಕೊಂಡಿರುವುದು ಕಾಣುತ್ತೇವೆ.

ಆಧುನಿಕ ಕ್ರೀಡೆಗಳು ಶ್ರೀಮಂತ ರಾಷ್ಟ್ರಗಳು ಅಂದರೆ ಆರ್ಥಿಕವಾಗಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಮುಂದುವರೆದಿರುವ ರಾಷ್ಟ್ರಗಳು. ಈ ರಾಷ್ಟ್ರಗಳು ಮುಖ್ಯವಾಗಿ ತಮ್ಮ ರಾಷ್ಟ್ರ ಕ್ರೀಡೆಯೆಂದು ತಮ್ಮ ರಾಷ್ಟ್ರದ ಕ್ರೀಡೆಯು ಇತರ ರಾಷ್ಟ್ರಗಳ ಮೇಲೆ ಪ್ರಭಾವ ಬೀರುವಂತ ರೀತಿಯಲ್ಲಿ ಅಭಿವೃದ್ಧಿಯಾಗಿ ಜೊತೆಗೆ ಪ್ರಭಾವ ಬೀರುವ ರೀತಿಯಾಗಿ ಕಾರ್ಯ ನಿರ್ವಹಿಸಿರುತ್ತವೆ.

ಬಂಡಾವಳಶಾಹಿ ರಾಷ್ಟ್ರಗಳು ಜಪಾನ್ ಚೀನಾ ಅಮೇರಿಕಾ ಕೆನಡಾ ಬ್ರಿಟನ್ ಇಂಗ್ಲೆಂಡ್ ಆಸ್ಟ್ರೇಲಿಯ ಈ ರಾಷ್ಟ್ರಗಳು ತಮ್ಮ ರಾಷ್ಟ್ರದ ಕ್ರೀಡೆಯನ್ನು ಇತರ ಬಡ ರಾಷ್ಟ್ರಗಳ ಮೇಲೆ ಪ್ರಭಾವ ಬೀರಿವೆ. ಈ ಪ್ರಭಾವಕ್ಕೆ ಒಳಗಾಗಿರುವ ಕ್ರೀಡೆಗಳು ಎಂದರೇ ಕ್ರಿಕೆಟ್, ಹಾಕಿ, ಫುಟ್ ಬಾಲ್, ಗಲ್ಫ್, ಲಾಂಗ್ ಟೆನ್ನಿಸ್, ಸ್ಪಾಟ್ ಬಾಲ್, ಹ್ಯಾಂಡ್ ಬಾಲ್, ಬಾಸ್ಕೆಟ್ ಬಾಲ್, ಟೇಬಲ್ ಟೆನ್ನಿಸ್, ಟೆನಿಕ್ವಾಟ್ ಹೀಗೆ ಅನೇಕ ಕ್ರೀಡೆಗಳು ಆಧುನಿಕ ಶ್ರೀಮಂತ ಬಂಡವಾಳ ರಾಷ್ಟ್ರಗಳು ಅಳವಡಿಸಿಕೊಂಡಿರುವುದು ಕಾಣುತ್ತೇವೆ. ಈ ಕ್ರೀಡೆಗಳಿಗೆ ಮುಖ್ಯವಾಗಿ ಪ್ರಾಚೀನ ಮತ್ತು ಬೇಡಸಮುದಾಯದ ಕ್ರೀಡೆಗಳು ಯಾವವು ಈ ಕ್ರೀಡೆಗಳು ಒಂದು ರೀತಿಯಲ್ಲಿ ಆ ಕ್ರೀಡೆಗಳ ಮಾದರಿಯಾಗಿವೆ. ಈ ಆಧುನಿಕ ಕ್ರೀಡೆಗಳು ಮುಖ್ಯವಾಗಿ ನಿರ್ದಿಷ್ಟಪಡಿಸಿದ ಸಮಯ ಆಡುವವರ ಸಂಖ್ಯೆ ಮತ್ತು ಭಾಗವಹಿಸುವ ಶುಲ್ಕ ವೀಕ್ಷಿಸುವ ಶುಲ್ಕ ಮತ್ತು ಆಟವನ್ನು ಆಡುವಂತ ಕ್ರೀಡಾಪಟುಗಳು ಮುಖ್ಯವಾಗಿ ಉಪಕರಣಗಳು ಹೆಚ್ಚು ಹಣ ಖರ್ಚುಮಾಡಿ ಬೆಲೆಬಾಳುವ ಉಪಕರಣಗಳ ಮತ್ತು ನಿರ್ವಹಿಸುವ ಕ್ರೀಡೆಗಳನ್ನು ಸುಗಮವಾಗಿ ನಿರ್ವಹಿಸಲು ಕ್ರೀಡಾಧಿಕಾರಿಗಳು ಮತ್ತು ಹೆಚ್ಚು ಹಣ ವ್ಯಯ ಮಾಡಿದ ಮೈದಾನ ಎಲ್ಲ ರೀತಿಯಲ್ಲಿ ಹಣವನ್ನು ವ್ಯಯಮಾಡಿ ಆಟವನ್ನು ಆಡುವ ಈ ಕ್ರೀಡೆಗಳು ಕೇವಲ ಹಣವಿದ್ದವರಿಗೆ ಮಾತ್ರ ಭಾಗವಹಿಸಲು ಸಾಧ್ಯ. ಹಣ ಇಲ್ಲದವರು ಭಾಗವಹಿಸಲು ಸಾಧ್ಯವಿಲ್ಲ. ಮತ್ತು ವೀಕ್ಷಿಸಲು ಸಾಧ್ಯವಾಗದ ಈ ಕ್ರೀಡೆಗಳು ಕೇವಲ ಮನೋಲ್ಲಾಸ ಮತ್ತು ಶರೀರಕ್ಕೆ ಆರೋಗ್ಯ ಹೆಚ್ಚು. ಲಾಭಕರವಾಗಿ ಇರದೇ ಇರುವುದು ಮತ್ತು ಮಾನಸಿಕವಾಗಿ ಶಾರೀರಿಕವಾಗಿ ಆರೋಗ್ಯವನ್ನು ಅಭಿವೃದ್ಧಿಯು ಕಾಣುವುದಿಲ್ಲ. ಮತ್ತು ಈ

ಕ್ರೀಡೆಗಳು ಜೂಜಾಟಕ್ಕೆ ಕೊಂಡಯ್ಯುವುದು ಜನರ ಗಮನ ಸೆಳೆಯುತ್ತದೆ. ಕೇವಲ ಶ್ರೀಮಂತರು ಬಂಡವಾಳಶಾಹಿ ವರ್ಗದ ಜನರು ಮಾತ್ರ ಈ ಕ್ರೀಡೆಗಳಲ್ಲಿ ಭಾಗವಹಿಸುವುದು ನಾವು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಜೇಡಸಮುದಾಯ ಕ್ರೀಡೆಗಳು ಪ್ರಾಚೀನವಾಗಿದ್ದರೂ ಮಾನಸಿಕ ಶರೀರಿಕ ಎಲ್ಲರೂ ಸಾಮೂಹಿಕವಾಗಿ ತೊಡಗಿಸಿಕೊಂಡು ಸೌಹಾರ್ದತೆ ಕ್ರೀಡೆಗಳು ನಾಶವಾಗುತ್ತಿವೆ. ಈ ಕ್ರೀಡೆಗಳಿಂದ ಸಮಾಜದ ಹಿಂದೂಳಿದ ವರ್ಗದ ಬಡಜನರಿಗೆ ಮಾದರಿಯಾದ ಕ್ರೀಡೆಗಳು ಅಭಿವೃದ್ಧಿಪಡಿಸುವುದು, ಈ ಕ್ರೀಡೆಗಳು ಸಂಘಟಿಸುವವ ಈ ಕ್ರೀಡೆಗಳನ್ನು ಸಂಘಟಿಸಲು ಸರಕಾರ ಗಮನ ಹರಿಸದೇ ಇರುವುದರಿಂದ ಈ ಕ್ರೀಡೆಗಳು ಕೇವಲ ಶ್ರೀಮಂತರ ಬಂಡವಾಳಶಾಹಿ ವರ್ಗದ ಜನರ ಸೊತ್ತಾಗಿವೆ. ಈ ಕ್ರೀಡೆಗಳ ಉಪಕರಣಗಳಿಗೆ ತಗಲುವ ವೆಚ್ಚ ತುಂಬಾ ಇರುವುದರಿಂದ ಯಾವ ಬಡ ಸಮುದಾಯಗಳಿಗೆ ಈ ಕ್ರೀಡೆಗಳು ನಿಲುಕದೇ ಕೇವಲ ಆಕಾಶದಲ್ಲಿ ವಿಮಾನ ಹಾರುವುದನ್ನು ನೋಡುವ ರೀತಿಯಲ್ಲಿ ನೋಡುವುದನ್ನು ನಾವು ಇಂದು ಬಡರಾಷ್ಟ್ರಗಳಲ್ಲಿ ಕಾಣಬಹುದಾಗಿದೆ.

(ನೋಡಿ : ಜಾನಪದ ಸಂಬಾರ ಬಟ್ಟಲು, ೧೯೯೨, ಎನ್.ಆರ್.ನಾಯಕ, ೧೯೯೨, ಪು. ೪೦ ರಿಂದ ೪೧)

೫

ಪರಿಸಮಾಪ್ತಿ

೫

ಪರಿಸಮಾಪ್ತಿ

ಮಾನವನು ಸಮಾಜದಲ್ಲಿ ಉನ್ನತವಾದ ಶಾರೀರಿಕ ಆರೋಗ್ಯಕರವಾಗಿ ಜೀವಿಸಲು ಆಟವು ಅವಶ್ಯಕ. ಸಂಶೋಧನೆ ಪ್ರಕಾರ ಆಟ ಮಾನವನಿಗೆ ಜೀವನದಲ್ಲಿ ಪ್ರಧಾನ ಸ್ಥಾನವನ್ನು ಪಡೆದಿದೆ.

ಈ ಕ್ರೀಡೆಯು ಮೇಲ್ನೋಟಕ್ಕೆ ಮನೋರಂಜನೆಯು ಕಂಡುಬಂದರೂ ಆಟಗಳು ಪ್ರತಿಯೊಬ್ಬ ಮನುಷ್ಯನಿಗೆ ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಪುನಃ ಚೇತರಿಸಿಕೊಂಡಂತೆ ವ್ಯಕ್ತಿಗೆ ತನ್ನ ಕ್ಷೇತ್ರದ ಕೆಲಸದಲ್ಲಿ ಆಸಕ್ತಿಪೂರ್ಣನಾಗಿ ಕೆಲಸಮಾಡಲು ಸಾಧ್ಯವಾಗುತ್ತದೆ.

ಬೇಡ ಸಮುದಾಯದ ಆಟಗಳು ಸಂಶೋಧನೆ ಮಾಡಿದಾಗ ಈ ಕ್ರೀಡೆಗಳನ್ನು ಇಂದಿನ ಶ್ರೀಮಂತ ರಾಷ್ಟ್ರಗಳು ಬೇಡ ಸಮುದಾಯ ಕ್ರೀಡೆಗಳನ್ನು ಮಾದರಿಯಾಗಿ ಬದಲಾವಣೆ ಮಾಡಿರುವುದರ ಮೂಲಕ ಶ್ರೀಮಂತ ಪರವಾಗಿ ನಿಲ್ಲಿಸುವಲ್ಲಿ ಮುಂದಾಗಿರುವುದು ಈ ಕ್ಷೇತ್ರಕಾರ್ಯ ಮಾಡುವಾಗ ಕಂಡುಬಂದಿರುತ್ತದೆ.

ಬೇಡ ಸಮುದಾಯದ ಕ್ರೀಡೆಗಳು ಯಾವುದೇ ರೀತಿಯ ಖರ್ಚು ಇಲ್ಲದೆ ಎಲ್ಲರೂ ಸರಳವಾಗಿ ಕ್ರೀಡೆಯಲ್ಲಿ ಭಾಗವಹಿಸಬಹುದು ಮತ್ತು ವೀಕ್ಷಿಸಬಹುದಾಗಿದೆ. ಆದರೆ ಇದೇ ಕ್ರೀಡೆಗಳೂ ಶ್ರೀಮಂತಿಕೆಯವಾಗಿ ಮಾರ್ಪಾಡಾಗಿ ಇಂದು ಈ ಕ್ರೀಡೆಗಳಲ್ಲಿ ಭಾಗವಹಿಸಲು ಹಣವಂತರು ಮಾತ್ರ ಭಾಗವಹಿಸುವುದು ಕಂಡುಬರುತ್ತದೆ. ಹಣವಂತರು ಮಾತ್ರ ಈ ಕ್ರೀಡೆಯನ್ನು ವೀಕ್ಷಿಸಬಹುದಾಗಿದೆ.

ಬೇಡ ಸಮುದಾಯವು ಕ್ರೀಡೆಗಳ ಸಂಘಟನೆ ಮಾಡುವುದರ ಮೂಲಕ ಸಮುದಾಯಗಳ ಐಕ್ಯತೆ, ಏಕತೆ ಕಾಪಾಡುವುದು ಮತ್ತು ಉಳಿದುಕೊಂಡು ಬಂದಿರುವುದು ಕಂಡುಬರುತ್ತದೆ.

ಬೇಡಸಮುದಾಯ ಕ್ರೀಡೆಗಳು ಬೇಡ ಸಮುದಾಯದ ವೃತ್ತಿಗೆ ಬದುಕಿಗಾಗಿ ನೆರವಾಗುವುದು ಮತ್ತು ಇಂದಿಗೂ ಈ ಕ್ರೀಡೆಗಳು ಬೇಡಸಮುದಾಯ ಯುವಕರಿಗೆ ಜೀವನಕ್ಕೆ ನಾಂದಿಯಾಗಿರುವುದು. ಆರೋಗ್ಯ ಕಾಪಾಡಲು ಮಾದರಿಯಾಗಿರುವುದು. ಈ ಸಂಶೋಧನೆ ಮಾಡುವುದರಿಂದ ತಿಳಿದುಬರುತ್ತದೆ.

ಬೇಡಸಮುದಾಯವು ಆರೋಗ್ಯಕರ ಬದುಕಿಗೆ ಮಾದರಿಯಾದ ಕ್ರೀಡೆಗಳು ನಾಶವಾಗುತ್ತಿವೆ ಮತ್ತು ನಮ್ಮ ಕುಸ್ತಿ ತರಬೇತಿಯನ್ನು ಮಾಡುವ ಗರಡಿಗಳು (ಮನೆ) ನಾಶವಾಗುತ್ತಾ ಇವೆ.

ಬೇಡ ಸಮುದಾಯದ ಹಿರಿಯರ ಬಯಕೆ ಈ ಸಂಶೋಧನೆಯಿಂದ ಕಂಡುಬರುವ ವಿಷಯವೆಂದರೆ ಹಿರಿಯರು ಹುಟ್ಟಿಸಿದ ಪ್ರತಿ ಮಗು ಯಾವುದಕ್ಕೆ ಹೆದರದೇ, ಬೇಡದೇ ಧೈರ್ಯ, ಸಾಹಸಬಲವಾಗಿ ಬೆಳೆಯಲು ಪ್ರೋತ್ಸಾಹ ಕೊಡುತ್ತಾರೆ. ವಿದ್ಯಾಭ್ಯಾಸಕ್ಕಿಂತ ವ್ಯಾಯಾಮ ಮಾಡಲು ಕುಸ್ತಿಪಟುವಾಗಲು ಇವರು ಇಷ್ಟಪಡುತ್ತಾರೆ.

ಈ ಸಮುದಾಯ ಮಕ್ಕಳು, ಯುವಕರು ಹೆಚ್ಚಾಗಿ ಸಮಾಜದ ಕ್ರೀಡಾಕ್ಷೇತ್ರಕ್ಕೆ ಒಂದು ಅಮೋಘವಾದ ಕೊಡುಗೆ. ಕಾರಣ ಕ್ರೀಡಾಪಟುಗಳೆಂದರೆ ಕ್ರೀಡೆಗಳಲ್ಲ ಭಾಗವಹಿಸುವುವರೆಂದರೆ ಈ ಸಮುದಾಯದ ಮಕ್ಕಳು, ಯುವಕರು ಹೆಚ್ಚಾಗಿ ಕಂಡುಬರುತ್ತಾರೆ. ಪ್ರಾಥಮಿಕಶಾಲೆ, ಪ್ರೌಢಶಾಲೆ, ಕಾಲೇಜು, ವಿಶ್ವವಿದ್ಯಾಲಯ ಮಟ್ಟದಲ್ಲಿ ಬೇಡ ಸಮುದಾಯದ ಯುವಕರು, ಮಕ್ಕಳು ಹೆಚ್ಚಾಗಿ ಭಾಗವಹಿಸುತ್ತಾರೆ.

ಕ್ಷೇತ್ರಕಾರ್ಯದ ಪ್ರಕಾರ ಈಗ ಮಕ್ಕಳು ವಿದ್ಯಾಭ್ಯಾಸ ಕಡೆಗೆ ಆಸಕ್ತಿ ವಹಿಸುವುದು ಮತ್ತು ಸಮುದಾಯ ಆಟಗಳಿಗೆ ಪ್ರೋತ್ಸಾಹಿಸುತ್ತಿರುವುದು ಕಾಣುತ್ತೇವೆ. ಕ್ಷೇತ್ರಕಾರ್ಯದ ಸಂಗ್ರಹಿಸಿದ ಕ್ರೀಡೆಗಳು ಇಂದೂ ಅವುಗಳ ಮಾದರಿಯಾಗಿ ಶ್ರೀಮಂತ ಆಟಗಳು ಹೆಚ್ಚಾಗಿ ಬೆಳಕಿಗೆ ಬಂದಿವೆ. ಅವುಗಳ ಕಡೆ ಜನರು ಇಚ್ಛಿಸುತ್ತಾ ಆಸಕ್ತಿ ಪೂರ್ಣರಾಗಿರುವುದು ಕಂಡುಬರುತ್ತದೆ. ಇಂದಿನ ಹಿರಿಯರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ಕೊಟ್ಟಿರುವುದು ಕಾಣುತ್ತದೆ.

ಈ ಅಧ್ಯಾಯನದಲ್ಲಿ ಬೇಡ ಸಮುದಾಯ ಮೂಲ ಕ್ರೀಡೆಗಳೊಂದಿಗೆ ಇತರೆ ಸಮುದಾಯ ಆಡುವಂತ ಕ್ರೀಡೆಗಳು ಆಗಿದ್ದು ಅವುಗಳಲ್ಲಿ ಬೇಡ ಸಮುದಾಯ ಮಕ್ಕಳು ಹೆಚ್ಚಾಗಿ ತೊಡಗಿಸಿಕೊಂಡಿರುವುದು ಕಾಣುತ್ತೇವೆ.

ಬೇಡ ಸಮುದಾಯ ಕ್ರೀಡೆಗಳು ಕ್ಷೇತ್ರಕಾರ್ಯ ಬಳ್ಳಾರಿ ಜಿಲ್ಲೆಯಾದ್ಯಂತ ಗ್ರಾಮೀಣಭಾಗದ ಮೂಲಕ ಕ್ರೀಡೆಗಳ ಮಾಹಿತಿ ಸಂಗ್ರಹಿಸಿ ಹಿರಿಯರ ಅನುಭವಗಳನ್ನು ತಿಳಿದುಕೊಂಡು ಅವರ ಒಂದು ಜೀವನಕ್ಕೆ ಮಾದರಿಯಾಗಿಯೂ ಮತ್ತು ಆರೋಗ್ಯ ಮನೋಲ್ಲಾಸವಾಗಿರುವ ಯಾವುದೇ ಹಣದ ವ್ಯಯವಿಲ್ಲದೆ ಐಕ್ಯತೆ ಮತ್ತು ಎಲ್ಲರೂ ಭಾಗವಹಿಸುವ ಕ್ರೀಡೆಗಳ ನಾಶವಾಗುತ್ತಿರುವುದನ್ನು ಸಂಗ್ರಹಿಸಲಾಗಿದೆ.

ಬೇಡ ಸಮುದಾಯ ಕ್ರೀಡೆಗಳು ಪ್ರಮುಖವಾಗಿ ಕೇವಲ ತಮ್ಮ ಸಮುದಾಯವಲ್ಲದೇ ಇತರ ಬುಡಕಟ್ಟುಗಳಿಗೆ ಮಾದರಿಯಾಗಿವೆ. ಬೇಡ ಸಮುದಾಯವು ಮುಖ್ಯವಾಗಿ ಹಿರಿಯರ ಸಾಂಪ್ರದಾಯಿಕವಾಗಿ ಮತ್ತು ಅವರಿಗೆ ಬೇಸರ

ಮತ್ತು ಮನೋಲ್ಲಾಸವಲ್ಲದೇ ಈ ಸಮುದಾಯದ ಘನತೆ, ಗೌರವ ಮತ್ತು ಕ್ರೀಡೆಗಳಲ್ಲಿ ಉನ್ನತ ಮಟ್ಟದ ಸ್ಥಾನ ಈ ಸಮುದಾಯದಲ್ಲಿ ಗರಡಿಮನೆ ಕುಸ್ತಿ ಕಾಣುತ್ತೇವೆ. ಗರಡಿಮನೆಗೆ ಬೇಡ ಸಮುದಾಯವು ಸಮುದಾಯದ ಗೌರವ ಭಕ್ತಿ ಪೂಜ್ಯ ಮುಖ್ಯವಾಗಿ ಕಾಣುತ್ತೇವೆ. ಮತ್ತು ಗರಡಿಮನೆ ಪ್ರತಿಯೊಂದು ಬೇಡ ಜನಾಂಗ ಇರುವಲ್ಲಿ ಪ್ರಾಚೀನ ಕಾಲದಿಂದಲೂ ಗರಡಿ ಮನೆಗಳನ್ನು ಕಾಣುತ್ತೇವೆ. ಈ ಗರಡಿಮನೆಯು ವ್ಯಾಯಾಮಕ್ಕೆ ಕುಸ್ತಿಯ ಅಭ್ಯಾಸಕ್ಕೆ ನಿರ್ಮಿಸಿರುವ ಸುಸಜ್ಜಿತವಾದ ಗರಡಿಮನೆ ಎನ್ನುತ್ತಾರೆ. ಈ ಗರಡಿಯಲ್ಲಿ ಹಿಂದೂ ಮುಸ್ಲಿಂ ದೇವರ ಪೂಜೆಯನ್ನು ಮಾಡುವುದನ್ನು ಕಾಣುತ್ತೇವೆ ಮತ್ತು ಹಿರಿಯರ ಮಾರ್ಗದರ್ಶನದಲ್ಲಿ ಯುವಕರು ಕುಸ್ತಿಪಟುಗಳು ತಯಾರಾಗುತ್ತಾರೆ ಮತ್ತು ಚಿಕ್ಕಮಕ್ಕಳು ಸ್ವತಃ ಕುಸ್ತಿಯನ್ನು ನೋಡಲು ಕುಳಿತು ಕ್ರಮೇಣವಾಗಿ ಅವರು ಸಹಿತ ಕುಸ್ತಿಯ ಕಣಕ್ಕೆ ಇಳಿಯುತ್ತಾರೆ. ಕುಸ್ತಿಯಾಡಲು ಬೇಡಸಮುದಾಯ ಪ್ರಥಮ ಸ್ಥಾನದಲ್ಲಿದೆ. ಕಾರಣ ಈ ಸಮುದಾಯದಲ್ಲಿ ಹಿರಿಯರು ಮೂಲದಿಂದಲೂ ಕುಸ್ತಿಯಪಟುಗಳಾಗಲು ಮತ್ತು ತಮ್ಮ ಮಕ್ಕಳು ಬಲಾಢ್ಯವಾಗಿರಬೇಕು ಹೆದರದೇ ಬೇಡದೇ ಶಾರೀರಿಕವಾಗಿ ಸದೃಢವಾಗಿರಬೇಕು ಎಂದು ಮಕ್ಕಳನ್ನು ಶರೀರಕ್ಕೆ ಬೇಕಾದ ಶಕ್ತಿಯನ್ನು ಪಡೆಯಲು ಹಾಗೂ ಅದಕ್ಕೆ ಅಗತ್ಯವಾದ ಪೌಷ್ಠಿಕ ಆಹಾರವನ್ನು ಮಕ್ಕಳಿಗೆ ಕೊಡುವುದರ ಮೂಲಕ ಬೆಳೆಸುತ್ತಾರೆ. ಈ ಸಮುದಾಯ ಹಿರಿಯರು ಬಯಕೆಯಂತೆ ವಿದ್ಯಾಭ್ಯಾಸಕ್ಕಿಂತ ಕುಸ್ತಿಪಟುವಾಗಲು ಬಯಸುತ್ತಾರೆ. ಅದು ಇಂದಿಗೆ ಕಡಿಮೆಯಾಗುತ್ತಿರುವುದು ಕಂಡುಬರುತ್ತದೆ.

ಬೇಡ ಸಮುದಾಯದ ಕ್ರೀಡೆಗಳ ಬಗ್ಗೆ ಇದುವರೆಗೂ ಅಧ್ಯಯನ ಆಗಿರುವುದಿಲ್ಲ ಆದರೆ ಈ ಸಮುದಾಯದ ಆಚರಣೆ ಬಗ್ಗೆ, ಸಂಪ್ರದಾಯ, ನಂಬಿಕೆಗಳು, ಗೃಹವಾಸ್ತು, ಶಿಲ್ಪ, ಸಂಸ್ಕೃತಿ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಪರಿಸ್ಥಿತಿಗಳ ಬಗ್ಗೆ ಸತ್ಯಾಂಶಗಳು ತರುವಲ್ಲಿ ಪ್ರಯತ್ನಗಳು ನಡೆದಿವೆ. ಆಧರೆ ಬೇಡ ಸಮುದಾಯ ಕ್ರೀಡೆಗಳು ಸಮಾಜದ ಐಕ್ಯತೆ ಯಾವುದೇ ಹಣದ ಖರ್ಚಿಲ್ಲದೆ ಎಲ್ಲರೂ ಭಾಗವಹಿಸುವ ಈ ಕ್ರೀಡೆಗಳು ಇದುವರೆಗೂ ಯಾವುದೇ ಅಧ್ಯಾಯವಾಗಿರುವುದಿಲ್ಲ. ಈ ಸಮುದಾಯ ಕ್ರೀಡೆಗೆ ಕ್ಷೇತ್ರಕಾರ್ಯವು ಬಳ್ಳಾರಿ ಜಿಲ್ಲೆಯನ್ನು ಒಳಗೊಂಡು ಬೇಡಸಮುದಾಯ ಕ್ರೀಡೆಗಳನ್ನು ಸಂಗ್ರಹಿಸಲಾಗಿದೆ.

ಬೇಡ ಸಮುದಾಯ ಬಳ್ಳಾರಿ ಜಿಲ್ಲೆಯ ಕ್ಷೇತ್ರಕಾರ್ಯದಲ್ಲಿ ಈ ಸಮುದಾಯ ಹಿರಿಯರ ಮೂಲಕ ಮತ್ತು ಕ್ರೀಡಾಯುವಕರು, ಮಕ್ಕಳು, ಕುಸ್ತಿಪಟುಗಳು, ಸ್ತ್ರೀಯರು ಮತ್ತು ವಿದ್ಯಾವಂತರು ಮತ್ತು ವಿವಿಧ ಹಿರಿಯ ತಜ್ಞರು, ವಿದ್ವಾಂಸರು ಮತ್ತು ವಿವಿಧ ವಿಶ್ವವಿದ್ಯಾಲಯ ಪುಸ್ತಕಗಳ ಮಾಹಿತಿ ಕ್ಷೇತ್ರಕಾರ್ಯದ ಮಾಹಿತಿ ಮೂಲಕ ಬೇಡಸಮುದಾಯದ ಕ್ರೀಡೆಗಳನ್ನು ಸಂಗ್ರಹಿಸಿ ನನ್ನ ಮಿತಿಯಲ್ಲಿ ಈ ಪುಸ್ತಕವನ್ನು ಸಲ್ಲಿಸುತ್ತಿದ್ದೇನೆ. ಆದರೆ ಬೇಡ ಸಮುದಾಯ ಕ್ರೀಡೆಗಳು ಇನ್ನೂ ಆಳವಾದ ರೀತಿಯಲ್ಲಿ ಇನ್ನೂ ಮುಂದುವರೆದಿದೆ. ಈ ಸಮುದಾಯ ಕ್ರೀಡೆಗಳ ಅಧ್ಯಾಯ ಇಲ್ಲಿಗೆ ಮುಗಿದಿರುವುದಿಲ್ಲ. ಇನ್ನೂ ಸಾಕಷ್ಟು ಈ ಸಮುದಾಯ ಕ್ರೀಡೆಗಳು ಅಧ್ಯಯನದ ಅವಶ್ಯಕವಾಗಿದೆ ಎಂದು ವಿಶ್ವವಿದ್ಯಾಲಯಕ್ಕೆ ಚಿಕ್ಕ ನಿಬಂಧನೆಯನ್ನು ಸಲ್ಲಿಸುತ್ತಿದ್ದೇನೆ.

ಅನುಬಂಧಗಳು

ಅನುಬಂಧಗಳು

ಪರಾಮರ್ಶನ ಗ್ರಂಥಗಳು

೧. ಡಾ. ಗಣನಾಥ ಎಕ್ಕರು - ತುಳುನಾಡಿನ ಜನಪದ ಆಟಗಳು - ೩೯೮.೨ E.K.K, ೧೯೯೫

೨. ಉತ್ತರ ಜಿಲ್ಲೆಯ ಜನಪದ ಆಟಗಳು – ಎನ್. ಆರ್. ನಾಯಕ್ ೧೯೭೮

೩. ಜಾನಪದ ಸಂಬಾರ ಬಟ್ಟಲು - ಎನ್ .ಆರ್ .ನಾಯಕ್

೪. ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ (ಹರಪನಹಳ್ಳಿ - ಬಳ್ಳಾರಿ ಜಿಲ್ಲೆ) - ಕುಂಬಾಸ

೫. ಬಳ್ಳಾರಿ ಜಿಲ್ಲಾ ಅಂಕಿ-ಅಂಶಗಳ ನೋಟ - ೨೦೦೧-೨೦೦೨

೬. ಮಾಟ ಮಂತ್ರ ಮೋಡಿ - ಡಾ. ಸ.ಚಿ.ರಮೇಶ್

೭. ಕರ್ನಾಟಕ ಗ್ರಾಮೀಣ ಮಕ್ಕಳ ಆಟಗಳು - ಸುಶೀಲಾ ಸಂಡೂರು

೮. ಕರ್ನಾಟಕದ ಭೂಗೋಳಶಾಸ್ತ್ರ - ಎಸ್ .ಎಸ್ .ನಂಜಣ್ಣವರ - ೯೧೫, ೪೮೭, N.A.N.

೯. ಮ್ಯಾಸ ನಾಯಕರು ಒಂದು ಜನಾಂಗಿಕ ಅಧ್ಯಯನ - ಡಾ. ಕರಿಶೆಟ್ಟಿರುದ್ರಪ್ಪ, ೧೯೯೫

೧೦. ದೈಹಿಕ ಶಿಕ್ಷಣದ ಇತಿಹಾಸ - ಗುರುದತ್ತ ಕೋರಿ ೧೯೯೬

೧೧. ದೈಹಿಕ ಶಿಕ್ಷಣದ ಇತಿಹಾಸ - ಕೆ.ಜಿ.ನಾಡಗೀರ ೧೯೮೧

೧೨. ಶರೀರ ರಚನಾ ಶಾಸ್ತ್ರ ದೈಹಿಕ ಶಿಕ್ಷಣ - ಬಸವರಾಜ ವಸ್ತ್ರದ

೧೩. ಶಾರೀರ ಶಿಕ್ಷಣ ಮತ್ತು ಆರೋಗ್ಯ ಶಿಕ್ಷಣ - ಎಸ್ .ಎಂ.ಅರಳಿಮಟ್ಟಿ

೧೪. ಆಟಗಳ ಪುಸ್ತಕ - ಡಾ. ಪಿ.ಎಮ್ .ಜೋಸೆಫ್ - ಅನುವಾದ ಶ್ರೀ ಕೆ.ಜಿ.ನಾಡಗೀರ

೧೫. ಹಗ್ಗದ ಯುದ್ಧ - Tug of war- S.Ajitsingh Sandhu malri

೧೬. ಶರೀರ ಶಿಲ್ಪ - ಅಜಿತ್ ಕುಮಾರ್ (ಮಾನವ ಶರೀರದ ಆರೋಗ್ಯ ನಡತೆ ಕುಳಿತ ನಡೆ)

೧೭. ಆಟ-ಆಟ-ಆಟ - ಸಂಗ್ರಹ ಕೆ.ಜಿ.ನಾಡಗೀರ

೧೮. ಮೈದಾನದ ರಚನೆ - ಎಂ.ಜೆ.ವಿಶ್ವನಾಥ್ - Demonstrator in physical education

೧೯. ಕ್ರೀಡಾಧಿಕಾರತ್ವ ಮತ್ತು ಕ್ರೀಡಾ ಶಿಕ್ಷಣ - ಕೆ.ಜಿ.ನಾಡಗೀರ, ೧೯೯೮